ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವಿಶ್ವ ಅಮ್ಮಂದಿರ ದಿನದ ಶುಭಾಶಯಗಳು

ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣ • ತನಿಖೆ ಚುರುಕುಗೊಳಿಸಿದ ಸಿಐಡಿ

ಪರೀಕ್ಷಾ ಕೇಂದ್ರಗಳಲ್ಲಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಐಡಿ ಅಧಿಕಾರಿಗಳು, ಬೆಂಗಳೂರಿನಲ್ಲಿರುವ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪುರಾವೆಗಾಗಿ ಹುಡುಕಾಟ ನಡೆಸುತ್ತಿದ್ದಾರೆ.

ಹೈಗ್ರೌಂಡ್ಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದಲ್ಲಿ 22 ಅಭ್ಯರ್ಥಿಗಳ ಪೈಕಿ 18 ಅಭ್ಯರ್ಥಿಗಳನ್ನು ಬಂಧಿಸಿರುವ ಸಿಐಡಿ, ಅವರು ಪರೀಕ್ಷೆ ಬರೆದಿದ್ದ ಕೇಂದ್ರಗಳ ಪಟ್ಟಿ ಸಿದ್ಧಪಡಿಸಿದ್ದಾರೆ. ಇನ್‌ಸ್ಪೆಕ್ಟರ್ ನೇತೃತ್ವದ ತಂಡಗಳು, ಪ್ರತಿಯೊಂದು ಪರೀಕ್ಷಾ ಕೇಂದ್ರಕ್ಕೆ ಹೋಗಿ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸುತ್ತಿದ್ದಾರೆ.

ಮಲ್ಲೇಶ್ವರ, ಯಲಹಂಕ, ಜಯನಗರ ಸೇರಿದಂತೆ 20ಕ್ಕೂ ಹೆಚ್ಚು ಪರೀಕ್ಷಾ ಕೇಂದ್ರಗಳಲ್ಲಿ ಅಕ್ರಮ ನಡೆದಿರುವ ಬಗ್ಗೆ ಸಿಐಡಿಗೆ ಮಾಹಿತಿ ಲಭ್ಯವಾಗಿದೆ. ಇಂಥ ಕೇಂದ್ರದಲ್ಲಿ ಕೆಲಸ ಮಾಡಿದ್ದ ಅಧಿಕಾರಿಗಳು, ಸಿಬ್ಬಂದಿ ಹಾಗೂ ಭದ್ರತೆ ಜವಾಬ್ದಾರಿ ವಹಿಸಿದ್ದ ಪೊಲೀಸರ ಬಗ್ಗೆ ಸಿಐಡಿ ಮಾಹಿತಿ ಪಡೆದುಕೊಳ್ಳುತ್ತಿದೆ. ಎಲ್ಲರಿಗೂ ನೋಟಿಸ್ ನೀಡಿದ್ದು, ಕೆಲವರನ್ನು ಶನಿವಾರ ವಿಚಾರಣೆ ಮಾಡಿದೆ.

‘ಬಂಧಿತ ಅಭ್ಯರ್ಥಿಗಳ ಜೊತೆಯಲ್ಲೇ ಕೇಂದ್ರಗಳಿಗೆ ಹೋಗಿ ಮಹಜರು ಮಾಡಿಕೊಳ್ಳಲಾಗಿದೆ. ಕೇಂದ್ರಗಳಲ್ಲಿ ಅಕ್ರಮ ನಡೆದಿರುವ ಬಗ್ಗೆ ಸೂಕ್ತ ಪುರಾವೆಗಳು ಸದ್ಯಕ್ಕೆ ಸಿಕ್ಕಿಲ್ಲ. ಕೇಂದ್ರದಲ್ಲಿ ಪರೀಕ್ಷೆ ಬರೆದಿದ್ದ ಅಭ್ಯರ್ಥಿಗಳ ಹೆಸರು ಮಾತ್ರ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿದೆ. ಹೀಗಾಗಿ, ಒಎಂಆರ್ ಪ್ರತಿ ತಿದ್ದಿರುವ ಜಾಗ ಯಾವುದು? ಎಂಬುದನ್ನು ತಿಳಿಯಲು ತನಿಖೆ ಮುಂದುವರಿಸಲಾಗಿದೆ’ ಎಂದು ಸಿಐಡಿ ಮೂಲಗಳು ಹೇಳಿವೆ.

ವಿಚಾರಣೆಗೆ ಹಾಜರು: ಸಿಐಡಿ ಅಧಿಕಾರಿಗಳ ಆರಂಭದ ವಿಚಾರಣೆಯಲ್ಲಿ ಗೈರಾಗಿದ್ದ ಅಭ್ಯರ್ಥಿಗಳಿಗೆ ಎರಡನೇ ಬಾರಿ ನೋಟಿಸ್ ನೀಡಲಾಗಿದೆ. ಆ ಪೈಕಿ 16 ಅಭ್ಯರ್ಥಿಗಳು, ಶನಿವಾರ ವಿಚಾರಣೆಗೆ ಹಾಜರಾಗಿ ತಮ್ಮ ಒಎಂಆರ್ ಪ್ರತಿ ಹಾಗೂ ಇತರೆ ದಾಖಲೆಗಳನ್ನು ಸಿಐಡಿ ಅಧಿಕಾರಿಗಳಿಗೆ ನೀಡಿದರು. ಅಧಿಕಾರಿಗಳು ಅವನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ.

‘ಪತ್ರಿಕೆ -2ರಲ್ಲಿ (ಸಾಮಾನ್ಯ ಅಧ್ಯಯನ) 150 ಅಂಕಗಳ ಪೈಕಿ 125ಕ್ಕಿಂತ ಹೆಚ್ಚು ಅಂಕ ಪಡೆದವರ ಮೇಲೆ ಹೆಚ್ಚು ಅನುಮಾನವಿದೆ. ಹೀಗಾಗಿ, ಅವರೆಲ್ಲರ ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆ’ ಎಂದು ಸಿಐಡಿ ಮೂಲಗಳು ಹೇಳಿವೆ.

ಪೊಲೀಸರ ಮೇಲೆ ನಿಗಾ: ಅಕ್ರಮದಲ್ಲಿ ಪೊಲೀಸರು ಭಾಗಿಯಾಗಿರುವ ಬಗ್ಗೆ ಬಂಧಿತ ಅಭ್ಯರ್ಥಿಗಳು ಮಾಹಿತಿ ನೀಡಿರುವುದಾಗಿ ಗೊತ್ತಾಗಿದ್ದು, ಅಂಥ ಪೊಲೀಸರ ಮೇಲೆ ಸಿಐಡಿ ನಿಗಾ ವಹಿಸಿದೆ.

ಅಭ್ಯರ್ಥಿಗಳಿಂದ ಹಣ ಪಡೆದಿದ್ದ ಏಜೆಂಟರು, ಮಧ್ಯವರ್ತಿಗಳು ಹಾಗೂ ಅವರ ಜೊತೆ ಒಡನಾಟ ಹೊಂದಿದ್ದ ಕೆಲ ಪೊಲೀಸರಿಗೆ ಸಿಐಡಿ ಈಗಾಗಲೇ ನೋಟಿಸ್ ನೀಡಿದೆ. ವಿಚಾರಣೆಗೆ ಬರುವಂತೆ ಹೇಳಿರುವುದಾಗಿ ಗೊತ್ತಾಗಿದೆ.

ಡಿವೈಎಸ್ಪಿ, ಸಿಪಿಐ ಸೇರಿ 12 ಪೊಲೀಸರ ಅಮಾನತು

ಕಲಬುರಗಿ: ಪಿಎಸ್‌ಐ ನೇಮಕಾತಿ ಅಕ್ರಮಕ್ಕೆ ಸಂಬಂಧಿಸಿದಂತೆ ಸಿಐಡಿ ಬಂಧನಕ್ಕೆ ಒಳಗಾಗಿರುವ ರಾಯಚೂರು ಜಿಲ್ಲೆ ಲಿಂಗಸುಗೂರು ಉಪವಿಭಾಗದ ಡಿವೈಎಸ್ಪಿ ಮಲ್ಲಿಕಾರ್ಜುನ ಸಾಲಿ ಹಾಗೂ ಕಲಬುರಗಿಯ ಬೆರಳಚ್ಚು ವಿಭಾಗದ ಇನ್‌ಸ್ಪೆಕ್ಟರ್ ಆನಂದ ಮೇತ್ರಿ ಸೇರಿ 12 ಪೊಲೀಸ್ ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ.

ಕಲಬುರಗಿಯ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆ ಹಾಗೂ ಎಂ.ಎಸ್.ಇರಾನಿ ಪದವಿ ಕಾಲೇಜಿನಲ್ಲಿ ತೆರೆದಿದ್ದ ಪಿಎಸ್‌ಐ ಪರೀಕ್ಷಾ ಕೇಂದ್ರಗಳಿಗೆ ಬಂದೋಬಸ್ತ್‌ಗೆ ನಿಯೋಜನೆಗೊಂಡಿದ್ದ ಇಬ್ಬರು ಮಹಿಳಾ ಪಿಎಸ್‌ಐ ಸೇರಿ 10 ಜನ ಸಿಬ್ಬಂದಿಯನ್ನು ಕಲಬುರಗಿ ಪೊಲೀಸ್ ಕಮಿಷನರ್ ಡಾ.ವೈ.ಎಸ್.ರವಿಕುಮಾರ್ ಅಮಾನತುಗೊಳಿಸಿದ್ದಾರೆ.

ಪಿಎಸ್‌ಐಗಳಾದ ಶ್ರೀಶೈಲಮ್ಮ, ನಜ್ಮಾ ಸುಲ್ತಾನಾ, ಎಎಸ್‌ಐಗಳಾದ ಶಶಿಕುಮಾರ್, ಲತಾ, ಹೆಡ್ ಕಾನ್‌ಸ್ಟೆಬಲ್‌ಗಳಾದ ಪಾರುಬಾಯಿ, ಜೈಭೀಮ್, ಶರಣಬಸಪ್ಪ, ದಾಮೋದರ, ಪೊಲೀಸ್ ಕಾನ್‌ಸ್ಟೆಬಲ್‌ಗಳಾದ ಪ್ರದೀಪ್, ರಾಜಶ್ರೀ ಅಮಾನತುಗೊಂಡವರು.

ಈ ಎರಡು ಪರೀಕ್ಷಾ ಕೇಂದ್ರಗಳಲ್ಲಿ ಅಕ್ರಮ ನಡೆದಿರುವುದು ಬೆಳಕಿಗೆ ಬಂದಿದ್ದರಿಂದ ಕರ್ತವ್ಯಲೋಪದ ಆರೋಪದ ಮೇರೆಗೆ ಇವರನ್ನು ಅಮಾನತುಗೊಳಿಸಲಾಗಿದೆ. ಗೃಹ ಇಲಾಖೆಯು ಹೊರಡಿಸಿದ್ದ ಮಲ್ಲಿಕಾರ್ಜುನ ಸಾಲಿ ಹಾಗೂ ಆನಂದ ಮೇತ್ರಿ ಅವರ ಅಮಾನತು ಆದೇಶವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಇಶಾ ಪಂತ್ ಅವರಿಗೆ ಕಳಿಸಲಾಗಿತ್ತು. ಸಿಐಡಿ ವಶದಲ್ಲಿರುವ ಈ ಇಬ್ಬರಿಗೂ ಆದೇಶ ಪತ್ರಗಳನ್ನು ಸಿಬ್ಬಂದಿಯ ಮೂಲಕ ಶನಿವಾರ ತಲುಪಿಸಲಾಯಿತು.

ಎಂಟು ದಿನ ಸಿಐಡಿ ಕಸ್ಟಡಿಗೆ: ಶುಕ್ರವಾರ ಸಂಜೆ ಬಂಧಿತರಾದ ಕರ್ನಾಟಕ ಮೀಸಲು ಪೊಲೀಸ್ ಪಡೆಯ ಡಿವೈಎಸ್ಪಿ ವೈಜನಾಥ ರೇವೂರ ಅವರನ್ನು ಏಳು ದಿನಗಳವರೆಗೆ ಸಿಐಡಿ ಕಸ್ಟಡಿಗೆ ಒಪ್ಪಿಸಿ ಇಲ್ಲಿನ ಮೂರನೇ ಜೆಎಂಎಫ್ ನ್ಯಾಯಾಲಯ ಆದೇಶಿಸಿದೆ.

ಶಿವರಾಮ ಕಾರಂತ ಬಡಾವಣೆ: ಸುಪ್ರೀಂ ಕೋರ್ಟ್ ಆದೇಶದಂತೆ ಕ್ರಮ

ಸಕ್ರಮ ಪ್ರಮಾಣಪತ್ರ ವಿತರಣೆ 13ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಅಭಿವೃದ್ಧಿಪಡಿಸಲಿರುವ ಡಾ. ಶಿವರಾಮ ಕಾರಂತ ಬಡಾವಣೆಯ ವ್ಯಾಪ್ತಿಯಲ್ಲಿ 2018ಕ್ಕಿಂತ ಮುಂಚೆ ಕಟ್ಟಡ ನಿರ್ಮಿಸಿರುವ ಸ್ವತ್ತುಗಳ ಮಾಲೀಕರಿಗೆ ಸಕ್ರಮ ಪ್ರಮಾಣಪತ್ರವನ್ನು ಮೇಡಿ ಅಗ್ರಹಾರದ ಉರ್ದು ಪ್ರಾಥಮಿಕ ಶಾಲೆಯಲ್ಲಿ ಇದೇ 13ರಿಂದ ವಿತರಿಸಲಾಗುತ್ತದೆ.

ಸ್ಥಳೀಯ ಪ್ರಾಧಿಕಾರದ ಅನುಮತಿ ಪಡೆದು 2018ಕ್ಕಿಂತ ಮುಂಚೆ ಕಟ್ಟಡ ಕಟ್ಟಿದವರು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಿ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ಸಮಿತಿ ಸಲ್ಲಿಸಿದ ವರದಿಯ ಆಧಾರದ ಮೇಲೆ ಸುಪ್ರೀಂ ಕೋರ್ಟ್ 2,500 ಕಟ್ಟಡಗಳನ್ನು ಸಕ್ರಮಗೊಳಿಸಿ ಆದೇಶ ಹೊರಡಿಸಿದೆ.

ಫಲಾನುಭವಿಗಳು ಸಕ್ರಮ ಪ್ರಮಾಣಪತ್ರವನ್ನು ಪಡೆಯಲು ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರ, ಆಧಾರ್‌ಕಾರ್ಡ್, ಸಮಿತಿಯಿಂದ ಸ್ವೀಕರಿಸಿರುವ ಎಸ್.ಎಂ.ಎಸ್., ಸಮಿತಿಯು ನೀಡಿರುವ ರಸೀದಿಯನ್ನು ಸಲ್ಲಿಸಬೇಕು.

ಫಲಾನುಭವಿಗಳು ಪ್ರಮಾಣಪತ್ರ ಸ್ವೀಕರಿಸಲು ಯಾವ ದಿನ ಯಾವ ಸಮಯಕ್ಕೆ ಮೇಡಿ ಅಗ್ರಹಾರದ ಉರ್ದು ಪ್ರಾಥಮಿಕ ಶಾಲೆಗೆ ಬರಬೇಕು ಎಂಬ ಬಗ್ಗೆ ಅವರ ಮೊಬೈಲ್ ಸಂಖ್ಯೆಗೆ ಎಸ್‌ಎಂಎಸ್ ಕಳುಹಿಸಲಾಗುವುದು ಎಂದು ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ಸಮಿತಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಬಿಬಿಎಂಪಿ: ತಿಂಗಳ ಬಳಿಕ ಅನುಮೋದನೆ ನೀಡಿದ ನಗರಾಭಿವೃದ್ಧಿ ಇಲಾಖೆ

ಬಜೆಟ್ ಗಾತ್ರ ₹ 377 ಕೋಟಿ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ 2022–23ನೇ ಸಾಲಿನ ಬಜೆಟ್‌ಗೆ ನಗರಾಭಿವೃದ್ಧಿ ಇಲಾಖೆ ಶನಿವಾರ ಅನುಮೋದನೆ ನೀಡಿದೆ. ಬಜೆಟ್ ಗಾತ್ರವನ್ನು ₹377.5 ಕೋಟಿಗಳಷ್ಟು ಹೆಚ್ಚಿಸಲಾಗಿದೆ.

2022–23ನೇ ಸಾಲಿನ ಬಜೆಟ್ ಅನ್ನು ಮಾರ್ಚ್ 31ರ ರಾತ್ರಿ ಬಿಬಿಎಂಪಿ ವೆಬ್‌ಸೈಟ್‌ನಲ್ಲಿ (https://bbmp.gov.in) ಪ್ರಕಟಿಸಲಾಗಿತ್ತು. ₹10,484.28 ಕೋಟಿ ಆದಾಯ ನಿರೀಕ್ಷಿಸಿದ್ದ ಬಿಬಿಎಂಪಿ ಮುಂದಿನ ಆರ್ಥಿಕ ವರ್ಷದಲ್ಲಿ ಒಟ್ಟು ₹10,480.93 ಕೋಟಿ ವೆಚ್ಚ ಮಾಡುವುದಾಗಿ ತಿಳಿಸಿತ್ತು.

ನಗರಾಭಿವೃದ್ಧಿಗೆ ಇಲಾಖೆಯು ಬಿಬಿಎಂಪಿ ಬಜೆಟ್‌ಗೆ ಅನುಮೋದನೆ ನೀಡುವಾಗ ಕೆಲವೊಂದು ಕಾಮಗಾರಿಗಳಿಗೆ ಹಾಗೂ ಕಾರ್ಯಕ್ರಮಗಳಿಗೆ ಅನುದಾನವನ್ನು ಹೆಚ್ಚಳ ಮಾಡಿದೆ. ಹೆಚ್ಚುವರಿಯಾಗಿ ಸಂಗ್ರಹವಾಗಬಹುದಾದ ಆದಾಯವನ್ನು ಖಾತರಿಪಡಿಸಿಕೊಂಡ ನಂತರವೇ ಈ ಹೆಚ್ಚುವರಿ ಅನುದಾನದಡಿ ಜಾರಿಗೊಳಿಸಲು ಉದ್ದೇಶಿಸಿದ ಕಾರ್ಯಕ್ರಮಗಳನ್ನು ಅಥವಾ ಕಾಮಗಾರಿಗಳನ್ನು ಅನುಷ್ಠಾನಗೊಳಿಸಬಹುದು ಎಂದು ನಗರಾಭಿವೃದ್ಧಿ ಇಲಾಖೆ ಷರತ್ತು ವಿಧಿಸಿದೆ.

ಮುಖ್ಯಾಂಶಗಳು

- ಕುಡಿಯುವ ನೀರು ಪೂರೈಕೆಗೆ ಅನುದಾನ ಹೆಚ್ಚಳ
- ಭೂಭರ್ತಿ, ಕಸ ವಿಲೇವಾರಿ ಘಟಕಗಳ ನಿರ್ವಹಣೆಗೆ ಹೆಚ್ಚುವರಿ ₹75 ಕೋಟಿ
- ಸರ್ಕಾರದ ಅನುದಾನದ ಕಾಮಗಾರಿಗಳಿಗೆ ವಂತಿಗೆ ನೀಡಲು ₹20 ಕೋಟಿ

ಕಸ ನಿರ್ವಹಣೆ ಘಟಕಗಳ ಮತ್ತು ಯಂತ್ರೋಪಕರಣಗಳ ದುರಸ್ತಿ ಮತ್ತು ನಿರ್ವಹಣೆ ಸಲುವಾಗಿ ಬಜೆಟ್‌ನಲ್ಲಿ ₹ 15 ಕೋಟಿ ನಿಗದಿಪಡಿಸಲಾಗಿತ್ತು. ಈ ಮೊತ್ತವನ್ನು ₹ 90 ಕೋಟಿಗೆ ಹೆಚ್ಚಿಸಲಾಗಿದೆ.

ಕುಡಿಯುವ ನೀರು ಪೂರೈಕೆಗಾಗಿ ₹ 40 ಕೋಟಿ ನಿಗದಿಪಡಿಸಲಾಗಿತ್ತು. ಈ ಮೊತ್ತವನ್ನು ₹ 65 ಕೋಟಿಗೆ ಹೆಚ್ಚಿಸಲಾಗಿದೆ. ಇದಕ್ಕೆ ಬಳಸಬೇಕಾಗುವ ಹೆಚ್ಚುವರಿ ₹ 25 ಕೋಟಿಯನ್ನು ಕೊಳವೆಬಾವಿಗಳ ನಿರ್ವಹಣೆಗೆ ವಿನಿಯೋಗಿಸಬೇಕು. ಈ ಕಾರ್ಯವನ್ನು ಜಲಮಂಡಳಿ ಮೂಲಕ ನಿರ್ವಹಿಸಿದರೆ, ಅನುದಾನವನ್ನೂ ಅವರಿಗೇ ವರ್ಗಾಯಿಸಬೇಕು ಎಂದು ಷರತ್ತು ವಿಧಿಸಲಾಗಿದೆ.

ಕಸ ವಿಲೇವಾರಿ ಮಾಡುವ ಭೂಭರ್ತಿ ಘಟಕಗಳು, ಕಸ ವಿಲೇವಾರಿ ಘಟಕಗಳು ಮತ್ತು ಕ್ವಾರಿಗಳ ನಿರ್ವಹಣೆಗೆ ನಿಗದಿಪಡಿಸಿದ್ದ ₹ 20 ಕೋಟಿ ಅನುದಾನವನ್ನು ₹ 95 ಕೋಟಿಗೆ ಹೆಚ್ಚಿಸಲಾಗಿದೆ.

ಸರ್ಕಾರದ ಅನುದಾನದಡಿ ಕೈಗೊಳ್ಳುವ ಕಾಮಗಾರಿಗಳಿಗೆ ಬಿಬಿಎಂಪಿ ವತಿಯಿಂದ ನೀಡಲಾಗುವ ಹೊಂದಾಣಿಕೆ ವಂತಿಗೆ ಮೊತ್ತಕ್ಕಾಗಿ ₹ 20 ಕೋಟಿ ನಿಗದಿಪಡಿಸಲಾಗಿದೆ.

ಮೇಯರ್ ಅವರ ವಿವೇಚನೆ ಕೋಟಾದಡಿ ಪತ್ರಕರ್ತರಿಗೆ ನೀಡುವ ವೈದ್ಯಕೀಯ ವೆಚ್ಚದ ಪರಿಹಾರದ ಅನುದಾನವನ್ನು ₹ 50 ಲಕ್ಷದಿಂದ ₹ 2 ಕೋಟಿಗೆ ಹೆಚ್ಚಿಸಲಾಗಿದೆ. ಐಪಿಡಿ ಸಾಲಪ್ಪ ಸ್ಮರಣಾರ್ಥ ಕೈಗೊಳ್ಳುವ ಕಲ್ಯಾಣ ಕಾರ್ಯಕ್ರಮಗಳಿಗೆ ₹ 1 ಕೋಟಿ ಅನುದಾನ ಒದಗಿಸಲಾಗಿದೆ.

ಬಿಬಿಎಂಪಿ ಬಜೆಟ್ ಮಂಡಿಸಿ ತಿಂಗಳು ಕಳೆದರೂ ಸರ್ಕಾರದ ಅನುಮೋದನೆ ಸಿಕ್ಕಿರಲಿಲ್ಲ. 'ಪ್ರಜಾವಾಣಿ'ಯು ಗುರುವಾರದ ಸಂಚಿಕೆಯಲ್ಲಿ 'ತಿಂಗಳು ಕಳೆದರೂ ಬಿಬಿಎಂಪಿ ಬಜೆಟ್‌ಗೆ ಸಿಕ್ಕಿಲ್ಲ ಅನುಮೋದನೆ' ಎಂಬ ಶೀರ್ಷಿಕೆ ಅಡಿ ವಿಶೇಷ ವರದಿ ಪ್ರಕಟಿಸಿ ಗಮನ ಸೆಳೆದಿತ್ತು. ಇದಾಗಿ ಎರಡೇ ದಿನದಲ್ಲಿ ಸರ್ಕಾರ ಬಿಬಿಎಂಪಿ ಬಜೆಟ್‌ಗೆ ಅನುಮೋದನೆ ನೀಡಿದೆ.

ವಿಮಾನ ನಿಲ್ದಾಣದಲ್ಲಿ ಸಿ.ಎಂ ಬೊಮ್ಮಾಯಿ – ಜೋಶಿ ಮಾತುಕತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ (ಕೆಐಎ) ಅತಿಗಣ್ಯ ವ್ಯಕ್ತಿಗಳ ವಿಶ್ರಾಂತಿ ಕೊಠಡಿಯಲ್ಲಿ ಶನಿವಾರ ಬೆಳಿಗ್ಗೆ ಕೆಲಕಾಲ ಮಾತುಕತೆ ನಡೆಸಿರುವುದು ಕುತೂಹಲಕ್ಕೆ ಕಾರಣವಾಗಿದೆ.

ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಬಸವ ಜಯಂತಿ ಸಮಾರಂಭದಲ್ಲಿ ಇಬ್ಬರೂ ನಾಯಕರು ಪಾಲ್ಗೊಂಡಿದ್ದರು. ಅಲ್ಲಿಂದ ಪ್ರಲ್ಹಾದ ಜೋಶಿಯವರು ಕೆಐಎಗೆ ಹೋಗಿ ವಿಮಾನದಲ್ಲಿ ಹುಬ್ಬಳ್ಳಿಗೆ ತೆರಳುವವರಿದ್ದರು. ಅವರೊಂದಿಗೆ ಮುಖ್ಯಮಂತ್ರಿಯವರೂ ತಮ್ಮ ಕಾರಿನಲ್ಲಿ ಕೆಐಎಗೆ ಹೋಗಿದ್ದರು. ಕಂದಾಯ ಸಚಿವ ಆರ್. ಅಶೋಕ ಮತ್ತು ವಿಧಾನ ಪರಿಷತ್ ಸದಸ್ಯ ಲಕ್ಷ್ಮಣ ಸವದಿ ಜತೆಗಿದ್ದರು.

ಸಂಪುಟ ಪುನರ್ ರಚನೆ, ಸಂಪುಟ ವಿಸ್ತರಣೆ, ಸರ್ಕಾರದ ನಾಯಕತ್ವ ಬದಲಾವಣೆ ಕುರಿತು ಚರ್ಚೆ ನಡೆಯುತ್ತಿರುವಾಗಲೇ ಪಕ್ಷದ ವರಿಷ್ಠರ ನಿಕಟವರ್ತಿಯಾಗಿರುವ ಕೇಂದ್ರ ಸಚಿವರ ಜತೆ ಮುಖ್ಯಮಂತ್ರಿ ರಹಸ್ಯ ಮಾತುಕತೆ ನಡೆಸಿರುವುದು ರಾಜಕೀಯ ವಲಯದಲ್ಲಿ ತರಹೇವಾರಿ ಚರ್ಚೆಗಳಿಗೆ ಕಾರಣವಾಗಿದೆ.

ಇಬ್ಬರೂ ನಾಯಕರು ಏನು ಚರ್ಚೆ ಮಾಡಿದ್ದಾರೆ? ಚರ್ಚೆ ಸಂದರ್ಭದಲ್ಲಿ ಅಶೋಕ ಮತ್ತು ಸವದಿ ಜತೆಗಿದ್ದರೆ? ಎಂಬುದು ಖಚಿತವಾಗಿಲ್ಲ. ಪಕ್ಷದ ವರಿಷ್ಠರು ರವಾನಿಸಿರುವ ಸಂದೇಶದ ಕುರಿತು ಸಮಾಲೋಚನೆ ನಡೆದಿರುವ ಸಾಧ್ಯತೆ ಇದೆ ಎಂಬ ಮಾತು ಬಿಜೆಪಿಯಲ್ಲಿ ಕೇಳಿಬರುತ್ತಿದೆ.

'ಸಂಪುಟ ಅಥವಾ ನಾಯಕತ್ವಕ್ಕೆ ಸಂಬಂಧಿಸಿದ ಯಾವುದೇ ಚರ್ಚೆ ನಡೆಸಿಲ್ಲ' ಎಂದು ಪ್ರಲ್ಹಾದ ಜೋಶಿ ಹುಬ್ಬಳ್ಳಿಯಲ್ಲಿ ಪ್ರತಿಕ್ರಿಯಿಸಿದ್ದಾರೆ. ಜೋಶಿ ಅವರು ತುರ್ತಾಗಿ ವಿಮಾನ ನಿಲ್ದಾಣಕ್ಕೆ ತೆರಳಬೇಕಿತ್ತು. ಅವರಿಗೆ ತಡೆರಹಿತ ಸಂಚಾರದ ಸೌಲಭ್ಯವಿಲ್ಲ. ಹೀಗಾಗಿ ಮುಖ್ಯಮಂತ್ರಿಯೇ ಅವರೊಂದಿಗೆ ವಿಮಾನ ನಿಲ್ದಾಣಕ್ಕೆ ತೆರಳಿ, ಬಿಟ್ಟು ಬಂದಿದ್ದಾರೆ ಎಂದು ಮುಖ್ಯಮಂತ್ರಿಯವರ ಆಪ್ತರು ಹೇಳಿದ್ದಾರೆ.

ಕಾವ್ಯಸ್ಪಂದನ ಪಬ್ಲಿಕೇಷನ್ ಹೊರತಂದಿರುವ 'ಅಪ್ಪು ಅಮರ–ಒಂದು ಅವಲೋಕನ' ಪುಸ್ತಕವನ್ನು ಸಾಹಿತಿ ದೊಡ್ಡರಂಗೇಗೌಡ ಬಿಡುಗಡೆ ಮಾಡಿದರು. (ಎಡದಿಂದ) ಬಿಜೆಪಿ ಬೆಂಗಳೂರು ದಕ್ಷಿಣ ಘಟಕದ ಅಧ್ಯಕ್ಷ ಎನ್‌.ಆರ್‌.ರಮೇಶ್, ಪುಸ್ತಕ ಸಂಪಾದನೆ ಮಾಡಿರುವ ಭದ್ರಾವತಿ ರಾಮಾಚಾರಿ, ಚಲನಚಿತ್ರ ನಿರ್ಮಾಪಕ ಎಸ್‌.ಎ. ಗೋವಿಂದರಾಜ್, ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸುನಿಲ್ ಪುರಾಣಿಕ್ ಹಾಗೂ ಸಂಗೀತ ನಿರ್ದೇಶಕ ವಿ.ಮನೋಹರ್ ಇದ್ದರು –ಪ್ರಜಾವಾಣಿ ಚಿತ್ರ

ಪ್ರವೇಶ ಪತ್ರ ಇಲ್ಲದೆ ವಿದ್ಯಾರ್ಥಿಗಳ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಅಡಿಯಲ್ಲಿ ವಿವಿಧ ಪದವಿ ಕೋರ್ಸ್‌ಗಳಿಗೆ ದಾಖಲಾದ ಮೊದಲ ಬ್ಯಾಚ್‌ನ ಹಲವು ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರವೇ ದೊರೆತಿಲ್ಲ. ಇದರಿಂದ, ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲು ಸಾಧ್ಯವಾಗಿಲ್ಲ.

ಪದವಿ ಕೋರ್ಸ್‌ಗಳ ಮೊದಲ ಸೆಮಿಸ್ಟರ್ ಪರೀಕ್ಷೆಗಳು ಮೇ 5ರಿಂದ ಆರಂಭವಾಗಿವೆ. ಆದರೆ, ಪ್ರವೇಶಪತ್ರವೇ ದೊರೆಯದ ಕಾರಣ ಕಾಲೇಜು ಆಡಳಿತ ಮಂಡಳಿಗಳು ದಾಖಲಾತಿ ಪಡೆದ ಪತ್ರ ಅಥವಾ ಶುಲ್ಕ ಪಾವತಿಸಿದ ರಶೀದಿಯನ್ನು ಹಾಜರುಪಡಿಸುವಂತೆ ವಿದ್ಯಾರ್ಥಿಗಳಿಗೆ ಸೂಚಿಸಿವೆ. ಆದರೆ, ಈ ದಾಖಲಾತಿಗಳನ್ನು ಕಳೆದುಕೊಂಡಿರುವ ವಿದ್ಯಾರ್ಥಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ.

'ಇದು ನಮ್ಮ ಸಮಸ್ಯೆ ಅಲ್ಲ. ಪ್ರವೇಶಪತ್ರಗಳು ಇಲ್ಲದ ಕಾರಣ ನಮಗೆ ಕಿರುಕುಳ ನೀಡಲಾಗುತ್ತಿದೆ' ಎಂದು ವಿದ್ಯಾರ್ಥಿಯೊಬ್ಬರು ದೂರಿದ್ದಾರೆ.

ಆದರೆ, ವಿಶ್ವವಿದ್ಯಾಲಯದಿಂದ ಯಾವುದೇ ಸಮಸ್ಯೆಯಾಗಿಲ್ಲ. ಇದು ಸ್ವಯಂಚಾಲಿತ ವ್ಯವಸ್ಥೆಯಾಗಿದೆ. ಕಾಲೇಜುಗಳು ಪ್ರವೇಶಪತ್ರಗಳನ್ನು ಡೌನ್‌ಲೋಡ್ ಮಾಡಿಕೊಂಡು ವಿದ್ಯಾರ್ಥಿಗಳಿಗೆ ವಿತರಿಸಬೇಕಾಗಿತ್ತು ಎಂದು ಅಧಿಕಾರಿಗಳು ಸಮರ್ಥಿಸಿಕೊಂಡಿದ್ದಾರೆ.

ಏಕೀಕೃತ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣೆ ವ್ಯವಸ್ಥೆ (ಯುಯುಸಿಎಂಎಸ್) ಅನುಷ್ಠಾನಗೊಳಿಸಿದ ಬಳಿಕ ಪ್ರತಿಯೊಂದು ಸಾಫ್ಟ್‌ವೇರ್ ಆಧಾರಿತವಾಗಿದೆ. ಈ ಬಗ್ಗೆ ಕಾಲೇಜುಗಳಿಗೆ ಮಾಹಿತಿ ಸಹ ನೀಡಲಾಗಿತ್ತು ಎಂದು ತಿಳಿಸಿದ್ದಾರೆ. ಮೊದಲ ಸೆಮಿಸ್ಟರ್ ಪರೀಕ್ಷೆಗೆ ಸುಮಾರು 30 ಸಾವಿರ ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ

ಬಗ್ಗಾ ಬಂಧನಕ್ಕೆ ವಿರೋಧ; ಎಎಪಿ ಕಚೇರಿಗೆ ಬಿಜೆಪಿ ಮುತ್ತಿಗೆ

ಪ್ರತಿಭಟನೆ: ಗೋಮೂತ್ರ ಸಿಂಪಡಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೆಹಲಿಯ ಬಿಜೆಪಿ ಮುಖಂಡ ತಜಿಂದರ್ ಸಿಂಗ್ ಬಗ್ಗಾ ಅವರನ್ನು ಪಂಜಾಬ್ ಪೊಲೀಸರು ಅಕ್ರಮವಾಗಿ ಬಂಧಿಸಿದ್ದಾರೆ' ಎಂದು ಆರೋಪಿಸಿ ಬಿಜೆಪಿ ಯುವಮೋರ್ಚಾ ಕಾರ್ಯಕರ್ತರು, ನಗರದ ಆಮ್ ಆದ್ಮಿ ಪಕ್ಷದ (ಎಎಪಿ) ಕಚೇರಿ ಎದುರು ಶನಿವಾರ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯನ್ನು ಖಂಡಿಸಿದ ಎಎಪಿ ಕಾರ್ಯಕರ್ತರು, ತಮ್ಮ ಪಕ್ಷದ ಕಚೇರಿ ಮುಂಭಾಗದಲ್ಲಿ ಗೋಮೂತ್ರ ಸಿಂಪಡಿಸಿ ಸ್ವಚ್ಛಗೊಳಿಸಿ ಆಕ್ರೋಶ ಹೊರಹಾಕಿದರು.

ಆಸ್ಟಿನ್‌ಟೌನ್‌ನಲ್ಲಿರುವ ಆಮ್ ಆದ್ಮಿ ಪಕ್ಷದ (ಎಎಪಿ) ಕಚೇರಿಗೆ ಶನಿವಾರ ಮುತ್ತಿಗೆ ಹಾಕಲು ಯತ್ನಿಸಿದ ಬಿಜೆಪಿ ಯುವಮೋರ್ಚಾ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು – ಪ್ರಜಾವಾಣಿ ಚಿತ್ರ

ಮುತ್ತಿಗೆ ಯತ್ನ: ಆಸ್ಟಿನ್ ಟೌನ್‌ನಲ್ಲಿರುವ ಎಎಪಿ ಕಚೇರಿ ಎದುರು ಸೇರಿದ್ದ ಬಿಜೆಪಿ ಯುವಮೋರ್ಚಾ ಕಾರ್ಯಕರ್ತರು, 'ಎಎಪಿ ನೇತೃತ್ವದ ಪಂಜಾಬ್ ಸರ್ಕಾರ, ಬಿಜೆಪಿ ಮುಖಂಡನನ್ನು ಬಂಧಿಸಿರುವುದು ಸರಿಯಲ್ಲ. ಇದರ ಹಿಂದೆ ದುರುದ್ದೇಶ ಅಡಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ವೇಳೆ ಕೆಲ ಕಾರ್ಯಕರ್ತರು, ಎಎಪಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು. ಸ್ಥಳದಲ್ಲಿದ್ದ ಪೊಲೀಸರು ಅವರನ್ನು ತಡೆದರು. ಇದರಿಂದಾಗಿ ಪರಸ್ಪರ ತಳ್ಳಾಟವೂ ನಡೆಯಿತು. ನಂತರ, ಕೆಲ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು ಕೆಲ ಹೊತ್ತಿನ ನಂತರ ಬಿಟ್ಟು ಕಳುಹಿಸಿದರು.

ಗೋಮೂತ್ರದಿಂದ ಸ್ವಚ್ಛ: ಪ್ರತಿಭಟನೆ ಮುಗಿಯುತ್ತಿದ್ದಂತೆ ಎಎಪಿ ಕಾರ್ಯಕರ್ತರು, ತಮ್ಮ ಕಚೇರಿ ಮುಂಭಾಗವನ್ನು ಪೊರಕೆಯಿಂದ ಸ್ವಚ್ಛಗೊಳಿಸಿ ಗೋಮೂತ್ರ ಸಿಂಪಡಿಸಿದರು.

'ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಮನೆ ಮೇಲೆ ದಾಳಿ ಮಾಡಿದ್ದ ಮಾದರಿಯಲ್ಲೇ ಬಿಜೆಪಿ ಕಾರ್ಯಕರ್ತರು, ಬೆಂಗಳೂರಿನ ಎಎಪಿ ಕಚೇರಿ ಮೇಲೆ ದಾಳಿ ಮಾಡಿದ್ದಾರೆ. ಬೈಕ್‌ಗಳನ್ನು ತಳ್ಳಿ ಬೀಳಿಸಿ ಕಚೇರಿಯೊಳಗೆ ನುಗ್ಗಲು ಯತ್ನಿಸಿದ್ದಾರೆ' ಎಂದು ಎಎಪಿ ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ಸದಂ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 'ಇ–ಆಫೀಸ್'

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 'ಇ-ಆಫೀಸ್' ಕಚೇರಿ ತಂತ್ರಾಂಶ ಅಳವಡಿಸಲಾಗಿದೆ.

ಇನ್ನು ಮುಂದೆ ಆಡಳಿತ ಕಚೇರಿಯ ಪತ್ರ ಹಾಗೂ ಕಡತಗಳನ್ನು ರಾಜ್ಯ ಸರ್ಕಾರದ 'ಇ-ಆಫೀಸ್' ಪೋರ್ಟಲ್ ಮೂಲಕ ವಿಲೇವಾರಿ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಪಾಲಿಕೆ ಆಯುಕ್ತರಿಗೆ ಕಾಂಗ್ರೆಸ್ ಮುಖಂಡರ ಒತ್ತಾಯ

'ಸಭಾಂಗಣ ನವೀಕರಣ: ಟೆಂಡರ್ ರದ್ದುಪಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಕೌನ್ಸಿಲ್ ಸಭಾಂಗಣ ಹಾಗೂ ಸ್ಥಾಯಿ ಸಮಿತಿಗಳ ಕೊಠಡಿಗಳನ್ನು ನವೀಕರಿಸಲು ಆಹ್ವಾನಿಸಿರುವ ಟೆಂಡರ್ ರದ್ದುಗೊಳಿಸಬೇಕು ಎಂದು ಕಾಂಗ್ರೆಸ್ ಪಕ್ಷವು ಒತ್ತಾಯಿಸಿದೆ.

ಬಿಬಿಎಂಪಿಯ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಹಾಗೂ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಕಾಂಗ್ರೆಸ್ ಮುಖಂಡರಾದ ಎಂ.ಶಿವರಾಜು, ಆರ್.ಎಸ್.ಸತ್ಯನಾರಾಯಣ್ ಮತ್ತು ಅಬ್ದುಲ್ ವಾಜಿದ್ ಈ ಕುರಿತು ಶನಿವಾರ ಮನವಿ ಸಲ್ಲಿಸಿದರು.

'2020ರ ಬಿಬಿಎಂಪಿ ಕಾಯ್ದೆ ಅನುಸಾರ ಪಾಲಿಕೆ ಸದಸ್ಯರ ಸಂಖ್ಯೆ 243 ಹೆಚ್ಚಳವಾಗಲಿದೆ. ನಾಮನಿರ್ದೇಶನಗೊಳ್ಳುವ ಸದಸ್ಯರು, ನಗರದ ಕ್ಷೇತ್ರಗಳನ್ನು ಪ್ರತಿನಿಧಿಸುವ ಸಂಸದರು, ರಾಜ್ಯಸಭಾ ಸದಸ್ಯರು, ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಅಧಿಕಾರಿಗಳು ಸೇರಿ 450 ಜನರಿಗೆ ಆಸನ ವ್ಯವಸ್ಥೆಯನ್ನು ಈ ಸಭಾಂಗಣದಲ್ಲಿ ಕಲ್ಪಿಸಬೇಕಾಗಿರುತ್ತದೆ. ಹಾಗಾಗಿ ಈ ಹಂತದಲ್ಲಿ ಈಗಿರುವಷ್ಟೇ ಆಸನ ವ್ಯವಸ್ಥೆ ಉಳಿಸಿಕೊಂಡು ಸಭಾಂಗಣವನ್ನು ನವೀಕರಿಸುವುದರಲ್ಲಿ ಅರ್ಥವಿಲ್ಲ' ಎಂದು ಕಾಂಗ್ರೆಸ್ ಮುಖಂಡರು ತಿಳಿಸಿದ್ದಾರೆ.

ಬಿಬಿಎಂಪಿಯ ಕೌನ್ಸಿಲ್ ಸಭಾಂಗಣ ನವೀಕರಣಕ್ಕೆ ಆಹ್ವಾನಿಸಿರುವ ಟೆಂಡರ್ ರದ್ದುಪಡಿಸಬೇಕೆಂದು ಒತ್ತಾಯಿಸಿ ಅಬ್ದುಲ್ ವಾಜಿದ್, ಎಂ.ಶಿವರಾಜು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಶುಕ್ರವಾರ ಮನವಿ ಸಲ್ಲಿಸಿದರು

'ಪಾಲಿಕೆಯ ಸಭಾಂಗಣ ಕಿರಿಯದಾಗಿದೆ. 2021–22ನೇ ಸಾಲಿನ ಬಜೆಟ್‌ನಲ್ಲಿ ಮೀಸಲಿಟ್ಟ ಅನುದಾನಕ್ಕೆ ಸೀಮಿತವಾಗಿ ಸಭಾಂಗಣ ವಿನ್ಯಾಸಗೊಳಿಸದ್ದೇ ಆದಲ್ಲಿ ಅದು ಉಪಯೋಗಕ್ಕೆ ಬರುವುದಿಲ್ಲ. ರಾಜಧಾನಿಯ ಘನತೆಗೆ ತಕ್ಕಂತೆ ಅದನ್ನು ಮರುವಿನ್ಯಾಸಗೊಳಿಸಿ ಉತ್ತಮ ದರ್ಜೆಯಲ್ಲಿ ಕಾಮಗಾರಿ ನಡೆಯುವಂತೆ ನೋಡಿಕೊಳ್ಳಬೇಕು. ಡಿಜಿಟಲೀಕರಣಕ್ಕೆ ಅವಕಾಶ ಇರುವ ಪ್ರತ್ಯೇಕ ಆಸನ, ಧ್ವನಿವರ್ಧಕ ವ್ಯವಸ್ಥೆ ಕಲ್ಪಿಸಬೇಕು' ಎಂದು ಸಲಹೆ ನೀಡಿದ್ದಾರೆ.

ಭಾನುವಾರ, ಮೇ 8, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 127 | ಪುಟ 22
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವಿಶ್ವ ಅಮ್ಮಂದಿರ ದಿನದ ಶುಭಾಶಯಗಳು

ಮುಖ್ಯಮಂತ್ರಿ ಬೊಮ್ಮಾಯಿ ಹೇಳಿಕೆ

ಬಸವಣ್ಣನನ್ನು ದೇವರನ್ನಾಗಿಸಬೇಡಿ 5

ಭಾನುವಾರದ ಪುರವಣಿ

ಚಿಕ್ಕಮಗಳೂರಿನ ಬಗ್ಗವಳ್ಳಿಯ ಸಾಮಾನ್ಯ ಕುಟುಂಬದ ಕುಡಿ, ಕನ್ನಡಿಗ ಬಿ.ಎಸ್. ರಾಜು ಅವರು ಸೇನೆಯಲ್ಲಿ ಏರಿದ ಎತ್ತರ ಬೆರಗುಗೊಳಿಸುವಂಥದ್ದು

ಪ್ರಮುಖ ನಗರಗಳಲ್ಲಿನ ದರ (ಪ್ರತಿ ಸಿಲಿಂಡರ್‌ಗೆ)

ಬೆಂಗಳೂರು	₹ 1002.50
ಚೆನ್ನೈ	₹ 1,015.50
ಕೋಲ್ಕತ್ತ	₹ 1,026
ದೆಹಲಿ	₹ 999.50
ಮುಂಬೈ	₹ 999.50

ಎಲ್‌ಪಿಜಿ ಸಿಲಿಂಡರ್ ದರ ₹ 1002

ನವದೆಹಲಿ (ಪಿಟಿಐ): ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರ ₹ 50 ಹೆಚ್ಚಾಗಿದೆ. ಇದರಿಂದಾಗಿ ಬೆಂಗಳೂರಿನಲ್ಲಿ ಶನಿವಾರ 14.2 ಕೆ.ಜಿ ತೂಕದ ಸಿಲಿಂಡರ್ ದರ ₹ 1002.50ಕ್ಕೆ ಏರಿಕೆ ಆಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಏರಿಕೆಗೆ ಅನುಗುಣವಾಗಿ ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಸಿಲಿಂಡರ್ ದರದಲ್ಲಿ ಏರಿಕೆ ಮಾಡಿವೆ.

ಸಬ್ಸಿಡಿ ಇಲ್ಲದೇ ಇರುವುದರಿಂದ ಎಲ್‌ಪಿಜಿ ಸಿಲಿಂಡರ್‌ಗೆ ಪಾವತಿಸಬೇಕಿರುವ ಇದುವರೆಗಿನ ಗರಿಷ್ಠ ದರ ಇದಾಗಿದೆ. ಆರು ವಾರಗಳಲ್ಲಿ ಎರಡನೇ ಬಾರಿಗೆ ಎಲ್‌ಪಿಜಿ ದರದಲ್ಲಿ ಏರಿಕೆ ಮಾಡಲಾಗಿದೆ. ಮಾರ್ಚ್ 22ರಂದು ₹ 50ರಷ್ಟು ಹೆಚ್ಚಳ ಮಾಡಲಾಗಿತ್ತು. 2021ರ ಏಪ್ರಿಲ್‌ನಿಂದ ಈವರೆಗೆ ಪ್ರತಿ ಸಿಲಿಂಡರ್ ದರ ₹ 190ರಷ್ಟು ಹೆಚ್ಚಾಗಿದೆ.

ಪರೀಕ್ಷೆ ಹಂತದಲ್ಲಿ ಅಕ್ರಮ, ನೇಮಕಾತಿ ವೇಳೆ ಭ್ರಷ್ಟಾಚಾರ

ಕಾಸಿದ್ದರಷ್ಟೇ ಸರ್ಕಾರಿ ಹುದ್ದೆ

• ರಾಜೇಶ್ ರೈ ಚಟ್ಲ

ಬೆಂಗಳೂರು: ಸ್ಪರ್ಧಾತ್ಮಕ ಪರೀಕ್ಷೆ ಹಂತದಲ್ಲಿ ಅಕ್ರಮ, ನೇಮಕಾತಿ ಸಂದರ್ಭದಲ್ಲಿ ಭ್ರಷ್ಟಾಚಾರ, ಸ್ವಜನ ಪಕ್ಷಪಾತ. ಕಳ್ಳ ಮಾರ್ಗ ಹಿಡಿದೋ, ಆಸ್ತಿ–ಪಾಸ್ತಿ ಮಾರಿಯೋ ಮೂಟೆಯಲ್ಲಿ ಹೊತ್ತು ತಂದ ನೋಟು ಕೈಗಿಟ್ಟವರಿಗಷ್ಟೆ ಸರ್ಕಾರಿ ಹುದ್ದೆ. ಅರ್ಥಾತ್, ಇದು ರಾಜ್ಯ ಸರ್ಕಾರಿ ಹುದ್ದೆಗಳ 'ಕಾಸ್'ಗೀಕರಣ!

ದುಡ್ಡಿದ್ದರಷ್ಟೆ ಕರ್ನಾಟಕ ಲೋಕ ಸೇವಾ ಆಯೋಗ (ಕೆಪಿಎಸ್‌ಸಿ), ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ), ಪೊಲೀಸ್ ನೇಮಕಾತಿ ಮಂಡಳಿ ನಡೆಸುವ ನೇಮಕಾತಿಗಳಲ್ಲಿ ಹುದ್ದೆ ಗಿಟ್ಟಿಸಿಕೊಳ್ಳಲು ಸಾಧ್ಯವೆಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಖಾಲಿ ಹುದ್ದೆಗಳ ಭರ್ತಿಗೆ ಅಧಿಸೂಚನೆ ಪ್ರಕಟ ಗೊಳ್ಳುತ್ತಿದ್ದಂತೆ ಲಕ್ಷಾಂತರ ಉದ್ಯೋಗಾಕಾಂಕ್ಷಿಗಳಲ್ಲಿ ಕನಸು ಗರಿಗೆದರಿಕೊಂಡರೆ, ಆಮಿಷ ಒಡ್ಡಿ ಹುದ್ದೆ ಹರಾಜಿಗಿಡುವವರ ಕಿವಿಗಳು ನಿಮಿರಿಕೊಳ್ಳುತ್ತವೆ. ಅಕ್ರಮ, ಅವ್ಯವಹಾರ, ಭ್ರಷ್ಟಾಚಾರದ ಕಳ್ಳಮಾರ್ಗಗಳು ತೆರೆದುಕೊಳ್ಳುತ್ತವೆ.

ಒಳನೋಟ

ಬಿಕರಿಯಾಗುತ್ತಿವೆ ಹುದ್ದೆಗಳು

ಪ್ರತಿಕ್ರಿಯಿಸಿ: 9606038256
feedback@prajavani.co.in

ಸರ್ಕಾರಿ ಹುದ್ದೆಗಳಿಗೆ ಕೇಂದ್ರ ಸರ್ಕಾರ 'ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ' ಮಾಡಿದೆ. ರಾಜ್ಯ ಸರ್ಕಾರ ಕೂಡಾ ಅದೇ ಮಾದರಿ ಅಳವಡಿಸಿಕೊಳ್ಳುವುದು ಸೂಕ್ತ

ಟಿ.ಎಂ. ವಿಜಯಭಾಸ್ಕರ್, ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ

ಬಿ.ಎಸ್. ಯಡಿಯೂರಪ್ಪ ಸಂಪುಟದಲ್ಲಿ (2010ರಲ್ಲಿ) ವೈದ್ಯಕೀಯ ಸಚಿವರಾಗಿದ್ದ ರಾಮಚಂದ್ರೇಗೌಡ ವೈದ್ಯಕೀಯ ಹುದ್ದೆಗಳ ನೇಮಕಾತಿ ಹಗರಣದಲ್ಲಿ ಕುರ್ಚಿಯಿಂದ ಇಳಿದಿದ್ದು ಹಳೆಯ ಕಥೆ.

ಸರ್ಕಾರಿ ಹುದ್ದೆ ಅಂದಾಜು 'ಹರಾಜು' ದರ!*

ಹುದ್ದೆ	ದರ (₹ಗಳಲ್ಲಿ)
ಗೆಜೆಟೆಡ್ ಪ್ರೊಬೇಷನರಿ ಗ್ರೂಪ್'ಎ'	70 ಲಕ್ಷದಿಂದ 1.5 ಕೋಟಿ
ಉಪ ವಿಭಾಗಾಧಿಕಾರಿ (ಎಸಿ)	1 ಕೋಟಿ - 1.5 ಕೋಟಿ
ಡಿವೈಎಸ್‌ಪಿ	80 ಲಕ್ಷದಿಂದ 1 ಕೋಟಿ
ತಹಶೀಲ್ದಾರ್	60 ಲಕ್ಷದಿಂದ 80 ಲಕ್ಷ
ಗೆಜೆಟೆಡ್ ಪ್ರೊಬೇಷನರಿ ಗ್ರೂಪ್'ಬಿ'	60 ಲಕ್ಷದಿಂದ 70 ಲಕ್ಷ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಎಸಿಎಫ್)	50 ಲಕ್ಷ
ಪೊಲೀಸ್ ಸಬ್ ಇನ್‌ಸ್ಪೆಕ್ಟರ್	40 ಲಕ್ಷದಿಂದ 1.50 ಕೋಟಿ
ಸಹಾಯಕ ಪ್ರಾಧ್ಯಾಪಕ	80 ಲಕ್ಷ
ಸಹಾಯಕ ಎಂಜಿನಿಯರ್	25 ಲಕ್ಷದಿಂದ 30 ಲಕ್ಷ
ಸಹಾಯಕ ತೋಟಗಾರಿಕೆ ಅಧಿಕಾರಿ	30 ಲಕ್ಷ
ಜಿಲ್ಲಾ ಅಲ್ಪಸಂಖ್ಯಾತ ಅಧಿಕಾರಿ	30 ಲಕ್ಷ
ಸಹಾಯಕ ನಿಯಂತ್ರಕ	40 ಲಕ್ಷ
ವಾಲ್ಮೀಕಿ, ಅಂಬೇಡ್ಕರ್ ನಿಗಮದಲ್ಲಿ ತಾಲ್ಲೂಕು ಅಧಿಕಾರಿ	30 ಲಕ್ಷ
ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ)	15 ಲಕ್ಷದಿಂದ 20 ಲಕ್ಷ
ದ್ವಿತೀಯ ದರ್ಜೆ ಸಹಾಯಕ	10 ಲಕ್ಷದಿಂದ 15 ಲಕ್ಷ
ಎಫ್‌ಡಿಎ (ಸಚಿವಾಲಯದಲ್ಲಿ ಹುದ್ದೆ)	30 ಲಕ್ಷ
ಗ್ರೂಪ್'ಸಿ'	15 ಲಕ್ಷ,
ಗ್ರೂಪ್'ಡಿ' (ಚಾಲಕರು ಇತರ)	8 ಲಕ್ಷದಿಂದ 10 ಲಕ್ಷ

* ವಿವಿಧ ಪ್ರಕರಣಗಳಲ್ಲಿ ಸಿಐಡಿ ನೀಡಿರುವ ವರದಿಯಲ್ಲಿರುವ ಮಾಹಿತಿ

6ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 6

ಚಿನಕುರಳಿ

ಪ್ರಕಾಶ್ ಶೆಟ್ಟಿ

ನೀಟ್ ಪಿಜಿ ಮುಂದೂಡಿಲ್ಲ ಮೇ 21ರಂದೇ ಪರೀಕ್ಷೆ: ಪಿಐಬಿ

ನವದೆಹಲಿ (ಪಿಟಿಐ): ಪ್ರಸಕ್ತ ಸಾಲಿನ 'ನೀಟ್' ಸ್ನಾತಕೋತ್ತರ ಪರೀಕ್ಷೆಯನ್ನು ಮುಂದೂಡಿಲ್ಲ. ಪರೀಕ್ಷೆಯು ನಿಗದಿಯಾಗಿರುವಂತೆ ಮೇ 21ರಂದೇ ನಡೆಯಲಿದೆ ಎಂದು ಕೇಂದ್ರ ವಾರ್ತಾ ಇಲಾಖೆ (ಪಿಐಬಿ) ಶನಿವಾರ ತಿಳಿಸಿದೆ. 'ನೀಟ್ ಪಿಜಿ ಪರೀಕ್ಷೆಯನ್ನು ಜುಲೈ 9ಕ್ಕೆ ಮುಂದೂಡಲಾಗಿದೆ ಎಂಬುದಾಗಿ ರಾಷ್ಟ್ರೀಯ ಪರೀಕ್ಷಾ ಮಂಡಳಿ ಹೆಸರಿನಲ್ಲಿ ಸುಳ್ಳು ಸುದ್ದಿಯನ್ನು ಪ್ರಸಾರ ಮಾಡಲಾಗುತ್ತಿದೆ. ಇಂತಹ ಸುಳ್ಳು ಮಾಹಿತಿ ಬಗ್ಗೆ ಅಭ್ಯರ್ಥಿಗಳು ಎಚ್ಚರವಹಿಸಬೇಕು' ಎಂದು ರಾಷ್ಟ್ರೀಯ ವೈದ್ಯಕೀಯ ವಿಜ್ಞಾನಗಳ ಪರೀಕ್ಷಾ ಮಂಡಳಿ (ಎನ್‌ಬಿಇಎಂಎಸ್) ಕೂಡ ತಿಳಿಸಿದೆ.

'ಮಂಡಳಿ ನಡೆಸುವ ವಿವಿಧ ಪರೀಕ್ಷೆಗಳು ಹಾಗೂ ಇತರ ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ https://natboard.edu.in ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ' ಎಂದೂ ಎನ್‌ಬಿಇಎಂಎಸ್ ಸ್ಪಷ್ಟಪಡಿಸಿದೆ.

'ಸಹಾಯಕ ಪ್ರಾಧ್ಯಾಪಕ: ತಲಾ ₹35 ಲಕ್ಷದಿಂದ ₹ 75 ಲಕ್ಷ ವಸೂಲಿ'

ಬೆಂಗಳೂರು: 'ರಾಜ್ಯದ ವಿವಿಧ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ 1,242 ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲಿ ಸಾಕಷ್ಟು ಅಕ್ರಮ ನಡೆದಿದ್ದು, ಈ ಬಗ್ಗೆ ವಿಸ್ತೃತ ತನಿಖೆ ನಡೆಸಬೇಕು' ಎಂದು ಒತ್ತಾಯಿಸಿ ಬೆಂಗಳೂರು ವಕೀಲರ ಸಂಘದ ಮಾಜಿ ಅಧ್ಯಕ್ಷ ಎ.ಪಿ.ರಂಗನಾಥ್ ಹಾಗೂ ಇತರರು ಮಲ್ಲೇಶ್ವರ ಠಾಣೆಗೆ ಶನಿವಾರ ದೂರು ನೀಡಿದ್ದಾರೆ.

'ಅರ್ಥಶಾಸ್ತ್ರ, ಸಮಾಜಶಾಸ್ತ್ರ ಹಾಗೂ ಇಂಗ್ಲಿಷ್ ವಿಷಯದ ಪರೀಕ್ಷೆಯಲ್ಲೂ ಅಕ್ರಮ ನಡೆದಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಒಎಂಆರ್ ತಿದ್ದಿ ಅಕ್ರಮವಾಗಿ ಹುದ್ದೆಗೆ ಆಯ್ಕೆ ಮಾಡುವುದಕ್ಕಾಗಿ 600 ಅಭ್ಯರ್ಥಿಗಳಿಂದ ತಲಾ ₹ 35 ಲಕ್ಷದಿಂದ ₹ 75 ಲಕ್ಷ ಸಂಗ್ರಹಿಸಿರುವ ಮಾತುಗಳು ಕೇಳಿಬರುತ್ತಿವೆ.'

'ಪರೀಕ್ಷೆ ಅಕ್ರಮದ ಬಗ್ಗೆ ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ, ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತ ಪಿ. ಪ್ರದೀಪ್, ಕೆಎಸ್‌ಒಯು ಕುಲಸಚಿವ ರಾಜಣ್ಣ, ನಿವೃತ್ತ ಪ್ರಾಧ್ಯಾಪಕ ಶಿವಲಿಂಗಯ್ಯ, ಪ್ರಾಧ್ಯಾಪಕ ಅಪ್ಪಾಜಿಗೌಡ ಹಾಗೂ ಇತರರನ್ನು ವಿಚಾರಣೆ ಮಾಡಬೇಕು. ನಿಜಾಂಶವನ್ನು ಪತ್ತೆ ಮಾಡಿ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದೂ ದೂರಿನಲ್ಲಿ ಆಗ್ರಹಿಸಲಾಗಿದೆ.

"ಕೇವಲ ಗೆಳೆತನ" ದಿಂದಾರಂಭಿಸಿ ಗೆಳೆತನಕ್ಕೂ ಮೀರಿದ ಸಂಬಂಧವಾಗುವ ವರೆಗೆ.
ಮಾತನಾಡಲು ಮುಜುಗರದಿಂದಾರಂಭಿಸಿ ಆಡಿಲ್ಲದ ಮಾತನ್ನೂ ಅರಿಯುವ ವರೆಗೆ.
ನೀನು ಮತ್ತು ನಾನುದಿಂದಾರಂಭಿಸಿ, ನಾವು ಆಗುವ ವರೆಗೆ.
ಇಂದಿನಿಂದಾರಂಭಿಸಿ, ಎಂದೆಂದಿಗೂ ವರೆಗೆ.
ನಿನ್ನ ಆ ಪ್ರೀತಿ ನಿಜಕ್ಕೂ ಅಭೂತಪೂರ್ವ.
ಅದನ್ನು ಸಂಭ್ರಮಿಸೋಣ ಅಷ್ಟೇ ಅಭೂತಪೂರ್ವವಾಗಿರುವುದರಿಂದ. ಪ್ಲಾಟಿನಮ್.
ಇದು 95% ಪ್ಯೂರ್. ಆದ್ದರಿಂದಲೇ,
ನಿಮ್ಮ ನಿಮ್ಮ ಅನನ್ಯ ಪ್ರೇಮಕ್ಕಾಗಿ ಇದಕ್ಕಿಂತ ಅನನ್ಯವಾದುದು ಬೇರಾವುದೂ ಇಲ್ಲ.

PLATINUM LOVE BANDS
THE WEDDING EDITION

Look for Pt950 - a mark of purity and an assurance of 95% pure platinum. For an assured buyback, ask for a platinum purity assurance card with your platinum jewellery purchase. /PlatinumDaysOfLove | To find your nearest store, visit www.platinumdaysoflove.com

Some PGI Authorised Retailers: Bangalore: Avenue Road: Davanam Jewellers 43438383 | Merlecha Diamonds 9845047251 | **Banashankari:** Tanishq 26691687 | **Bannerghatta:** Tanishq 45612222 | Malabar Gold & Diamonds 41489916 | **Basaveshwaranagar:** Mukesh Jewellers 23408685 | **Commercial Street:** C. Krishniah Chetty & Sons 25588731 | Davanam Jewellers 41418181 | Sri Krishna Diamonds 40301111 | **Dickenson Road:** AVR Swarna Mahal Jewellers 25540007 | Bhima Jewellers 25065075 | Jos Alukkas Jewellery 25552280 | Joyalukkas 25093916 | Kalyan Jewellers 25550533 | Malabar Gold & Diamonds 41283916 | ORRA 9341070999 | Sulthan Diamonds & Gold 25596916 | Tanishq 25550907 | **HBR Layout:** Bhima Jewellers 25447711 | **HSR Layout:** Neelkanth Jewellers 46963800 | **Hoodi:** Bhima Jewellers 8970796928 | **Jayanagar:** AVR Swarna Mahal Jewellers 26547007 | Bhima Jewellers 41301761 | C. Krishniah Chetty & Sons 66379822 | GRT Jewellers 22450777 | Jos Alukkas Jewellery 32942120 | Josco Jewellers 41666842 | Joyalukkas 26634448 | Kalyan Jewellers 26647733 | Khazana Jewellery 41539900 | Malabar Gold & Diamonds 41526916 | ORRA 9341903803 | Prince Jewellery 42649999 | Reliance Jewels 41681808 | Sulthan Diamonds & Gold 26534916 | Tanishq 65606561 | **Kammanahalli:** GRT Jewellers 25461515 | Kalyan Jewellers 8792851933 | Joyalukkas 25039900 | Malabar Gold & Diamonds 25421916 | Tanishq 43078900 | **Koramangala:** Bhima Jewellers 25537762 | Kalyan Jewellers 25636833 | Malabar Gold & Diamonds 25522916 | Reliance Jewels 41244551 | ORRA 9731604260 | Senco Gold & Diamonds 41141197 | Tanishq 45462222 | **MG Road:** Abaran 25328600 | Joyalukkas 25589916 | Malabar Gold & Diamonds 69129916 | **Malleswaram:** Bhima Jewellers 49767711 | C. Krishniah Chetty Jewellers 41001869 | Davanam Jewellers 41416161 | GRT Jewellers 22921515 | Joyalukkas 23466916 | Kalyan Jewellers 23360533 | Malabar Gold & Diamonds 23467916 | Tanishq 23465402 | **Marthahalli:** Bhima Jewellers 28546611 | GRT Jewellers 25401515 | Joyalukkas 25073800 | Kalyan Jewellers 46837079 | Malabar Gold & Diamonds 48514916 | Tanishq 43007773 | **Phoenix Market City:** C. Krishniah Chetty Jewellers 67266697 | Joyalukkas 49626678 | Kalyan Jewellers 49626533 | Malabar Gold & Diamonds 32325916 | ORRA 9686166916 | Senco Gold & Diamonds 67266340 | Tanishq 67266400 | **Prestige Forum Shantiniketan:** Tanishq 25018171 | **Rajaji Nagar:** Abaran 23598600 | Bhima Jewellers 23527712 | Jos Alukkas Jewellery 32956916 | Malabar Gold & Diamonds 49227916 | Sri Ganesh Diamonds and Jewellery 23488459, 23326359 | **Richmond Road:** Neelkanth Jewellers 22278846 | Nikhaar 22103266 | **Sadhasivanagar:** Sri Ganesh Diamonds and Jewellery 23362355 | **Whitefield:** Tanishq 25018171 | **Yelahanka:** Tanishq 68137426 | **Tumkur** | **B H Road:** Malabar Gold & Diamonds 2254916 | **Forum Shanti Niketan Mall:** ORRA 7720082327 | **Forum Koramangala Mall:** ORRA 7710082442 | **J.P. Nagar:** Abaran 29908600 | **KR Puram:** GRT Jewellers 29901515 | **RR Nagar:** GRT Jewellers 23341515 | **Vijayanagar:** Praveen Jewels 40924995

ರೈತನಿಂದ ನೇರವಾಗಿ ಗ್ರಾಹಕರಿಗೆ ಮಾರಾಟ

ಲಾಲ್‌ಬಾಗ್ ಉದ್ಯಾನಕ್ಕೆ ಲಗ್ಗೆಯಿಟ್ಟ ಮಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾವಿನ ಅವಧಿ ಆರಂಭವಾಗಿರುವುದರಿಂದ ಲಾಲ್‌ಬಾಗ್ ಉದ್ಯಾನದಲ್ಲಿ ತರಹೇವಾರಿ ಮಾವಿನ ಮಾರಾಟ ಶುರುವಾಗಿದೆ. ಕೋಲಾರದ ರೈತರೊಬ್ಬರು ತಾವು ಬೆಳೆದ ಮಾವನ್ನು ತಂದು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದಾರೆ.

ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮವು (ಕೆಎಸ್‌ಎಂಡಿಎಂಸಿ) ಇದೇ ತಿಂಗಳಲ್ಲಿ ಮಾವು ಮೇಳ ನಡೆಸಲು ಸಿದ್ಧತೆ ನಡೆಸಿದೆ.

ಲಾಲ್‌ಬಾಗ್‌ನಲ್ಲಿ ಮಾವು ಮಾರಾಟ ಮಾಡುತ್ತಿರುವ ವರ್ಷನ್ –ಪ್ರಜಾವಾಣಿ ಚಿತ್ರ

ಫಸಲು ಬಂದಿರುವುದರಿಂದ ಕೋಲಾರ ಜಿಲ್ಲೆಯ ಮಾವು ಬೆಳೆಗಾರ ಭಾಸ್ಕರ್ ರೆಡ್ಡಿ ಈಗಿನಿಂದಲೇ ವ್ಯಾಪಾರ ಆರಂಭಿಸಿದ್ದಾರೆ. ರಸಭರಿತ 12ಕ್ಕೂ ಹೆಚ್ಚು ತಳಿಯ ಮಾವು ಲಾಲ್‌ಬಾಗ್ ಉದ್ಯಾನಕ್ಕೆ ಬರುವವರನ್ನು ಆಕರ್ಷಿಸುತ್ತಿವೆ.

‘ಸಾಮಾನ್ಯವಾಗಿ ಈ ಅವಧಿ ವೇಳೆಗೆ ಮಾರುಕಟ್ಟೆಗಳಲ್ಲಿ ಮಾವು ತುಂಬಿ ತುಳುಕಾಡುತ್ತಿತ್ತು. ಆದರೆ, ಅಕಾಲಿಕ ಮಳೆಯಿಂದ ಮಾವು ಬೆಳೆ ತಡವಾಗಿ ಸಾಮಾನ್ಯ ಅವಧಿಗಿಂತ ವಿಳಂಬವಾಗಿ ಮಾವು ಪ್ರಿಯರ ಕೈಸೇರುತ್ತಿದೆ. ಇಳುವರಿಯೂ ಶೇ 40ರಷ್ಟು ಕುಸಿದಿದೆ’ ಎಂದು ಭಾಸ್ಕರ್ ರೆಡ್ಡಿ ಅವರು ಹೇಳಿದರು.

‘ಮಾವು ನಿಗಮ ಮತ್ತು ತೋಟಗಾರಿಕೆ ಇಲಾಖೆ ಸಹಕಾರದೊಂದಿಗೆ ಒಂದು ವಾರದಿಂದ ವ್ಯಾಪಾರ ಆರಂಭಿಸಿದ್ದೇನೆ. ಗ್ರಾಹಕರು ಮಾವು ಖರೀದಿಗೆ ಮುಗಿಬೀಳುತ್ತಿದ್ದಾರೆ. ಸದ್ಯಕ್ಕೆ ವ್ಯಾಪಾರ ಚೆನ್ನಾಗಿದ್ದು, ಈವರೆಗೆ 1.5 ಟನ್ ಮಾವು ಮಾರಾಟವಾಗಿದೆ’ ಎಂದು ಭಾಸ್ಕರ್ ಹೇಳಿದರು.

ಸಂಪರ್ಕ: 9972649184

ಪಿಎಚ್‌.ಡಿಗೆ ಅರ್ಜಿ ಆಹ್ವಾನ

ಬೆಂಗಳೂರು: ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಾನ್ಯತಾ ಕೇಂದ್ರಗಳಲ್ಲಿ ಒಂದಾಗಿರುವ ಬಿಎಂಶ್ರೀ ಪ್ರತಿಷ್ಠಾನದಲ್ಲಿ ಪಿಎಚ್‌.ಡಿ ಅಧ್ಯಯನ ಮಾಡಲು ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಪ್ರತಿಷ್ಠಾನದಲ್ಲಿ 7 ಸೀಟುಗಳು ಲಭ್ಯವಿದ್ದು, ಪ್ರವೇಶ ಪಡೆಯಲು ಇಚ್ಛಿಸುವವರು ಪ್ರತಿಷ್ಠಾನದ ಕಚೇರಿಯನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಬಿಎಂಶ್ರೀ ಪ್ರತಿಷ್ಠಾನ, ಎನ್‌.ಆರ್‌.ಕಾಲೊನಿ, ಬೆಂಗಳೂರು.
ಸಂಪರ್ಕ: 9972812127

ಕಿರು ನಾಟಕೋತ್ಸವ: ಅಂತಿಮ ಹಂತಕ್ಕೆ 6 ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವರ ಥಿಯೇಟರ್ ಹಾಗೂ ಅಶ್ವಘೋಷ ಥಿಯೇಟರ್ ಜಂಟಿಯಾಗಿ ಹಮ್ಮಿಕೊಂಡಿರುವ ಬೆಂಗಳೂರು ಕಿರುನಾಟಕೋತ್ಸವ–2022ರಲ್ಲಿ ಒಟ್ಟು ಆರು ತಂಡಗಳು ಅಂತಿಮ ಘಟ್ಟಕ್ಕೆ ಅರ್ಹತೆ ಪಡೆದಿವೆ.

‘ಮೊದಲ ಹಂತದ ಸ್ಪರ್ಧೆಯಲ್ಲಿ ಒಟ್ಟು 15 ತಂಡಗಳು ಪಾಲ್ಗೊಂಡಿದ್ದವು. ಈ ಪೈಕಿ ವಿದಗ್ಧ, ಸಹನ ಮೂರ್ತ, ನಗರ ಪೂಜೆ, ಕ್ಷಮ, ಸಾಕ್ಷಾತ್ಕಾರ ಹಾಗೂ ಅನಾಹುತ ನಾಟಕಗಳು ಅಂತಿಮ ಹಂತಕ್ಕೆ ಆಯ್ಕೆಯಾಗಿವೆ’ ಎಂದು ಪ್ರಕಟಣೆ ತಿಳಿಸಿದೆ.

‘ಅಂತಿಮ ಹಂತದ ಸ್ಪರ್ಧೆಯು ಇದೇ 15ರಂದು ಹನುಮಂತನಗರದ ಪ್ರಭಾತ್ ಕಲಾಸೌಧದಲ್ಲಿ ನಡೆಯಲಿದೆ. ಉತ್ತಮ ಅಭಿನಯ ತೋರುವ ಕಲಾವಿದನಿಗೆ ‘ಅತ್ಯುತ್ತಮ ನಟ’ ಪ್ರಶಸ್ತಿ ನೀಡಲಾಗುತ್ತದೆ. ದಿವಂಗತ ನಟ ಸಂಚಾರಿ ವಿಜಯ್ ಸ್ಮರಣಾರ್ಥ ಈ ಪ್ರಶಸ್ತಿ ಕೊಡಲಾಗುತ್ತಿದೆ’ ಎಂದು ಹೇಳಿದೆ.

ಭಾನುವಾರದ ಪುರವಣಿ ಓದಿರಿ

ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ) CIN: U02001KA1971SGC001999
‘ವನವಿಕಾಸ’ 1ನೇ ಮಹಡಿ, 18 ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003
ಫೋನ್: 080-23345348 ಮೊಬೈಲ್ : 6366083188
ಇ-ಮೇಲ್ : info@kfdcl.com, ವೆಬ್‌ಸೈಟ್: www.kfdcl.com
ದಿನಾಂಕ: 08.05.2022

ಸ್ಥಳಾವಕಾಶದ ಪ್ರಕಟಣೆ

ಈ ಮೇಲಿನ ವಿಳಾಸದಲ್ಲಿ ನೆಲಮಹಡಿಯೊಂದಿಗೆ 5 ಮಹಡಿಗಳನ್ನು ಹೊಂದಿರುವ ವನವಿಕಾಸ ಸಂಕೀರ್ಣವಿದ್ದು ಇದರಲ್ಲಿ ಹಲವು ಸರ್ಕಾರಿ/ಅರೆ ಸರ್ಕಾರಿ ಕಛೇರಿಗಳು ಕಾರ್ಯ ನಿರ್ವಹಿಸುತ್ತಿರುತ್ತವೆ. ಅದಾಗ್ಯೂ ಕೆಲ ಮಹಡಿಗಳಲ್ಲಿ ಸ್ಥಳಾವಕಾಶವು ಖಾಲಿ ಇರುವುದರಿಂದ ಚದರಡಿಗಳ ಆಧಾರದಲ್ಲಿ ನ್ಯಾಯಯುತವಾದ ಬಾಡಿಗೆಯೊಂದಿಗೆ ಖಾಸಗಿ / ಸರ್ಕಾರಿ ಸಂಸ್ಥೆಗಳಿಗೆ ಕೊಡಲು ಅವಕಾಶವನ್ನು ಹೊಂದಿರುತ್ತದೆ. ಸದರಿ ಸ್ಥಳದಲ್ಲಿ 24 ಗಂಟೆಗಳ ಕಾಲ – ವಿದ್ಯುತ್, ನೀರು, ಲಿಫ್ಟ್, ಜನರೇಟರ್ ಹಾಗೂ ವಿಶಾಲವಾದ ಪಾರ್ಕಿಂಗ್ ಸೌಲಭ್ಯ ಹೊಂದಿರುತ್ತದೆ. ಆ ಸಕ್ತಿವುಳ್ಳವರು ಮೇಲಿನ ವಿಳಾಸ ಹಾಗೂ ದೂರವಾಣಿ ಮೂಲಕ ಸಂಪರ್ಕಿಸಬಹುದಾಗಿದೆ.

ಸಹಿ/-ವ್ಯವಸ್ಥಾಪಕ ನಿರ್ದೇಶಕರು

ನೈಋತ್ಯ ರೈಲ್ವೆ
ಇ-ಟೆಂಡರ್ ಪ್ರಕಟಣೆ ಸಂ. ಎಸ್‌ಡಬ್ಲ್ಯುಆರ್/ಡಬ್ಲ್ಯು/ಟಿಎಸ್/2022/03/ಇ
ದಿನಾಂಕ : 04-05-2022
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಸಬ್ ಅಸೆಂಬ್ಲಿ ಸಂ.ಟಿ-6155 ಅನುಸಾರವಾಗಿ ಝೆಡ್‌ಯು-1-60/60ಇ1ಎ1 ಥಿಕ್ ವೆಬ್ ಜೊತೆಗೆ 10125ಎಂಎಂ ಕರ್ವ್ಡ್ ಸ್ವಿಚ್‌ಗಳ ತಯಾರಿಕೆ ಮತ್ತು ಸರಬರಾಜು. (ಇ-ಟೆಂಡರ್ ಸಂ. ಎಸ್‌ಡಬ್ಲ್ಯುಆರ್‌ಟಿಎಸ್ 046155)	ರೂ. 30,90,22,714/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 31-05-2022 ರಂದು 15:00 ಗಂಟೆವರೆಗೆ
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಉಪ ಮುಖ್ಯ ಇಂಜಿನಿಯರ್
ಟ್ರ್ಯಾಕ್ ಪ್ರೊಕ್ಯೂರ್‌ಮೆಂಟ್, ಹುಬ್ಬಳ್ಳಿ
ಪಿಯುಬಿ/79/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23
S.W.Railways SWRRLY SWRRLY

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಕಾರ್ಯಪಾಲಕ ಅಭಿಯಂತರರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ
ಇ-ಮೇಲ್: eerdwsd.ckb2@gmail.com ದೂ: 08156-270058
ಸಂ: ಕಾಪಾಅ/ಗ್ರಾ.ಕು.ನೀ&ನೈರ್ಮಲ್ಯ ವಿಭಾಗ/ಚಿ.ಪುರ/ತಾ.ಶಾ/ಟೆಂಡರ್ 22-23/
ದಿನಾಂಕ: 02.05.2022

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ: 02/2022-23
ದಿನಾಂಕ: 02.05.2022

(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಕರ್ನಾಟಕ ರಾಜ್ಯದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ ರವರು 2022-23ನೇ JJM ಯೋಜನೆಯಡಿ ಚಿಕ್ಕಬಳ್ಳಾಪುರ ತಾಲ್ಲೂಕಿನ ಮಂಡಿಕಲ್ ಮತ್ತು ಸುತ್ತಮುತ್ತಲಿನ ಇತರೆ 13 ಜನವಸತಿಗಳಿಗೆ DBOT ಆಧಾರಿತ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಸಂಸ್ಥೆಯಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ DBOT ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಮತ್ತು ಇ.ಎಂ.ಡಿಯನ್ನು ಈ ಪೇಮೆಂಟ್‌ನಲ್ಲಿ (Credit Card/Direct Debit/NEFT & OTC ಮುಖೇನ) ಅಥವ ಚಲನ್ ಮೂಲಕ ಭರ್ತಿಮಾಡುವ ಗುತ್ತಿಗೆದಾರರು ಕೊನೆಯ ದಿನಾಂಕಕ್ಕಿಂತ 2 ದಿನ ಮುಂಚಿತವಾಗಿ ಸಲ್ಲಿಸುವುದು. (1) ಟೆಂಡರ್ ದಾಸ್ತಾವೇಜುಗಳನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: **10.05.2022 ರ ಸಂಜೆ 4.30 ಗಂಟೆಯನಂತರ** (2) ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **02.06.2022ರ ಸಂಜೆ 4.30 ಗಂಟೆಯವರೆಗೆ.** (3) ಟೆಂಡರ್ ಪೂರ್ವ ಸಭೆಯ ದಿನಾಂಕ: ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ: **20.05.2022 ರಂದು ಬೆಳಿಗ್ಗೆ 11.00 ಗಂಟೆಗೆ.** (4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **04.06.2022 ರಂದು ಬೆಳಿಗ್ಗೆ 11.00 ಗಂಟೆಗೆ.** (5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **06.06.2022 ರಂದು ಬೆಳಿಗ್ಗೆ 11.00 ಗಂಟೆಗೆ.**

ಸಹಿ/- ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ
ವಾ.ಸಾ.ಸಂ.ಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ.59/ಎಂಸಿಎ/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

IN IMAX AT
PVR CINEMAS {Forum Mall, Koramangala, 8:00, 10:40, 1:30, 4:20, 7:10, 10:00 p.m. | VR Mall, 8:00, 10:40, 1:30, 4:20, 7:10, 10:00 p.m. | Vega City, 9:40, 12:30, 3:20, 6:10, 9:00 p.m.} | INOX {Mantri Square Mall, Malleshwaram, 8:15, 11:00, 1:45, 4:30, 7:15, 10:00 p.m. | RMZ Galleria Mall , Yelahanka, 8:15, 11:00, 1:45, 4:30, 7:15, 10:00 p.m.} | CINEPOLIS {Shanthiniketan, 10:10, 1:00, 3:50, 6:40, 9:30 p.m.}.

IN 4DX AT
PVR CINEMAS {Phoenix Marketcity Mall, 9:40, 12:30, 3:20, 6:10, 9:00 p.m. | Forum Mall, Koramangala, 9:40, 12:30, 3:20, 6:10, 9:00 p.m. | Orion Mall, 10:40, 1:30, 4:20, 7:10, 10:00 p.m. | Vega City, 10:40, 1:30, 4:20, 7:10, 10:00 p.m.} | CINEPOLIS {Shanthiniketan, 10:30, 1:20, 4:10, 7:00, 9:50 p.m.}.

PVR CINEMAS | INOX CINEMAS | CINEPOLIS CINEMAS | GOPALAN CINEMAS | KINO CINEMAS | ROCKLINE CINEMAS | INNOVATIVE MULTIPLEX {Marathahalli} | HMT CINEMAS {Jalahalli} | CAUVERY {Sankey'S Road} | SRI SRINIVASHA {S. G. Palya} | SRI SIDDESHWARA CHITRAMANDIRA {JP Nagar} | RENUKA PRASSANA {JP Nagar} | LAKSHMI {Taverkare} | THIRUMALA {Agara} | MAHADESHWARA {Bansankari} | PUSHPANJALI {Sultanpalaya} | SWAGATH SHANKARNAG CHITRA MANDIRA {MG Road} | VICTORY {Magadi Raod} | MANASA {Bangalore} | BRUNDHA THEATRE {Hongasandra} | SRI LAKSHMI CHITRAMANDIRA {Rammurthy Nagar} | VINAYAKA {Vartur} | SWAGATH POORNIMA {JC Road} | AMRUTH {Lingrajapuram} | TULSI {Bangalore} | AURNA THEATRE {Bangalore} | SANDHYA {Bangalore} | ANJAN {Magadi Raod} | RAVI {Sarjapura} | MUKTA A2 CINEMAS {Uttarahalli} | VENKATESHWARA {Konappana Agrahara} | PRASHANNA {Magadi Raod} | SRINIVASA {Godownpalaya} | SOUNDARYA MAHAL PICTURE HOUSE {Doddaballapur} | VAIBHAV CINEMAS {Doddaballapur} | MARUTHI {Rajagopalnagar} | V CINEMA (VIJAYALAKSHMI) {Garudacharpalya} | VENKATESHWARA {K. R. Puram} | SWAGATH MURALI GOKULA {Mathikere} | SRI VINAYAKA {Marathalli} | MAHAVEER {Mandya} | AKASH {Laggere} | BALAJI CINEMA {Chikkalasandra} | VIJAYA CHITRAMANDIRA {Byatarayanapura} | RADHAKRISHNA THEATRE {Matadahalli} | VAIBHAV THEATRE {Sanjay Nagar} | DRC CINEMAS {Mysore} | MYSORE VISION CINEMAS {Mysore} | MOVIETIME {Davangere} | TRINETRA {Davangere} | NATRAJ {Bellary} | R R MULTIPLEX {Bellary} | JAI BHARAT {Tumkur} | BHARATH CINEMAS | SUCHITRA THEATER {Mangalore} | CINE GALAXY {Surathkal} | SREELEKHA {Chikamagalur} | PRITHIVI {Hassan} | SARASWATHI PICTURE PALANCE {Hospet} & Others Cinemas.

FOR ANY CHANGES OR CANCELLATION IN SHOW TIMINGS, PLEASE CONTACT THE THEATRE

farnazfever.com

farnazfever

	ಶ್ರೀ	
	ಶ್ರೀ ಗಾಳಿ ಆಂಜನೇಯಸ್ವಾಮಿ ಪ್ರಸನ್ನ	
	ಶ್ರೀರಸ್ತು || || ನಿರ್ವಿಘ್ನಮಸ್ತು	

ಶ್ರೀ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ ಟ್ರಸ್ಟ್ (ರಿ.)
ಬ್ಯಾಟರಾಯನಪುರ, ಮೈಸೂರು ರಸ್ತೆ, ಬೆಂಗಳೂರು-26

ಶ್ರೀರಾಮಹೃದಯಾನಂದಂ ಭಕ್ತಕಲ್ಪ ಮಹೀರುಹಮ್ ।
ಅಭಯಂ ವರದಂ ದೋರ್ಭ್ಯಾಂ ಕಲಯೇ ಮಾರುತಾತ್ಮಜಮ್ ॥

ಶ್ರೀ ಆಂಜನೇಯಸ್ವಾಮಿಯವರ 21 ಅಡಿ ಎತ್ತರದ ನೂತನ ಏಕಶಿಲಾ ಸ್ಥಿರಬಿಂಬ ಪ್ರತಿಷ್ಠಾಪನಾ ಉಧ್ಘಾಟನಾ ಸಮಾರಂಭ

ದಿ|| 09-05-2022 ರಿಂದ ದಿ|| 11-05-2022ರ ವರೆಗೆ

ಆಸ್ತಿಕ ಭಕ್ತ ಮಹಾಶಯರೆ

ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷಂಗಳು 1944ಕ್ಕೆ ಸರಿಯಾದ ಶ್ರೀ ಶುಭಕೃತು ಸಂವತ್ಸರ ವೈಶಾಖ ಶುದ್ಧ ದಶಮಿ ದಿನಾಂಕ 11-05-2022ನೇ ಬುಧವಾರ ಉದಯಾದಿ 9.43 ರಿಂದ 10.30ರೊಳಗೆ ಸಲ್ಲುವ ಶುಭ ಮಿಥುನ ಲಗ್ನದಲ್ಲಿ ಶ್ರೀ ಆಂಜನೇಯಸ್ವಾಮಿಯವರ 21 ಅಡಿ ಎತ್ತರದ ನೂತನ ಸ್ಥಿರಬಿಂಬ ಪ್ರತಿಷ್ಠಾಪನಾ ಉಧ್ಘಾಟನಾ ಸಮಾರಂಭ ನಡೆಸಲು ಸಂಕಲ್ಪಿಸಲಾಗಿದೆ. ಭಕ್ತ ಮಹಾಶಯರಾದ ತಾವೆಲ್ಲರೂ ಈ ಪವಿತ್ರ ದೇವತಾಕಾರ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕುಟುಂಬ ಸಮೇತರಾಗಿ ಆಗಮಿಸಿ ಈ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ವಿನಂತಿಸಿಕೊಳ್ಳುತ್ತೇವೆ.

ಸರ್ವರಿಗೂ ಆತ್ಮೀಯ ಸುಸ್ವಾಗತ

ಶ್ರೀ. ಎಚ್. ಎ. ಕೆಂಪೇಗೌಡ
ನಿಕಟ ಪೂರ್ವ ಬಿಬಿಎಂಪಿ ಸದಸ್ಯರು, ಹನುಮಂತನಗರ

ಡಾ. ಬಿ. ಎಂ. ಪಟೇಲ್ ಪಾಂಡು
ಧರ್ಮದರ್ಶಿಗಳು, ಶ್ರೀ. ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ ಟ್ರಸ್ಟ್ (ರಿ)

ಸೇವಾಕರ್ತರು: ದಿ|| ಪಾಪ್ಪಣ್ಣನವರ ಕುಟುಂಬದವರು
ಮಾಣಿಕ್ಯಂ (ಮಣಿ) ಮತ್ತು ಸ್ನೇಹಿತರು

ಮುಖ್ಯಮಂತ್ರಿ ಸ್ಥಾನಕ್ಕೆ ₹2,500 ಕೋಟಿ ಹೇಳಿಕೆ ● ಉಲ್ಟಾ ಹೊಡೆದ ಶಾಸಕ

ಯತ್ನಾಳಗೆ ನೋಟಿಸ್: ಕಟೀಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಸ್ಥಾನ ನೀಡಲು ₹2,500 ಕೋಟಿ ಹಣ ಕೇಳಿದ್ದಾಗಿ ಹೇಳಿಕೆ ನೀಡಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ನೋಟಿಸ್ ನೀಡಿ ವಿವರಣೆ ಪಡೆಯಲಾಗುವುದು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು.

ತುಮಕೂರಿನಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಯತ್ನಾಳ ಹೇಳಿರುವ ಎಲ್ಲಾ ವಿಚಾರಗಳನ್ನು ಪಕ್ಷದ ಕೇಂದ್ರ ಶಿಸ್ತು ಸಮಿತಿಯ ಗಮನಕ್ಕೆ ತರಲಾಗಿದ್ದು, ವರಿಷ್ಠರಿಗೆ ಎಲ್ಲಾ ಮಾಹಿತಿ ನೀಡಲಾಗಿದೆ. ಅವರಿಂದ ಪರಿಪೂರ್ಣ ವಿವರಣೆ ಪಡೆದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಅವರು ತಿಳಿಸಿದರು.

'ಅನಗತ್ಯ ಹೇಳಿಕೆ ನೀಡಿದ ಯತ್ನಾಳ ಅವರಿಗೆ ಈವರೆಗೆ ಎರಡು ಬಾರಿ ನೋಟಿಸ್ ಕೊಟ್ಟು, ವಿವರಣೆ ಪಡೆದುಕೊಳ್ಳಲಾಗಿದೆ. ಈ ಬಾರಿಯೂ ಶಿಸ್ತು ಸಮಿತಿ ಮೂಲಕ ನೋಟಿಸ್ ನೀಡಲಾಗುವುದು. ಉತ್ತರ ಬಂದ ನಂತರ ಕ್ರಮ ಜರುಗಿಸಲಾಗುತ್ತದೆ. ಬಿಜೆಪಿಯಲ್ಲಿ ದೊಡ್ಡವರು, ಸಣ್ಣವರು ಎನ್ನುವ ಪ್ರಶ್ನೆ ಇಲ್ಲ. ಎಲ್ಲರೂ ಶಿಸ್ತು ಸಮಿತಿಯ ವ್ಯಾಪ್ತಿಗೆ ಒಳಪಡುತ್ತಾರೆ' ಎಂದು ಹೇಳಿದರು.

'ಹೈಕಮಾಂಡ್ ಹಣ ಕೇಳಿದೆ ಅಂದಿಲ್ಲ' (ವಿಜಯಪುರ ವರದಿ): 'ಕಾಲ್ ಮಾಡಿ ಸೋನಿಯಾ ಗಾಂಧಿ ಭೇಟಿ ಮಾಡಿಸುತ್ತೇನೆ ಎಂದಿದ್ದಾರೆ. ಇಂಥ ದಲಾಲರು ರಾಜ್ಯದಲ್ಲಿದ್ದಾರೆ. ನಿಮ್ಮ ಸಿ.ಎಂ ಸೀಟ್‌ಗಾಗಿ ನಾವು ಟ್ರೈ ಮಾಡ್ತೀವಿ ಎಂದು ಹೇಳುತ್ತಾರೆ. ಇಷ್ಟು ಸಾವಿರ ಕೋಟಿ ರೆಡಿ ಇಡಿ ಎನ್ನುತ್ತಾರೆ. ಇಂಥವರಿಗೆ ಛೀಮಾರಿ ಹಾಕಿದ್ದೇನೆ ಎಂದು ರಾಮದುರ್ಗದಲ್ಲಿ ಹೇಳಿದ್ದೇನೆಯೇ ಹೊರತು, ಹೈಕಮಾಂಡ್ ಹಣ ಕೇಳಿದೆ ಎಂದು ಹೇಳಿಲ್ಲ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಸ್ಪಷ್ಟಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ದೆಹಲಿ ಸಾಧು ಒಬ್ಬ ತಾನು ಕೇದಾರ ಮಹಾರಾಜ ಮಾತಾಡೋದು, ನನಗೆ ಎಲ್ಲರೂ ಗೊತ್ತು. ಇಷ್ಟು ಹಣ ತಂದು ಕೊಟ್ಟರೆ ಶಿಫಾರಸು ಮಾಡುತ್ತೇನೆ ಅಂತಾರೆ. ಇದೆಲ್ಲ ರೆಕಾರ್ಡ್ ಇಟ್ಟುಕೊಳ್ಳಲು ಅಗಲ್ಲ. ಹೀಗೆ ರಾಜಕಾರಣ ನಡೆಯುತ್ತದೆ. ರಾಮದುರ್ಗದಲ್ಲಿ ವೇದಿಕೆ ಮೇಲೆ ಕಾಂಗ್ರೆಸ್, ಬಿಜೆಪಿ, ಜೆಡಿಎಸ್‌ನ ಕೆಲ ಟಿಕೆಟ್ ಆಕಾಂಕ್ಷಿಗಳಿದ್ದರು. ಅವರಿಗೆ ಹಿತವಚನ ಹೇಳಲು ಆ ರೀತಿ ಮಾತನಾಡಿದ್ದೇನೆ' ಎಂದು ಹೇಳಿದರು.

'ಯತ್ನಾಳ ವಶಕ್ಕೆ ಪಡೆದು ತನಿಖೆ ಮಾಡಲಿ'

ಹುಬ್ಬಳ್ಳಿ/ಬೆಳಗಾವಿ: 'ಮುಖ್ಯಮಂತ್ರಿ ಮಾಡುವುದಕ್ಕೆ ದೆಹಲಿಯಿಂದ ಬಂದವರು ₹2,500 ಕೋಟಿ ಕೇಳಿದ್ದರು ಎಂದು ಹೇಳಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ವಶಕ್ಕೆ ಪಡೆದು ತನಿಖೆ ನಡೆಸಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ಆಗ್ರಹಿಸಿದರು.

ಹುಬ್ಬಳ್ಳಿಯಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ರಾಜಕೀಯ ಬದ್ಧತೆ ಇದ್ದರೆ ಯತ್ನಾಳ ಅವರನ್ನು ಸಾಕ್ಷಿಯಾಗಿಸಿಕೊಂಡು ತನಿಖೆ ಮಾಡಬೇಕು' ಎಂದು ಒತ್ತಾಯಿಸಿದರು.

'ಮುಖ್ಯಮಂತ್ರಿ ಮಾಡುತ್ತೇವೆಂದು ಯತ್ನಾಳ ಅವರಲ್ಲಿ ₹ 2,500 ಕೋಟಿ ಕೇಳಿದವರು ಯಾರು, ಅವರನ್ನು ಕಳುಹಿಸಿದವರು ಯಾರು ಎನ್ನುವುದನ್ನು ತನಿಖೆ ನಡೆಸಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಬೆಳಗಾವಿಯಲ್ಲಿ ಒತ್ತಾಯಿಸಿದರು.

'ಯತ್ನಾಳ ಬಳಿಗೆ ಕಳುಹಿಸಿದ್ದವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರೋ, ಕೇಂದ್ರ ಸಚಿವ ಅಮಿತ್ ಶಾ ಅವರೋ' ಎಂದು ಕೇಳಿದ ಅವರು, 'ಯತ್ನಾಳ ಹೇಳಿಕೆಯಲ್ಲಿ ಸತ್ಯಾಂಶವಿದೆ ಎಂದುಕೊಂಡಿದ್ದೇನೆ' ಎಂದರು.

ತನಿಖೆಗೆ ಎಎಪಿ ಒತ್ತಾಯ

ಬೆಂಗಳೂರು: 'ಮುಖ್ಯಮಂತ್ರಿ ಹುದ್ದೆಯನ್ನು ಬಿಜೆಪಿಯವರು ₹2,500 ಕೋಟಿ ಪಡೆದು ಮಾರಾಟ ಮಾಡುತ್ತಾರೆಂದು ಅವರ ಪಕ್ಷದ ಶಾಸಕರೇ ಬಹಿರಂಗಪಡಿಸಿದ್ದು, ಈ ಬಗ್ಗೆ ತನಿಖೆ ನಡೆಸಬೇಕು' ಎಂದು ಎಎಪಿ ಮುಖಂಡರೂ ಆಗಿರುವ ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್ ಆಗ್ರಹಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಪಿಎಸ್ಐ ಸೇರಿದಂತೆ ಸರ್ಕಾರಿ ಹುದ್ದೆಗಳನ್ನು ಹಣ ಪಡೆದು ಬಿಕರಿ ಮಾಡುತ್ತಾರೆ ಎನ್ನುವುದು ಎಲ್ಲರಿಗೂ ಗೊತ್ತಿತ್ತು. ಮುಖ್ಯಮಂತ್ರಿ ಹುದ್ದೆಯನ್ನೂ ಹಣಕ್ಕೆ ಮಾರಾಟ ಮಾಡುತ್ತಿರುವ ವಿಚಾರವನ್ನು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಇದೀಗ ಬಹಿರಂಗಪಡಿಸಿದ್ದಾರೆ. ಅಷ್ಟು ದೊಡ್ಡ ಮೊತ್ತವನ್ನು ಬಿಜೆಪಿಯಿಂದ ಮುಖ್ಯಮಂತ್ರಿ ಆದವರು ಹೇಗೆ ಹೊಂದಿಸಿದ್ದಾರೆ ಮತ್ತು ಹಣ ಪಡೆದ ಹೈಕಮಾಂಡ್ ಅದರಿಂದ ಏನು ಮಾಡಿದೆ ಎಂಬುದು ಬಯಲಾಗಬೇಕು' ಎಂದು ಒತ್ತಾಯಿಸಿದರು.

'ಪ್ರಜಾಪ್ರಭುತ್ವಕ್ಕೆ ಬಿಜೆಪಿ ಅತ್ಯಂತ ಮಾರಕವಾಗಿ ಪರಿಣಮಿಸಿದೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಶಾ ಅವರು ಯತ್ನಾಳ್ ಬಹಿರಂಗಪಡಿಸಿರುವ ವಿಷಯದ ಕುರಿತು ಪ್ರತಿಕ್ರಿಯಿಸಬೇಕು. ಇದರಲ್ಲಿ ಅವರಿಗೆ ಎಷ್ಟು ಪರ್ಸೆಂಟ್ ತಲುಪಿದೆ ಎನ್ನುವುದೂ ಬಯಲಾಗಬೇಕು' ಎಂದು ಭಾಸ್ಕರ್ ರಾವ್ ಆಗ್ರಹಿಸಿದರು.



ಪತ್ರಕರ್ತ ರಾಜದೀಪ್ ಸರ್ದೇಸಾಯಿ ಅವರು ಪುಸ್ತಕ ಬಿಡುಗಡೆ ಮಾಡಿದರು. ಲೇಖಕ ಪ್ರಣಯ್ ಪಾಟೀಲ ಹಾಗೂ ಅಂಕಣಗಾರ್ತಿ ಪೂಜಾ ಬೇಡಿ ಇದ್ದರು – ಪ್ರಜಾವಾಣಿ ಚಿತ್ರ

'ರಾಕ್‌ಸ್ಟಾರ್' ಜೀವನಗಾಥೆ ಹೇಳುವ ಕೃತಿ: ರಾಜ್‌ದೀಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಣಯ್ ಪಾಟೀಲ ಅವರ 'ಬರ್ಗಂಡಿ ವಿಂಟರ್–ಇನ್ ಯುರೋಪ್' ಕೃತಿಯು ರಾಕ್‌ಸ್ಟಾರ್ ಒಬ್ಬರ ಜೀವನಗಾಥೆ ಹೇಳುವ ಪುಸ್ತಕ. ನೈಜ ಹಾಗೂ ನೇರ ನಿರೂಪಣೆಯಿಂದಾಗಿ ಓದುಗರನ್ನು ಆವರಿಸಿಕೊಳ್ಳುವ ಈ ಕೃತಿ, ಅವರ ಭಾವ ತಂತಿಯನ್ನು ಮೀಟಿ ಕಣ್ಣುಗಳೂ ಹನಿಗೂಡುವಂತೆ ಮಾಡುತ್ತದೆ' ಎಂದು ಪತ್ರಕರ್ತ ರಾಜದೀಪ್ ಸರ್ದೇಸಾಯಿ ಅಭಿಪ್ರಾಯಪಟ್ಟರು.

ನಗರದಲ್ಲಿ ಶನಿವಾರ ಆಯೋಜನೆಗೊಂಡಿದ್ದ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕಾದಂಬರಿಯ ನಾಯಕ ಜೇಸ್ ಟನ್ನರ್‌ನ ತೊಳಲಾಟ, ಮಾದಕ ವಸ್ತು ಸೇವನೆ ಆತನ ಜೀವ ಹಿಂಡುವ ಪರಿ, ನಾಯಕಿ ಯಾಸ್ಮಿನ್ ಪ್ರವೇಶದಿಂದ ಆತನ ಬದುಕಿನಲ್ಲಾಗುವ ಬದಲಾವಣೆಯನ್ನು ಓದುಗರ ಮನಮುಟ್ಟುವಂತೆ ಲೇಖಕರು ಚಿತ್ರಿಸಿದ್ದಾರೆ. ಪ್ರೀತಿ–ಪ್ರಣಯ, ಭೂತದ ಕತೆಗಳು, ವಾಮಾಚಾರ, ಪುನರ್ಜನ್ಮ ಕೂಡ ಕಾದಂಬರಿಯಲ್ಲಿ ಇಣುಕುತ್ತವೆ' ಎಂದರು.

'ಜರ್ಮನಿಯ ಜನರ ಬದುಕು, ಅಲ್ಲಿನ ಸಂಸ್ಕೃತಿಯನ್ನು ಬಹಳ ಹತ್ತಿರದಿಂದ ಕಂಡಿರುವ ಲೇಖಕರು, ತಮ್ಮ ಅನುಭವಕ್ಕೆ ಬಂದ ಅನೇಕ ಸಂಗತಿಗಳನ್ನು ಈ ಕಾದಂಬರಿಯ ಮೂಲಕ ಓದುಗರಿಗೆ ಮುಟ್ಟಿಸುವ ಕೆಲಸ ಮಾಡಿದ್ದಾರೆ. ಮಾನವ ಸಂಬಂಧಗಳ ಮೇಲೂ ಬೆಳಕು ಚೆಲ್ಲಿದ್ದಾರೆ. ಕೃತಿಯನ್ನು ಓದಿದಾಗ ಅದು ಮನದಟ್ಟಾಗುತ್ತದೆ. ಸಹೋದರಿ ಪರ್ಲ್‌ಳ ಮನವೊಲಿಕೆ ನಂತರ ನಾಯಕ ಪ್ಯಾರಿಸ್ ಪ್ರಯಾಣ ಕೈಗೊಳ್ಳುವುದು. ಅಲ್ಲಿ ನಾಯಕಿ ಪರಿಚಯವಾಗುವುದು, ಆಕೆ ಜೀವನದ ಬಗೆಗೆ ನಾಯಕ ಹೊಂದಿರುವ ದೃಷ್ಟಿಕೋನ ಬದಲಿಸುವುದೂ ಇದರಲ್ಲಿ ಚಿತ್ರಿತವಾಗಿದೆ' ಎಂದು ರಾಜದೀಪ್ ತಿಳಿಸಿದರು.

ಅಂಕಣಗಾರ್ತಿ ಪೂಜಾ ಬೇಡಿ, 'ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಮೂಡಿಸುವ ಪ್ರಯತ್ನವನ್ನು ಈ ಕೃತಿ ಮಾಡುತ್ತದೆ. ಮನುಷ್ಯನ ಜೀವ ಬಹಳ ಅಮೂಲ್ಯವಾದುದು. ಅದನ್ನು ಜತನದಿಂದ ಕಾಪಾಡಿಕೊಳ್ಳುವುದು ತುಂಬಾ ಮುಖ್ಯ. ಜೀವನದಲ್ಲಿ ಏಳು–ಬೀಳು ಸಾಮಾನ್ಯ. ಅವುಗಳಿಗೆ ನಾವು ಹೇಗೆ ಪ್ರತಿಕ್ರಿಯಿಸಬೇಕು ಎಂಬುದನ್ನೂ ಇದು ಒತ್ತಿ ಹೇಳುತ್ತದೆ' ಎಂದು ಹೇಳಿದರು.

ಪುಸ್ತಕದ ಪರಿಚಯ

ಕೃತಿಯ ಹೆಸರು: ಬರ್ಗಂಡಿ ವಿಂಟರ್–ಇನ್ ಯುರೋಪ್
ಲೇಖಕರು: ಪ್ರಣಯ್ ಪಾಟೀಲ
ದರ: ₹975
ಪುಟಗಳು: 326
ಪ್ರಕಾಶಕರು: ಕ್ರಿಸ್ಟಲ್ ಪೀಕ್ ಪಬ್ಲಿಷರ್

'ವಚನ ಕುಮಾರವ್ಯಾಸ' ಪುಸ್ತಕ ಬಿಡುಗಡೆ

ಓದುಗರಿಗೆ ರಸಾನುಭವ ನೀಡುವ ಕೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸು.ರುದ್ರಮೂರ್ತಿ ಶಾಸ್ತ್ರಿಯವರು 'ವಚನ ಕುಮಾರವ್ಯಾಸ' ಕೃತಿಯ ಮೂಲಕ ಕುಮಾರವ್ಯಾಸ ಭಾರತವನ್ನು ತಿಳಿಮಯ ಹಾಗೂ ರಸಮಯವಾಗಿ ಹೇಳುವ ಪ್ರಯತ್ನ ಮಾಡಿದ್ದಾರೆ. ಈ ಕೃತಿ ಓದುಗರಿಗೆ ರಸಾನುಭವ ನೀಡಲಿದೆ' ಎಂದು ಬಿ.ಎಂ. ಶ್ರೀ.ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ತಿಳಿಸಿದರು.

ಮೈಸೂರಿನ ತನು ಮನು ಪ್ರಕಾಶನ ಹಾಗೂ ಕರ್ನಾಟಕ ಕನ್ನಡ ಬರಹಗಾರರು ಮತ್ತು ಪ್ರಕಾಶಕರ ಸಂಘ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪುಸ್ತಕದ ಕುರಿತು ಶನಿವಾರ ಮಾತನಾಡಿ, 'ರಸಾತ್ಮಕ ಕಾದಂಬರಿಯಂತೆ ಈ ಪುಸ್ತಕ ರಚಿತವಾಗಿದ್ದು, ಓದುಗರಿಗೆ ಹೆಚ್ಚು ಆಪ್ತವಾಗಿದೆ. ಕುಮಾರವ್ಯಾಸನನ್ನು ಸರಸಮಯವಾಗಿ ತಲುಪುವುದಕ್ಕೆ, ಅರ್ಥಮಾಡಿಕೊಳ್ಳುವುದಕ್ಕೆ ಹಾಗೂ ಆನಂದಿಸುವುದಕ್ಕೆ ಈ ಪುಸ್ತಕ ಸಹಕಾರಿಯಾಗಿದೆ. ಹೊಸಗನ್ನಡದಲ್ಲಿ ಮಾಡಿರುವ ಈ ಪ್ರಯೋಗ ಕೆಲವರಲ್ಲಾದರೂ ಸ್ಫೂರ್ತಿ ತುಂಬಲಿದೆ' ಎಂದರು.

'ಕುಮಾರವ್ಯಾಸನ ಪರ್ವಗಳನ್ನು ಹಳಬರ ಜೊತೆಗೆ ಹೊಸ ಓದುಗರೂ ಸುಲಭವಾಗಿ ಅರ್ಥಮಾಡಿಕೊಳ್ಳಲು ಈ ಕೃತಿ ಸಹಾಯಕವಾಗಿದೆ' ಎಂದು ತಿಳಿಸಿದರು.

'ರಾಜಪ್ರಭುತ್ವದಿಂದಾಗಿ ಪ್ರಜೆಗಳು ಅನುಭವಿಸುತ್ತಿದ್ದ ಕಷ್ಟಗಳನ್ನು ಅತ್ಯಂತ ಸರಳ ಹಾಗೂ ಸಮರ್ಥವಾಗಿ ಕೆಲವೇ ಶಬ್ದಗಳಲ್ಲಿ ಹೇಳಲು ಸಾಧ್ಯವಾಗಿದ್ದು ಕುಮಾರವ್ಯಾಸನಿಗೆ. ಆದ್ದರಿಂದ ಕುಮಾರವ್ಯಾಸ ಭಾರತವನ್ನು ಓದುವುದೆಂದರೆ ನಮ್ಮ ಕಾಲದ ವಿದ್ಯಮಾನಗಳನ್ನು ನಾವೇ ವಿಮರ್ಶಿಸಿಕೊಂಡಂತೆ' ಎಂದು ಹೇಳಿದರು.

ಸಾಹಿತಿ ಹಂ.ಪ.ನಾಗರಾಜಯ್ಯ, 'ವಚನ ಕುಮಾರವ್ಯಾಸ ಕೃತಿಯು ಪ್ರಕಾಶನದ ಈ ಮುಡಿಯ ಮಾಣಿಕ್ಯದಂತಿದೆ. ಇದರ ಸತ್ವ ಹಾಗೂ ಗಾತ್ರ ತುಂಬಾ ಮಹತ್ವದಾಗಿದೆ' ಎಂದು ತಿಳಿಸಿದರು.

'ಕುಮಾರವ್ಯಾಸನ ಪರ್ವಗಳ ಸಾರವನ್ನು ಸಾಮಾನ್ಯರಿಗೆ ಒಂದೇ ಕಡೆ ಒಪ್ಪಿಸುವ ಕೆಲಸವನ್ನು ಲೇಖಕರು ಮಾಡಿದ್ದಾರೆ. 20–30 ಪದ್ಯಗಳನ್ನು ತೆಗೆದುಕೊಂಡು ಅವುಗಳ ಒಟ್ಟು ತಿರುಳನ್ನು ಜನರಿಗೆ ಅರ್ಥವಾಗುವಂತೆ ನೀಡಲೂ ಪ್ರಯತ್ನಿಸಿದ್ದಾರೆ' ಎಂದರು.

ಹಂ.ಪ.ನಾಗರಾಜಯ್ಯನವರು ಪುಸ್ತಕ ಬಿಡುಗಡೆ ಮಾಡಿ ಅದರ ಪ್ರತಿಯನ್ನು ಲೇಖಕ ಸು.ರುದ್ರಮೂರ್ತಿ ಶಾಸ್ತ್ರಿಯವರಿಗೆ ನೀಡಿದರು. (ಎಡದಿಂದ) ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದ ಕಾರ್ಯದರ್ಶಿ ಆರ್.ದೊಡ್ಡೇಗೌಡ, ತನು ಮನು ಪ್ರಕಾಶನದ ಮಾನಸ, ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ ಮತ್ತು ಬೈರಮಂಗಲ ರಾಮೇಗೌಡ ಇದ್ದರು – ಪ್ರಜಾವಾಣಿ ಚಿತ್ರ

ಪುಸ್ತಕದ ಪರಿಚಯ

ಕೃತಿಯ ಹೆಸರು: ವಚನ ಕುಮಾರವ್ಯಾಸ
ಲೇಖಕರು: ಸು.ರುದ್ರಮೂರ್ತಿ ಶಾಸ್ತ್ರಿ
ದರ: ₹750
ಒಟ್ಟು ಪುಟಗಳು: 768
ಪ್ರಕಾಶನ: ತನು ಮನು ಪ್ರಕಾಶನ, ಮೈಸೂರು

ಒತ್ತುವರಿಯಾಗಿದ್ದ 11 ಎಕರೆ ಸರ್ಕಾರಿ ಜಮೀನು ತೆರವು

ಬೆಂಗಳೂರು: ನಗರ ಜಿಲ್ಲೆಯ 5 ತಾಲ್ಲೂಕುಗಳಲ್ಲಿ ಒಟ್ಟು ₹11.8 ಕೋಟಿ ಮೌಲ್ಯದ 11 ಎಕರೆ 17 ಗುಂಟೆ ಸರ್ಕಾರಿ ಜಮೀನು ಒತ್ತುವರಿಯಾಗಿದ್ದು ಜಿಲ್ಲಾಧಿಕಾರಿ ಜೆ.ಮಂಜುನಾಥ್ ನೇತೃತ್ವದಲ್ಲಿ ಇವುಗಳ ತೆರವು ಕಾರ್ಯಾಚರಣೆ ನಡೆಸಲಾಯಿತು.

'ಐದು ತಾಲ್ಲೂಕುಗಳಲ್ಲಿನ ಕೆರೆ, ಕುಂಟೆ, ಗೋಮಾಳ, ಸ್ಮಶಾನ, ರಾಜಕಾಲುವೆ ಹಾಗೂ ಇತರೆ ಸರ್ಕಾರಿ ಜಮೀನುಗಳನ್ನು ಒತ್ತುವರಿ ಮಾಡಲಾಗಿತ್ತು. ನಗರ ಜಿಲ್ಲೆಯಲ್ಲಿ ಒಟ್ಟು ಮೂರು ಕೆರೆಗಳಿಗೆ ಸೇರಿದ 6 ಎಕರೆ 4 ಗುಂಟೆ ಜಾಗ, ಉತ್ತರ ತಾಲ್ಲೂಕಿನ ದಾಸನಪುರ–2, ಬಿದರಹಳ್ಳಿ ಹೋಬಳಿಯ ಕಾಡ ಅಗ್ರಹಾರದ 4 ಎಕರೆ 28 ಗುಂಟೆ ಜಮೀನು ಅತಿಕ್ರಮಣ ಮಾಡಲಾಗಿತ್ತು. ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯ ತಟ್ಟಗುಪ್ಪೆ ಗ್ರಾಮದಲ್ಲಿ ಕೆರೆಗೆ ಸೇರಿದ್ದ 1 ಎಕರೆ 6 ಗುಂಟೆ ಜಮೀನು ಒತ್ತುವರಿಯಾಗಿತ್ತು. ಇವುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ' ಎಂದು ತಿಳಿಸಿದ್ದಾರೆ.

ಹೊಸ ಬಾಗಲೂರಿಗೆ ನೀರು ಪೂರೈಕೆ

ಬೆಂಗಳೂರು: ನಗರದ ಹೊಸ ಬಾಗಲೂರು ಬಡಾವಣೆಯಲ್ಲಿನ ನೀರಿನ ಸಮಸ್ಯೆ ಬಗೆಹರಿಸಲಾಗಿದೆ ಎಂದು ಜಲಮಂಡಳಿ ಸ್ಪಷ್ಟನೆ ನೀಡಿದೆ.

ವಾರ್ಡ್ ನಂ. 60ರ ಹೊಸ ಬಾಗಲೂರು ಬಡಾವಣೆಯ 21ನೇ ರಸ್ತೆಯಲ್ಲಿ ವಾರದಲ್ಲಿ ಒಂದು ಬಾರಿ ನೀರು ಸರಬರಾಜು ಮಾಡಲಾಗುತ್ತಿದೆ. ಈ ಬಡಾವಣೆಯಲ್ಲಿರುವ 100 ಮಿ.ಮಿ. ವ್ಯಾಸದ ನೀರಿನ ಕೊಳವೆ ಮಾರ್ಗ ಬ್ಲಾಕ್ ಆಗಿದ್ದರಿಂದ 20 ಮನೆಗಳಿಗೆ ನೀರು ಬಂದಿರಲಿಲ್ಲ. ಕೊಳವೆಮಾರ್ಗ ಸರಿಪಡಿಸಿ ಮೇ 6ರಂದು ನೀರು ಬಿಡಲಾಗಿದೆ.

'ಬಡಾವಣೆಯಲ್ಲಿ ನೀರಿಗೆ ಹಾಹಾಕಾರ' ಶೀರ್ಷಿಕೆ ಅಡಿಯಲ್ಲಿ ಮೇ 5ರಂದು 'ಪ್ರಜಾವಾಣಿ'ಯಲ್ಲಿ ಪ್ರಕಟವಾದ ವರದಿಗೆ ಮಂಡಳಿ ಈ ಪ್ರತಿಕ್ರಿಯೆ ನೀಡಿದೆ.

ನಗರದಲ್ಲಿ ಇಂದು

ಲಕ್ಷ್ಮೀನರಸಿಂಹ ನವರಾತ್ರೋತ್ಸವ: ಕೊಬ್ಬರಿ, ಸಕ್ಕರೆ ವಿಶೇಷ ಅಲಂಕಾರ, ಆಯೋಜನೆ ಮತ್ತು ಸ್ಥಳ–ಅಭಯ ಲಕ್ಷ್ಮೀನರಸಿಂಹ ಪಟ್ಟಾಭಿರಾಮ ಕಂಭದ ನರಸಿಂಹ ದೇವಸ್ಥಾನ, ತ್ಯಾಗರಾಜನಗರ, ಬೆಳಿಗ್ಗೆ 9ರಿಂದ

ಮುದಲಿಯಾರ್ ಸೇವಾ ಸಂಘದ ವಜ್ರಮಹೋತ್ಸವ: ಸ್ಥಳ–ಸಂಘದ ಆವರಣ, ಪ್ರಕಾಶ ನಗರ, ಬೆಳಿಗ್ಗೆ 9

ಆರ್‌ಪಿಐ ಪದಾಧಿಕಾರಿಗಳ ಸಮಾವೇಶ: ಉದ್ಘಾಟನೆ–ಬರಗೂರು ರಾಮಚಂದ್ರಪ್ಪ, ಆಯೋಜನೆ–ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಆರ್‌ಪಿಐ), ಸ್ಥಳ–ಎನ್.ಜಿ.ಒ ಭವನ, ಕಬ್ಬನ್ ಉದ್ಯಾನ, ಬೆಳಿಗ್ಗೆ 10

ಶ್ವಾನಗಳಿಗೆ ಹುಚ್ಚುರೋಗ ನಿರೋಧಕ ಚುಚ್ಚುಮದ್ದು ಉಚಿತ ಶಿಬಿರ: ಆಯೋಜನೆ–ಕರುಣ ಪ್ರಾಣಿ ಕಲ್ಯಾಣ ಸಂಘ, ಸ್ಥಳ–ಕರುಣ ಪ್ರಾಣಿ ಆಶ್ರಯಧಾಮ, ಪಶು ವೈದ್ಯಕೀಯ ಕಾಲೇಜು ಆವರಣ, ಹೆಬ್ಬಾಳ, ಬೆಳಿಗ್ಗೆ 10ರಿಂದ

ಬಸವ ಜಯಂತಿ ಮತ್ತು ಪ್ರಶಸ್ತಿ ಪ್ರದಾನ: ಸಾನ್ನಿಧ್ಯ–ಸಿದ್ಧಲಿಂಗ ಸ್ವಾಮೀಜಿ, ಮಲಯ ಶಾಂತಮುನಿ ದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಆಯೋಜನೆ–ಸಾಹಿತ್ಯ ಸಂಸ್ಕೃತಿ ವೇದಿಕೆ, ಸ್ಥಳ–ಸಾಹಿತ್ಯರತ್ನ ಆರ್.ಸದಾಶಿವಯ್ಯ ಕಲಾ ಕೇಂದ್ರ, ಆಗರ, ಕೆಂಗೇರಿ, ಬೆಳಿಗ್ಗೆ 10.30

ವಿ.ಪರಮೇಶ್ವರ ಸ್ಮಾರಕ ವೇದ–ನಾದ ಕಾರ್ಯಕ್ರಮ: ವೇದಘೋಷ–ಅರವಿಂದ್, ಸ್ವರೂಪ್, ಕುಮಾರ್ ತೇಜಸ್, ನಿರ್ದೇಶನ–ಪ್ರವೀಣ್ ಡಿ.ರಾವ್, ಆಯೋಜನೆ ಮತ್ತು ಸ್ಥಳ–ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10.30

ಸಾಂಪ್ರದಾಯಿಕ ಆಟಗಳ ಕಾರ್ಯಾಗಾರ: ಆಯೋಜನೆ ಮತ್ತು ಸ್ಥಳ–ರಾಗಿಕಣ, ಗೊಟ್ಟಿಗೆರೆ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 11

'ರಿವಾರ್ಡ್' ಯೋಜನೆ ಮತ್ತು ಜಲಾನಯನ ಉತ್ಕೃಷ್ಟತಾ ಕೇಂದ್ರದ ಉದ್ಘಾಟನೆ, ರೈತ ಉತ್ಪಾದಕ ಸಂಸ್ಥೆಗಳಿಗೆ ಪ್ರಶಸ್ತಿ ಪ್ರದಾನ: ಅತಿಥಿಗಳು– ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಗಿರಿರಾಜ್ ಸಿಂಗ್, ಆಯೋಜನೆ–ಜಲಾನಯನ ಅಭಿವೃದ್ಧಿ ಇಲಾಖೆ, ಸ್ಥಳ–ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಭಾಂಗಣ, ಜಿಕೆವಿಕೆ, ಬೆಳಿಗ್ಗೆ 11

ತಾಯಂದಿರ ದಿನ: ಕವಿಗೋಷ್ಠಿ ಮತ್ತು ಪ್ರಶಸ್ತಿ ಪ್ರದಾನ–ರೇಣುಕ ಪ್ರಸನ್ನ, ಅಧ್ಯಕ್ಷತೆ–ಇಂದಿರಾ ಶರಣ್ ಜಮ್ಮಲದಿನ್ನಿ, ಆಯೋಜನೆ–ಸಮ್ಮಿಲನ, ಸ್ಥಳ–ಕೆನ್ ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 11.30

'ಭರತನಾಟ್ಯದ ಬೆಳವಣಿಗೆಗೆ ಕರ್ನಾಟಕದ ಕೊಡುಗೆ' ಉಪನ್ಯಾಸ: ಬಿ.ಎನ್.ಮನೋರಮಾ, ಆಯೋಜನೆ ಮತ್ತು ಸ್ಥಳ–ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಮಧ್ಯಾಹ್ನ 12

ಕುಮಾರವ್ಯಾಸ ಭಾರತ ಎಂಬ ಕರ್ನಾಟಭಾರತ ಕಥಾ ಮಂಜರಿ ಪುಸ್ತಕ ಬಿಡುಗಡೆ: ಸಚಿವ ಸಿ.ಎನ್. ಅಶ್ವತ್ಥನಾರಾಯಣ, ಅಧ್ಯಕ್ಷತೆ–ಪಿ.ವಿ. ನಾರಾಯಣ, ಆಯೋಜನೆ–ಕನ್ನಡ ಗಣಕ ಪರಿಷತ್ತು, ಸ್ಥಳ–ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 4.30

ಭಗತ್ ಸಿಂಗ್ ನಾಟಕ ಪ್ರದರ್ಶನ: ಬಸವ ರಂಗ ಸಂಸ್ಕೃತಿ ಟ್ರಸ್ಟ್, ಸ್ಥಳ–ವ್ಯೋಮ ಆರ್ಟ್ ಸ್ಪೇಸ್, ಜೆ.ಪಿ ನಗರ, ಸಂಜೆ 6.30

ವಿಎಲ್‌ಎನ್ ನಿರ್ಮಾಣ್ ಹಿರಿಯ ನಾಗರಿಕರ ಆಜೀವ ಸಾಧನಾ ಪ್ರಶಸ್ತಿ ಪ್ರದಾನ ಮತ್ತು ವಾರ್ಷಿಕೋತ್ಸವ: ಅತಿಥಿಗಳು–ಬಸವರಾಜ ಹೊರಟ್ಟಿ, ಅಧ್ಯಕ್ಷತೆ–ಆರ್.ಕೆ.ಪದ್ಮನಾಭ್, ಅತಿಥಿ–ಎಸ್.ಎಂ.ಪಾಟೀಲ, ಆಯೋಜನೆ–ನಿರ್ಮಾಣ್ ವಿಎಲ್‌ಎನ್ ಪ್ರಬುದ್ಧಾಲಯ ಮತ್ತು ಆಯುರ್ಧಾಮ, ಸ್ಥಳ–ಪುರಂದರ ಮಂಟಪ, ನಿಸರ್ಗ ಬಡಾವಣೆ, ಬನ್ನೇರುಘಟ್ಟ ರಸ್ತೆ, ಸಂಜೆ 5



ಬಸವರಾಜ ಹೊರಟ್ಟಿ

ಐಪಿಎಲ್ ಬೆಟ್ಟಿಂಗ್: ₹4 ಲಕ್ಷ ಜಪ್ತಿ

ಬೆಂಗಳೂರು: ಐಪಿಎಲ್ ಕ್ರಿಕೆಟ್ ಪಂದ್ಯಗಳ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದ ಆರೋಪದಡಿ ವಿಶಾಲ್ ರಾಜ್ ಎಂಬಾತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಗುಜರಾತ್ ಟೈಟಾನ್ಸ್ ಮತ್ತು ಮುಂಬೈ ಇಂಡಿಯನ್ಸ್ ತಂಡಗಳ ನಡುವಿನ ಪಂದ್ಯಗಳ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ದೊಮ್ಮಲೂರು ಬಡಾವಣೆಯಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿ ವಿಶಾಲ್ ರಾಜ್‌ನನ್ನು ಬಂಧಿಸಿ, ₹4 ಲಕ್ಷ ನಗದು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಷೇರು ಮಾರುಕಟ್ಟೆ ವಂಚನೆ: ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿದರೆ ಲಾಭ ಬರುವುದಾಗಿ ಹೇಳಿ ವಂಚಿಸುತ್ತಿದ್ದ ಆರೋಪದಡಿ ನಾಲ್ವರನ್ನು ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ಕೆ.ಎಸ್. ರೆಹಮತ್ ಉಲ್ಲಾ (29), ಎಂ.ಸಿ. ಮಲ್ಲಯ್ಯಸ್ವಾಮಿ (29) ಹಾಗೂ ಸಿ.ದುರ್ಗಪ್ಪ (28) ಬಂಧಿತರು. ಇವರಿಂದ ಮೂರು ಮೊಬೈಲ್ ಹಾಗೂ 6 ಸಿಮ್ ಕಾರ್ಡ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಮೇಕ್ ಇನ್ ಪ್ರಾಫಿಟ್' ಹೆಸರಿನ ಕಂಪನಿ ತೆರೆದಿದ್ದ ಆರೋಪಿಗಳು, ಷೇರು ಮಾರುಕಟ್ಟೆ ಪರಿಣಿತರು ಎಂಬುದಾಗಿ ಹೇಳಿಕೊಳ್ಳುತ್ತಿದ್ದರು. ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿ, ತಾವು ನೀಡಿದ ಸಲಹೆಗಳನ್ನು ಅಚ್ಚುಕಟ್ಟಾಗಿ ಪಾಲಿಸಿದರೆ ಲಾಭ ಬರುವುದಾಗಿಯೂ ಅವರು ಹೇಳುತ್ತಿದ್ದರು' ಎಂದೂ ತಿಳಿಸಿದರು.

'ಠಾಣೆ ವ್ಯಾಪ್ತಿಯ ನಿವಾಸಿಯೊಬ್ಬರು, ಈ ಆರೋಪಿಗಳ ಮಾತು ನಂಬಿ ₹2.50 ಲಕ್ಷವನ್ನು ಹೂಡಿಕೆ ಮಾಡಿದ್ದರು. ಆದರೆ, ಲಾಭ ಬಂದಿರಲಿಲ್ಲ. ಈ ಬಗ್ಗೆ ವಿಚಾರಿಸಿದಾಗ ಆರೋಪಿಗಳು ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ' ಎಂದೂ ಹೇಳಿದರು.

ಸಿರುಗುಪ್ಪದಲ್ಲಿ ಬಂಧನ: 'ಜನರನ್ನು ವಂಚಿಸುವ ಉದ್ದೇಶದಿಂದಲೇ ಆರೋಪಿಗಳು, ಮೇಕ್ ಇನ್ ಪ್ರಾಫಿಟ್ ಕಂಪನಿ ಹುಟ್ಟು ಹಾಕಿದ್ದರು. ಜನರನ್ನು ವಂಚಿಸಿ ನಗರದಿಂದ ಪರಾರಿಯಾಗಿದ್ದ ಆರೋಪಿಗಳು, ಸಿರುಗುಪ್ಪ ತಾಲ್ಲೂಕಿನ ತಮ್ಮೂರಿನಲ್ಲಿದ್ದರು. ಅಲ್ಲಿಗೆ ಹೋದ ವಿಶೇಷ ತಂಡ, ಆರೋಪಿಗಳನ್ನು ಬಂಧಿಸಿ ನಗರಕ್ಕೆ ಕರೆತಂದಿದೆ' ಎಂದು ಪೊಲೀಸರು ತಿಳಿಸಿದರು.

'ಜೈಲು ಸ್ನೇಹಿತರ' ಬಂಧನ

ಬೆಂಗಳೂರು: ಕಳ್ಳತನ ಹಾಗೂ ಸುಲಿಗೆ ಪ್ರಕರಣದಲ್ಲಿ ಭಾಗಿಯಾಗಿದ್ದ ಆರೋಪದಡಿ ಐವರನ್ನು ಅನ್ನಪೂರ್ಣೇಶ್ವರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ವೆಂಕಟೇಶ್, ಶ್ರೀಶೈಲ, ಹನಮಂತ, ಪ್ರಕಾಶ್ ಹಾಗೂ ಅವಿನಾಶ್ ಬಂಧಿತರು. ಇವರಿಂದ ₹ 8 ಲಕ್ಷ ಮೌಲ್ಯದ 20 ಗ್ರಾಂ ತೂಕದ ಚಿನ್ನದ ಸರ, ವಿವಿಧ ಕಂಪನಿಯ 4 ಮೊಬೈಲ್ ಹಾಗೂ 17 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಹೆಬ್ಬಾಳ ಹಾಗೂ ನಾಗರಬಾವಿ ನಿವಾಸಿಗಳಾಗಿದ್ದ ಆರೋಪಿಗಳು, ಅಪರಾಧ ಹಿನ್ನೆಲೆಯುಳ್ಳವರು. ಪ್ರತ್ಯೇಕ ಪ್ರಕರಣಗಳಲ್ಲಿ ಜೈಲಿಗೆ ಹೋಗಿದ್ದರು. ಅಲ್ಲಿಯೇ ಐವರಿಗೂ ಪರಿಚಯವಾಗಿ, ಸ್ನೇಹ ಬೆಳೆದಿತ್ತು. ಜಾಮೀನು ಮೇಲೆ ಹೊರಬಂದಿದ್ದ ಆರೋಪಿಗಳು, ಸಂಘಟಿತರಾಗಿ ಕೃತ್ಯ ಮುಂದುವರಿಸಿದ್ದರು' ಎಂದೂ ತಿಳಿಸಿದರು.

'ಠಾಣೆ ವ್ಯಾಪ್ತಿಯ ನಿವಾಸಿಯೊಬ್ಬರು ಏಪ್ರಿಲ್ 9ರಂದು ರಾತ್ರಿ ಮನೆ ಬಳಿ ನಡೆದುಕೊಂಡು ಹೊರಟಿದ್ದರು. ದ್ವಿಚಕ್ರ ವಾಹನದಲ್ಲಿ ಬಂದಿದ್ದ ಆರೋಪಿಗಳು, ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದರು. ಈ ಬಗ್ಗೆ ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು' ಎಂದೂ ಹೇಳಿದರು.

ಅಪರಾಧ ಸುದ್ದಿ

ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಲೆದರ್ ಅಂಡ್ ಫ್ಯಾಷನ್ ಟೆಕ್ನಾಲಜಿ (ಕಿಲ್ಟ್)

AICTE ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆ (DTE)ಯಿಂದ ಅನುಮೋದಿತ
(ಸರ್ಕಾರಿ ಸ್ವಾಮ್ಯದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಸಂಸ್ಥೆ)

2022-23 ನೇ ಸಾಲಿಗೆ ಪ್ರವೇಶ ಪ್ರಾರಂಭ

03 ವರ್ಷದ ಡಿಪ್ಲೋಮಾ ಇನ್ ಲೆದರ್ ಅಂಡ್ ಫ್ಯಾಷನ್ ಟೆಕ್ನಾಲಜಿ

- ವಿದ್ಯಾರ್ಹತೆ ಕನಿಷ್ಠ 10ನೇ ತರಗತಿ/ಪದವಿ ಪೂರ್ವ ಉತ್ತೀರ್ಣರಾಗಿರಬೇಕು.
- ಅಂತಾರಾಷ್ಟ್ರೀಯ ಗುಣಮಟ್ಟದ ತಾಂತ್ರಿಕ ಪ್ರಯೋಗಾಲಯ ಹಾಗೂ ಮೂಲಭೂತ ಸೌಕರ್ಯ.
- ಸ್ಮಾರ್ಟ್ ಕ್ಲಾಸ್‌ಗಳನ್ನು ಒಳಗೊಂಡಿರುವ ಆತ್ಯಾಧುನಿಕ ಶಾಲಾ ಕೊಠಡಿಗಳು.
- ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಹಾಸ್ಟೆಲ್ ಸೌಲಭ್ಯ.
- ವ್ಯಾಯಾಮ ಶಾಲೆ, ಒಳಾಂಗಣ ಮತ್ತು ಹೊರಾಂಗಣ ಕ್ರೀಡೆ ಸೌಲಭ್ಯ.
- ವಿದ್ಯಾರ್ಥಿಗಳಿಗೆ ಕೈಗಾರಿಕಾ ಘಟಕಗಳಲ್ಲಿ ಉದ್ಯೋಗಾವಕಾಶ ಕಲ್ಪಿಸಲಾಗುವುದು.
- ಕಳೆದ ಮೂರು ಸಾಲಿನಲ್ಲಿ ಶೇ.70 ರಷ್ಟು ವಿದಾರ್ಥಿಗಳಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ.

ತ್ವರೆಮಾಡಿ ಕೇವಲ 45 ಸೀಟುಗಳು ಮಾತ್ರ ಲಭ್ಯವಿದೆ ಆದ್ಯತೆ ಮೇರೆಗೆ ಪ್ರವೇಶ

ಪ್ರವೇಶ ಪಡೆಯಲು ಸಂಪರ್ಕಿಸಿ: 8618484321, 9071112025, 9071112026,9071112027
Website: www.kilt.karnataka.gov.in, e-Mail: kiltbangalore133@gmail.com
ಬಿಎಂಟಿಸಿ ಬಸ್‌ಸ್ಟಾಪ್ ಹತ್ತಿರ, ಉಲ್ಲಾಳ ಉಪನಗರ, ಬೆಂಗಳೂರು–560110

ಆಕಾಶ್ ಎಜುಕೇಶನಲ್ ಸರ್ವೀಸಸ್ ಲಿಮಿಟೆಡ್

ಕಾರ್ಪೊರೇಟ್ ಐಡೆಂಟಿಫಿಕೇಶನ್ ನಂಬರ್: U80300KA2007PLC150057
ನೋಂದಾಯಿತ ಕಚೇರಿ: ನಂ. 111, 8ನೇ ಅಡ್ಡರಸ್ತೆ, ಪ್ಯಾರಾಮೌಂಟ್ ಗಾರ್ಡನ್ಸ್, ತಲಘಟ್ಟಪುರ ಕನಕಪುರ ಮುಖ್ಯರಸ್ತೆ, ಬೆಂಗಳೂರು – 560 062, ಕರ್ನಾಟಕ
ಇ–ಮೇಲ್: compliance@aesl.in; ವೆಬ್‌ಸೈಟ್: www.aakash.ac.in
ಫಾರಂ ನಂ. ಸಿಎಎ.2
[ಕಂಪನಿಗಳ (ಕಂಪ್ರೊಮೈಸಸ್, ಅರೇಂಜ್‌ಮೆಂಟ್ಸ್ ಮತ್ತು ಅಮಾಲ್ಗಮೇಶನ್ಸ್) ನಿಯಮಗಳು, 2016ರ ಸೆಕ್ಷನ್ 230(3) ಮತ್ತು ರೂಲ್ 6 ಹಾಗೂ ರೂಲ್ 7ರ ಪ್ರಕಾರ]

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ ಬೆಂಗಳೂರು ಪೀಠ ಇವರ ಸಮ್ಮುಖದಲ್ಲಿ

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ ಬೆಂಗಳೂರು ಪೀಠ, ಬೆಂಗಳೂರು
ಕಂಪನಿಗಳ ಕಾಯ್ದೆ, 2013ರ ವಿಷಯದಲ್ಲಿ
ಮತ್ತು
ಆಕಾಶ್ ಎಜುಕೇಶನಲ್ ಸರ್ವೀಸಸ್ ಲಿಮಿಟೆಡ್ ("ಟ್ರಾನ್ಸ್‌ಫೆರರ್ ಕಂಪನಿ") ಮತ್ತು ಥಿಂಕ್ & ಲರ್ನ್ ಪ್ರೈವೇಟ್ ಲಿಮಿಟೆಡ್ ("ಟ್ರಾನ್ಸ್‌ಫೆರೀ ಕಂಪನಿ") ಮತ್ತು ಅವರವರ ಷೇರುದಾರರು ಮತ್ತು ಕ್ರೆಡಿಟರ್‌ಗಳ ವಿಲೀನ ಯೋಜನೆ ವಿಷಯದಲ್ಲಿ
ಸಿಎ (ಸಿಎಎ) ನಂ. 61/ಬಿಬಿ/2021

ಆಕಾಶ್ ಎಜುಕೇಶನಲ್ ಸರ್ವೀಸಸ್ ಲಿಮಿಟೆಡ್‌ನ ಅನ್‌ಸೆಕ್ಯೂರ್ಡ್ ಕ್ರೆಡಿಟರ್‌ಗಳ ಸಭೆಯ ಪ್ರಕಟಣೆ ಮತ್ತು ಪ್ರಕಟಣಾ ಜಾಹೀರಾತು

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಮೇಲ್ಕಂಡ ಕಂಪನಿಯ ಅರ್ಜಿ ಸಂ. 61/2021 ಗೆ ಸಂಬಂಧಿಸಿದಂತೆ ಮಾನ್ಯ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ ("ಎನ್‌ಸಿಎಲ್‌ಟಿ") ಬೆಂಗಳೂರು ಪೀಠ ರವರ ದಿನಾಂಕ 20 ಏಪ್ರಿಲ್, 2022ರ ಆದೇಶದಲ್ಲಿ, ಕಂಪನಿಗಳ ಕಾಯ್ದೆ, 2013ರ ("ಕಾಯ್ದೆ") ಸೆಕ್ಷನ್ 230 ರಿಂದ 232ರ ಅಡಿಯಲ್ಲಿನ ನಿಯಮಗಳ ಮತ್ತು ಇನ್ನಿತರ ಯಾವುದೇ ಅನ್ವಯಿಕ ನಿಯಮಗಳ ಅಡಿಯಲ್ಲಿ ಉದ್ದೇಶಿಸಲಾಗಿರುವ ಆಕಾಶ್ ಎಜುಕೇಶನಲ್ ಸರ್ವೀಸಸ್ ಲಿಮಿಟೆಡ್ ಮತ್ತು ಥಿಂಕ್ & ಲರ್ನ್ ಪ್ರೈವೇಟ್ ಲಿಮಿಟೆಡ್ ಹಾಗೂ ಅವರವರ ಕ್ರೆಡಿಟರ್‌ಗಳ ವಿಲೀನ ಯೋಜನೆಯನ್ನು ("ಯೋಜನೆ") ಸೂಕ್ತ ಎಂದೆನಿಸಿದಲ್ಲಿ, ಯಾವುದೇ ಮಾರ್ಪಾಡುಗಳ ಸಮೇತ ಅಥವಾ ಮಾರ್ಪಾಡುಗಳು ಇಲ್ಲದೆಯೇ ಸದರಿ ಯೋಜನೆಯನ್ನು ಪರಿಗಣಿಸುವುದಕ್ಕಾಗಿ ಟ್ರಾನ್ಸ್‌ಫೆರರ್ ಕಂಪನಿಯ ಅನ್‌ಸೆಕ್ಯೂರ್ಡ್ ಕ್ರೆಡಿಟರ್‌ಗಳ ಸಭೆ ಹಮ್ಮಿಕೊಳ್ಳಬೇಕೆಂದು ನಿರ್ದೇಶನ ಲಭಿಸಿರುತ್ತದೆ.

ಸದರಿ ಆದೇಶ ಮತ್ತು ಅದರಲ್ಲಿನ ನಿರ್ದೇಶನದ ಪ್ರಕಾರ, ಮುಂದುವರಿದಂತೆ ತಿಳಿಸುವುದು ಏನೆಂದರೆ, ಟ್ರಾನ್ಸ್‌ಫೆರರ್ ಕಂಪನಿಯ ಅನ್‌ಸೆಕ್ಯೂರ್ಡ್ ಕ್ರೆಡಿಟರ್‌ಗಳ ಸಭೆಯನ್ನು ಕೆಳಕಂಡ ದಿನ, ದಿನಾಂಕ ಮತ್ತು ಸಮಯದ ಮೇರೆಗೆ

ಪಾಲುದಾರರ ಸಭೆ	ದಿನಾಂಕ	ದಿನ	ಸಮಯ	ಸಭೆ ಕೈಗೊಳ್ಳಲಾಗುವ ಮಾದರಿ
ಅನ್‌ಸೆಕ್ಯೂರ್ಡ್ ಕ್ರೆಡಿಟರ್‌ಗಳ ಸಭೆ	10.06.2022	ಶುಕ್ರವಾರ	ಬೆಳಗ್ಗೆ 11.00	ವಿಸಿ –https://emeetings.kfintech.com/ಮುಖಾಂತರ

ಸಭೆಯ ಪ್ರಕಟಣೆ, ಯೋಜನೆಯ ಜೊತೆಗೆ ಸೆಕ್ಷನ್ 230 ಅಡಿಯಲ್ಲಿನ ಎಕ್ಸ್‌ಪ್ಲೇನೆಟರಿ ಸ್ಟೇಟ್‌ಮೆಂಟ್ ಪ್ರತಿಗಳನ್ನು ಸಭೆಯ ದಿನಾಂಕದವರೆಗೆ ಎಲ್ಲಾ ಕೆಲಸದ ದಿನಗಳಂದು ಬೆಳಗ್ಗೆ 10:30 ರಿಂದ ಸಂಜೆ 5:30 ಗಂಟೆಯವರೆಗೆ ಟ್ರಾನ್ಸ್‌ಫೆರರ್ ಕಂಪನಿಯ ನೋಂದಾಯಿತ ಕಚೇರಿಯಲ್ಲಿ ನಿಶುಲ್ಕವಾಗಿ ಪಡೆದುಕೊಳ್ಳಬಹುದು.

ಮಾನ್ಯ ಎನ್‌ಸಿಎಲ್‌ಟಿರವರು ಟ್ರಾನ್ಸ್‌ಫೆರರ್ ಕಂಪನಿಯ ಅನ್‌ಸೆಕ್ಯೂರ್ಡ್ ಕ್ರೆಡಿಟರ್‌ಗಳ ಸಭೆಗೆ ವಕೀಲರಾದ ಶ್ರೀ. ಮಾಣಿಕ್ ಬಿ.ಟಿ (ಇ–ಮೇಲ್: manik.bt@thiruandthiru.co.in) ಇವರನ್ನು ಚೇರ್‌ಪರ್ಸನ್ ಆಗಿಯೂ ಮತ್ತು ಕಾರ್ಯನಿರತ ಕಂಪನಿಯ ಕಾರ್ಯದರ್ಶಿ ಶ್ರೀ. ಗಣಪತಿ ಜಿ.ಎಂ ಇವರನ್ನು ನಿಯೋಜಿಸಿರುತ್ತದೆ.

ಒಂದು ವೇಳೆ ಉದ್ದೇಶಿತ ವಿಲೀನ ಯೋಜನೆಗೆ ಟ್ರಾನ್ಸ್‌ಫೆರರ್ ಕಂಪನಿಯ ಅನ್‌ಸೆಕ್ಯೂರ್ಡ್ ಕ್ರೆಡಟಿರ್‌ಗಳಿಂದ ಅನುಮೋದನೆ ಸಿಕ್ಕಿದಲ್ಲಿ, ಅನುಕ್ರಮವಾಗಿ ಅದು ಮಾನ್ಯ ಎನ್‌ಸಿಎಲ್‌ಟಿ ಬೆಂಗಳೂರು ಪೀಠ ಇವರ ಅನುಮೋದನೆಯ ನಿಬಂಧನೆಗೆ ಒಳಪಡುತ್ತದೆ ಮತ್ತು ಇತರ ಅನುಮೋದನೆಗಳು ಕೂಡ ಬೇಕಾಗಬಹುದಾಗಿರುತ್ತದೆ.

ದಿನಾಂಕ : 07-05-2022
ಸ್ಥಳ : ಬೆಂಗಳೂರು

ಸಹಿ/–
ಶ್ರೀ. ಮಾಣಿಕ್ ಬಿ.ಟಿ
ಚೇರ್‌ಪರ್ಸನ್

ಥಿಂಕ್ & ಲರ್ನ್ ಪ್ರೈವೇಟ್ ಲಿಮಿಟೆಡ್

ಕಾರ್ಪೊರೇಟ್ ಐಡೆಂಟಿಫಿಕೇಶನ್ ನಂಬರ್: U80903KA2011PTC061427
ನೋಂದಾಯಿತ ಕಚೇರಿ: ಐಬಿಸಿ ನಾಲೆಡ್ಜ್ ಪಾರ್ಕ್, 4/1, 2ನೇ ಮಹಡಿ, ಟವರ್ ಡಿ, ಬನ್ನೇರಘಟ್ಟ ಮುಖ್ಯರಸ್ತೆ ಬೆಂಗಳೂರು 560 029, ಕರ್ನಾಟಕ
ಇ–ಮೇಲ್: legal@byjus.com; ವೆಬ್‌ಸೈಟ್: www.byjus.com
ಫಾರಂ ನಂ. ಸಿಎಎ.2
[ಕಂಪನಿಗಳ (ಕಾಂಪ್ರೊಮೈಸಸ್, ಅರೇಂಜ್‌ಮೆಂಟ್ಸ್ ಮತ್ತು ಅಮಾಲ್ಗಮೇಶನ್ಸ್) ನಿಯಮಗಳು, 2016ರ ಸೆಕ್ಷನ್ 230(3) ಮತ್ತು ರೂಲ್ 6 ಹಾಗೂ ರೂಲ್ 7ರ ಪ್ರಕಾರ]

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ ಬೆಂಗಳೂರು ಪೀಠ ಇವರ ಸಮ್ಮುಖದಲ್ಲಿ

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ ಬೆಂಗಳೂರು ಪೀಠ
ಬೆಂಗಳೂರು
ಕಂಪನಿಗಳ ಕಾಯ್ದೆ, 2013ರ ವಿಷಯದಲ್ಲಿ
ಮತ್ತು
ಆಕಾಶ್ ಎಜುಕೇಶನಲ್ ಸರ್ವೀಸಸ್ ಲಿಮಿಟೆಡ್ ("ಟ್ರಾನ್ಸ್‌ಫೆರರ್ ಕಂಪನಿ") ಮತ್ತು ಥಿಂಕ್ & ಲರ್ನ್ ಪ್ರೈವೇಟ್ ಲಿಮಿಟೆಡ್ ("ಟ್ರಾನ್ಸ್‌ಫೆರೀ ಕಂಪನಿ") ಹಾಗೂ ಅವರವರ ಷೇರುದಾರರು ಮತ್ತು ಕ್ರೆಡಿಟರ್‌ಗಳ ಮಧ್ಯದ ವಿಲೀನ ಯೋಜನೆಯ ವಿಷಯದಲ್ಲಿ
ಸಿಎ (ಸಿಎಎ) ನಂ. 61/ಬಿಬಿ/2021

ಥಿಂಕ್ & ಲರ್ನ್ ಪ್ರೈವೇಟ್ ಲಿಮಿಟೆಡ್‌ನ ಅನ್‌ಸೆಕ್ಯೂರ್ಡ್ ಕ್ರೆಡಿಟರ್ಸ್ ಮತ್ತು ಇಕ್ವಿಟಿ ಹಾಗೂ ಪ್ರಿಫರೆನ್ಸ್ ಷೇರುದಾರರ ಸಭೆ ಹಮ್ಮಿಕೊಳ್ಳುವ ಕುರಿತಾದ ನೋಟಿಸ್ ಮತ್ತು ಜಾಹೀರಾತು ಪ್ರಕಟಣೆ

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಮೇಲ್ಕಂಡ ಕಂಪನಿಯ ಅರ್ಜಿ ಸಂ. 61/2021ಕ್ಕೆ ಸಂಬಂಧಿಸಿದಂತೆ ಮಾನ್ಯ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ ("ಎನ್‌ಸಿಎಲ್‌ಟಿ") ಬೆಂಗಳೂರು ಪೀಠ ರವರ ದಿನಾಂಕ 20ನೇ ಏಪ್ರಿಲ್ 2022ರ ಆದೇಶ ಪ್ರಕಾರ, ಕಂಪನಿಗಳ ಕಾಯ್ದೆ, 2013ರ ("ಕಾಯ್ದೆ") ಸೆಕ್ಷನ್ 203 ರಿಂದ 232 ಮತ್ತು ಇನ್ನಿತರ ಅನ್ವಯಿಕ ನಿಯಮಗಳ ಅಡಿಯಲ್ಲಿ, ಆಕಾಶ್ ಎಜುಕೇಶನಲ್ ಸರ್ವೀಸಸ್ ಲಿಮಿಟೆಡ್ ಮತ್ತು ಥಿಂಕ್ & ಲರ್ನ್ ಪ್ರೈವೇಟ್ ಲಿಮಿಟೆಡ್ ಹಾಗೂ ಅವರವರ ಷೇರುದಾರರು ಹಾಗೂ ಕ್ರೆಡಿಟರ್‌ಗಳ ಮಧ್ಯ ಉದ್ದೇಶಿಸಲಾಗಿರುವ ವಿಲೀನ ಯೋಜನೆಯು ಸೂಕ್ತ ಎಂದೆನಿಸಿದಲ್ಲಿ, ಸದರಿ ಯೋಜನೆಯನ್ನು ಮಾರ್ಪಾಡುಗಳ ಸಮೇತ ಅಥವಾ ಮಾರ್ಪಾಡುಗಳಿಲ್ಲದೆ ಅನುಮೋದಿಸುವ ದೃಷ್ಟಿಯಿಂದಾಗಿ, ಟ್ರಾನ್ಸ್‌ಫೆರೀ ಕಂಪನಿಯ ಅನ್‌ಸೆಕ್ಯೂರ್ಡ್ ಕ್ರೆಡಿಟರ್‌ಗಳ, ಇಕ್ವಿಟಿ ಹಾಗೂ ಪ್ರಿಫರೆನ್ಸ್ ಷೇರುದಾರರ ಪ್ರತ್ಯೇಕ ಸಭೆಯನ್ನು ಹಮ್ಮಿಕೊಳ್ಳಬೇಕೆಂದು ನಿರ್ದೇಶನ ಲಭಿಸಿರುತ್ತದೆ.

ಸದರಿ ಆದೇಶ ಮತ್ತು ಅದರಲ್ಲಿನ ನಿರ್ದೇಶನಗಳ ಪ್ರಕಾರ, ಈ ನೋಟಿಸ್‌ನ ಭಾಗವಾಗಿ ಮುಂದುವರಿದಂತೆ ತಿಳಿಸುವುದು ಏನೆಂದರೆ, ಕೆಳಕಂಡ ದಿನ, ದಿನಾಂಕ ಮತ್ತು ಸಮಯದಂದು ಟ್ರಾನ್ಸ್‌ಫೆರೀ ಕಂಪನಿಯ ಅನ್‌ಸೆಕ್ಯೂರ್ಡ್ ಕ್ರೆಡಿಟರ್‌ಗಳ, ಇಕ್ವಿಟಿ ಹಾಗೂ ಪ್ರಿಫರೆನ್ಸ್ ಷೇರುದಾರರ ಪ್ರತ್ಯೇಕ ಸಭೆಗಳನ್ನು ವಿಡಿಯೋ ಕಾನ್ಫರೆನ್ಸ್ (ವಿಸಿ) ಮುಖಾಂತರ ಹಮ್ಮಿಕೊಳ್ಳಲಾಗುತ್ತದೆ:

ಪಾಲುದಾರರ ಸಭೆ	ದಿನಾಂಕ	ದಿನ	ಸಮಯ	ಸಭೆ ಕೈಗೊಳ್ಳಲಾಗುವ ಮಾದರಿ
ಇಕ್ವಿಟಿ ಷೇರುದಾರರ ಸಭೆ	10.06.2022	ಶುಕ್ರವಾರ	ಮಧ್ಯಾಹ್ನ 12.00	ವಿಸಿ –https://emeetings.kfintech.com/ಮುಖಾಂತರ
ಪ್ರಿಫರೆನ್ಸ್ ಷೇರುದಾರರ ಸಭೆ	10.06.2022	ಶುಕ್ರವಾರ	ಮಧ್ಯಾಹ್ನ 1.00	ವಿಸಿ –https://emeetings.kfintech.com/ಮುಖಾಂತರ
ಅನ್‌ಸೆಕ್ಯೂರ್ಡ್ ಕ್ರೆಡಿಟರ್‌ಗಳ ಸಭೆ	10.06.2022	ಶುಕ್ರವಾರ	ಮಧ್ಯಾಹ್ನ 2.00	ವಿಸಿ –https://emeetings.kfintech.com/ಮುಖಾಂತರ

ಪ್ರತ್ಯೇಕ ಸಭೆಗಳ ನೋಟಿಸ್, ಉದ್ದೇಶಿತ ಯೋಜನೆಯ ಜೊತೆಗೆ ಸೆಕ್ಷನ್ 230 ಅಡಿಯಲ್ಲಿನ ಎಕ್ಸ್‌ಪ್ಲೇನೆಟರಿ ಸ್ಟೇಟ್‌ಮೆಂಟ್‌ನ ಪ್ರತಿಯನ್ನು ಸಭೆಯ ದಿನಾಂಕದವರೆಗೆ ಎಲ್ಲಾ ಕೆಲಸದ ದಿನಗಳಂದು ಬೆಳಗ್ಗೆ 10:30 ರಿಂದ ಸಂಜೆ 5:30 ಗಂಟೆಯೊಳಗೆ ಟ್ರಾನ್ಸ್‌ಫೆರೀ ಕಂಪನಿಯ ನೋಂದಾಯಿತ ಕಚೇರಿಯಲ್ಲಿ ನಿಶುಲ್ಕವಾಗಿ ಪಡೆದುಕೊಳ್ಳಬಹುದು.

ಮಾನ್ಯ ಎನ್‌ಸಿಎಲ್‌ಟಿ'ರವರು ಟ್ರಾನ್ಸ್‌ಫೆರೀ ಕಂಪನಿಯ ಇಕ್ವಿಟಿ ಷೇರುದಾರರ ಸಭೆಗೆ ವಕೀಲರಾದ ಶ್ರೀ. ಮಾಣಿಕ್ ಬಿ. ಟಿ (ಇ–ಮೇಲ್: manik.bt@thiruandthiru.co.in) ಇವರನ್ನು ಚೇರ್‌ಪರ್ಸನ್ ಎಂಬುದಾಗಿಯೂ, ಕಂಪನಿಯ ಕಾರ್ಯನಿರತ ಕಾರ್ಯದರ್ಶಿಯಾದ ಶ್ರೀ. ಗಣಪತಿ ಜಿ.ಎಂ ರವರನ್ನು ಪರಿಶೀಲಕರನ್ನಾಗಿಯೂ ಮತ್ತು ಟ್ರಾನ್ಸ್‌ಫೆರೀ ಕಂಪನಿಯ ಪ್ರಿಫರೆನ್ಸ್ ಷೇರುದಾರರ ಹಾಗೂ ಅನ್‌ಸೆಕ್ಯೂರ್ಡ್ ಕ್ರೆಡಿಟರ್‌ಗಳ ಸಭೆಗಳಿಗೆ ವಕೀಲರಾದ ಶ್ರೀ. ಗುರು ಪ್ರಸನ್ನ (ಇ–ಮೇಲ್: guru@anpadvocates.in) ಇವರನ್ನು ಚೇರ್‌ಪರ್ಸನ್ ಎಂಬುದಾಗಿಯೂ ಹಾಗೂ ಕಂಪನಿಯ ಕಾರ್ಯನಿರತ ಕಾರ್ಯದರ್ಶಿಯಾದ ಶ್ರೀ. ಕೌಸರ್ ಮಗದುಮ್ ರವರನ್ನು ಪರಿಶೀಲಕರನ್ನಾಗಿಯೂ ನಿಯೋಜಿಸಿರುತ್ತಾರೆ.

ಒಂದು ವೇಳೆ ಉದ್ದೇಶಿತ ವಿಲೀನ ಯೋಜನೆಯು ಟ್ರಾನ್ಸ್‌ಫೆರೀ ಕಂಪನಿಯ ಅನ್‌ಸೆಕ್ಯೂರ್ಡ್ ಕ್ರೆಡಿಟರ್‌ಗಳ, ಇಕ್ವಿಟಿ ಷೇರುದಾರರ ಮತ್ತು ಪ್ರಿಫರೆನ್ಸ್ ಷೇರುದಾರರ ಸಭೆಯಲ್ಲಿ ಅನುಮೋದನೆ ಪಡೆದುಕೊಂಡಲ್ಲಿ, ಅನುಕ್ರಮವಾಗಿ ಅದು ಮಾನ್ಯ ಎನ್‌ಸಿಎಲ್‌ಟಿ ಬೆಂಗಳೂರು ಪೀಠದ ಅನುಮೋದನೆಯ ನಿಬಂಧನೆಗೆ ಒಳಪಡುತ್ತದೆ ಹಾಗೂ ಇನ್ನಿತರ ಅನುಮೋದನೆಗಳು ಕೂಡ ಬೇಕಾಗಬಹುದಾಗಿರುತ್ತವೆ.

ದಿನಾಂಕ : 07–05–2022
ಸ್ಥಳ : ಬೆಂಗಳೂರು

ಸಹಿ/– ಶ್ರೀ. ಮಾಣಿಕ್ ಬಿ.ಟಿ, ಚೇರ್‌ಪರ್ಸನ್
ಸಹಿ/– ಶ್ರೀ. ಗುರು ಪ್ರಸನ್ನ, ಚೇರ್‌ಪರ್ಸನ್

ಪುಲಿಕೇಶಿನಗರದಲ್ಲಿ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಆಯೋಜಿಸಿದ್ದ ಜನಸ್ಪಂದನ ಕಾರ್ಯಕ್ರಮ

ಸಮಸ್ಯೆಗಳ ಸರಮಾಲೆ: ಪರಿಹಾರದ ಆಶಾಕಿರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಡಿಯುವ ನೀರಿನ ಪೂರೈಕೆ ಸಮಸ್ಯೆ, ಹದಗೆಟ್ಟ ರಸ್ತೆ, ಸಂಚಾರ ದಟ್ಟಣೆ, ವಿಲೇವಾರಿಯಾಗದ ಕಸ, ಅವ್ಯವಸ್ಥೆಯಿಂದ ಕೂಡಿರುವ ಪಾದಚಾರಿ ಮಾರ್ಗ... ಹೀಗೆ ಹತ್ತು ಹಲವು ಸಮಸ್ಯೆಗಳಿಂದ ತತ್ತರಿಸಿದ್ದ ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ನಾಗರಿಕರಿಗೆ ಶನಿವಾರ ತುಸು ಸಮಾಧಾನ ದೊರೆಯಿತು.

ಕಚೇರಿಗಳಿಗೆ ಅಲೆದಾಡಿ ಸುಸ್ತಾಗಿದ್ದ ಜನರಲ್ಲಿ ಆಶಾಭಾವ ಮೂಡಿತು. ಇದಕ್ಕೆ ಕಾರಣವಾಗಿದ್ದು 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳ ವತಿಯಿಂದ ಪುಲಿಕೇಶಿನಗರದಲ್ಲಿ ಆಯೋಜಿಸಿದ್ದ ಜನಸ್ಪಂದನ ಕಾರ್ಯಕ್ರಮ.

ಮೂರು ಗಂಟೆಗಳಿಗೂ ಹೆಚ್ಚು ಕಾಲ ನಡೆದ ಕಾರ್ಯಕ್ರಮದಲ್ಲಿ ನಾಗರಿಕರ ದೂರು ದುಮ್ಮಾನ ಆಲಿಸಿದ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಅವರು ಬಹುತೇಕ ಸಮಸ್ಯೆಗಳನ್ನು ಸ್ಥಳದಲ್ಲೇ ಇತ್ಯರ್ಥಪಡಿಸಲು ಕ್ರಮಕೈಗೊಂಡರು.

ಜನಸ್ಪಂದನದಲ್ಲಿ ಪ್ರಸ್ತಾವವಾದ ಪ್ರಮುಖ ಅಹವಾಲುಗಳು ಇಂತಿವೆ.


ಅನಂತ

ಅನಂತ್: 32ನೇ ವಾರ್ಡ್‌ನಲ್ಲಿ ನೀರಿನ ಸಮಸ್ಯೆ ಸಾಕಷ್ಟಿದೆ. ರಸ್ತೆ ದುರಸ್ತಿಯಾಗಿಲ್ಲ. ಇಲ್ಲಿನ ಸಮಸ್ಯೆಗಳ ಬಗ್ಗೆ ಸಾಕಷ್ಟು ಬಾರಿ ದೂರು ನೀಡಿದ್ದೇನೆ. ನಮಗೆ ಭರವಸೆ ನೀಡುವುದು ಬೇಡ. ಸಮಸ್ಯೆ ಬಗೆಹರಿಸಿ.

ಅಖಂಡ ಶ್ರೀನಿವಾಸಮೂರ್ತಿ: ನೀರಿನ ಸಮಸ್ಯೆ ಬಗೆಹರಿಸಲು ಕ್ರಮಕೈಗೊಳ್ಳಲಾಗಿದೆ. ಶೀಘ್ರ ಸಮಸ್ಯೆ ಇತ್ಯರ್ಥಗೊಳಿಸಲಾಗುವುದು.

ದೇವಪ್ಪ

ದೇವಪ್ಪ: ಕಾವಲ್ ಬೈರಸಂದ್ರ ವಾರ್ಡ್‌ನಲ್ಲಿ ಮರಗಳಿಗೆ ವಿದ್ಯುತ್ ತಂತಿ ಸ್ಪರ್ಶಿಸುತ್ತಿವೆ. ಮರ ಬಿದ್ದರೆ ವೈರ್‌ಗಳು ತುಂಡಾಗುತ್ತವೆ. ಅಧಿಕಾರಿಗಳಿಗೆ ಹಲವು ಬಾರಿ ದೂರು ನೀಡಿದ್ದರೂ ಉಡಾಫೆಯಿಂದ ಏಕವಚನದಲ್ಲಿ ಉತ್ತರ ನೀಡುತ್ತಾರೆ.

ಅರಣ್ಯ ಅಧಿಕಾರಿ ಕೆ.ಎಸ್. ರವೀಂದ್ರನಾಥ್: ನಾನು ಏಕವಚನದಲ್ಲಿ ಮಾತನಾಡಿಲ್ಲ. ಈ ಸಮಸ್ಯೆಯನ್ನು ತ್ವರಿತಗತಿಯಲ್ಲಿ ಬಗೆಹರಿಸಲಾಗುವುದು.

ಝುಕ್ರಿಯಾ ಅನ್ವರ್: ಪುಲಿಕೇಶಿ ನಗರದಲ್ಲಿ ಜಲ ಮಂಡಳಿಯವರು ಒಳಚರಂಡಿ ಪೈಪ್ ಅಳವಡಿಸಲು ರಸ್ತೆ ಅಗೆದು ಹಾಗೆಯೇ ಬಿಟ್ಟಿದ್ದಾರೆ. ಹಲವು ತಿಂಗಳಾದರೂ ದುರಸ್ತಿ ಮಾಡಿಲ್ಲ. ನೀರಿನ ಸಮಸ್ಯೆಯೂ ಇದೆ. ಬೀದಿ ದೀಪಗಳು ಸಹ ಇಲ್ಲ.

ಪ್ರಜಾವಾಣಿ ಹಾಗೂ ಡೆಕ್ಕನ್‌ಹೆರಾಲ್ಡ್ ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದಲ್ಲಿ ಆಯೋಜಿಸಿದ್ದ ಜನಸ್ಪಂದನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಾರ್ವಜನಿಕರು —ಪ್ರಜಾವಾಣಿ ಚಿತ್ರ.

ಜನಸ್ಪಂದನ
ಸಿಟಿಜನ್ಸ್ ಫಾರ್ ಚೇಂಜ್

ಅಖಂಡ ಶ್ರೀನಿವಾಸಮೂರ್ತಿ: ನೀರಿನ ಸಮಸ್ಯೆ ಬಗ್ಗೆ ವಿಧಾನಸಭೆ ಅಧಿವೇಶನದಲ್ಲೂ ಪ್ರಸ್ತಾಪಿಸಲಾಗಿತ್ತು. ಎರಡು ದಿನಕ್ಕೊಮ್ಮೆ ನೀರು ಪೂರೈಸಲು ಕ್ರಮ ಕೈಗೊಳ್ಳಲಾಗಿದೆ. ಕ್ಷೇತ್ರಕ್ಕೆ 50 ಬೀದಿ ದೀಪಗಳು ಮಂಜೂರಾಗಿವೆ. ಹೊಸ ಕೊಳವೆಬಾವಿಗಳನ್ನು ಸಹ ಕೊರೆಯಿಸಲಾಗುವುದು. ಕುಡಿಯುವ ನೀರು ಮತ್ತು ಚರಂಡಿ ಪೈಪ್‌ಲೈನ್ ಅಳವಡಿಸಲು ₹65 ಕೋಟಿ ಮಂಜೂರಾಗಿದ್ದು, ಪ್ರತಿ ವಾರ್ಡ್‌ಗೆ ಅಂದಾಜು ₹10 ಕೋಟಿ ಯೋಜನೆ ರೂಪಿಸಲಾಗುವುದು.

ಸಯ್ಯದ್: ಕೆಎಚ್‌ಬಿ ಮುಖ್ಯ ರಸ್ತೆಯಲ್ಲಿ ವಿವಿಧ ಟೆಲಿಕಾಂ ಕಂಪನಿಗಳು ಕೇಬಲ್‌ಗಾಗಿ ರಸ್ತೆ ಅಗೆದು ಹಾಳು ಮಾಡುತ್ತಿವೆ. ಆದರೆ, ದುರಸ್ತಿ ಮಾಡುತ್ತಿಲ್ಲ.

ಸೈಯದ್ ಅಫ್ಜಲ್

ಬಿಬಿಎಂಪಿ ಮುಖ್ಯ ಎಂಜಿನಿಯರ್ ಬಿ.ಟಿ.ಮೋಹನ್ ಕೃಷ್ಣ: 'ಒಎಫ್‌ಸಿ' ಅಳವಡಿಕೆಗಾಗಿ ರಸ್ತೆ ಅಗೆಯುವವರ ವಿರುದ್ಧ ಕ್ರಮಕೈಗೊಂಡಿದ್ದೇವೆ. ಸುಲ್ತಾನಪಾಳ್ಯ ರಸ್ತೆ ಅಭಿವೃದ್ಧಿಗೆ ಮುಖ್ಯಮಂತ್ರಿ ಅಮೃತ ನಗರೋತ್ಥಾನ ಯೋಜನೆ ಅಡಿಯಲ್ಲಿ ₹80 ಕೋಟಿ ಅನುದಾನ ಮಂಜೂರಾಗಿದೆ. ಕ್ರಿಯಾ ಯೋಜನೆ ರೂಪಿಸಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ.


ಸುರೇಶ್

ಮೋದಿ ಗಾರ್ಡನ್ ಕ್ಷೇಮಾಭಿವೃದ್ಧಿ ನಿವಾಸಿಗಳ ಸಂಘದ ಅಧ್ಯಕ್ಷ ಎ.ಆರ್. ಸುರೇಶ್: ಕಾವೇರಿ ನೀರು ಪೂರೈಕೆಯಾಗುತ್ತಿಲ್ಲ. ರಕ್ಷಣಾ ಇಲಾಖೆಯ ಜಾಗದ ಸಮೀಪದಲ್ಲಿರುವ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. 100 ಮೀಟರ್ ಅಂತರದಲ್ಲಿ ಯಾವುದೇ ಕಾರ್ಯ ಕೈಗೊಳ್ಳದಂತೆ ರಕ್ಷಣಾ ಇಲಾಖೆ ಅಧಿಕಾರಿಗಳು ಸೂಚಿಸಿದ್ದಾರೆ. ಇದರಿಂದ, ಮನೆ ನಿರ್ಮಿಸಲು ಸಹ ತೊಂದರೆಯಾಗುತ್ತಿದೆ.

ಅಖಂಡ ಶ್ರೀನಿವಾಸಮೂರ್ತಿ: ನಾಗರಿಕರಿಗೆ ತೊಂದರೆ ನೀಡದಂತೆ ರಕ್ಷಣಾ ಇಲಾಖೆಯ ಕಮಾಂಡರ್ ಜತೆ ಚರ್ಚಿಸಲಾಗುವುದು. ನೀರು ಪೂರೈಸುವ ಕಾಮಗಾರಿ ಪರಿಶೀಲಿಸಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ.

ಮುನಿಕೃಷ್ಣ

ಶಾಂಪೂರ ನಾಗರಿಕರ ಹಿತರಕ್ಷಣಾ ವೇದಿಕೆ ಅಧ್ಯಕ್ಷ ಮುನಿಕೃಷ್ಣ: ಮುನಿವೀರಪ್ಪ ಬಡಾವಣೆಯಲ್ಲಿ ನಾಲ್ಕು ಕೊಳವೆಬಾವಿಗಳಲ್ಲಿ ಒಂದು ಮಾತ್ರ ಕಾರ್ಯನಿರ್ವಹಿಸುತ್ತಿದೆ. ಡಿವಿಜಿ ಉದ್ಯಾನದಲ್ಲಿ ವಾಚ್‌ಮನ್ ಇಲ್ಲ. ನಾವೇ ಈ ಉದ್ಯಾನ ನಿರ್ವಹಿಸುತ್ತಿದ್ದೇವೆ. ಕಾನೂನು ಬಾಹಿರ ಚಟುವಟಿಕೆ ನಡೆಯುತ್ತಿರುವುದರಿಂದ ಉದ್ಯಾನಕ್ಕೆ ಭದ್ರತೆ ಹೆಚ್ಚಿಸಿ.

ಅಖಂಡ ಶ್ರೀನಿವಾಸಮೂರ್ತಿ: ಬೆಳಿಗ್ಗೆ ಮತ್ತು ಸಂಜೆ ಹೊಯ್ಸಳ ಗಸ್ತು ಹೆಚ್ಚಿಸಬೇಕು. ಕೊಳವೆಬಾವಿಗಳ ದುರಸ್ತಿಗೆ ಜಲಮಂಡಳಿ ಅಧಿಕಾರಿಗಳು ಕ್ರಮಕೈಗೊಳ್ಳುತ್ತಾರೆ.

'ಗಾಂಜಾ, ಚರಸ್ ಹಾವಳಿ ನಿಯಂತ್ರಿಸಿ'

ಅಫ್ರೀನ್ ಖಾನ್

'ಗಾಂಜಾ, ಚರಸ್ ಹಾವಳಿಯಿಂದ ಯುವಕರ ಬದುಕು ನಾಶವಾಗುತ್ತಿದೆ. ಉದ್ಯಾನಗಳಲ್ಲಿಯೂ ಕಾನೂನುಬಾಹಿರ ಚಟುವಟಿಕೆ ನಡೆಯುತ್ತಿವೆ. ಇಂತಹ ಚಟುವಟಿಕೆಗೆ ಕಡಿವಾಣ ಹಾಕಿ' ಎಂದು ಹಲವು ನಾಗರಿಕರು ದೂರಿದರು.

'ಡಿ.ಜೆ. ಹಳ್ಳಿ ಉರ್ದು ಶಾಲಾ ಆವರಣದಲ್ಲಿ ಕಾನೂನುಬಾಹಿರ ಚಟುವಟಿಕೆಗಳು ನಡೆಯುತ್ತಿವೆ. ಗಾಂಜಾ, ಡ್ರಗ್ಸ್ ಜಾಸ್ತಿ ಇದೆ. ದೂರು ನೀಡಿದರೆ ಬೆದರಿಕೆ ಹಾಕುತ್ತಾರೆ' ಎಂದು ಅಫ್ರೀನ್ ಖಾನ್ ಗಮನ ಸೆಳೆದರು.

ಪ್ರತಿಕ್ರಿಯಿಸಿದ ಶಾಸಕ ಅಖಂಡ ಶ್ರೀನಿವಾಸಮೂರ್ತಿ, 'ನಾಲ್ಕು ವಾರ್ಡ್‌ಗಳಲ್ಲಿ ಈ ಸಮಸ್ಯೆ ಇದೆ. ಪೊಲೀಸರು ಪ್ರಕರಣಗಳನ್ನು ದಾಖಲಿಸಿದ್ದಾರೆ. ಆದರೆ, ಇನ್ನಷ್ಟು ಬಿಗಿ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ಹೇಳಿದರು.

ದೂರುಗಳಿಗೆ ಪ್ರತಿಕ್ರಿಯಿಸಿದ ಕೆ.ಜೆ. ಹಳ್ಳಿ ಠಾಣೆಯ ಪಿಎಸ್‌ಐ ಬಾಬುರೆಡ್ಡಿ, '2021ರಲ್ಲಿ 120 ಪ್ರಕರಣ ದಾಖಲಿಸಿ 120 ಜನರನ್ನು ಬಂಧಿಸಿದ್ದೇವೆ. ಆದರೆ, ಯಾರನ್ನಾದರೂ ವಶಕ್ಕೆ ಪಡೆದಾಗ ನಾಯಕರು ಎಂದೆನಿಸಿಕೊಂಡ ಸ್ಥಳೀಯರೇ, 'ಅವರು ನಮ್ಮವರು ಬಿಟ್ಟುಬಿಡಿ' ಎಂದು ಒತ್ತಡ ಹಾಕುತ್ತಾರೆ. ಮಕ್ಕಳಿಗೆ ತಂದೆ–ತಾಯಿ ಬುದ್ಧಿ ಹೇಳಬೇಕು. ಕಾನೂನುಬಾಹಿರ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡುವವರ ಹೆಸರನ್ನು ಗೋಪ್ಯವಾಗಿರಿಸುತ್ತೇವೆ' ಎಂದರು.

'ಮನೆಯನ್ನು ಭೋಗ್ಯಕ್ಕೆ ನೀಡಿ ವಂಚನೆ'

ಶಿವಕುಮಾರ್

'ಮನೆ ಮತ್ತು ಫ್ಲ್ಯಾಟ್‌ಗಳನ್ನು ಬಾಡಿಗೆ ಪಡೆದು ಇನ್ನೊಬ್ಬರಿಗೆ ಭೋಗ್ಯಕ್ಕೆ ನೀಡಿ ವಂಚನೆ ಮಾಡುತ್ತಿರುವ ಪ್ರಕರಣಗಳು ಹೆಚ್ಚುತ್ತಿವೆ. ಭೋಗ್ಯಕ್ಕೆ ನೀಡುವಾಗ ಭಾರಿ ಹಣವನ್ನು ಮುಂಗಡ ಪಡೆಯುತ್ತಿದ್ದಾರೆ. ಆದ್ದರಿಂದ, ಅಪರಿಚಿತರಿಗೆ ಮನೆ ಬಾಡಿಗೆ ನೀಡುವ ಮುನ್ನ ಎಚ್ಚರವಹಿಸಿ. ಅವರ ಸಂಪೂರ್ಣ ವಿವರ ಪಡೆದುಕೊಳ್ಳಬೇಕು' ಎಂದು ಆರ್‌.ಟಿ. ನಗರ ಠಾಣೆಯ ಇನ್‌ಸ್ಪೆಕ್ಟರ್ ಶಿವಕುಮಾರ್ ಸಲಹೆ ನೀಡಿದರು.

'ಖಾಸಗಿ ಭದ್ರತಾ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳುವ ಮುನ್ನ ಅವರ ಸಂಪೂರ್ಣ ಹಿನ್ನೆಲೆಯನ್ನು ಪಡೆದುಕೊಳ್ಳಬೇಕು. ಅವರ ಬಗ್ಗೆಯೂ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು. ನೇಪಾಳ ಮತ್ತು ಉತ್ತರ ಭಾರತದ ಕೆಲವು ಭದ್ರತಾ ಸಿಬ್ಬಂದಿ ಇತ್ತೀಚೆಗೆ ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿರುವುದು ವರದಿಯಾಗಿದೆ. ಮುನ್ನೆಚ್ಚರಿಕೆ ಅಗತ್ಯ' ಎಂದರು.

'ಮಾಸ್ಟರ್‌ಪ್ಲಾನ್ ಜಾರಿಯಾಗಲಿ'

ಮುನಿರೆಡ್ಡಿಪಾಳ್ಯದಿಂದ ಪಾಟರಿಟೌನ್‌ವರೆಗಿನ ರಸ್ತೆ ಅಭಿವೃದ್ಧಿಗೆ ಬಿಡಿಎ 2015ರಲ್ಲಿ ರೂಪಿಸಿದ್ದ ಮಾಸ್ಟರ್‌ಪ್ಲಾನ್ ಅನುಷ್ಠಾನಗೊಳಿಸಿದರೆ ಬಹಳಷ್ಟು ಅನುಕೂಲವಾಗುತ್ತದೆ ಎಂದು ನಗರ ಯೋಜನಾ ಇಲಾಖೆಯ ನಿವೃತ್ತ ನಿರ್ದೇಶಕ ಇಜಾಜ್ ಅಹ್ಮದ್ ಸಲಹೆ ನೀಡಿದರು.

'30 ಮೀ. ಅಗಲದ ರಸ್ತೆ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿತ್ತು. ಇದರಿಂದ, ಟ್ಯಾನರಿ ರಸ್ತೆ ಮತ್ತು ನಂದಿದುರ್ಗದ ರಸ್ತೆಯಲ್ಲಿನ ಸಂಚಾರ ದಟ್ಟಣೆ ಕಡಿಮೆಯಾಗುತ್ತದೆ. ಜತೆಗೆ, ಫ್ರೇಜರ್‌ಟೌನ್‌ನಿಂದ ವಿಮಾನ ನಿಲ್ದಾಣದ ರಸ್ತೆಯನ್ನು ಸಂಪರ್ಕಿಸುವುದಕ್ಕೂ ಅನುಕೂಲವಾಗುತ್ತದೆ' ಎಂದು ಸಲಹೆ ನೀಡಿದರು.

'ಟ್ಯಾನರಿ ರಸ್ತೆ ವಿಸ್ತರಣೆ ಮಾಡಿ'


ಶಶಾವಲಿ

ಶಶಾವಲಿ: ಬಹಳ ವರ್ಷಗಳಿಂದ ಟ್ಯಾನರಿ ರಸ್ತೆ ವಿಸ್ತರಣೆಯಾಗಿಲ್ಲ. ಇದರಿಂದ ಬಹಳ ಸಮಸ್ಯೆಯಾಗುತ್ತಿದೆ.

ಅಖಂಡ ಶ್ರೀನಿವಾಸಮೂರ್ತಿ: ಈ ರಸ್ತೆ ವಿಸ್ತರಣೆಗೆ ಹಲವು ವರ್ಷಗಳಿಂದ ಪ್ರಯತ್ನಗಳು ನಡೆಯುತ್ತಿವೆ. ದಿಣ್ಣೂರು ರಸ್ತೆ ಮತ್ತು ಟ್ಯಾನರಿ ರಸ್ತೆಗೆ ಹೊಸ ಕಾಯಕಲ್ಪ ನೀಡಲಾಗುವುದು.

'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ವತಿಯಿಂದ ಪುಲಿಕೇಶಿನಗರದ ಸುಲ್ತಾನ್‌ಪಾಳ್ಯದಲ್ಲಿ ಶನಿವಾರ ಆಯೋಜಿಸಿದ್ದ ಜನಸ್ಪಂದನ ಕಾರ್ಯಕ್ರಮದಲ್ಲಿ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಮಾತನಾಡಿದರು. ಬಿಬಿಎಂಪಿ ಕಾರ್ಯನಿರ್ವಾಹಕ ಎಂಜಿನಿಯರ್ ಶ್ರೀಕಾಂತ್, ಕಾರ್ಯನಿರ್ವಾಹಕ ಎಂಜಿನಿಯರ್ ಗೀತಾ, ಪೂರ್ವ ವಲಯ ಜಂಟಿ ಆಯುಕ್ತರಾದ ಶಿಲ್ಪಾ, ಮುಖ್ಯ ಎಂಜಿನಿಯರ್ ಬಿ.ಟಿ. ಮೋಹನ್ ಕೃಷ್ಣ, ರೇವಂತ್, ಜಲಮಂಡಳಿಯ ಕಾರ್ಯನಿರ್ವಾಹಕ ಎಂಜಿನಿಯರ್‌ಗಳಾದ ದಲಾಯತ್, ರಮೇಶ್ ಇದ್ದರು.

'ನೀರಿನ ಸಮಸ್ಯೆ ಬಗೆಹರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕ್ಷೇತ್ರದಲ್ಲಿ ನೀರಿನ ಸಮಸ್ಯೆಯೇ ಹೆಚ್ಚು. ನಾಲ್ಕು ದಿನಕ್ಕೊಮ್ಮೆ ನೀರು ಪೂರೈಸಲಾಗುತ್ತಿದೆ. ಎಲ್ಲಕ್ಕಿಂತ ಮೊದಲು ಈ ಸಮಸ್ಯೆ ಬಗೆಹರಿಸುವತ್ತ ಗಮನಹರಿಸಿ' ಎಂದು ಪುಲಿಕೇಶಿನಗರ ಕ್ಷೇತ್ರದ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಅವರು ಜಲಮಂಡಳಿಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದಲ್ಲಿ 'ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳ ವತಿಯಿಂದ ಶನಿವಾರ ಆಯೋಜಿಸಿದ್ದ 'ಜನಸ್ಪಂದನ' ಕಾರ್ಯಕ್ರಮದಲ್ಲಿ ಜನರ ಅಹವಾಲು ಆಲಿಸಿದ ಬಳಿಕ ಅವರು ಮಾತನಾಡಿದರು. 'ಕೆಲವೊಮ್ಮೆ 15 ದಿನಗಳವರೆಗೆ ನೀರಿಗಾಗಿ ಕಾಯಬೇಕಾದ ಪರಿಸ್ಥಿತಿ ಇದೆ. ಹೀಗಾದರೆ ನಾಗರಿಕರು ಬದುಕುವುದು ಹೇಗೆ' ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು.

ಕ್ಷೇತ್ರದಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳು ಮತ್ತು ಅನುಷ್ಠಾನ ಹಂತದಲ್ಲಿರುವ ಯೋಜನೆಗಳನ್ನು ಜನರ ಮುಂದಿಟ್ಟರು.

'ಕುಡಿಯುವ ನೀರಿನ ಸಮಸ್ಯೆ ನಿವಾರಣೆ ಬಗ್ಗೆ ಜಲಮಂಡಳಿಯ ಅಧ್ಯಕ್ಷರ ಜತೆಯೂ ಚರ್ಚಿಸಿದ್ದೇನೆ. ಕುಡಿಯುವ ನೀರು ಮತ್ತು ಒಳಚರಂಡಿ ಪೈಪ್‌ಲೈನ್ ಅಳವಡಿಸಲು ₹65 ಕೋಟಿ ಮೊತ್ತದ ಯೋಜನೆ ರೂಪಿಸಲಾಗಿದೆ' ಎಂದು ಅವರು ವಿವರಿಸಿದರು.

'ಪುಲಿಕೇಶಿ ಕ್ಷೇತ್ರವು ವಿಧಾನ ಸೌಧದಿಂದ ಕೇವಲ 4 ಕಿ.ಮೀ ದೂರದಲ್ಲಿದೆ. ಕ್ಷೇತ್ರದಲ್ಲಿ ಶೇ 90ರಷ್ಟು ಕೊಳೆಗೇರಿ ಪ್ರದೇಶ ಇದೆ. ಈ ಪ್ರದೇಶದಲ್ಲಿ ಮಳೆಯಾದರೆ ಮನೆಗಳಿಗೆ ನೀರು ನುಗ್ಗುವ ಸ್ಥಿತಿ ಹತ್ತು ವರ್ಷಗಳ ಹಿಂದೆ ಇತ್ತು. ಈಗ ಅಂತಹ ಪರಿಸ್ಥಿತಿ ಇಲ್ಲ. ಅಭಿವೃದ್ಧಿ ಕಾರ್ಯಗಳಿಂದಾಗಿ ಕ್ಷೇತ್ರದ ಚಿತ್ರಣವೇ ಬದಲಾಯಿಸಲಾಗಿದೆ' ಎಂದರು. ಮಳೆಗಾಲಕ್ಕೆ ಮುನ್ನವೇ ಚರಂಡಿಗಳ ಹೂಳು ತೆಗೆಯುವ ಕಾರ್ಯವನ್ನು ಅಧಿಕಾರಿಗಳು ಆದ್ಯತೆ ಮೇರೆಗೆ ಕೈಗೆತ್ತಿಕೊಳ್ಳಬೇಕು ಎಂದು ಸೂಚಿಸಿದರು.

'ಕ್ಷೇತ್ರದ ವಿದ್ಯಾರ್ಥಿಗಳಿಗೆ 2 ಸಾವಿರ ಲ್ಯಾಪ್‌ಟಾಪ್‌ಗಳನ್ನು ಬಿಬಿಎಂಪಿ ವತಿಯಿಂದ ಶೀಘ್ರ ವಿತರಿಸಲಾಗುವುದು. ವೀರನಪಾಳ್ಯದಲ್ಲಿ ಕೆಳಸೇತುವೆ ನಿರ್ಮಿಸಲು ₹15 ಕೋಟಿ ಮಂಜೂರಾಗಿದೆ. ಅಮೃತನಗರೋತ್ಥಾನ ಯೋಜನೆ ಅಡಿಯಲ್ಲಿ ₹70 ಕೋಟಿ ಅನುದಾನ ಮಂಜೂರಾಗಿದ್ದು, ವಿವಿಧ ಕಾಮಗಾರಿಗಳನ್ನು ಶೀಘ್ರ ಆರಂಭಿಸಲಾಗುವುದು. ದಿಣ್ಣೂರು ರಸ್ತೆಯಲ್ಲಿ ಉಕ್ಕಿನ ಸೇತುವೆ ನಿರ್ಮಿಸಲಿದ್ದೇವೆ' ಎಂದರು.

'ಸಗಾಯಪುರದಲ್ಲಿ ಮಲ್ಟಿಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸಲಾಗುತ್ತಿದೆ. ಜತೆಗೆ ಕ್ಷೇತ್ರದಲ್ಲಿ ಸ್ಪೋರ್ಟ್ಸ್ ಕ್ಲಬ್ ಸಂಕೀರ್ಣ ಮತ್ತು ಡಯಾಲಿಸಿಸ್ ಕೇಂದ್ರ ಆರಂಭಿಸಲಾಗಿದೆ' ಎಂದು ಅವರು ತಿಳಿಸಿದರು.

'ಕರೆ ಸ್ವಿಕರಿಸಿ- ಸಮಸ್ಯೆಗೆ ಸ್ಪಂದಿಸಿ'

'ಜನರು ಸಂಕಷ್ಟಗಳನ್ನು ಹೇಳಿಕೊಳ್ಳಲು ಕರೆ ಮಾಡುತ್ತಾರೆ. ಆದರೆ, ಬಹುತೇಕ ಅಧಿಕಾರಿಗಳು ಕರೆಗಳನ್ನು ಸ್ವೀಕರಿಸುತ್ತಿಲ್ಲ. ಅಧಿಕಾರಿಗಳು ಜನರ ಸಮಸ್ಯೆಗಳಿಗೆ ಸ್ಪಂದಿಸದಿದ್ದರೆ ಹೇಗೆ? ಕರೆಗಳನ್ನು ಸ್ವೀಕರಿಸಿ ಸ್ಪಂದಿಸುವುದನ್ನು ಕಲಿಯಿರಿ' ಎಂದು ಅಖಂಡ ಶ್ರೀನಿವಾಸಮೂರ್ತಿ ಕಿವಿಮಾತು ಹೇಳಿದರು.

ಪರಿಶೀಲನಾ ಸಭೆಯಲ್ಲಿ ಶಿವಣ್ಣ ಮಾತನಾಡಿದರು. ವಿ.ಅನ್ಬುಕುಮಾರ್ ಇದ್ದಾರೆ

ಕೆಎಸ್‌ಆರ್‌ಟಿಸಿ: ಸಫಾಯಿ ಕರ್ಮಚಾರಿಗಳಿಗೆ ಆರೋಗ್ಯ ತಪಾಸಣೆ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ (ಕೆಎಸ್‌ಆರ್‌ಟಿಸಿ) ಬಸ್ ನಿಲ್ದಾಣಗಳ ಸ್ವಚ್ಛತೆ ಕಾಪಾಡುವ ಕೆಲವು ಸಫಾಯಿ ಕರ್ಮಚಾರಿಗಳಿಗೆ ಹಾಗೂ ಸ್ವಚ್ಛತಾ ಕಾರ್ಮಿಕರಿಗೆ ಕನಿಷ್ಠ ವೇತನ ಪಾವತಿ ಆಗುತ್ತಿಲ್ಲ. ಅವರ ಆರೋಗ್ಯ ತಪಾಸಣೆಗೆ ಕ್ರಮಕೈಗೊಂಡಿಲ್ಲ ಎಂದು ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಶಿವಣ್ಣ ಅಸಮಾಧಾನ ವ್ಯಕ್ತಪಡಿಸಿದರು.

ನಿಗಮದ ಕೇಂದ್ರ ಕಚೇರಿಗೆ ಭೇಟಿ ನೀಡಿದ ಅವರು ಸಫಾಯಿ ಕರ್ಮಚಾರಿ ಯೋಗಕ್ಷೇಮಕ್ಕೆ ಕೈಗೊಂಡ ಕ್ರಮಗಳ ಕುರಿತು ಪರಿಶೀಲನೆ ನಡೆಸಿದರು.

'ನಿಗಮದ 16 ವಿಭಾಗಗಳಲ್ಲಿ ಒಟ್ಟು 169 ಬಸ್ ನಿಲ್ದಾಣಗಳಿದ್ದು, 299 ಕಾರ್ಮಿಕ ಸ್ವಚ್ಛತಾ ಕಾರ್ಮಿಕರು/ ಸಫಾಯಿ ಕರ್ಮಚಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಕೆಲವು ಬಸ್ ನಿಲ್ದಾಣಗಳ ಸ್ವಚ್ಛತೆ ನಿರ್ವಹಣೆಯ ಗುತ್ತಿಗೆದಾರರು ಸಫಾಯಿ ಕರ್ಮಚಾರಿಗಳಿಗೆ ಸೌಕರ್ಯ ಕಲ್ಪಿಸದಿದ್ದರೂ ಅವರ ವಿರುದ್ಧ ಏಕೆ ಕ್ರಮ ಕೈಗೊಂಡಿಲ್ಲ' ಎಂದು ಶಿವಣ್ಣ ಪ್ರಶ್ನಿಸಿದರು.

'ಒಟ್ಟು 299 ಸಫಾಯಿ ಕರ್ಮಚಾರಿಗಳು/ ಸ್ವಚ್ಛತಾ ಕಾರ್ಮಿಕರಿಗೆ 2 ಜೊತೆ ಸಮವಸ್ತ್ರವನ್ನು ನಿಗಮದ ವತಿಯಿಂದ ನೀಡುತ್ತಿದ್ದೇವೆ. ಮೂರು ತಿಂಗಳಿಗೊಮ್ಮೆ ಈ ಕಾರ್ಮಿಕರಿಗೆ ಆರೋಗ್ಯ ತಪಾಸಣೆ ನಡೆಸಲು ವ್ಯವಸ್ಥೆ ಮಾಡುತ್ತೇವೆ' ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ಭರವಸೆ ನೀಡಿದರು. ಸಭೆಯಲ್ಲಿ ಆಯೋಗದ ಕಾರ್ಯದರ್ಶಿ ಚಂದ್ರಕಲಾ, ಹಿರಿಯ ಕಾರ್ಮಿಕ ನಿರೀಕ್ಷಕ ರಮೇಶ ನಾಯ್ಕ್, ಇಪಿಎಫ್‌ಒ ಜಾರಿ ಅಧಿಕಾರಿ ಜಯಶಂಕರ್, ಇಎಸ್‌ಐ ಸಹಾಯಕ ನಿರ್ದೇಶಕ ರವಿ ನಾಯಕ್ ಹಾಗೂ ನಿಗಮದ ಅಧಿಕಾರಿಗಳು ಉಪಸ್ಥಿತರಿದ್ದರು.

ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಡಿಕೇರಿ, ಕೊಡಗು ಜಿಲ್ಲೆ.
(ಕರ್ನಾಟಕ ಸರ್ಕಾರದ ನೋಂದಾಯಿತ ಸ್ವಾಯತ್ತ ಸಂಸ್ಥೆ)
ದೂರವಾಣಿ: 08272–220606 ವೆಬ್‌ಸೈಟ್: www.kimskodagu.kar.nic.in
ಇಮೇಲ್: directormckodagu@gmail.com
ಇ-ಟೆಂಡರ್ ಪ್ರಕಟಣೆ
ಸಂಖ್ಯೆ: ME/2022-23/IND: ದಿನಾಂಕ: 07–05–2022

ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣ, ಬೋಧಕ ಆಸ್ಪತ್ರೆಯ ಆವರಣ ಮತ್ತು ಮಹಿಳಾ ಮತ್ತು ಮಕ್ಕಳ ವಿಭಾಗ, ಇಲ್ಲಿ ವಿದ್ಯಾರ್ಥಿಗಳ ಮತ್ತು ರೋಗಿಗಳ ಉಪಯೋಗಕ್ಕಾಗಿ ಉಪಹಾರ ಗೃಹಗಳನ್ನು ಮಾಸಿಕ ಬಾಡಿಗೆ ಆಧಾರದಲ್ಲಿ ನಡೆಸಲು 2022–23ನೇ ಸಾಲಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ [https://eproc.karnataka.gov.in ನಲ್ಲಿ] ಎರಡು ಟೆಂಡರ್ ಅರ್ಜಿ ಪದ್ಧತಿಯಲ್ಲಿ ಇ.ಎಂ.ಡಿ. ಯೊಂದಿಗೆ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅರ್ಜಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭ ದಿನಾಂಕ: 09–05–2022 ಸಮಯ: 10–00 AM ಟೆಂಡರ್ ಅರ್ಜಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 09–06–2022 ಸಮಯ: 5–00 PM ಹೆಚ್ಚಿನ ವಿವರಗಳನ್ನು ಇ–ಸಂಗ್ರಹಣ ವೇದಿಕೆಯಿಂದ https://eproc.karnataka.gov.in ಅಂತರ್ಜಾಲದಲ್ಲಿ ಅಥವಾ ಈ ಕೆಳಗೆ ಸಹಿ ಮಾಡಿರುವವರನ್ನು ಸಂಪರ್ಕಿಸಿ ಪಡೆಯಬಹುದು.

ಸಹಿ/– ನಿರ್ದೇಶಕರು ಮತ್ತು ಡೀನ್
ಕೊವೈವಿಸಂ. ಮಡಿಕೇರಿ

ಕರ್ನಾಟಕ ಸರ್ಕಾರ
ಜಿಲ್ಲಾ ಆಸ್ಪತ್ರೆ ಮತ್ತು ಸಾಂಕ್ರಾಮಿಕ ರೋಗಗಳ ಆಸ್ಪತ್ರೆ,
ಕೆ.ಆರ್.ಎಸ್.ರಸ್ತೆ ಮೇಟಗಳ್ಳಿ ಮೈಸೂರು
E-mail:mysoreds@gmail.com Phone:0821-2517555
ಪತ್ರ ಸಂಖ್ಯೆ: ಸಂಖ್ಯೆ:ಜಿಆ&ಸಾರೋಆಮೈ/ಇ–ಟೆಂಡರ್/01/2022–23
ದಿನಾಂಕ: 05.05.2022

ಇ–ಟೆಂಡರ್ ಅಧಿಸೂಚನೆ

2022–23ನೇ ಸಾಲಿಗೆ ಜಿಲ್ಲಾ ಆಸ್ಪತ್ರೆ ಮತ್ತು ಸಾಂಕ್ರಾಮಿಕ ರೋಗಗಳ ಆಸ್ಪತ್ರೆ, ಮೇಟಗಳ್ಳಿ, ಮೈಸೂರು ಇಲ್ಲಿ ಖಾಲಿ ಇರುವ ಗ್ರೂಪ್ ಡಿ ನೌಕರರ ಸೇವೆಯನ್ನು ನೋಂದಾಯಿತರ ಹೊರ ಸಂಪನ್ಮೂಲ ಏಜೆನ್ಸಿ ಮುಖಾಂತರ ಪಡೆಯುವ ಬಗ್ಗೆ, ಟೆಂಡರು
1) ಟೆಂಡರ್ ಫಾರಂ ಅಪ್ ಲೋಡ್ ಮಾಡಲು ಪ್ರಾರಂಭಿಸುವ ದಿ: 10.05.2022 2) ಟೆಂಡರ್ ಫಾರಂ ಅಪ್ ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ವೇಳೆ ದಿ: 27.05.2022 ವೇಳೆ: ಸಂಜೆ 04:30 ಗಂಟೆಗೆ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿ: 31.05.2022 ವೇಳೆ: ಬೆಳಿಗ್ಗೆ 11:00 ಗಂಟೆಗೆ. 4) ಆರ್ಥಿಕ ಲಕೋಟೆಯನ್ನು ತೆರೆಯುವ ದಿನಾಂಕ, ವೇಳೆ ಮತ್ತು ಸ್ಥಳ ದಿ: 01.06.2022 ವೇಳೆ: ಬೆಳಿಗ್ಗೆ 11:00 ಗಂಟೆಗೆ. 5) ಟೆಂಡರ್ ಒಟ್ಟು ಅಂದಾಜು ಮೊತ್ತ: ರೂ:53,80,620/– 6) ಟೆಂಡರ್ ನೊಂದಣಿಗೆ ಪಾವತಿಸಬೇಕಾದ ಇ.ಎಂ.ಡಿ.ಮೊತ್ತ: ಶೇಕಡ2.5%

ಸಹಿ/– ಜಿಲ್ಲಾ ಶಸ್ತ್ರಚಿಕಿತ್ಸಕರು
DIPR/DDMYS/MCA/69/2022-23

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ReF: 1)No: EE /KNNL/UTP/DN/TND/ BYD SCP TSP -RD /PB-1/2022-23/156 Date:- 04-05-2022
2)No: EE /KNNL/UTP/DN/TND/BYD-BOREWELL/PB-3/2022-23/157 Date:- 04-05-2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು ಇವರು ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಅರ್ಹ ಗುತ್ತಿಗೆದಾರ ರಿಂದ ಲೆಕ್ಕ ಶೀರ್ಷಿಕೆ 4701 ಎಸ್.ಸಿ.ಪಿ/ಟಿ.ಎಸ್.ಪಿ ರಡಿ ಬ್ಯಾಡಗಿ ವಿಧಾನ ಸಭಾ ಕ್ಷೇತ್ರದ 2 ರಸ್ತೆ ನಿರ್ಮಾಣ ಕಾಮಗಾರಿಗಳ ಹಾಗೂ 2 ಕೊಳವೆ ಬಾವಿ ಕಾಮಗಾರಿಗಳ ಟೆಂಡರ್‌ನ್ನು ಉಲ್ಲೇಖಿತ ಪತ್ರ (1) ಹಾಗೂ (2) ರನ್ವಯ ಆಹ್ವಾನಿಸಲಾಗಿದೆ. ಸದರಿ 2 ರಸ್ತೆ ಕಾಮಗಾರಿಗಳ ಮೊತ್ತ ರೂ. 62.17 ಲಕ್ಷ ದಿಂದ ರೂ 62.26 ಲಕ್ಷ (GSTಸೇರಿ) ಹಾಗೂ ಇ.ಎಮ.ಡಿ. ಮೊತ್ತ ರೂ. 0.63ಲಕ್ಷ ಹಾಗೂ 2 ಕೊಳವೇ ಬಾವಿ ಕಾಮಗಾರಿಗಳ ಮೊತ್ತ ರೂ. 57.07 ಲಕ್ಷ ದಿಂದ ರೂ 57.14 ಲಕ್ಷ (GSTಸೇರಿ) ಹಾಗೂ ಇ.ಎಮ.ಡಿ. ಮೊತ್ತ ರೂ. 0.58ಲಕ್ಷ ಇರುತ್ತದೆ. ಟೆಂಡರ್ ಪ್ರಕ್ರಿಯೆ ಶುಲ್ಕವನ್ನು (ಹಿಂದಿರುಗಿಸಲಾಗದ್ದು) www.eproc.karnataka.gov.in ನಲ್ಲಿ ನೋಡಿಕೊಂಡು ತುಂಬತಕ್ಕದ್ದು. ಟೆಂಡರ್ ಅಕ್ಸೆಸ್ ಮಾಡುವ ದಿನಾಂಕ: 09–05–2022ರಿಂದ 18–05–2022ಸಂಜೆ 5.30ರ ವರೆಗೆ ಇರುವುದು. ಟೆಂಡ್‌ರ ಬಗ್ಗೆ ವಿಚಾರಣೆಗೆ ಕೊನೆಯ ದಿನಾಂಕ 17–05–2022ಸಂಜೆ 5.30ರ ವರೆಗೆ ಇರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ 18–05–2022 ಸಂಜೆ 5.30ರ ವರೆಗೆ ಸಲ್ಲಿಸತಕ್ಕದ್ದು. ದಿನಾಂಕ 19–05–2022ರಂದು ಸಂಜೆ 5.35ರ ಗಂಟೆಗೆ ಆರ್ಥಿಕ ಬಿಡ್‌ನ್ನು ಕಾರ್ಯನಿರ್ವಾಹಕ ಇಂಜನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೆಬೆನ್ನೂರು ಇವರ ಕಚೇರಿಯಲ್ಲಿ ತೆರೆಯಲಾಗುವುದು. ಸದರಿ ಟೆಂಡರ್‌ನಲ್ಲಿ ಏನಾದರೂ ತಿದ್ದುಪಡಿ ಮಾಡಿದಲ್ಲಿ ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ/ ದಿನ ಪತ್ರಿಕೆಗಳಲ್ಲಿಪ್ರಚುರ ಪಡಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂ. (08373) 267071 ಕ್ಕೆ ಸಂಪರ್ಕಿಸುವುದು. ಷರತ್ತು ಬದ್ದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್ ಅಂಗೀಕರಿಸುವ ಅಧಿಕಾರಿಯು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ರದ್ದು ಪಡಿಸುವ ಅಧಿಕಾರ ಹೊಂದಿರುತ್ತಾರೆ.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು.
178

ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ನಂ.4. ಡಿ.ಎಸ್.ಇ.ಆರ್.ಟಿ. ಕಟ್ಟಡ, 100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು–560085. ದೂರವಾಣಿ: 080–26422238/45
ಇ–ಮೇಲ್: mdktbs.tender@gmail.com, ವೆಬ್‌ಸೈಟ್: http://www.ktbs.kar.nic.in
ಸಂ:ಎ6/ಕ.ಪ.ಪು.ಸಂ/ಪಿಯುಸಿ/ಪಪುಮುಸ/33/2021–22/ಭಾಗ–2 ದಿನಾಂಕ:07.05.2022

ಟೆಂಡರ್ ಅಧಿಸೂಚನೆ (ಇ.ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

2022–23ನೇ ಸಾಲಿಗೆ, ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಅಂದಾಜು 1.10 ಲಕ್ಷ ಪಠ್ಯಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡಲು ಟೆಂಡರ್‌ನಲ್ಲಿ ನಿಗದಿಪಡಿಸಿರುವಂತೆ ಮೂಲಭೂತ ಸೌಲಭ್ಯವುಳ್ಳ ಅರ್ಹ ಮುದ್ರಕರುಗಳಿಂದ 2 ಬಿಡ್ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಪೂರ್ಣ ವಿವರಗಳನ್ನು ಇ–ಪೋರ್ಟಲ್ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಟೆಂಡರ್ ದಸ್ತಾವೇಜಿನಲ್ಲಿ ಪರಿಶೀಲಿಸಬಹುದು. ಬಿಡ್‌ಗಳನ್ನು ದಿನಾಂಕ: **17.05.2022** ರಂದು ಸಂಜೆ **5.30** ರವರೆಗೆ ಆನ್‌ಲೈನ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪೂರ್ಣ ವಿಳಾಸ: https://www.eproc.karnataka.gov.in ಸಹಾಯವಾಣಿ: 080–46010000/080–22631200, ಇಲಾಖೆಯ ವೆಬ್‌ಸೈಟ್: https://www.ktbs.kar.nic.in

ಸಹಿ/– ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,
ಡಿ.ಸಿ ಕಾಂಪೌಂಡ್ ಆವರಣ, ಆರ್.ಟಿ.ಓ ರಸ್ತೆ, ಶಿವಮೊಗ್ಗ
ದೂರವಾಣಿ ಸಂಖ್ಯೆ : 08182–248044 ಇ–ಮೇಲ್ : eesmgrdws@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಸಂ:ಕಾಇಂ:ಗ್ರಾಕುನೀ&ನೈವಿ/ಶಿ/ಜೆ.ಇ–02/JJM/ISRA/Tender :2021–22/236
ದಿನಾಂಕ : 05.05.2022

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಸೇವೆಗಳಿಗೆ ನಿಬಂಧನೆಗೊಳಪಟ್ಟಂತೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ ಇವರು ಜಿಲ್ಲೆಯಡಿ ಬರುವ 7 ತಾಲ್ಲೂಕುಗಳಲ್ಲಿರುವ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ **JJM/ISRA** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಣಿ ಮಾಡಿದ ಅರ್ಹ ಸಂಸ್ಥೆಯವರಿಂದ (**NGO**) ಸ್ಪರ್ಧಾತ್ಮಕ ಟೆಂಡರುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕೆ.ಸಿ–8 ರಲ್ಲಿ ಕರೆಯಲಾಗಿದೆ. ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ **http://www.eproc.karnataka.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದು. ಈ ಕೆಳಗೆ ಪ್ರಕಟಿಸಿರುವ ಯಾವುದಾದರೂ ದಿನಾಂಕವು ಆಕಸ್ಮಿಕವಾಗಿ ರಜಾದಿನ ಎಂದು ಘೋಷಿಸಿದಲ್ಲಿ ನಂತರದ ಕಛೇರಿ ಕೆಲಸದ ದಿನವನ್ನು ಪರಿಗಣಿಸಲಾಗುವುದು.
(1) ಪ್ರೀ ಬಿಡ್ ಮೀಟಿಂಗ್ ದಿನಾಂಕ : **11.05.2022 at 11.30 AM. Office of the Executive Engineer, RWS&S Division, Shivamogga RTO Road, DC Office Compound, Shivamogga.** (2) ಭರ್ತಿ ಮಾಡಿದ ಟೆಂಡರ್‌ಗಳನ್ನು ಅನ್ ಲೈನ್ (ಇ–ಪ್ರೊಕ್ಯೂರ್‌ಮೆಂಟ್) ಮೂಲಕ ಸಲ್ಲಿಸಲು ಕೊನೆಯ ದಿನಾಂಕ : **13.05.2022 ಸಾಯಂಕಾಲ 17.30 ರವರೆಗೆ.** (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **15.05.2022 ಬೆಳಗ್ಗೆ 11.30 ಗಂಟೆ.** (4) ಆರ್ಥಿಕ ಬಿಡ್ ತೆರೆಯುವ ದಿನಾಂಕ : **18.05.2022 ಬೆಳಗ್ಗೆ 11.30 ಗಂಟೆ.** (5) ಕಾಲಾವಧಿ : **12 ತಿಂಗಳು.**
ಕ್ರ.ಸಂ : 1. ಒದಗಿಸಬೇಕಾಗಿರುವ ಸೇವೆ : **Selection and Empanelment of Implementation Support Agencies (NGOs/VOs/ SHGs) for providing services related to IEC & HRD activities under JalJeevan Mission (JJM) in rural areas under Rural Drinking Water & Sanitation Department For the 1st Year (INDENT NO.JJM/ISRA/SMGDVN 2021-22/CALL-2)** ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) : **171.36** ಇ.ಎಂ.ಡಿ ಮೊತ್ತ (ರೂ. ಗಳಲ್ಲಿ) : **257048.00** ಕಾಲಾವಧಿ : **12 ತಿಂಗಳು.** ಅರ್ಹ ದರ್ಜೆಯ ಗುತ್ತಿಗೆದಾರರು : **NGOs/VOs/ SHGs.**
Note:- Initially, contract shall for a period of One Year, it will be renewed / extended Yearly up to Maximum period for 2 years from the initial contract data subject to Satisfactory performance of the ISA.
The ceiling cost of the consultancy is as shown in the Summary of Costs. Payments will be made as per stipulations of the Special Conditions of Contract. The break-up of cost for each item is to facilitate assessment of reasonableness of costs and conducting negotiations in accordance with clause 6 of the Information to Consultants

ವಾ.ಸಾ.ಸಂ.ಇ./ಶಿ/ನಂ21–05
ಝೋಂಕಾರ್/2022–23
ಸಹಿ/– ಕಾರ್ಯಪಾಲಕ ಇಂಜಿನಿಯರ್,
ಗ್ರಾ.ಕು.ನೀ. ಮತ್ತು ನೈ. ವಿಭಾಗ, ಶಿವಮೊಗ್ಗ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ವಿಜಯನಗರ ವಿಭಾಗ,
3ನೇ ಮುಖ್ಯ ರಸ್ತೆ, 1ನೇ ಮಹಡಿ, ಶಾಸಕರ ಭವನ,
ವಿಜಯನಗರ, ಬೆಂಗಳೂರು–560040.
ಸಂಖ್ಯೆ: ಕಾಪಾಅ(ವಿನ)/ಸಅ/ಟೆಂಡರ್/01/2022–23 ದಿನಾಂಕ: 06/05/2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಏಕಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ವಿಜಯನಗರ), ಬೃಬೆಂಮಪಾಲಿಕೆ, ಬೆಂಗಳೂರು ಇವರು ಬೃಬೆಂಮಪಾಲಿಕೆ ಅಥವಾ ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ರೈಲ್ವೇಸ್/ಎಂಇಎಸ್ ಅಥವಾ ಯಾವುದಾದರೂ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮನಾದ ನೋಂದಣಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಪಟ್ಟಿಯಲ್ಲಿ ವಿವರಿಸಲಾದ ನಿರ್ಮಾಣ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್‌ದಾರರು ಕೆಳಗಿನ ಪಟ್ಟಿಯಲ್ಲಿರುವ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://eproc.karnataka.gov.in) ಮೂಲಕ ಸಲ್ಲಿಸಬೇಕು. ಗುತ್ತಿಗೆಯನ್ನು ಪಡೆಯಲು ಅರ್ಹರಾಗಲು ಟೆಂಡರ್‌ದಾರರಿಗೆ ಕಲಂ 3 ರಲ್ಲಿ ನಿಗದಿಪಡಿಸಲಾದ ಕನಿಷ್ಠ ಅರ್ಹತೆಯನ್ನು ಗಮನಿಸಬೇಕಾಗಿ ಸಲಹೆ ನೀಡಲಾಗಿದೆ (ಸ್ಟಾಂಡರ್ಡ್ ಬಿಡ್ ದಾಖಲಾತಿ ಕೆಡಬ್ಲ್ಯೂ–1 & 2)

ಪ್ರತಿ ಕೆಲಸಕ್ಕೆ ನಿಗದಿತ ಶುಲ್ಕದೊಂದಿಗೆ ಇಎಂಡಿಯನ್ನು ಟೆಂಡರ್‌ನೊಂದಿಗೆ ಲಗತ್ತಿಸಬೇಕು. ಟೆಂಡರ್ ದಾಖಲೆಯಲ್ಲಿ ಸೂಚಿಸಿರುವಂತೆ ಇಎಂಡಿಯು ಯಾವುದಾದರೂ ಒಂದು ರೂಪದಲ್ಲಿರಬೇಕು. ಹಾಗೂ ಟೆಂಡರ್‌ನ ನಿಗದಿತ ದಿನಾಂಕದಿಂದ 45 ದಿನಗಳವರೆಗೆ ಊರ್ಜಿತದಲ್ಲಿರಬೇಕು.

ಕ್ರ. ಸಂ.	ಕೆಲಸದ ಹೆಸರು	ಕೆಲಸದ ಅಂದಾಜು ಮೌಲ್ಯ (ರೂ.ಲಕ್ಷಗಳಲ್ಲಿ)
1.	ವಾರ್ಡ್ ಸಂಖ್ಯೆ 122 ರ ವ್ಯಾಪ್ತಿಯಲ್ಲಿರುವ ಕೊಳವೆಬಾವಿಗಳು ಮತ್ತು ನೀರು ಸರಬರಾಜು ಮಾರ್ಗಗಳ ವಾರ್ಷಿಕ ನಿರ್ವಹಣೆ (2ನೇ ಕರೆ). **ವರ್ಗ** : ಇತರೆ.	20.00 ಇಎಂಡಿ: ರೂ.50,000.00
2.	ವಾರ್ಡ್ ಸಂಖ್ಯೆ 122 ರ 24ನೇ ಅಡ್ಡರಸ್ತೆ, 7ನೇ ಎ ಮುಖ್ಯ ರಸ್ತೆಗೆ ಡಾಂಬರು ಒದಗಿಸುವುದು (2ನೇ ಕರೆ). **ವರ್ಗ** : ಪರಿಶಿಷ್ಟ ಪಂಗಡ.	20.00 ಇಎಂಡಿ: ರೂ.25,000.00
3.	ವಾರ್ಡ್ ಸಂಖ್ಯೆ 124 ರ 9ನೇ ಮುಖ್ಯ ರಸ್ತೆಯಿಂದ ಸರ್ಕಾರಿ ಓಣಿವರೆಗಿರುವ ರಸ್ತೆಗಳಿಗೆ ಡಾಂಬರು ಒದಗಿಸುವುದು (2ನೇ ಕರೆ). **ವರ್ಗ** : ಇತರೆ.	30.00 ಇಎಂಡಿ: ರೂ.60,000.00
4.	ವಾರ್ಡ್ ಸಂಖ್ಯೆ 124 ರಲ್ಲಿರುವ ಹೊಸಹಳ್ಳಿ ಗ್ರಾಮಕ್ಕೆ ಡಾಂಬರು ಒದಗಿಸುವುದು (2ನೇ ಕರೆ). **ವರ್ಗ** : ಇತರೆ.	30.00 ಇಎಂಡಿ: ರೂ.60,000.00
5.	ವಾರ್ಡ್ ಸಂಖ್ಯೆ 157 ರ ಕಸ್ತೂರಿನಗರ 1ನೇ ಹಾಗೂ 2ನೇ ಮುಖ್ಯ ರಸ್ತೆ ಮತ್ತು ಸುತ್ತಮುತ್ತ ಪ್ರದೇಶಗಳಲ್ಲಿ ಡಾಂಬರು ಒದಗಿಸುವುದು (3ನೇ ಕರೆ). **ವರ್ಗ** : ಇತರೆ.	50.00 ಇಎಂಡಿ: ರೂ.1,00,000.00
6.	ವಾರ್ಡ್ ಸಂಖ್ಯೆ 158 ರ ರಂಗನಾಥ ಕಾಲೋನಿ 1ನೇ ಮುಖ್ಯ ರಸ್ತೆ ಮತ್ತು ಸುತ್ತಮುತ್ತ ಪ್ರದೇಶಗಳಿಗೆ ಡಾಂಬರು ಒದಗಿಸುವುದು. (3ನೇ ಕರೆ). **ವರ್ಗ** : ಇತರೆ.	30.00 ಇಎಂಡಿ: ರೂ.60,000.00

ಟೆಂಡರ್ ದಾಖಲೆ ಬೆಲೆ (ಹಿಂದಿರುಗಿಸಲಾಗುವುದಿಲ್ಲ) : ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪ್ರಕಾರ. **ಪೂರ್ಣಗೊಳಿಸಲು ಕಾಲಾವಧಿ** : ಕ್ರಮ ಸಂಖ್ಯೆ 1 ಕ್ಕೆ – 365 ದಿನಗಳು. ಕ್ರಮ ಸಂಖ್ಯೆ : 2 ರಿಂದ 6 ಕ್ಕೆ – 90 ದಿನಗಳು. **ಟೆಂಡರ್ ಕಾರ್ಯಸೂಚಿ** : (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ದಿನಾಂಕ 12.05.2022 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮೂಲಕ 23/052022 ರಂದು 16.00 ಗಂಟೆ ಅಥವಾ ಮುಂಚಿತವಾಗಿ ಸಲ್ಲಿಸಬೇಕು. (3) ಏಕ ಲಕೋಟೆಯ ಪದ್ಧತಿಗೆ ಹಣಕಾಸು ಬಿಡ್‌ಗಳನ್ನು ವೆಬ್‌ಸೈಟ್ https://eproc.karnataka.gov.in ಮೂಲಕ 24/05/2022 ರಂದು 16.30 ಗಂಟೆಗೆ ಅಥವಾ ನಂತರ ಕಾರ್ಯಪಾಲಕ ಅಭಿಯಂತರರು (ವಿಜಯನಗರ) ಇವರ ಕಛೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು https://eproc.karnataka.gov.in ಮೂಲಕ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ವಿಜಯನಗರ ವಿಭಾಗ, ಬೆಂಗಳೂರು ಬೃಹತ್ ಮಹಾನಗರ ಪಾಲಿಕೆ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್,
ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐ.ಎಫ್.ಟಿ) ಸಂಖ್ಯೆ: 05/2022–23 ದಿನಾಂಕ: 04.05.2022

(ರಸ್ತೆ ಕಾಮಗಾರಿಗಾಗಿ–ಸ್ಟ್ಯಾಂಡರ್ಡ್ ಬಿಡ್ಡಿಂಗ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–3 ರ ದ್ವಿ–ಲಕೋಟೆ ಪದ್ಧತಿಯಲ್ಲಿ)

ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ **ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ** ದ್ವಿ–ಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳ ಟೆಂಡರ್‌ಗಳನ್ನು ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000ರ ಅನ್ವಯ ಈ ಕೆಳಗೆ ಸಹಿ ಮಾಡಿದವರು ಆಹ್ವಾನಿಸಿರುತ್ತಾರೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ದಿನಾಂಕ: **10.05.2022** ರಿಂದ **19.05.2022**ರ ಸಂಜೆ **4.00** ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. **(1)** ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕಡೆಯ ದಿನಾಂಕ: **10.05.2022 (ಮಧ್ಯಾಹ್ನ 3.00 ಗಂಟೆಗೆ ಕಛೇರಿ ವೇಳೆಯಲ್ಲಿ). (2)** ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ: **19.05.2022 (ಸಂಜೆ 4.00 ಗಂಟೆಯವರೆಗೆ). (3)** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **21.05.2022 ಬೆಳಿಗ್ಗೆ 11.00 ಗಂಟೆ. (4)** ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್ ತೆರೆಯುವ ದಿನಾಂಕ: **25.05.2022 ಬೆಳಿಗ್ಗೆ 11.00 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ **www.kpwd.gov.in** ವೆಬ್‌ಸೈಟ್‌ನ್ನು ಸಂಪರ್ಕಿಸಬಹುದು ಅಥವಾ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ54/ಎಂ.ಸಿ.ಎ/2022–23

ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

‘ಚಾರ್ಜಿಂಗ್ ಕೇಂದ್ರ ಆರಂಭಕ್ಕೆ ವಿಶೇಷ ಅಭಿಯಾನ’

ಮೈಸೂರು: ‘ವಿದ್ಯುತ್ ಚಾಲಿತ ವಾಹನಗಳ ಒಂದು ಸಾವಿರ ಚಾರ್ಜಿಂಗ್ ಕೇಂದ್ರಗಳನ್ನು ಜೂನ್ ಅಂತ್ಯಕ್ಕೆ ರಾಜ್ಯದಲ್ಲಿ ಸ್ಥಾಪಿಸಲಾಗುವುದು. ಅದಕ್ಕೆಂದೇ ವಿಶೇಷ ಅಭಿಯಾನ ಕೈಗೊಳ್ಳಲಾಗುವುದು’ ಎಂದು ಇಂಧನ ಸಚಿವ ವಿ.ಸುನಿಲ್ ಕುಮಾರ್ ತಿಳಿಸಿದರು.

ತಾಲ್ಲೂಕಿನ ಕಡಕೊಳ ಗ್ರಾಮದಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು (ಸೆಸ್ಕ್) ಶನಿವಾರ ಏರ್ಪಡಿಸಿದ್ದ ವಿದ್ಯುತ್ ಚಾಲಿತ ವಾಹನಗಳು ಮತ್ತು ಅದರ ಚಾರ್ಜಿಂಗ್ ತಂತ್ರಜ್ಞಾನಗಳ ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ‘ಎಲ್ಲಾ ಜಿಲ್ಲಾ ಕೇಂದ್ರಗಳು, ಪ್ರವಾಸಿ ತಾಣಗಳು, ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳು ಹಾಗೂ ಸರ್ಕಾರಿ ಕಚೇರಿಗಳಲ್ಲಿ ಚಾರ್ಜಿಂಗ್ ಕೇಂದ್ರ ಸ್ಥಾಪಿಸಲಾಗುವುದು’ ಎಂದರು.

‘ಕೆಟ್ಟಿರುವ ವಿದ್ಯುತ್ ಪರಿವರ್ತಕಗಳನ್ನು ಕೇವಲ 24 ಗಂಟೆಗಳಲ್ಲೇ ಬದಲಾಯಿಸುವ ಅಭಿಯಾನದಲ್ಲಿ ಶೇ 80 ರಷ್ಟು ಪ್ರಗತಿಯಾಗಿದೆ.ಸೆಸ್ಕ್ ವ್ಯಾಪ್ತಿಯಲ್ಲೆ 8,087 ವಿದ್ಯುತ್ ಪರಿವರ್ತಕಗಳನ್ನು ಬದಲಿಸಲಾಗಿದೆ’ ಎಂದು ಹೇಳಿದರು.

ವಚನ ಸಾಹಿತ್ಯಶ್ರೀ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಬೊಮ್ಮಾಯಿ ಹೇಳಿಕೆ

ಬಸವಣ್ಣನನ್ನು ದೇವರನ್ನಾಗಿಸಬೇಡಿ

ಪ್ರಜಾವಾಣಿ ವಾರ್ತೆ

ಬಸವ ವೇದಿಕೆ ವತಿಯಿಂದ ಬೀದರ್ ಜಿಲ್ಲೆಯ ಬಸವಸೇವಾ ಪ್ರತಿಷ್ಠಾನದ ಗಂಗಾಂಬಿಕಾ ಅವರಿಗೆ ‘ವಚನ ಸಾಹಿತ್ಯಶ್ರೀ ಪ್ರಶಸ್ತಿ’ ಹಾಗೂ ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ ವಿಶ್ವವಿದ್ಯಾಲಯದ ಕುಲಪತಿ ಎಚ್.ಆರ್.ನಾಗೇಂದ್ರ ಅವರಿಗೆ ‘ಬಸವಶ್ರೀ ಪ್ರಶಸ್ತಿ’ ಪ್ರದಾನ ಮಾಡಲಾಯಿತು.ವೇದಿಕೆ ಅಧ್ಯಕ್ಷ ಸಿ.ಸೋಮಶೇಖರ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಚಿವ ವಿ.ಸೋಮಣ್ಣ, ಉದ್ಯಮಿ ಎಸ್.ಷಡಕ್ಷರಿ ಇದ್ದಾರೆ –ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಬಸವಣ್ಣನವರು ಕಾಯಕದಲ್ಲೇ ಸ್ವರ್ಗ ಕಾಣುವ, ಸಮಾನತೆ, ಸಮಾನ ಅವಕಾಶಗಳನ್ನು ಒದಗಿಸುವ ಸಮಾಜ ಬಯಸಿದ್ದರು. ನಮ್ಮ ಸರ್ಕಾರವೂ ಬಸವಪಥದಲ್ಲೇ ಮುನ್ನಡೆಯುತ್ತಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬಸವ ವೇದಿಕೆ ವತಿಯಿಂದ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಬಸವ ಜಯಂತಿ, ರಜತ ಮಹೋತ್ಸವ ಮತ್ತು ‘ಬಸವಶ್ರೀ’, ವಚನ ಸಾಹಿತ್ಯಶ್ರೀ ಪ್ರಶಸ್ತಿಗಳ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಸರ್ಕಾರ ಜನರಿಗೆ ದುಡಿಯುವ ಅವಕಾಶಗಳನ್ನು ಕಲ್ಪಿಸುತ್ತಿದೆ. ಆರ್ಥಿಕತೆ ಎಂದರೆ ದುಡ್ಡಲ್ಲ. ಅದು ಜನರ ದುಡಿಮೆ. ದೇಶವನ್ನು ರೈತರು ಮತ್ತು ಕಾರ್ಮಿಕರು ಕಟ್ಟುತ್ತಿದ್ದಾರೆ. ಕರ್ತವ್ಯಕ್ಕೂ ಕಾಯಕಕ್ಕೂ ವ್ಯತ್ಯಾಸವಿಲ್ಲ. ಕಾಯಕವನ್ನು ನಿಷ್ಠೆಯಿಂದ ಮಾಡಿದರೆ ಅದೇ ಸ್ವರ್ಗ ಎಂಬ ಬಸವಣ್ಣನವರ ತತ್ವ ಪಾಲಿಸಲಾಗುತ್ತಿದೆ’ ಎಂದರು.

‘ಇಂದಿನ ಎಲ್ಲ ಸಮಸ್ಯೆಗಳಿಗೂ ಬಸವಣ್ಣ ತನ್ನ ವಚನಗಳಲ್ಲಿ ಪರಿಹಾರ ನೀಡಿದ್ದಾರೆ. ಆದರೆ, ಆ ವಚನಗಳನ್ನು ಪಾಲಿಸುವಲ್ಲಿ ನಾವೆಲ್ಲ ಎಷ್ಟರ ಮಟ್ಟಿಗೆ ಹಿಂದುಳಿದಿದ್ದೇವೆ ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕು. ಬಸವಣ್ಣನವರು ನಮ್ಮಂತೆ ಮನುಷ್ಯರಾಗಿಯೇ ಹುಟ್ಟಿದ್ದು, ಅವರನ್ನು ದೇವರನ್ನಾಗಿ ಮಾಡಬೇಡಿ. ಒಬ್ಬ ಸಾಮಾನ್ಯ ಸನ್ಮಾರ್ಗದಲ್ಲಿ ನಡೆದರೆ ದೇವಮಾನವ ಆಗಬಲ್ಲ ಎಂದು ತೋರಿಸಿರುವ ಬಸವಣ್ಣನವರು ಈಗಾಗಲೇ ದೇವರ ಸ್ಥಾನದಲ್ಲಿದ್ದಾರೆ’ ಎಂದರು.

ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ,‘ದೇಶದಲ್ಲಿ ಈಗ ಎಲ್ಲವನ್ನೂ ವಿರೋಧಿಸುವ ಬಣ ಹುಟ್ಟಿಕೊಂಡಿದೆ. ಪ್ರಧಾನಿ ಮೋದಿ ಅವರನ್ನು ವಿರೋಧಿಸುವ ಭರದಲ್ಲಿ ಸಾಧನೆಯನ್ನು ವಿರೋಧಿಸುತ್ತಿದ್ದಾರೆ. ಅಭಿವೃದ್ಧಿ ಕಾರ್ಯಗಳನ್ನು ಸ್ವಾಗತಿಸಬೇಕು’ ಎಂದರು.

ಮೈಸೂರಿನ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ‘ಬಸವಣ್ಣನವರು ತಮ್ಮ ಬದುಕನ್ನೇ ಪ್ರಯೋಗಶಾಲೆಯಂತೆ ಮಾಡಿಕೊಂಡಿದ್ದರು. ಈಗಿನ ಸಮಾಜ ಅವರ ಆದರ್ಶಗಳನ್ನು ಪಾಲಿಸಿದ್ದರೆ ಇಂದು ರಷ್ಯಾ–ಉಕ್ರೇನ್ ಯುದ್ಧ ನಡೆಯುತ್ತಿರಲಿಲ್ಲ’ ಎಂದರು.

ಬಸವ ವೇದಿಕೆ ಅಧ್ಯಕ್ಷ ಸಿ.ಸೋಮಶೇಖರ್, ವಿಧಾನಸೌಧದ ಮೇಲೆ ‘ಸರ್ಕಾರದ ಕೆಲಸ ದೇವರ ಕೆಲಸ’ ಎಂದು ಬರೆಯಲಾಗಿದೆ. ಅದೇ ರೀತಿ ಬೆಳಗಾವಿಯ ಸುವರ್ಣ ವಿಧಾನಸೌಧದ ಮೇಲೆ ಕಾಯಕವೇ ಕೈಲಾಸ ಎಂದು ಬರೆಸಬೇಕು’ ಎಂದು ಮನವಿ ಮಾಡಿದರು.

‘ಕೋವಿಡ್ ಸಾವಿನ ಮರು ಎಣಿಕೆಯಿಂದ ನ್ಯಾಯ ಸಾಧ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್‌ನಿಂದ ಸತ್ತವರಿಗೆ ಪರಿಹಾರ ಕೊಡುವುದನ್ನು ತಪ್ಪಿಸಲು ಕೇಂದ್ರ ಬಿಜೆಪಿ ಸರ್ಕಾರ ಸಾವಿನ ಸುಳ್ಳು ಲೆಕ್ಕ ಹೇಳಿ ಮೋಸ ಮಾಡಿದೆ. ಹೀಗಾಗಿ ಲಕ್ಷಾಂತರ ಕುಟುಂಬಗಳಿಗೆ ಪರಿಹಾರ ಸಿಕ್ಕಿಲ್ಲ. ಸಾವಿನ ಮರುಎಣಿಕೆಯಿಂದ ಮಾತ್ರ ನ್ಯಾಯ ಸಿಗಲು ಸಾಧ್ಯ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

ಸರಣಿ ಟ್ವೀಟ್ ಮಾಡಿರುವ ಅವರು, ‘ಕೇಂದ್ರ ಸರ್ಕಾರದ ಪ್ರಕಾರ ಕೋವಿಡ್‌ನಿಂದ ಸತ್ತವರ ಸಂಖ್ಯೆ 4.81 ಲಕ್ಷ. ಡಬ್ಲ್ಯುಎಚ್ಒ ಪ್ರಕಾರ 47.40 ಲಕ್ಷ. ಕೇಂದ್ರದ ಸುಳ್ಳುಗಳ ಸರಮಾಲೆಯನ್ನು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್ಒ) ಬಯಲುಗೊಳಿಸಿದೆ’ ಎಂದಿದ್ದಾರೆ.

‘ರಾಜ್ಯದಲ್ಲಿ ಕೋವಿಡ್‌ನಿಂದ ಸತ್ತವರು ಕೇವಲ 37,603 ಎಂದು ರಾಜ್ಯ ಸರ್ಕಾರ ಹೇಳಿತ್ತು. ಕೆಪಿಸಿಸಿ ಸಮೀಕ್ಷೆ ಪ್ರಕಾರ 3.17 ಲಕ್ಷ. ಅರವಿಂದ್ ಸುಬ್ರಹ್ಮಣ್ಯ ಮತ್ತು ಜೇಕಬ್ ಝಾ ಪ್ರಕಾರ ಸಾವಿನ ಸಂಖ್ಯೆ 4 ಲಕ್ಷ. ಕಳೆದ ಜೂನ್‌ನಲ್ಲಿಯೇ ಈ ವಿಷಯ ಹೇಳಿದ್ದೆ. ರಾಜ್ಯದಲ್ಲಿ ಈವರೆಗೆ 5 ಲಕ್ಷಕ್ಕೂ ಹೆಚ್ಚು ಮಂದಿ ಸಾವಿಗೀಡಾಗಿರುವ ಸಾಧ್ಯತೆ ಇದೆ. ಮರು ಸಮೀಕ್ಷೆ ಮೂಲಕ ಖಚಿತಪಡಿಸಿಕೊಂಡು ಮೃತರ ಕುಟುಂಬಕ್ಕೆ ಕನಿಷ್ಠ ₹4 ಲಕ್ಷ ಪರಿಹಾರ ಕೊಡಬೇಕು’ ಎಂದು ಆಗ್ರಹಿಸಿದ್ದಾರೆ.

ಉಗ್ರರ ದಾಳಿ: ಕಾನ್‌ಸ್ಟೆಬಲ್‌ಗೆ ಗಾಯ

ಶ್ರೀನಗರ: ಇಲ್ಲಿನ ಸಫಕದಲ್ ಪ್ರದೇಶದ ಐವಾ ಸೇತುವೆ ಬಳಿ ಶನಿವಾರ ಉಗ್ರರು ನಡೆಸಿದ ಗುಂಡಿನ ದಾಳಿಯಲ್ಲಿ ಜಮ್ಮು–ಕಾಶ್ಮೀರ ಪೊಲೀಸ್ ಕಾನ್‌ಸ್ಟೆಬಲ್ ಒಬ್ಬರು ತೀವ್ರವಾಗಿ ಗಾಯಗೊಂಡಿದ್ದಾರೆ.

ಗುಲಾಂ ಹಸನ್ ದಾರ್ ಗಾಯಗೊಂಡ ಕಾನ್‌ಸ್ಟೆಬಲ್.

‘ಬೆಳಿಗ್ಗೆ 8.40 ಸುಮಾರಿಗೆ ಗುಲಾಂ ಹಸನ್ ಅವರು ಬೈಕ್‌ನಲ್ಲಿ ತೆರಳುತ್ತಿದ್ದಾಗ ಅವರ ಮೇಲೆ ಉಗ್ರರ ಗುಂಡಿನ ದಾಳಿ ನಡೆಸಿದ್ದಾರೆ. ತಕ್ಷಣ ಅವರನ್ನು ಹತ್ತಿರದ ಆಸ್ಪತ್ರೆಗೆ ಸೇರಿಸಲಾಗಿದೆ.

ದಾಳಿ ನಡೆದ ಪ್ರದೇಶವನ್ನು ಭದ್ರತಾ ಪಡೆಗಳು ಸುತ್ತುವರಿದಿದ್ದು, ದಾಳಿಕೋರರ ವಿರುದ್ಧ ಕಾರ್ಯಾಚರಣೆ ಆರಂಭಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಪೊಲೀಸ್ ನೇಮಕಾತಿ ವಿಭಾಗ: 12 ಮಂದಿ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್ಐ ನೇಮಕಾತಿಯಲ್ಲಿ ನಡೆದಿರುವ ಅಕ್ರಮದ ತನಿಖೆಯನ್ನು ಸಿಐಡಿ ಚುರುಕುಗೊಳಿಸಿದ್ದು, ಇದರ ಬೆನ್ನಲ್ಲೇ ಪೊಲೀಸ್ ನೇಮಕಾತಿ ವಿಭಾಗದ 12 ಸಿಬ್ಬಂದಿಯನ್ನು ದಿಢೀರ್ ವರ್ಗಾವಣೆ ಮಾಡಲಾಗಿದೆ.

ನೇಮಕಾತಿ ವಿಭಾಗದ ಎಡಿಜಿಪಿ ಅಮ್ರಿತ್ ಪೌಲ್ ಹಾಗೂ ಡಿವೈಎಸ್ಪಿ ಶಾಂತಕುಮಾರ್ ಅವರನ್ನು ಈ ಹಿಂದೆಯೇ ರಾಜ್ಯ ಸರ್ಕಾರ ವರ್ಗಾವಣೆ ಮಾಡಿತ್ತು. ಇದೀಗ ಸಿಬ್ಬಂದಿಯನ್ನು ವರ್ಗಾವಣೆ ಮಾಡಿ, ವಿಭಾಗದ ಎಡಿಜಿಪಿ ಹಿತೇಂದ್ರ ಅವರು ಆದೇಶ ಹೊರಡಿಸಿದ್ದಾರೆ. ಖಾಲಿಯಾದ ಹುದ್ದೆಗಳಿಗೆ ಹೊಸ ಸಿಬ್ಬಂದಿ ನಿಯೋಜನೆ ಆಗಬೇಕಿದೆ.

‘ನೇಮಕಾತಿ ವಿಭಾಗದಲ್ಲಿ 17 ಸಿಬ್ಬಂದಿ ಇದ್ದರು. ಅದರಲ್ಲಿ 12 ಸಿಬ್ಬಂದಿ ವರ್ಗಾವಣೆ ಮಾಡಲಾಗಿದ್ದು, 5 ಸಿಬ್ಬಂದಿ ಉಳಿದಿದ್ದಾರೆ’ ಎಂದು ಮೂಲಗಳು ಹೇಳಿವೆ.

ಪೊಲೀಸ್ ನೇಮಕಾತಿ ವಿಭಾಗದಿಂದಲೇ ಪಿಎಸ್ಐ ನೇಮಕ ಪ್ರಕ್ರಿಯೆ ನಡೆಸಲಾಗಿತ್ತು. ಇದೇ ನೇಮಕದಲ್ಲಿ ಅಕ್ರಮ ನುಸುಳಿದ್ದು, ಅಧಿಕಾರಿಗಳು ಹಾಗೂ ಸಿಬ್ಬಂದಿ ಮೇಲೂ ಸಿಐಡಿಗೆ ಅನುಮಾನವಿದೆ.

‘ಗೋವುಗಳ ಸಮಸ್ಯೆಗೆ ಪರಿಹಾರ ಸಿಕ್ಕಿದೆ’

ಪ್ರಜಾವಾಣಿ ವಾರ್ತೆ

ಸಂಚಾರಿ ಪಶು ಚಿಕಿತ್ಸಾಲಯಕ್ಕೆ ಚಾಲನೆ ನೀಡುವ ಸಮಾರಂಭದ ವೇಳೆ ವಿಧಾನಸೌಧದ ಆವರಣದಲ್ಲಿ ಶನಿವಾರ ಕಂಡ ಪಶು ಚಿಕಿತ್ಸಾ ವಾಹನ ಮತ್ತು ಗೋವು – ಪ್ರಜಾವಾಣಿ ಚಿತ್ರ

ಬೆಂಗಳೂರು: ವಯಸ್ಸಾದ ಗೋವುಗಳ ರಕ್ಷಣೆ ಮತ್ತು ಆರೈಕೆಯ ಸಮಸ್ಯೆಗೆ ವಿವಿಧ ಯೋಜನೆಗಳ ಮೂಲಕ ರಾಜ್ಯ ಸರ್ಕಾರ ಪರಿಹಾರ ಹುಡುಕಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಪಶು ವೈದ್ಯಕೀಯ ಸೇವಾ ಇಲಾಖೆ ವತಿಯಿಂದ ಶನಿವಾರ ಆಯೋಜಿಸಿದ್ದ ಸಮಾರಂಭದಲ್ಲಿ ಇಲಾಖೆಯ ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಸೌಲಭ್ಯ ವಿತರಣೆಗೆ ಚಾಲನೆ ನೀಡಿ ಅವರು ಮಾತನಾಡಿದರು.

‘ಗೋ ಹತ್ಯೆ ನಿಷೇಧ ಕಾನೂನನ್ನು ನಮ್ಮ ಸರ್ಕಾರ ಬಿಗಿಗೊಳಿಸಿದೆ. ಕಾಯ್ದೆ ತಿದ್ದುಪಡಿಗೆ ಮುಂದಾದಾಗ ಕೆಲವರು ಗೋವುಗಳ ಕುರಿತು ಕೀಳಾಗಿ ಮಾತನಾಡಿದರು. ವಯಸ್ಸಾದ ಗೋವುಗಳನ್ನು ಯಾರು ಸಾಕುತ್ತಾರೆ ಎಂದು ಪ್ರಶ್ನಿಸಿದ್ದರು. ಗೋವುಗಳನ್ನು ದತ್ತು ತೆಗೆದುಕೊಳ್ಳುವ ಪುಣ್ಯಕೋಟಿ ಯೋಜನೆ, ಸರ್ಕಾರಿ ಪ್ರಾಯೋಜಿತ ಗೋಶಾಲೆಗಳ ಸ್ಥಾಪನೆಯಿಂದ ಈ ಸಮಸ್ಯೆಗೆ ಪರಿಹಾರ ಸಿಕ್ಕಿದೆ’ ಎಂದರು.

‘ಭಾರತೀಯ ಸಂಸ್ಕೃತಿ ಜೀವ ಉಳಿಸುವುದರ ಪರವಾಗಿದೆ. ಹತ್ಯೆ ಮಾಡುವುದರ ಪರವಾಗಿ ಇಲ್ಲ. 75 ವರ್ಷಗಳ ಕಾಲ ನೀವು ಸಮಸ್ಯೆಗಳನ್ನೇ ಸೃಷ್ಟಿಸಿದ್ದೀರಿ. ಇನ್ನೂ ಅದನ್ನೇ ಮಾಡಬೇಡಿ. ಸಮಸ್ಯೆಗಳನ್ನು ಹೇಗೆ ಪರಿಹರಿಸಬೇಕು ಎಂಬುದನ್ನು ನಾವು ತೋರಿಸುತ್ತೇವೆ’ ಎಂದು ಗೋಹತ್ಯೆ ನಿಷೇಧ ಕಾಯ್ದೆ ವಿರೋಧಿಸುವವರ ವಿರುದ್ಧ ಮುಖ್ಯಮಂತ್ರಿ ವಾಗ್ದಾಳಿ ನಡೆಸಿದರು.

ತಳಿ ಸಂವರ್ಧನೆಗೆ ನೆರವು: ಕೇಂದ್ರ ಪಶುಸಂಗೋಪನಾ ಸಚಿವ ಪುರುಷೋತ್ತಮ್ ರೂಪಾಲಾ ಮಾತನಾಡಿ, ‘ಜಾನುವಾರು ಅಭಿವೃದ್ಧಿ ಮತ್ತು ಸಂರಕ್ಷಣೆ ವಿಚಾರದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಚಿಂತನೆಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ಕರ್ನಾಟಕದಲ್ಲಿ ಜಾನುವಾರುಗಳ ಕೃತಕ ವೀರ್ಯಾಣು ಸಂಗ್ರಹ ಕೇಂದ್ರವನ್ನು ಮೇಲ್ದರ್ಜೆಗೇರಿಸಲು ಶೀಘ್ರವಾಗಿ ಒಪ್ಪಿಗೆ ನೀಡಲಾಗುವುದು’ ಎಂದು ಭರವಸೆ ನೀಡಿದರು.

ವಿಮೆ ಹೆಚ್ಚಳಕ್ಕೆ ಬೇಡಿಕೆ: ಪ್ರಾಸ್ತಾವಿಕವಾಗಿ ಮಾತನಾಡಿದ ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣ್, ‘ಜಾನುವಾರುಗಳ ರಕ್ಷಣೆ, ಆರೈಕೆ ಮತ್ತು ಸಾಕಣೆಗೆ ನೆರವು ನೀಡುವ ವಿಚಾರದಲ್ಲಿ ಸರ್ಕಾರ ಸಾಕಷ್ಟು ಕ್ರಮಗಳನ್ನು ಕೈಗೊಂಡಿದೆ. ಇಲ್ಲಿನ ರೈತರಿಗೆ ಅನುಕೂಲವಾಗುವಂತೆ ಜಾನುವಾರುಗಳ ಜೀವವಿಮೆ ಸೌಲಭ್ಯವನ್ನು ಹೆಚ್ಚಳ ಮಾಡಬೇಕು ಎಂದು ಒತ್ತಾಯಿಸಿದರು.

ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷ ಶರಣು ಬಿ. ತಳ್ಳಿಕೇರಿ, ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳದ ಅಧ್ಯಕ್ಷ ಡಿ.ಕೆ. ಕಾಂತರಾಜ, ಪಶು ಸಂಗೋಪನಾ ಇಲಾಖೆ ಕಾರ್ಯದರ್ಶಿ ಸಲ್ಮಾ ಕೆ. ಫಾಹಿಂ, ಆಯುಕ್ತ ಡಾ.ಎಚ್. ಬಸವರಾಜೇಂದ್ರ, ನಿರ್ದೇಶಕ ಡಾ. ಮಂಜುನಾಥ್ ಎಸ್. ಪಾಳೇಗಾರ್ ಉಪಸ್ಥಿತರಿದ್ದರು.

ಹುದ್ದೆ ಭರ್ತಿಗೆ ಒಪ್ಪಿಗೆ

‘ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿ 400 ಪಶು ವೈದ್ಯರ ಹುದ್ದೆ ಭರ್ತಿಗೆ ಒಪ್ಪಿಗೆ ನೀಡಲಾಗಿತ್ತು. ಈಗ 250 ಪಶುವೈದ್ಯಕೀಯ ಡಿಪ್ಲೊಮಾ ಪದವೀಧರರ ನೇಮಕಾತಿಗೂ ಒಪ್ಪಿಗೆ ನೀಡಲಾಗಿದೆ. ಶೀಘ್ರದಲ್ಲಿ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ತಗ್ಗಿಸಲಾಗುವುದು’ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದರು.

ಮನೆ ಬಾಗಿಲಿಗೆ ಪಶು ಚಿಕಿತ್ಸಾಲಯ

ಬೆಂಗಳೂರು: ಚಿಕಿತ್ಸೆ, ಕೃತಕ ಗರ್ಭಧಾರಣೆಯಂತಹ ಕೆಲಸಗಳಿಗೆ ರೈತರು ತಮ್ಮ ಜಾನುವಾರುಗಳನ್ನು ಪಶು ಚಿಕಿತ್ಸಾಲಯಕ್ಕೋ, ಪಶುವೈದ್ಯ ಆಸ್ಪತ್ರೆಗಳಿಗೋ ಕೊಂಡೊಯ್ಯಬೇಕಿಲ್ಲ. ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಸಹಾಯವಾಣಿಗೆ ಕರೆ ಮಾಡಿದರೆ ಸಾಕು. ಪಶು ವೈದ್ಯರು, ತಜ್ಞ ಸಿಬ್ಬಂದಿ, ಉಪಕರಣ, ಔಷಧಿಯನ್ನು ಹೊತ್ತ ಸಂಚಾರಿ ಚಿಕಿತ್ಸಾಲಯವೇ ಮನೆ ಬಾಗಿಲಿಗೆ ಬರಲಿದೆ.

ರಾಷ್ಟ್ರೀಯ ಜಾನುವಾರು ಆರೋಗ್ಯ ಮತ್ತು ರೋಗ ನಿಯಂತ್ರಣ ಯೋಜನೆ ಅಡಿಯಲ್ಲಿ ಕೇಂದ್ರ ಸರ್ಕಾರದ ಸಂಪೂರ್ಣ ನೆರವಿನಲ್ಲಿ ಸಂಚಾರಿ ಪಶು ಚಿಕಿತ್ಸಾಲಯಗಳ ಸೇವೆ ಒದಗಿಸಲಾಗುತ್ತಿದೆ. ₹ 44 ಕೋಟಿ ವೆಚ್ಚದಲ್ಲಿ ರಾಜ್ಯದಾದ್ಯಂತ 275 ಸಂಚಾರ ಪಶು ಚಿಕಿತ್ಸಾಲಯಗಳನ್ನು ಸೇವೆಗೆ ಒದಗಿಸಲಾಗುತ್ತಿದೆ. ಆರಂಭಿಕ ಹಂತದಲ್ಲಿ 70 ಸಂಚಾರಿ ಪಶು ಚಿಕಿತ್ಸಾಲಯಗಳಿಗೆ ಶನಿವಾರ ಚಾಲನೆ ನೀಡಲಾಯಿತು.

ಯಾವ ಜಿಲ್ಲೆಗಳಲ್ಲಿ ಲಭ್ಯ

ಜಿಲ್ಲೆ	ಸಂಚಾರಿ ಪಶು ಚಿಕಿತ್ಸಾಲಯಗಳ ಸಂಖ್ಯೆ
ಬೆಂಗಳೂರು ನಗರ	03
ಬೆಂಗಳೂರು ಗ್ರಾಮಾಂತರ	04
ಚಿಕ್ಕಬಳ್ಳಾಪುರ	10
ಚಿತ್ರದುರ್ಗ	10
ದಾವಣಗೆರೆ	06
ಕೋಲಾರ	08
ದಕ್ಷಿಣ ಕನ್ನಡ	02
ಹಾಸನ	09
ಕೊಡಗು	01
ಮೈಸೂರು	09
ಮಂಡ್ಯ	08

ವಿಧಾನಸೌಧದ ಮುಂಭಾಗ ಶನಿವಾರ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವ ಪುರುಷೋತ್ತಮ್ ರೂಪಾಲಾ, ರಾಜ್ಯದ ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣ್ ಮತ್ತು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಸಂಚಾರಿ ಪಶು ಚಿಕಿತ್ಸಾಲಯಗಳಿಗೆ ಚಾಲನೆ ನೀಡಿದರು.

ಏನೇನು ಸೌಲಭ್ಯಗಳಿವೆ?: ಸುಸಜ್ಜಿತ ವಾಹನಗಳನ್ನು ಸಂಚಾರಿ ಪಶು ಚಿಕಿತ್ಸಾಲಯಗಳನ್ನಾಗಿ ಪರಿವರ್ತಿಸಲಾಗಿದೆ. ಅದರಲ್ಲಿ ಒಬ್ಬ ಪಶುವೈದ್ಯರು, ಒಬ್ಬ ಪಶು ವೈದ್ಯಕೀಯ ಸಹಾಯಕ, ಒಬ್ಬ ‘ಡಿ’ ದರ್ಜೆ ನೌಕರ ಮತ್ತು ಚಾಲಕ ಇರುತ್ತಾರೆ.

ಹವಾನಿಯಂತ್ರಣ ವ್ಯವಸ್ಥೆ, ಫ್ಯಾನ್, ಬಿಸಿ ನೀರು ಕಾಯಿಸಲು ಗೀಸರ್, ಪ್ರಾಣಿಗಳ ದೇಹದ ತೂಕ ಮಾಪನಕ್ಕೆ ಯಂತ್ರ, ವೈದ್ಯಕೀಯ ಪರಿಕರಗಳನ್ನು ಇರಿಸುವ ಪೆಟ್ಟಿಗೆ, ಔಷಧಿಗಳನ್ನು ಇರಿಸಲು ಫ್ರಿಡ್ಜ್, ಸಿಬ್ಬಂದಿ ಕುಳಿತುಕೊಳ್ಳಲು ಆಸನದ ವ್ಯವಸ್ಥೆ ಮಾಡಲಾಗಿದೆ. ಸಣ್ಣ ಪ್ರಾಣಿಗಳನ್ನು ವಾಹನದೊಳಕ್ಕೆ ಹತ್ತಿಸಿ, ಅಲ್ಲಿಯೇ ಮಲಗಿಸಿ ಚಿಕಿತ್ಸೆ ನೀಡಲು ಸ್ಥಳಾವಕಾಶವಿದೆ.

ಮುಖ್ಯಮಂತ್ರಿ ಬದಲಾವಣೆ ಇಲ್ಲ: ಪ್ರಲ್ಹಾದ ಜೋಶಿ ಹೇಳಿಕೆ

‘ಹಣ ನೀಡಿ ಸಿ.ಎಂ ಸ್ಥಾನ ಪಡೆಯುವ ವ್ಯವಸ್ಥೆ ಬಿಜೆಪಿಯಲ್ಲಿ ಇಲ್ಲ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಹಣ ನೀಡಿ ಮುಖ್ಯಮಂತ್ರಿ ಸ್ಥಾನ ಪಡೆಯುವ ಪದ್ಧತಿ ಕಾಂಗ್ರೆಸ್‌ನಲ್ಲಿದೆ. ಬಿಜೆಪಿಯಲ್ಲಿ ಈ ವ್ಯವಸ್ಥೆ ಇಲ್ಲ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದ್ದಾರೆ. ಹೀಗಾಗಿ, ಈ ವಿಚಾರದಲ್ಲಿ ವಿವಾದ ಮುಂದುವರಿಸುವುದು ಅನಗತ್ಯ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಯಾರೋ ಮಧ್ಯವರ್ತಿಗಳು ಭೇಟಿ ಮಾಡಿಸುತ್ತೇನೆ ಎಂದು ಹೇಳಿದ್ದರು. ಅದನ್ನು ನಾನು ನಿರಾಕರಿಸಿದ್ದೆ ಎಂದು ಯತ್ನಾಳ ಸ್ಪಷ್ಟಪಡಿಸಿದ್ದಾರೆ’ ಎಂದರು.

‘ಪಿಎಸ್ಐ ವಿಚಾರದಲ್ಲಿ ಯಾವುದೇ ತನಿಖಾ ಸಂಸ್ಥೆಯಿಂದ ತನಿಖೆ ಮಾಡುವುದು ಬೇಡ ಎಂದು ಕಾಂಗ್ರೆಸ್ ಮುಖಂಡರು ಹೇಳುತ್ತಿದ್ದಾರೆ. ಕಾಂಗ್ರೆಸ್‌ನ ಬ್ಲಾಕ್ ಸಮಿತಿ ಅಧ್ಯಕ್ಷ ಸೇರಿದಂತೆ ಹಲವರು ಶಾಮೀಲಾಗಿದ್ದಾರೆ. ಅವರನ್ನು ರಕ್ಷಣೆ ಮಾಡುವ ಉದ್ದೇಶದಿಂದ ನ್ಯಾಯಾಂಗ ತನಿಖೆಗೆ ಒತ್ತಾಯಿಸುತ್ತಿದ್ದಾರೆ. ನ್ಯಾಯಾಂಗ ತನಿಖೆ ಮಾಡಿದರೆ ಬಂಧನವಾಗುವುದಿಲ್ಲ. ಹೆಚ್ಚು ಸಮಯ ಆಗುತ್ತದೆ ಎನ್ನುವುದು ಕಾಂಗ್ರೆಸ್‌ನವರ ಲೆಕ್ಕಾಚಾರವಾಗಿದೆ’ ಎಂದರು.

‘ಯತ್ನಾಳ ವಿರುದ್ಧ ಶೀಘ್ರ ಕ್ರಮ’ (ಶಿವಮೊಗ್ಗ ವರದಿ): ‘ಮುಖ್ಯಮಂತ್ರಿ ಸ್ಥಾನಕ್ಕೆ ₹ 2,500 ಕೋಟಿ ನೀಡುವಂತೆ ಕೇಂದ್ರದ ನಾಯಕರೇ ಕೇಳಿದ್ದರು ಎಂಬ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಹೇಳಿಕೆ ಪಕ್ಷಕ್ಕೆ ಮುಜುಗರ ತಂದಿದೆ. ಹೇಳಿಕೆಯನ್ನು ರಾಜ್ಯ, ರಾಷ್ಟ್ರೀಯ ನಾಯಕರು ಗಂಭೀರವಾಗಿ ತೆಗೆದುಕೊಂಡಿದ್ದಾರೆ. ಪಕ್ಷದ ಹೈಕಮಾಂಡ್ ಯತ್ನಾಳ್ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಲಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಹೇಳಿದರು.

‘ಆರೋಪಕ್ಕೆ ದಾಖಲೆ ಕೊಡಲಿ’

ಬೆಂಗಳೂರು: ಆರೋಪ ಮಾಡುವವರು ಆಧಾರವಿಲ್ಲದೇ ಮಾತನಾಡಬಾರದು. ಯಾರು ಏನು ಬೇಕಾದರೂ ಹೇಳಿಕೆ ಕೊಡಲಿ. ಆದರೆ, ಆರೋಪಕ್ಕೆ ಪೂರಕವಾದ ದಾಖಲೆಗಳನ್ನು ನೀಡಲಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ‘ಆರೋಪಕ್ಕೆ ತಕ್ಕ ದಾಖಲೆಗಳನ್ನು ನೀಡುವುದು ಹೇಳಿಕೆ ಕೊಡುವವರ ಕರ್ತವ್ಯ. ಆಗ ದಾಖಲೆಗಳ ಆಧಾರದಲ್ಲಿ ತನಿಖೆ ನಡೆಸುತ್ತೇವೆ’ ಎಂದರು.

ಪಿಎಸ್ಐ ನೇಮಕಾತಿ ಅಕ್ರಮದಲ್ಲಿ ಪ್ರಭಾವಿಗಳ ಪಾತ್ರ ಇದೆ ಎಂಬ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ‘ಕುಮಾರಸ್ವಾಮಿ ಕೂಡ ದಾಖಲೆಗಳನ್ನು ಒದಗಿಸಿದರೆ ಆ ಬಗ್ಗೆ ತನಿಖೆ ನಡೆಸುತ್ತೇವೆ’ ಎಂದರು.

‘ವಿಧಾನಸೌಧ ವ್ಯಾಪಾರ ಸೌಧ ಆಗಿದೆ’ ಎಂಬ ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಅವರ ಟ್ವೀಟ್ ಕುರಿತು ಕೇಳಿದಾಗ, ‘ಕಾಂಗ್ರೆಸ್ ಪಕ್ಷ ಭ್ರಷ್ಟಾಚಾರದ ಗಂಗೋತ್ರಿ. ಖರ್ಗೆ ಮೂಲ ಕಾಂಗ್ರೆಸ್ಸಿಗರು. ಅವರಿಗೆ ಇದೆಲ್ಲ ಕರಗತ ಆಗಿದೆ. ಖರ್ಗೆಯವರಿಂದ ಪಾಠ ಕಲಿಯುವ ಅಗತ್ಯವಿಲ್ಲ’ ಎಂದು ಹೇಳಿದರು.

ಯತ್ನಾಳ ವಿಚಾರಣೆ ನಂತರ ಪ್ರಿಯಾಂಕ್ ತನಿಖೆಗೆ ಹಾಜರು: ಡಿ.ಕೆ.ಶಿವಕುಮಾರ

ಪ್ರಜಾವಾಣಿ ವಾರ್ತೆ

ಧಾರವಾಡ: ‘ಬಿಜೆಪಿ ಶಾಸಕ ಬಸವನಗೌಡ ಪಾಟೀಲ ಯತ್ನಾಳ್ ಅವರು ಮಾಡಿರುವ ₹2,500 ಕೋಟಿ ಬೇಡಿಕೆ ಆರೋಪ ಕುರಿತಂತೆ ಮೊದಲು ವಿಚಾರಣೆ ನಡೆಸಲಿ, ನಂತರ ಪ್ರಿಯಾಂಕ್ ಖರ್ಗೆ ವಿಚಾರಣೆಗೆ ಹಾಜರಾಗುತ್ತಾರೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಈ ಹಿಂದೆ ಶೇ 20ರಷ್ಟು ಕಮಿಷನ್ ಪಡೆಯುವ ಸರ್ಕಾರ ಎಂದು ಬಿ.ಎಸ್.ಯಡಿಯೂರಪ್ಪ ಅವರ ವಿರುದ್ಧ ವಿಶ್ವನಾಥ್ ಆರೋಪಿಸಿದ್ದರು. ಆಗ ಅವರ ವಿಚಾರಣೆ ನಡೆಸಿತ್ತೇ?’ ಎಂದರು.

‘ಪಿಎಸ್ಐ ಪ್ರಕರಣದಲ್ಲಿ ಸಿಐಡಿ ಅಧಿಕಾರಿಗಳು ಬಂಧಿಸಿದವರಲ್ಲಿ ಕೆಲವರನ್ನು ಗೃಹ ಸಚಿವ ಆರಗ ಜ್ಞಾನೇಂದ್ರ ಮತ್ತು ಉನ್ನತ ಶಿಕ್ಷಣ ಸಚಿವ ಡಾ. ಅಶ್ವಥ್ ನಾರಾಯಣ ಹೊರಗೆ ತಂದಿದ್ದಾರೆ. ವಿಚಾರಣೆ ಸಂದರ್ಭದಲ್ಲಿ ಬಹಳಷ್ಟು ನಾಯಕರ ಹೆಸರು ಕೇಳಿಬಂದಿವೆ. ಅಷ್ಟೇ ಅಲ್ಲದೆ ಕೆಲ ಹಿರಿಯ ಅಧಿಕಾರಿಗಳೂ ಶಾಮೀಲಾಗಿರುವ ಶಂಕೆ ಇದೆ. ಗೃಹ ಸಚಿವರು ತನಿಖೆಯ ಹಾದಿ ತಪ್ಪಿಸುವ ಎಲ್ಲಾ ಸಾಧ್ಯತೆಗಳೂ ಇವೆ. ತನಿಖೆ ಪಾರದರ್ಶಕವಾಗಿ ನಡೆಯಲು ಸರ್ಕಾರ ವ್ಯವಸ್ಥೆ ಮಾಡಬೇಕು’ ಎಂದು ಅವರು ಹೇಳಿದರು.

ನಟ ಮೋಹನ್ ಜುನೇಜ ನಿಧನ

ಬೆಂಗಳೂರು: ಹಾಸ್ಯನಟ ಮೋಹನ್ ಜುನೇಜ (54) ಅವರು ಅನಾರೋಗ್ಯದಿಂದ ಶುಕ್ರವಾರ ತಡರಾತ್ರಿ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ. ಬಿ. ರಾಮಮೂರ್ತಿ ನಿರ್ದೇಶನದ ‘ಆಟ ಹುಡುಗಾಟ’ ಸಿನಿಮಾ ಮುಖಾಂತರ ಚಂದನವನದ ಪಯಣ ಆರಂಭಿಸಿದ್ದ ಮೋಹನ್, ‘ಚೆಲ್ಲಾಟ’, ‘ಜೋಗಿ’, ಕೆಜಿಎಫ್ ಚಾಪ್ಟರ್ 1 ಮತ್ತು 2 ಸೇರಿದಂತೆ 450ಕ್ಕೂ ಹೆಚ್ಚು ಚಿತ್ರಗಳು ಹಾಗೂ ಹಲವಾರು ಧಾರಾವಾಹಿಗಳಲ್ಲಿ ಅವರು ನಟಿಸಿದ್ದಾರೆ. ನಾಟಕವೊಂದರಲ್ಲಿ ‘ಜನೇಜ’ ಹೆಸರಿನ ವಿದೇಶಿ ವ್ಯಕ್ತಿಯೊಬ್ಬರ ಪಾತ್ರವೊಂದನ್ನು ಮೋಹನ್ ನಿಭಾಯಿಸಿದ್ದರು. ಚಿತ್ರರಂಗದಲ್ಲಿ ಮೋಹನ್ ಎಂಬ ಹೆಸರಿನ ಹಲವರು ಇದ್ದ ಕಾರಣ, ‘ಜನೇಜ’ ಎನ್ನುವುದನ್ನು ‘ಜುನೇಜ’ ಎಂದು ಮಾಡಿಕೊಂಡು, ‘ಜಂಬೂ ಸವಾರಿ’ ಸಿನಿಮಾದಿಂದ ಮೋಹನ್ ಜುನೇಜ ಆಗಿದ್ದರು.

ಹಾಸ್ಯ, ಖಳ ಸೇರಿದಂತೆ ವಿವಿಧ ಪೋಷಕ ಪಾತ್ರಗಳಲ್ಲಿ ಯಾವುದೇ ಅಭಿನಯಕ್ಕೂ ಅವರು ಸೈ ಎನಿಸಿಕೊಂಡಿದ್ದರು. ಚಿತ್ರರಂಗದ ದಿಗ್ಗಜರ ಜೊತೆ ತೆರೆ ಹಂಚಿಕೊಂಡಿದ್ದರು. ಮೋಹನ್ ನಿಧನಕ್ಕೆ ಚಿತ್ರರಂಗದ ಗಣ್ಯರು ಕಂಬನಿ ಮಿಡಿದಿದ್ದಾರೆ. ಅಂತ್ಯಕ್ರಿಯೆ ಶನಿವಾರ ಚಿಕ್ಕಬಾಣಾವರದ ತಮ್ಮೇನಹಳ್ಳಿ ರುದ್ರಭೂಮಿಯಲ್ಲಿ ನಡೆಯಿತು.

ಎಎಪಿ ಶಾಸಕರ ಮನೆಯಲ್ಲಿ ಶೋಧ

ನವದೆಹಲಿ (ಪಿಟಿಐ): ಬ್ಯಾಂಕ್ ಆಫ್ ಇಂಡಿಯಾದಲ್ಲಿ ₹ 40.92 ಕೋಟಿ ಸಾಲ ಪಡೆದು ವಂಚಿಸಿದ ಪ್ರಕರಣಕ್ಕೆ ಸಂಬಂಧಿಸಿ ಪಂಜಾಬ್ ಎಎಪಿ ಶಾಸಕ ಜಸ್ವಂತ್ ಸಿಂಗ್ ಗಜ್ಜನ್ ಮಜ್ರಾ ಅವರ ಸಂಗ್ರೂರ್‌ನಲ್ಲಿರುವ ಮೂರು ಮನೆಗಳು ಹಾಗೂ ಕಚೇರಿಯಲ್ಲಿ ಸಿಬಿಐ ಶನಿವಾರ ಶೋಧ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬ್ಯಾಂಕ್ ಆಫ್ ಇಂಡಿಯಾದಿಂದ ಸಾಲ ಪಡೆದು ವಂಚಿಸಿದ ಆರೋಪದ ಮೇಲೆ ಎಫ್ಐಆರ್ ದಾಖಲಿಸಿದ ನಂತರ ನಡೆಸಲಾದ ಶೋಧದ ವೇಳೆ, ವಿವಿಧ ವ್ಯಕ್ತಿಗಳ ಸಹಿಯನ್ನು ಹೊಂದಿರುವ 94 ಖಾಲಿ ಚೆಕ್‌ಗಳನ್ನು, ಅದಕ್ಕೆ ಲಗತ್ತಿಸಿದ ಆಧಾರ್ ಕಾರ್ಡ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಸಿಬಿಐ ಮೂಲಗಳು ಹೇಳಿವೆ.

‘ಶೋಧ ಸಂದರ್ಭದಲ್ಲಿ ₹16.57 ಲಕ್ಷ ನಗದು, 88 ವಿದೇಶಿ ಕರೆನ್ಸಿಗಳು, ಕೆಲವು ಆಸ್ತಿ ದಾಖಲೆಗಳು, ಹಲವು ಬ್ಯಾಂಕ್ ಖಾತೆಗಳು ಪತ್ತೆಯಾಗಿದ್ದು, ಅವುಗಳನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಸಿಬಿಐ ವಕ್ತಾರ ಆರ್.ಸಿ.ಜೋಶಿ ಹೇಳಿದ್ದಾರೆ.

‘ಶಾಸಕ ಸಿಂಗ್ ಅವರ ತಾರಾ ಕಾರ್ಪೊರೇಷನ್ ಲಿಮಿಟೆಡ್ ಈಗ ಅದರ ಹೆಸರನ್ನು ಮಲೌಧ್ ಆಗ್ರೋ ಲಿಮಿಟೆಡ್ ಎಂದು ಮರುನಾಮಕರಣ ಮಾಡಲಾಗಿದೆ. ಶಾಸಕರ ಸಹೋದರರಾದ ಬಲ್ವಂತ್ ಸಿಂಗ್, ಕುಲ್ವಂತ್ ಸಿಂಗ್ ಮತ್ತು ಸೋದರಳಿಯ ತೇಜಿಂದರ್ ಸಿಂಗ್ ಹಾಗೂ ಸಂಸ್ಥೆಯ ನಿರ್ದೇಶಕರ ವಿರುದ್ಧ ಎಫ್ಐಆರ್ ದಾಖಲಿಸಲಾಗಿದೆ. ಮತ್ತೊಂದು ಕಂಪನಿಯಾದ ತಾರಾ ಹೆಲ್ತ್ ಫುಡ್ಸ್ ಲಿಮಿಟೆಡ್ ಅನ್ನು ಸಹ ಎಫ್ಐಆರ್ ನಲ್ಲಿ ಆರೋಪಿ ಎಂದು ಹೆಸರಿಸಲಾಗಿದೆ’ ಎಂದು ಅವರು ತಿಳಿಸಿದ್ದಾರೆ.

‘ಈ ಕಂಪನಿಯು 2011 ರಿಂದ 2014ರ ಅವಧಿಯಲ್ಲಿ ನಾಲ್ಕು ಹಂತಗಳಲ್ಲಿ ಸಾಲ ಪಡೆದಿತ್ತು. ಆದರೆ, ಮರುಪಾವತಿಸದೇ ಸಾಲವನ್ನು ಬೇರೆ ಉದ್ದೇಶಕ್ಕೆ ಬಳಸಲಾಗಿದೆ. ಕಂಪನಿಯು ನಷ್ಟ ಅನುಭವಿಸಿದೆ ಎಂದು ಹೇಳಿ ಬ್ಯಾಂಕಿಗೆ ವಂಚಿಸಲಾಗಿತ್ತು’ ಎಂದು ಜೋಶಿ ಹೇಳಿದ್ದಾರೆ.

ಪಿಎಫ್ಐ ಕಾರ್ಯಕರ್ತನ ಹತ್ಯೆ: ಮೂವರು ಬಂಧನ

ಪಾಲಕ್ಕಾಡ್ (ಪಿಟಿಐ): ಕಳೆದ ತಿಂಗಳು ಕೇರಳದ ಪಾಲಕ್ಕಾಡ್‌ನಲ್ಲಿ ನಡೆದ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ಕಾರ್ಯಕರ್ತ ಸಬೈರ್‌ನ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಆರ್‌ಎಸ್‌ಎಸ್ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದ್ದಾರೆ.

‘ಸುಚಿತ್ರನ್, ಗಿರೀಶ್ ಹಾಗೂ ಜಿನೀಶ್ ಎಂಬುವವರನ್ನು ಬಂಧಿತರು’ ಎಂದು ಪೊಲೀಸರು ಮಾಹಿತಿ ನೀಡಿದರು.

ಇದೇ ವೇಳೆ, 2021ರ ನವೆಂಬರ್‌ನಲ್ಲಿ ನಡೆದಿದ್ದ ಆರ್‌ಎಸ್‌ಎಸ್ ಕಾರ್ಯಕರ್ತ ಸಂಜಿತ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ, ತಲೆಮರೆಸಿಕೊಂಡಿದ್ದ ಪ್ರಮುಖ ಸಂಚುಕೋರ ಬಾವಾ (57) ಎಂಬುವವರನ್ನು ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ.

ಸಮೂಹ ಸಂಸ್ಥೆಗಳಿಂದ ರಾಜ್ಯ ಸರ್ಕಾರದೊಂದಿಗೆ ಒಪ್ಪಂದ

ಟೊಯೋಟ: ₹ 4,800 ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟೊಯೋಟ ಸಮೂಹ ಸಂಸ್ಥೆಗಳು ರಾಜ್ಯದಲ್ಲಿ ₹ 4,800 ಕೋಟಿ ಹೂಡಿಕೆ ಮಾಡುವುದಾಗಿ ಶನಿವಾರ ತಿಳಿಸಿವೆ. ವಿದ್ಯುತ್ ಚಾಲಿತ ವಾಹನದ ಬಿಡಿ ಭಾಗಗಳ ತಯಾರಿಕೆ, ಇಂಗಾಲದ ಹೊರಸೂಸುವಿಕೆ ತಗ್ಗಿಸಲು, ಆತ್ಮನಿರ್ಭರ ಭಾರತಕ್ಕೆ ಉತ್ತೇಜನ ಹೀಗೆ ಹಲವು ಉದ್ದೇಶಗಳಿಗಾಗಿ ಈ ಹೂಡಿಕೆ ಮಾಡುವುದಾಗಿ ತಿಳಿಸಿವೆ.

ಟೊಯೋಟ ಕಿರ್ಲೋಸ್ಕರ್ ಮೋಟರ್ (ಟಿಕೆಎಂ) ಮತ್ತು ಟೊಯೋಟ ಕಿರ್ಲೋಸ್ಕರ್ ಆಟೊ ಪಾರ್ಟ್ಸ್ (ಟಿಕೆಎಪಿ) ಕಂಪನಿಗಳು ₹ 4,100 ಕೋಟಿ ಹಾಗೂ ಟೊಯೋಟ ಇಂಡಸ್ಟ್ರೀಸ್ ಎಂಜಿನ್ ಇಂಡಿಯಾ (ಟಿಐಇಐ) ₹ 700 ಕೋಟಿ ಹೂಡಿಕೆ ಮಾಡಲಿವೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಟೊಯೋಟ ಕಿರ್ಲೋಸ್ಕರ್ ಮೋಟಾರ್‌ನ ಉಪಾಧ್ಯಕ್ಷರಾದ ವಿಕ್ರಂ ಎಸ್. ಕಿರ್ಲೋಸ್ಕರ್ ಅವರು ಹೂಡಿಕೆ ಒಪ್ಪಂದಕ್ಕೆ ಸಹಿ ಮಾಡಿದರು.

‘ಇಂಗಾಲದ ಹೊರಸೂಸುವಿಕೆ ತಗ್ಗಿಸಲು, ಗರಿಷ್ಠ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಸಲು ಹಾಗೂ ದೇಶಿ ಅಗತ್ಯಗಳಿಗಷ್ಟೇ ಅಲ್ಲದೆ ಜಾಗತಿಕ ಮಾರುಕಟ್ಟೆಗಳಿಗಾಗಿ ಸ್ಥಳೀಯ ತಯಾರಿಕಾ ಕೇಂದ್ರ ಸ್ಥಾಪಿಸುವ ನಿಟ್ಟಿನಲ್ಲಿ ಮಹತ್ವದ ಬೆಳವಣಿಗೆ ಇದಾಗಿದೆ’ ಎಂದು ಕಂಪನಿಯ ಉಪಾಧ್ಯಕ್ಷ ವಿಕ್ರಂ ಎಸ್. ಕಿರ್ಲೋಸ್ಕರ್ ಹೇಳಿದರು.

ಸುಸ್ಥಿರ ಪ್ರಗತಿ ಮತ್ತು ಸ್ಥಳೀಯ ಉತ್ಪಾದನೆಯ ಗುಣಮಟ್ಟ ಹೆಚ್ಚಳಕ್ಕೆ ಟೊಯೊಟಾ ತೋರುತ್ತಿರುವ ಬದ್ಧತೆ ಕರ್ನಾಟಕದ ಪ್ರಗತಿ ಮತ್ತು ಬೆಳವಣಿಗೆಗೆ ಪೂರಕವಾಗುವ ವಿಶ್ವಾಸವಿದೆ. ಎಲೆಕ್ಟ್ರಿಕ್ ವಾಹನಗಳ ಕೇಂದ್ರವಾಗಿರುವ ಕರ್ನಾಟಕ ಈ ತಿಳಿವಳಿಕೆ ಒಪ್ಪಂದವನ್ನು ಸ್ವಾಗತಿಸುತ್ತಿದ್ದು, ಈ ಕ್ಷೇತ್ರದಲ್ಲಿ ರಾಜ್ಯದ ಸಾಧನೆಗೆ ಇನ್ನೊಂದು ಗರಿ ಮೂಡಿದಂತಾಗಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

‘ಟೊಯೋಟ ಸಮೂಹದ ಹೂಡಿಕೆಗಳು ರಾಜ್ಯದಲ್ಲಿ ಸ್ಥಳೀಯ ಪೂರೈಕೆದಾರರ ಅಭಿವೃದ್ಧಿಗೆ ಕಾರಣವಾಗುವುದಲ್ಲದೇ, ಇನ್ನಷ್ಟು ಹೂಡಿಕೆಗಳು ಮತ್ತು ಉದ್ಯೋಗ ಸೃಷ್ಟಿಗೆ ನಾಂದಿ ಹಾಡಲಿವೆ. ಸ್ಥಳೀಯ ಉತ್ಪಾದನಾ ವಲಯವನ್ನು ಉತ್ತೇಜಿಸುವುದರ ಜೊತೆಗೆ ಸ್ಥಳೀಯ ಸಮುದಾಯಗಳ ಅಭಿವೃದ್ಧಿಗೆ ಬೆಂಬಲ ನೀಡಲಿವೆ’ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಅಭಿಪ್ರಾಯಪಟ್ಟರು.

‘ದೇಶದಲ್ಲಿ ಪಾಕಿಸ್ತಾನದ ಏಜೆಂಟ್‌ಗಳು ಸಕ್ರಿಯ’

ಚಾಮರಾಜನಗರ: ‘ಪಾಕಿಸ್ತಾನದ ಏಜೆಂಟ್‌ಗಳು ದೇಶದಲ್ಲಿ ಸಕ್ರಿಯರಾಗಿದ್ದಾರೆ. ಅವರು ಮಂಗಳೂರು, ಕೇರಳ, ದೆಹಲಿ ಸೇರಿದಂತೆ ಎಲ್ಲೇ ಹುಟ್ಟಿಕೊಳ್ಳಲಿ ಅವರನ್ನು ಸದೆಬಡಿಯುತ್ತೇವೆ’ ಎಂದು ಕೇಂದ್ರ ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಖಾತೆ ರಾಜ್ಯ ಸಚಿವ ನಾರಾಯಣಸ್ವಾಮಿ ಹೇಳಿದರು.

ಶನಿವಾರ ಮಾತನಾಡಿದ ಅವರು, ‘ಪಾಕಿಸ್ತಾನ ಪರ ಘೋಷಣೆ ಕೂಗುವ ಪ್ರವೃತ್ತಿ ಜಮ್ಮು ಮತ್ತು ಕಾಶ್ಮೀರದಲ್ಲಿ ಆರಂಭವಾಗಿದ್ದರಿಂದ 370ನೇ ವಿಧಿ ರದ್ದುಗೊಳಿಸಲಾಯಿತು. ಹಿಂದಿನ ಸರ್ಕಾರಗಳು ಈ ಪರಿಸ್ಥಿತಿಯನ್ನು ನಿರ್ವಹಿಸಲು ವಿಫಲವಾಗಿದ್ದವು. ಈಗ ಪಾಕಿಸ್ತಾನದಲ್ಲಿ ಸರ್ಕಾರ ಬದಲಾದಾಗ ಮತ್ತೆ ಈ ಪ್ರವೃತ್ತಿ ಹುಟ್ಟಿಕೊಂಡಿದೆ. ಅದನ್ನು ನಿಗ್ರಹಿಸುವ ಶಕ್ತಿ ಭಾರತಕ್ಕಿದೆ’ ಎಂದರು.

‘ಪಾಕಿಸ್ತಾನದ ಏಜೆಂಟ್‌ಗಳಂತೆ ವರ್ತಿಸುವವರ ವಿರುದ್ಧ ಕ್ರಮ ಜರುಗಿಸಲು ಸರ್ಕಾರ ಶಕ್ತವಾಗಿವೆ. ಕವಲಂದೆ ಪ್ರಕರಣದಲ್ಲೂ ಇಬ್ಬರನ್ನು ಬಂಧಿಸಲಾಗಿದೆ’ ಎಂದರು.

ದಕ್ಷಿಣದಲ್ಲಿ ಬಿಜೆಪಿ ಪರ ಅಲೆ: ಬಸವರಾಜ ಬೊಮ್ಮಾಯಿ

ನಾಲ್ವರು ಮಾಜಿ ಶಾಸಕರು ಬಿಜೆಪಿಗೆ

ಪ್ರಜಾವಾಣಿ ವಾರ್ತೆ

ಎರಡೂವರೆ ವರ್ಷ ಅಕ್ರಮವಾಗಿ ಬಿಜೆಪಿಯಲ್ಲಿದ್ದೆ. ಈಗ ಸಕ್ರಮವಾಗಿ ಬಿಜೆಪಿ ಸೇರಿದ್ದೇನೆ. ಇದರಿಂದ ನನಗೆ ಮತ್ತು ಬಿಜೆಪಿ ಇಬ್ಬರಿಗೂ ಒಳಿತಾಗಲಿದೆ

ಸಂದೇಶ್ ನಾಗರಾಜ್, ವಿಧಾನ ಪರಿಷತ್‌ನ ಮಾಜಿ ಸದಸ್ಯ

ಯಾವುದೇ ಷರತ್ತು ಇಲ್ಲದೆ ಬಿಜೆಪಿ ಸೇರಿದ್ದೇನೆ. ಪಕ್ಷದ ಕಾರ್ಯಕರ್ತನಾಗಿ ಕೆಲಸ ಮಾಡುತ್ತೇನೆ. ಪ್ರಧಾನಿ ಮೋದಿ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರ ಕೈ ಬಲಪಡಿಸುವುದೇ ಗುರಿ

ಪ್ರಮೋದ್ ಮಧ್ವರಾಜ್, ಮಾಜಿ ಶಾಸಕ

ರಾಜ್ಯದಲ್ಲಿ ಬಿಜೆಪಿ 150ಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಗೆದ್ದು ಅಧಿಕಾರಕ್ಕೆ ಬರಬೇಕು ಎಂದು ಕೇಂದ್ರ ಸಚಿವ ಅಮಿತ್ ಶಾ ಸೂಚಿಸಿದ್ದಾರೆ. ಅದಕ್ಕೆ ಪೂರಕವಾಗಿ ನಾನೂ ರಾಜ್ಯದಾದ್ಯಂತ ಪ್ರವಾಸ ಮಾಡುವೆ

ವರ್ತೂರು ಪ್ರಕಾಶ್, ಮಾಜಿ ಶಾಸಕ

ಬೆಂಗಳೂರು: ‘ದಕ್ಷಿಣ ಕರ್ನಾಟಕದಲ್ಲಿ ಬಿಜೆಪಿ ಪರವಾಗಿ ಬಲವಾದ ಅಲೆ ಎದ್ದಿದೆ. ವಿವಿಧ ಪಕ್ಷಗಳ ಇನ್ನೂ ಹಲವು ಮುಖಂಡರು ಬಿಜೆಪಿಗೆ ಬರಲಿದ್ದಾರೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ವಿವಿಧ ಪಕ್ಷಗಳ ನಾಲ್ವರು ಮಾಜಿ ಶಾಸಕರು, ರಾಜ್ಯಸಭೆಯ ಒಬ್ಬ ಮಾಜಿ ಸದಸ್ಯ ಸೇರಿದಂತೆ ಹಲವು ಮುಖಂಡರನ್ನು ಬಿಜೆಪಿಗೆ ಸ್ವಾಗತಿಸಿ ಅವರು ಮಾತನಾಡಿದರು.

‘2023ರ ವಿಧಾನಸಭಾ ಚುನಾವಣೆಯಲ್ಲೂ ನಮ್ಮ ಪಕ್ಷವೇ ಅಧಿಕಾರಕ್ಕೆ ಬರುತ್ತದೆ. ವಿವಿಧ ಪಕ್ಷಗಳ ಹಲವು ಶಾಸಕರು ಬಿಜೆಪಿ ಸೇರಲು ಸಿದ್ಧರಾಗಿದ್ದಾರೆ. ಐದು ರಾಜ್ಯಗಳ ಚುನಾವಣೆ ಫಲಿತಾಂಶದ ಬಳಿಕ ಹಲವರು ನನ್ನನ್ನು ಭೇಟಿ ಮಾಡಿದ್ದರು. ಸಂಯಮದಿಂದ ಇರುವಂತೆ ಎಲ್ಲರಿಗೂ ತಿಳಿಸಿದ್ದೇನೆ’ ಎಂದರು.

ವಿರೋಧ ಪಕ್ಷದ ನಾಯಕರು ಈಗಾಗಲೇ ಅಧಿಕಾರಕ್ಕೆ ಬಂದಾಗಿದೆ ಎಂಬ ಭ್ರಮೆಯಲ್ಲಿ ಓಡಾಡುತ್ತಿದ್ದಾರೆ. ಆದರೆ, ಮುಂದಿನ ಚುನಾವಣೆಯಲ್ಲಿ ಅವರ ಬಲ 2018ಕ್ಕಿಂತಲೂ ಕಡಿಮೆಯಾಗಲಿದೆ. ಹಿಂದೆ ಆಡಳಿತ ನಡೆಸಿದ್ದಂತಹ ದೌರ್ಭಾಗ್ಯದ ಸರ್ಕಾರ ಬೇಡ ಎಂಬ ಭಾವನೆ ಜನರಲ್ಲಿದೆ ಎಂದರು.

‘ಕಾಂಗ್ರೆಸ್ ಮುಕ್ತ ಕರ್ನಾಟಕಕ್ಕೆ ನಾಂದಿ’: ನಳಿನ್ ಕುಮಾರ್ ಕಟೀಲ್ ಮಾತನಾಡಿ, ‘ಕಾಂಗ್ರೆಸ್ ಮುಕ್ತ ಭಾರತದ ಕನಸು ನನಸಾಗಲು ಮಾಜಿ ಸಚಿವರು, ಮಾಜಿ ಶಾಸಕರ ಸೇರ್ಪಡೆಯು ನಾಂದಿ ಹಾಡಲಿದೆ’ ಎಂದರು. ‘ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಹುದ್ದೆಗೆ ಈಗಲೇ ಸಂಗೀತ ಕುರ್ಚಿ ಆರಂಭವಾಗಿದೆ. ಬಂಡೆ ಒಡೆದು ಹೋಗುತ್ತದೆ, ಹುಲಿ ಪಕ್ಷದಿಂದ ಹೊರಗೆ ಹೋಗುತ್ತದೆ’ ಎಂದು ಹೇಳಿದರು.

ಮಾಜಿ ಶಾಸಕ ಪ್ರಮೋದ್ ಮಧ್ವರಾಜ್, ರಾಜ್ಯಸಭೆಯ ಮಾಜಿ ಸದಸ್ಯ ಕೆ.ಬಿ. ಕೃಷ್ಣಮೂರ್ತಿ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದರು. ಪಕ್ಷೇತರರಾಗಿಯೇ ಇದ್ದ ಮಾಜಿ ಶಾಸಕ ವರ್ತೂರು ಪ್ರಕಾಶ್, ಜೆಡಿಎಸ್‌ನಲ್ಲಿದ್ದ ಮಾಜಿ ಶಾಸಕ ಕೆ.ಎಸ್. ಮಂಜುನಾಥ ಗೌಡ, ವಿಧಾನ ಪರಿಷತ್‌ನ ಮಾಜಿ ಸದಸ್ಯ ಸಂದೇಶ್ ನಾಗರಾಜ್, ಒಕ್ಕಲಿಗರ ಸಂಘದ ನಿರ್ದೇಶಕ ಅಶೋಕ್ ಜಯರಾಂ, ಮಾಜಿ ಐಆರ್‌ಎಸ್ ಅಧಿಕಾರಿ ಲಕ್ಷ್ಮಿ ಅಶ್ವಿನ್ ಗೌಡ ಬಿಜೆಪಿ ಸದಸ್ಯತ್ವ ಪಡೆದರು. ಸಚಿವರಾದ ಆರ್. ಅಶೋಕ, ಕೆ. ಗೋಪಾಲಯ್ಯ, ಕೆ.ಸಿ. ನಾರಾಯಣ ಗೌಡ, ಡಾ.ಕೆ. ಸುಧಾಕರ್, ಎಸ್.ಟಿ. ಸೋಮಶೇಖರ್, ಸಂಸದ ಮುನಿಸ್ವಾಮಿ, ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ, ಎನ್.ರವಿಕುಮಾರ್, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ನಿರ್ಮಲ್ ಕುಮಾರ್ ಸುರಾನ ಇದ್ದರು.

ಪ್ರಾಧ್ಯಾಪಕರ ನೇಮಕಾತಿ ಅಕ್ರಮ: ಕುಲಸಚಿವರಿಂದಲೇ ಪ್ರಶ್ನೆ ಸೋರಿಕೆ

• ಸಂತೋಷ ಜಿಗಳಿಕೊಪ್ಪ

ಎಚ್.ನಾಗರಾಜ್

ಬೆಂಗಳೂರು: ರಾಜ್ಯದ ವಿವಿಧ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿಯಿರುವ ಸಹಾಯಕ ಪ್ರಾಧ್ಯಾಪಕರ ನೇಮಕಾತಿಗಾಗಿ ನಡೆದ ಸ್ಪರ್ಧಾತ್ಮಕ ಪರೀಕ್ಷೆಯಲ್ಲೂ ಈ ಬಾರಿ ಅಕ್ರಮ ನಡೆದಿದ್ದು, ಪ್ರಶ್ನೆ ಪತ್ರಿಕೆ ಸಿದ್ಧಪಡಿಸಿದ್ದ 'ಕುಲಸಚಿವ'ರೇ ಇದರಲ್ಲಿ ಭಾಗಿಯಾಗಿದ್ದ ಸಂಗತಿ ವ್ಯವಸ್ಥೆಯನ್ನು ಪ್ರಶ್ನಿಸುವಂತಿದೆ.

ಮಾರ್ಚ್ 14ರಂದು ನಡೆದಿದ್ದ ಪರೀಕ್ಷೆಗೆ, ಹಲವು ದಿನಗಳ ಮುನ್ನವೇ ಭೂಗೋಳಶಾಸ್ತ್ರ ವಿಷಯದ 18 ಪ್ರಶ್ನೆಗಳ ಫೋಟೊಗಳು ಹಲವರ ಮೊಬೈಲ್‌ನ ವಾಟ್ಸ್‌ಆ್ಯಪ್‌ನಲ್ಲಿ ಹರಿದಾಡಿದ್ದವು. ಅದೇ ಫೋಟೊ ಆಧರಿಸಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ದೂರು ನೀಡಿದ್ದ ಅಭ್ಯರ್ಥಿಯೊಬ್ಬರು, ಅಕ್ರಮ ನಡೆದಿರುವುದಾಗಿ ಆರೋಪಿಸಿದ್ದರು. ಆಂತರಿಕ ತನಿಖೆ ನಡೆಸಿದ್ದ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ, ವರದಿ ಸಮೇತ ಮಲ್ಲೇಶ್ವರ ಠಾಣೆಗೆ ದೂರು ನೀಡಿದ್ದರು.

ಪ್ರಕರಣದ ಬೆನ್ನುಬಿದ್ದಿದ್ದ ಪೊಲೀಸರು, ಪ್ರಶ್ನೆಗಳನ್ನು ಸೋರಿಕೆ ಮಾಡಿದ್ದ ಆರೋಪದಡಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಕುಲಸಚಿವರಾಗಿದ್ದ (ಮೌಲ್ಯಮಾಪನ) ಪ್ರೊ. ಎಚ್. ನಾಗರಾಜ್ ಹಾಗೂ ಅವರ ಪಿಎಚ್‌ಡಿ ವಿದ್ಯಾರ್ಥಿ ಆರ್. ಸೌಮ್ಯಾ ಅವರನ್ನು ಬಂಧಿಸಿ ಜೈಲಿಗಟ್ಟಿದ್ದಾರೆ. 'ಇಬ್ಬರೂ ಆರೋಪಿಗಳು ಜಾಮೀನು ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದು, ಅದರ ವಿಚಾರಣೆ ನಡೆಯುತ್ತಿದೆ.

ಸರ್ಕಾರಿ ಹುದ್ದೆ ಪಡೆಯಲು ತಂತ್ರ: ಮೈಸೂರಿನ ಕಾಲೇಜೊಂದರಲ್ಲಿ ಭೂಗೋಳ ವಿಜ್ಞಾನ ವಿಷಯದ ಅತಿಥಿ ಉಪನ್ಯಾಸಕರಾಗಿದ್ದ ಆರ್. ಸೌಮ್ಯಾ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿ ಸಲ್ಲಿಸಿದ್ದರು. ಹೇಗಾದರೂ ಮಾಡಿ ಸರ್ಕಾರಿ ಹುದ್ದೆ ಗಿಟ್ಟಿಸಿಕೊಳ್ಳಬೇಕೆಂದು ಅಕ್ರಮದ ಹಾದಿ ತುಳಿದು ಇದೀಗ ಜೈಲು ಸೇರಿದ್ದಾರೆ.

ಮಾನಸಗಂಗೋತ್ರಿ ವಿಶ್ವವಿದ್ಯಾಲಯದ ಭೂಗೋಳ ವಿಜ್ಞಾನ ವಿಭಾಗದ ಪ್ರಾಧ್ಯಾಪಕರೂ ಆಗಿದ್ದ ಕುಲಸಚಿವ ಪ್ರೊ.ಎಚ್.ನಾಗರಾಜ್ ಮಾರ್ಗದರ್ಶನದಲ್ಲಿ ಪಿ.ಎಚ್‌ಡಿ ಮಾಡುತ್ತಿದ್ದ ಸೌಮ್ಯಾ, ಆಗಾಗ ಅವರ ಮನೆಗೆ ಹೋಗಿ ಬರುತ್ತಿದ್ದರು. ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆಗೆ ಅಗತ್ಯವಿರುವ ಭೂಗೋಳ ವಿಜ್ಞಾನ ವಿಷಯದ ಪ್ರಶ್ನೆಗಳನ್ನು ಸಿದ್ಧಪಡಿಸುವಂತೆ ಕೆಇಎ ಅಧಿಕಾರಿಗಳು, ನಾಗರಾಜ್ ಅವರಿಗೆ ತಿಳಿಸಿದ್ದರೆಂಬುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

ಸೌಮ್ಯಾ ಸಹಾಯ ಪಡೆದು 20ಕ್ಕೂ ಹೆಚ್ಚು ಪ್ರಶ್ನೆಗಳನ್ನು ಸಿದ್ಧಪಡಿಸಿದ್ದ ನಾಗರಾಜ್, ಕೆಇಎಗೆ ಕಳುಹಿಸಿದ್ದರು. ಅದೇ ಪ್ರಶ್ನೆಗಳ ಫೋಟೊ ಕ್ಲಿಕ್ಕಿಸಿಕೊಂಡಿದ್ದ ಸೌಮ್ಯಾ, ಸ್ನೇಹಿತೆ ಹಾಗೂ ಇತರರಿಗೆ ಕಳುಹಿಸಿದ್ದರು. 20ಕ್ಕೂ ಹೆಚ್ಚು ಪ್ರಶ್ನೆಗಳ ಪೈಕಿ, 12 ಪ್ರಶ್ನೆಗಳು ಪರೀಕ್ಷೆಯಲ್ಲಿ ಬಂದಿದ್ದವು. ಸೌಮ್ಯಾ ಅವರಿಗೆ ಅನುಕೂಲ ಮಾಡಿಕೊಡಲು ನಾಗರಾಜ್ ಅವರೇ ಪ್ರಶ್ನೆಗಳನ್ನು ನೀಡಿದ್ದ ಮಾಹಿತಿಯೂ ತನಿಖೆಯಿಂದ ಹೊರಬಿದ್ದಿದೆ.

ಹಣದ ಬಗ್ಗೆ ಮುಂದುವರಿದ ತನಿಖೆ: ಪ್ರಶ್ನೆಗಳನ್ನು ಹಣಕ್ಕಾಗಿ ಸೋರಿಕೆ ಮಾಡಿರುವ ಬಗ್ಗೆ ಪೊಲೀಸರಿಗೆ ಇದುವರೆಗೂ ಮಾಹಿತಿ ಲಭ್ಯವಾಗಿಲ್ಲ. ಪ್ರಕರಣಕ್ಕೆ ಸಂಬಂಧಪಟ್ಟಂತೆ ಮತ್ತಷ್ಟು ಪ್ರಾಧ್ಯಾಪಕರು ಹಾಗೂ ಅಭ್ಯರ್ಥಿಗಳನ್ನು ವಿಚಾರಣೆ ಮಾಡಿರುವುದಾಗಿ ಉತ್ತರ ವಿಭಾಗದ ಡಿಸಿಪಿ ವಿನಾಯಕ್ ಪಾಟೀಲ ಹೇಳಿದರು.

ನಾಗರಾಜ್ ಅವರ ಸಹೋದರಿ ಪುತ್ರಿ ಹಾಗೂ ಆಕೆಯ ಸ್ನೇಹಿತೆ ಹೆಸರು ಕೂಡ ಪ್ರಕರಣದಲ್ಲಿ ಕೇಳಿ ಬಂದಿತ್ತು. ಆದರೆ, ಅದಕ್ಕೆ ಸಂಬಂಧಪಟ್ಟ ಪುರಾವೆಗಳು ಸಿಕ್ಕಿಲ್ಲ. ಹೀಗಾಗಿ, ಇವರನ್ನೂ ಪೊಲೀಸರು ವಿಚಾರಣೆ ಮಾಡಿ ವಾಪಸು ಕಳುಹಿಸಿದ್ದಾರೆ.

ದುರಾಸೆಗೆ ಮದ್ದಿಲ್ಲ

ಅಕ್ರಮ, ಭ್ರಷ್ಟಾಚಾರವನ್ನು ಕಾನೂನಿನಿಂದ ನಿಯಂತ್ರಿಸಲು ಸಾಧ್ಯವಿಲ್ಲ. ಅದಕ್ಕೆ ಸಾಮಾಜಿಕ ಬದಲಾವಣೆ ಬರಬೇಕು. ಇದರ ಹಿನ್ನೆಲೆ ದುರಾಸೆ. ದುರಾಸೆಗೆ ಮದ್ದಿಲ್ಲ. ದುರಾಸೆ ಯಾವ ಕಾನೂನಿಗೂ ಹೆದರಲ್ಲ. ಯಾವ ಕಾನೂನು ಇದ್ದರೂ ಅದನ್ನು ಮುರಿಯುವ, ದಾರಿ ತಪ್ಪಿಸುವ ಯತ್ನ ಆಗುತ್ತಿದೆ. ನೇಮಕಾತಿ ಪ್ರಕ್ರಿಯೆಯ ಎಲ್ಲ ಹಂತಗಳು ಪ್ರಾಮಾಣಿಕವಾಗಿ ನಡೆಯಬೇಕು. ಈ ವಿಷಯದ ಬಗ್ಗೆ ಗಂಭೀರವಾದ ಚರ್ಚೆ ನಡೆಯಬೇಕು. ನೇಮಕಾತಿ ಪ್ರಕ್ರಿಯೆಯಲ್ಲಿನ ಅಕ್ರಮ ದೊಡ್ಡ ಚಕ್ರವ್ಯೂಹ. ತೃಪ್ತಿ ಮತ್ತು ಮಾನವೀಯತೆ ಎಂಬ ಮೌಲ್ಯಗಳ ಕುಸಿತವೇ ಎಲ್ಲದಕ್ಕೂ ಕಾರಣ. ಹಣ ಇದ್ದರೆ ಅಧಿಕಾರ, ಅಧಿಕಾರವಿದ್ದರೆ ಹಣ ಬರುತ್ತದೆ ಎಂಬ ಭಾವನೆಯಿದೆ.

ನ್ಯಾ. ಎನ್. ಸಂತೋಷ್ ಹೆಗ್ಡೆ, ನಿವೃತ್ತ ಲೋಕಾಯುಕ್ತ

ಸ್ವತಂತ್ರ ಸಂಸ್ಥೆ ಅಗತ್ಯ

ನೇಮಕಾತಿ ಪ್ರಕ್ರಿಯೆ ಸ್ವತಂತ್ರವಾಗಿ ನಡೆಯಬೇಕು. ಪ್ರತಿಯೊಂದು ಇಲಾಖೆಗಳು ಕೂಡಾ ತಮ್ಮ ತಮ್ಮ ನಿಯಮಗಳನ್ನು ಒಂದು ಸಂಸ್ಥೆಗೆ ವಹಿಸಿಕೊಟ್ಟು ಆ ಸಂಸ್ಥೆಯವರು ಸ್ವತಂತ್ರವಾಗಿ ಕೆಲಸ ಮಾಡುವಂಥ ವಾತಾವರಣ ಕಲ್ಪಿಸಬೇಕು. ಕೆಪಿಎಸ್‌ಸಿ ರಚನೆಯಾಗಿದ್ದು ಅದೇ ಉದ್ದೇಶದಿಂದ. ಆದರೆ, ಆ ಸಂಸ್ಥೆ ಸ್ವತಂತ್ರವಾಗಿ ಕೆಲಸ ಮಾಡಲು ಕೆಲವು ಬಾರಿ ತೊಂದರೆಗಳಾಗುತ್ತಿವೆ. ಹಾಗೆಂದು, ನೇಮಕಾತಿಗೆ ಸ್ವತಂತ್ರ ಸಂಸ್ಥೆ ಇದ್ದರೆ, ಉದ್ಯೋಗ ಸೌಧ ಕಟ್ಟಿಕೊಂಡು ಕುಳಿತರೆ ಸಾಲದು. ಅಲ್ಲಿರುವವರಿಗೆ ಪರಿಣತಿಯೂ ಬೇಕು. ಈಗ ಉದ್ಯೋಗಾಕಾಂಕ್ಷಿಗಳು ಲಕ್ಷಾಂತರ ಮಂದಿ ಇರುವುದರಿಂದ ಮತ್ತು ಕೆಲಸ ಮಾಡುವ ರೀತಿಯೂ ಬದಲಾಗಿರುವುದರಿಂದ ಆಯ್ಕೆ ವಿಧಾನವೂ ಬದಲಾಗಬೇಕು.

ಎಂ.ಆರ್. ಶ್ರೀನಿವಾಸಮೂರ್ತಿ, ಮಾಜಿ ಅಧ್ಯಕ್ಷ, ವೇತನ ಆಯೋಗ

ಕಾಸಿದ್ದರಷ್ಟೇ ಸರ್ಕಾರಿ ಹುದ್ದೆ

ಒಂದನೇ ಪುಟದಿಂದ...

ಅಲ್ಲಿಂದ ಆರಂಭಿಸಿ, ಈಗ ಸುದ್ದಿಯಲ್ಲಿರುವ ಪಿಎಸ್‌ಐ, ಸಹಾಯಕ ಪ್ರಾಧ್ಯಾಪಕ, ಲೋಕೋಪಯೋಗಿ ಇಲಾಖೆ ಎಂಜಿನಿಯರ್‌ವರೆಗಿನ ವಿವಿಧ ಹುದ್ದೆಗಳ ನೇಮಕಾತಿಗಳಲ್ಲಿ ಅಕ್ರಮ, ಅವ್ಯವಹಾರ, ಸ್ವಜನಪಕ್ಷಪಾತ ಅವ್ಯಾಹತವಾಗಿ ನಡೆದುಕೊಂಡು ಬಂದಿದೆ. ಭ್ರಷ್ಟಾಚಾರ ಇಲ್ಲದೇ ಯಾವ ಹುದ್ದೆಯ ನೇಮಕವೂ ಆಗುವುದಿಲ್ಲ ಎಂಬುದು ಜಗಜ್ಜಾಹೀರಾಗಿಬಿಟ್ಟಿದೆ.

'ಹತ್ತಾರು ಕೋಟಿ ಕೊಟ್ಟು ಕೆಪಿಎಸ್‌ಸಿ ಅಧ್ಯಕ್ಷ, ಸದಸ್ಯರಾಗಿ ಅಧಿಕಾರ ನಡೆಸುವವರು ಸುಮ್ಮನೇ ಕೆಲಸ ಮಾಡುತ್ತಾರೆಯೇ? ಎಲ್ಲ ಪಕ್ಷಗಳ ಅಧಿಕಾರದ ಅವಧಿಯಲ್ಲೂ ಭ್ರಷ್ಟಾಚಾರ ನಡೆಯುತ್ತಲೇ ಬಂದಿದೆ. ಸಿದ್ದರಾಮಯ್ಯ, ಎಚ್.ಡಿ. ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ ಅವಧಿಯಲ್ಲಿ ಕೆಪಿಎಸ್‌ಸಿಗೆ ಯಾವ ಸದಸ್ಯರನ್ನು ಹಣ ಇಲ್ಲದೇ ನೇಮಕ ಮಾಡಿದ್ದಾರೆ? ಯಾವ ನೇಮಕಾತಿ ಪ್ರಾಮಾಣಿಕವಾಗಿ ನಡೆದಿದೆ' ಎನ್ನುವುದು ಉದ್ಯೋಗಾಕಾಂಕ್ಷಿಗಳ ಪ್ರಶ್ನೆ.

ಕಳ್ಳ ಮಾರ್ಗಗಳು: ನೇಮಕಾತಿ ಅಕ್ರಮಗಳಲ್ಲಿನ ಕಳ್ಳ ಮಾರ್ಗಗಳಲ್ಲಿ ಗೌಪ್ಯ ವಿಭಾಗದ ಅಧಿಕಾರಿ, ಸಿಬ್ಬಂದಿಯಿಂದ ಮುದ್ರಣ ಹಂತದಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಮೊದಲಿನದು. ಮನೆಯೊಳಗಿನ ಕಳ್ಳರಿವರು. ಕೆಪಿಎಸ್‌ಸಿ ನಿಗದಿಪಡಿಸಿದ್ದ 2020ರಲ್ಲಿ ನಡೆಸಿದ ಎಫ್‌ಡಿಎ ನೇಮಕಾತಿಯ ಪ್ರಶ್ನೆ ಪತ್ರಿಕೆ, ಪರೀಕ್ಷೆಯ ಹಿಂದಿನ ದಿನ ಸೋರಿಕೆಯಾಗಿತ್ತು. ಎಫ್‌ಡಿಎ ಪರೀಕ್ಷೆ ಬರೆಯಲು ಮುಂದಾಗಿದ್ದ ಕೆಪಿಎಸ್‌ಸಿಯ ಎಸ್‌ಡಿಎಯನ್ನು ನಂಬಿ, ಅಲ್ಲಿನ ಪರೀಕ್ಷಾ ನಿಯಂತ್ರಕ ವಿಭಾಗದ ಸ್ಟೆನೋಗ್ರಾಫರ್ ಪ್ರಶ್ನೆಪತ್ರಿಕೆ ಕದ್ದು ಕೊಟ್ಟಿದ್ದಳು. ಆ ಖದೀಮ ಇತರ ಅಭ್ಯರ್ಥಿಗಳನ್ನು ಸಂಪರ್ಕಿಸಿ ಡೀಲ್ ಕುದುರಿಸಿದ್ದ!

'ಪ್ರಶ್ನೆಪತ್ರಿಕೆ ಸೋರಿಕೆ ಪಿತಾಮಹ', 'ಕಿಂಗ್ ಪಿನ್' ಎಂದೆಲ್ಲ ಕರೆಸಿಕೊಂಡಿದ್ದ ಶಿವಕುಮಾರಯ್ಯ ಅಲಿಯಾಸ್ ಗುರೂಜಿ (ಒಂದು ವರ್ಷದ ಹಿಂದೆ ಕೋವಿಡ್‌ನಿಂದ ಮೃತಪಟ್ಟಿದ್ದಾನೆ) ದ್ವಿತೀಯ ಪಿಯುಸಿ, ಪೊಲೀಸ್ ಕಾನ್‌ಸ್ಟೆಬಲ್, ಬಿಎಂಟಿಸಿ (ಚಾಲಕ ಹಾಗೂ ನಿರ್ವಾಹಕ), ಪಿಎಸ್‌ಐ ನೇಮಕಾತಿ ಪರೀಕ್ಷೆಗಳ ಪ್ರಶ್ನೆಪತ್ರಿಕೆ ಸೋರಿಕೆ ಮಾಡಿ ಲಕ್ಷಾಂತರ ಹಣ ಗಳಿಸಿದ್ದ. ಅಧಿಕಾರಿಗಳಿಗೆ ಆಮಿಷವೊಡ್ಡಿ ಪ್ರಶ್ನೆಪತ್ರಿಕೆ ಸೋರಿಕೆ ಮಾಡಿದ್ದ ಆತನ ವಿರುದ್ಧ ಸೇರಿ ವಿವಿಧ ಠಾಣೆಗಳಲ್ಲಿ 20ಕ್ಕೂ ಹೆಚ್ಚು ಪ್ರಕರಣಗಳಿವೆ. ಸರ್ಕಾರ ಆತನ ಪತ್ತೆಗಾಗಿ ₹ 50 ಸಾವಿರ ಬಹುಮಾನ ಘೋಷಿಸಿತ್ತು!

ಬ್ಲೂ ಟೂತ್ ಬಳಸಿ ಪರೀಕ್ಷಾ ಅಕ್ರಮ ಇತ್ತೀಚಿನ ಬೆಳವಣಿಗೆ. ಕೆಪಿಎಸ್‌ಸಿ ಇತ್ತೀಚೆಗೆ ನಡೆಸಿದ ಬಹುತೇಕ ಪರೀಕ್ಷೆಗಳಲ್ಲಿ ಬ್ಲೂ ಟೂತ್ ಬಳಕೆಯಾದ ಅನುಮಾನಗಳಿವೆ. ಈ ರೀತಿ ಅಕ್ರಮದಲ್ಲಿ, ನೇಮಕಾತಿ ಪ್ರಾಧಿಕಾರದ ಅಧಿಕಾರಿಗಳನ್ನು ಸಂಪರ್ಕಿಸಿ, ಅಕ್ರಮ ಎಸಗಲು ಅವಕಾಶವಾಗುವ ಪರೀಕ್ಷಾ ಕೇಂದ್ರಗಳನ್ನು ಆಯ್ಕೆ ಮಾಡಿ ಅಭ್ಯರ್ಥಿಗಳನ್ನು ಆ ಕೇಂದ್ರಕ್ಕೆ ಹಾಕಿಸಿಕೊಳ್ಳುವ ಪ್ರಯತ್ನ ಮೊದಲು ನಡೆಯುತ್ತದೆ. ಪ್ರಶ್ನೆಪತ್ರಿಕೆ ಸೋರಿಕೆ ಯಾದ ಕಾರಣಕ್ಕೆ ನಡೆದ ಎಫ್‌ಡಿಎ ಮರುಪರೀಕ್ಷೆಯ ಆಯ್ಕೆ ಪಟ್ಟಿ ಇತ್ತೀಚೆಗೆ ಪ್ರಕಟವಾಗಿದ್ದು, ಆ ಪಟ್ಟಿಯಲ್ಲಿರುವ 200ಕ್ಕೂ ಹೆಚ್ಚು ಅಭ್ಯರ್ಥಿಗಳು ಈ ತಂತ್ರಜ್ಞಾನ ಬಳಸಿ ಆಯ್ಕೆಯಾಗಿದ್ದಾರೆ ಎನ್ನುವ ಆರೋಪ ಅನೇಕರದ್ದು.

ಎಸ್‌ಡಿಎ, ನೀರಾವರಿ ಇಲಾಖೆ ಸಹಾಯಕ ಎಂಜಿನಿಯರ್ 550 ಹುದ್ದೆಗಳಿಗೆ (2017ರಲ್ಲಿ ನಡೆದಿದ್ದ ಪರೀಕ್ಷೆ) ಕಲಬುರಗಿ ಜಿಲ್ಲೆಯೊಂದರಿಂದಲೇ ಹೆಚ್ಚಿನ ಸಂಖ್ಯೆಯಲ್ಲಿ ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ. ಒಂದೇ ಗ್ರಾಮದ 10ಕ್ಕೂ ಹೆಚ್ಚು ಮಂದಿ ಆಯ್ಕೆಯಾಗಿರುವುದು ಅನುಮಾನಗಳಿಗೆ ಕಾರಣವಾಗಿದೆ. ಬ್ಲೂ ಟೂತ್ ಬಳಸಿ ಆಯ್ಕೆಯಾದ ಕೆಲವರು ಬಳಿಕ ಆ ಸಾಧನ ಬಳಸುವ ದಂಧೆಯ 'ಕಿಂಗ್‌ಪಿನ್'ಗಳಾಗಿದ್ದಾರೆ. ಪಿಎಸ್‌ಐ ಹಗರಣದಲ್ಲಿ ಸಿಕ್ಕಿಬಿದ್ದಿರುವ ಸಹಾಯಕ ಎಂಜಿನಿಯರ್ ಮಂಜುನಾಥ್ ಮೇಳಕುಂದಿ ಅಂಥವರಲ್ಲೊಬ್ಬ ಎನ್ನುವ ಸಂದೇಹವಿದೆ.

ಕಲ್ಯಾಣ ಕರ್ನಾಟಕ ಭಾಗಕ್ಕೆ ಸಹಾಯಕ ಎಂಜಿನಿಯರ್ 181 ಹುದ್ದೆಗಳ ಆಯ್ಕೆಗೆ ಕೆಪಿಎಸ್‌ಸಿ 2020ರಲ್ಲಿ ನಡೆಸಿದ ಪರೀಕ್ಷೆಯಲ್ಲಿ ಬ್ಲೂ ಟೂತ್ ಬಳಸಿ ಹಲವು ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರಿಂದಲೇ, ಈ ಹುದ್ದೆಯಲ್ಲಿ ಹೆಚ್ಚಿನ ಕಟ್ ಆಫ್ ಅಂಕ ನಿಗದಿಯಾಗಿದೆ ಎನ್ನುವ ಅನುಮಾನ ಅಭ್ಯರ್ಥಿಗಳದ್ದು, ಅದೇ ರೀತಿ ಮಹಾನಗರಪಾಲಿಕೆಗಳಿಗೆ ಎಂಜಿನಿಯರ್ (2017), ಅಬಕಾರಿ ಸಬ್ ಇನ್‌ಸ್ಪೆಕ್ಟರ್ (2017 ಮತ್ತು 2020) ನೇಮಕಾತಿಯಲ್ಲಿಯೂ ಅತಿ ಹೆಚ್ಚಿನ ಕಟ್ ಆಫ್ ಅಂಕ ನಿಗದಿಯಾಗಿತ್ತು. ಅಕ್ರಮ ಎಸಗದೇ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಇಷ್ಟೊಂದು ಅಂಕ ಗಳಿಸಲು ಸಾಧ್ಯವೇ ಇಲ್ಲ ಎನ್ನುವುದು ಅಭ್ಯರ್ಥಿಗಳ ವಾದ.

ಹಾಗೆಂದು, ಬ್ಲೂ ಟೂತ್ ದಂಧೆ ಕಲಬುರಗಿಗೆ (ಅಫಜಲಪುರ ಗ್ಯಾಂಗ್) ಮಾತ್ರ ಸೀಮಿತವಾಗಿಲ್ಲ. ಬೀದರ್ (ಭಾಲ್ಕಿ), ವಿಜಯಪುರ, ಧಾರವಾಡ, ಬೆಂಗಳೂರು, ದಾವಣಗೆರೆ (ಹರಪನಹಳ್ಳಿ ಗ್ಯಾಂಗ್), ಬೆಳಗಾವಿ (ಗೋಕಾಕ್ ಗ್ಯಾಂಗ್), ರಾಯಚೂರು (ಮಾನ್ವಿ), ತುಮಕೂರು, ಹಾಸನ, ಮಂಡ್ಯ, ಬಾಗಲಕೋಟೆ–ಹೀಗೆ ಹಲವು ಜಿಲ್ಲೆಗಳಿಗೂ ಈ ಜಾಲ ವ್ಯಾಪಿಸಿದೆ.

ಪರೀಕ್ಷಾ ಕೇಂದ್ರಗಳಲ್ಲಿ ಪ್ರಾಂಶುಪಾಲರ ಕೊಠಡಿಯಲ್ಲಿ, ಮೇಲ್ವಿಚಾರಕರ ಸಹಾಯದಿಂದ ಒಎಂಆರ್ ಶೀಟ್ ತಿದ್ದುಪಡಿ, ಮೇಲ್ವಿಚಾರಕರನ್ನು 'ಬುಕ್' ಮಾಡಿ ಸಾಮೂಹಿಕ ನಕಲು ಮಾಡಿ ಸಾಕಷ್ಟು ಅಭ್ಯರ್ಥಿಗಳು ಆಯ್ಕೆಯಾದ ನಿದರ್ಶನಗಳೂ ಇವೆ. ವಿಜಯಪುರದಲ್ಲಿ ಎಫ್‌ಡಿಎ ಪರೀಕ್ಷೆಯಲ್ಲಿ ಬಸ್ ಟಿಕೆಟ್ ಹಿಂದೆ 'ಡಿ' ಗ್ರೂಪ್ ನೌಕರರು ಸರಿ ಉತ್ತರ (ಕೀ ಉತ್ತರ) ಬರೆದು ತಲುಪಿಸಿದ್ದು ಸುದ್ದಿಯಾಗಿತ್ತು. ಅಭ್ಯರ್ಥಿ ಸಿಕ್ಕಿಬಿದ್ದರೂ ಪರೀಕ್ಷಾ ಕೇಂದ್ರವಿರುವ ಸಂಸ್ಥೆಯವರು ಪ್ರಕರಣ ಹೊರಗೆ ಬರದಂತೆ ಮುಚ್ಚಿಹಾಕಿದ ಆರೋಪಗಳೂ ಇವೆ.

ಸಚಿವರ ಮತ್ತು ಶಾಸಕರ ಭ್ರಷ್ಟಾಚಾರವನ್ನು ಬದಿಗಿಟ್ಟು ನೋಡಿದರೆ, ನಿತ್ಯದ ಭ್ರಷ್ಟಾಚಾರ ಮತ್ತು ದುರಾಡಳಿತದಲ್ಲಿ ನೇರ ಪಾತ್ರಧಾರಿಗಳು ಅಧಿಕಾರಿಗಳೇ. ಈ ಅಧಿಕಾರಿಗಳು ಕೆಲಸಕ್ಕೆ ಸೇರಿದ ಮೊದಲ ದಿನದಿಂದಲೇ 'ಭ್ರಷ್ಟಾಚಾರ ಮಾಡಲೇಬೇಕು, ಲಂಚ ತೆಗೆದುಕೊಳ್ಳಲೇಬೇಕು. ಕೆಳಹಂತದ ಸಿಬ್ಬಂದಿಯಿಂದ ಮಾಮೂಲಿ ಪಡೆಯಲೇಬೇಕು' ಎನ್ನುವ ಮನಸ್ಥಿತಿಗೆ ಬಂದಿದ್ದರೆ ಅದಕ್ಕೆ ನೇಮಕಾತಿ ದಂಧೆ. ಅದಕ್ಕೆ ಕೈಜೋಡಿಸುವುದು ನೇಮಕಾತಿ ಪ್ರಾಧಿಕಾರಗಳು ಮತ್ತು ರಾಜ್ಯ ಸರ್ಕಾರ.

ರಾಜ್ಯ ಸರ್ಕಾರಿ ಹುದ್ದೆಗಳ ಅಂಕಿಅಂಶ*

9,61,901 ಮಂಜೂರಾದ ಒಟ್ಟು ಹುದ್ದೆ

6,23,653 ಭರ್ತಿಯಾದ ಹುದ್ದೆ

3,37,055 ಖಾಲಿ ಹುದ್ದೆ

1,11,865 ಹೊರಗುತ್ತಿಗೆ ಆಧಾರದಲ್ಲಿ ನೇಮಕ

* ವಿಧಾನ ಪರಿಷತ್ ಸದಸ್ಯರೊಬ್ಬರ ಪ್ರಶ್ನೆಗೆ ಮುಖ್ಯಮಂತ್ರಿ ಇದೇ ಮಾರ್ಚ್ 24ರಂದು ನೀಡಿದ ಲಿಖಿತ ಉತ್ತರ

'ಕೆಇಎ'ಗೂ ಅಂಟಿದ ಕಳಂಕ

ಕೆಪಿಎಸ್‌ಸಿ ಮೂಲಕ ನೇಮಕಾತಿ ವಿಳಂಬವಾಗುತ್ತದೆ ಎಂಬ ಕಾರಣ ಮುಂದಿಟ್ಟು ಕೆಲವು ಇಲಾಖೆಗಳು ಇತ್ತೀಚೆಗೆ 'ಕರ್ನಾಟಕ ಪರೀಕ್ಷಾ ಪ್ರಾಧಿಕಾರ'ದ (ಕೆಇಎ) ಮೂಲಕ ನೇಮಕಾತಿ ಮಾಡಿಕೊಳ್ಳುತ್ತಿವೆ. ತ್ವರಿತ, ಪಾರದರ್ಶಕ ನೇಮಕಾತಿ ಆಗಬೇಕೆಂಬ ಕಾರಣಕ್ಕೆ ತನ್ನ ನಿಯಂತ್ರಣದಲ್ಲೇ ಇರುವ ಪ್ರಾಧಿಕಾರದ ಮೂಲಕ 'ಅರ್ಹ'ರನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ ಎನ್ನುವುದು ಸರ್ಕಾರ ನೀಡುವ ಸಮರ್ಥನೆ. ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ 1,193 ಹುದ್ದೆಗಳ ಭರ್ತಿಗೆ 2015ರಲ್ಲಿ ಅಧಿಸೂಚನೆ ಹೊರಡಿಸಿದ್ದ ಕೆಇಎ, 4 ವರ್ಷ ಹಲವು ಬಾರಿ ಪ್ರಕ್ರಿಯೆ ಆರಂಭಿಸಿ, ನಿಲ್ಲಿಸುವ ಚೆಲ್ಲಾಟವಾಡಿತ್ತು. ಕೋರ್ಟ್ ಮೆಟ್ಟಿಲೇರಿದ್ದ ಈ ಪ್ರಕ್ರಿಯೆ ಪೂರ್ಣಗೊಂಡಿದ್ದು 2020ರಲ್ಲಿ. ಎಚ್.ಕೆ. ಪಾಟೀಲರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಾಗ ಪಂಚಾಯತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) 815, ಗ್ರಾಮ ಪಂಚಾಯತಿ ಕಾರ್ಯದರ್ಶಿ 809 ಹುದ್ದೆಗಳಿಗೆ ಕೆಇಎ ನಡೆಸಿದ್ದ ನೇಮಕಾತಿ ಗೊಂದಲ ನ್ಯಾಯಾಲಯದ ಮೂಲಕ ಪರಿಹಾರ ಕಂಡಿತ್ತು!

ಸಮ್ಮಿಶ್ರ ಸರ್ಕಾರದಲ್ಲಿ ಲೋಕೋಪಯೋಗಿ ಸಚಿವರಾಗಿದ್ದ ಎಚ್.ಡಿ. ರೇವಣ್ಣ, 990 ಎಂಜಿನಿಯರ್‌ಗಳ ನೇಮಕಾತಿಯನ್ನು ಕೆಇಎಗೆ ವಹಿಸಿದ್ದರು. 2020ರ ಜೂನ್‌ನಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ಕೂಡಾ ನಡೆದಿತ್ತು. ಆ ಬೆನ್ನಲ್ಲೇ, ಅವ್ಯವಹಾರದ ವಾಸನೆ ದಟ್ಟವಾಗಿ ಹರಡಿತ್ತು. ಆದರೆ, ನಂತರ ಅಧಿಕಾರಕ್ಕೆ ಬಂದ ಬಿ.ಎಸ್. ಯಡಿಯೂರಪ್ಪ ಸರ್ಕಾರ ಆ ನೇಮಕಾತಿ ಪ್ರಕ್ರಿಯೆಯನ್ನೇ ರದ್ದುಪಡಿಸಿ, ಕೆಪಿಎಸ್‌ಸಿಗೆ ವಹಿಸಿದೆ. ಇತ್ತೀಚೆಗಷ್ಟೆ ಕೆಪಿಎಸ್‌ಸಿ ಈ ಹುದ್ದೆಗಳಿಗೆ ಪರೀಕ್ಷೆ ನಡೆಸಿದ್ದು, ಮೌಲ್ಯಮಾಪನ ನಡೆಯುತ್ತಿದೆ. ಈ ಹಂತದಲ್ಲಿ, ಈ ಪರೀಕ್ಷೆಯಲ್ಲಿಯೂ ಅಭ್ಯರ್ಥಿಗಳು ಬ್ಲೂ ಟೂತ್ ಬಳಸಿದ ಆರೋಪ ಕೇಳಿಬಂದಿದೆ. ಕೆಇಎಗೆ ವಹಿಸಿರುವ 1,242 ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ನೇಮಕಾತಿಗೂ ಕಳಂಕ ತಟ್ಟಿದೆ.

ಐದು ವರ್ಷಗಳಲ್ಲಿ ಕೆಪಿಎಸ್‌ಸಿ ನೇಮಕಾತಿ*

517 ಸ್ವೀಕೃತವಾದ ಪ್ರಸ್ತಾವನೆ

25,297 ನೇಮಕ ಪ್ರಕ್ರಿಯೆ ನಡೆದ ಹುದ್ದೆಗಳು

49 ಹೊರಡಿಸಿದ ಅಧಿಸೂಚನೆ

17,727 ಆಯ್ಕೆ ಪಟ್ಟಿ ಸಿದ್ಧಪಡಿಸಿ ವಿವಿಧ ಇಲಾಖೆಗಳಿಗೆ ಸಲ್ಲಿಕೆ

* ಸರ್ಕಾರಕ್ಕೆ ಕೆಪಿಎಸ್‌ಸಿ ನೀಡಿರುವ ಮಾಹಿತಿ

ಎಂಜಿನಿಯರ್ ಹುದ್ದೆ: 'ಬ್ಲೂ ಟೂತ್' ಸದ್ದು

• ವಿ.ಎಸ್.ಸುಬ್ರಹ್ಮಣ್ಯ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಸಹಾಯಕ ಎಂಜಿನಿಯರ್ (ಎಇ) ಮತ್ತು ಕಿರಿಯ ಎಂಜಿನಿಯರ್ (ಜೆಇ) ಹುದ್ದೆಗಳ ಭರ್ತಿಗೆ ಪರೀಕ್ಷೆಗಳನ್ನು ನಡೆಸಿದಾಗಲೆಲ್ಲ 'ಬ್ಲೂ ಟೂತ್' ಬಳಕೆಯ ಶಂಕೆ ಜೋರಾಗಿ ಸದ್ದು ಮಾಡುತ್ತದೆ. ಹೀಗೆ 'ಬ್ಲೂ ಟೂತ್' ಸಾಧನದ ನೆರವಿನಲ್ಲಿ ಸರ್ಕಾರಿ ಇಲಾಖೆಗಳನ್ನು ಸೇರಿದವರು ಈಗ ಇತರ ಇಲಾಖೆಗಳ ಪರೀಕ್ಷೆಗಳಲ್ಲೂ ಅಕ್ರಮ ಎಸಗುತ್ತಿದ್ದಾರೆ.

2017ರಲ್ಲಿ ಜಲ ಸಂಪನ್ಮೂಲ ಇಲಾಖೆಯಲ್ಲಿ 550 ಕಿರಿಯ ಎಂಜಿನಿಯರ್‌ಗಳ ನೇಮಕಾತಿಗೆ ಪ್ರಕ್ರಿಯೆ ನಡೆದಿತ್ತು. ಆಗ ಕಲಬುರಗಿ ಜಿಲ್ಲೆಯ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಬರೆದವರಲ್ಲೇ ಹೆಚ್ಚು ಮಂದಿ ಆಯ್ಕೆಯಾಗಿದ್ದರು. 'ಬ್ಲೂ ಟೂತ್' ಬಳಸಿ ಹೊರಗಿನಿಂದ ಉತ್ತರ ಪಡೆದು ಪರೀಕ್ಷಾ ಅಕ್ರಮ ನಡೆಸಿದ್ದರಿಂದಲೇ ಅದು ಸಾಧ್ಯವಾಗಿತ್ತು ಎಂಬ ಆರೋಪ ಕೇಳಿಬಂದಿತ್ತು. ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಖಾಲಿಯಿದ್ದ ಸಹಾಯಕ ಎಂಜಿನಿಯರ್ ಹುದ್ದೆಗಳ ಭರ್ತಿಗೆ ನಡೆಸಿದ ಪರೀಕ್ಷೆಯಲ್ಲೂ 'ಬ್ಲೂ ಟೂತ್' ಬಳಸಿ ಅಕ್ರಮ ನಡೆಸಿರುವ ಶಂಕೆ ವ್ಯಕ್ತವಾಗಿತ್ತು.

ಲೋಕೋಪಯೋಗಿ ಇಲಾಖೆಯಲ್ಲಿನ 660 ಸಹಾಯಕ ಎಂಜಿನಿಯರ್ ಮತ್ತು 330 ಕಿರಿಯ ಎಂಜಿನಿಯರ್‌ಗಳ ನೇಮಕಾತಿಗೆ 2021ರ ಡಿಸೆಂಬರ್‌ನಲ್ಲಿ ಪರೀಕ್ಷೆ ನಡೆದಿತ್ತು. 'ಬ್ಲೂ ಟೂತ್' ಸಾಧನ ಬಳಸಿ ಪರೀಕ್ಷಾ ಅಕ್ರಮ ಎಸಗಬಹುದು ಎಂಬ ದೂರು ಪರೀಕ್ಷೆಗೂ ಮುನ್ನವೇ ಕರ್ನಾಟಕ ಲೋಕಸೇವಾ ಆಯೋಗವನ್ನು ತಲುಪಿತ್ತು.

ಬೆಂಗಳೂರಿನ ಅನ್ನಪೂರ್ಣೇಶ್ವರಿನಗರ ಪೊಲೀಸ್ ಠಾಣೆ ವ್ಯಾಪ್ತಿಯ ಸೇಂಟ್ ಜಾನ್ಸ್ ಶಾಲೆಯ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆಯುತ್ತಿದ್ದ ಕಲಬುರಗಿ ಜಿಲ್ಲೆಯ ವೀರಣ್ಣ ಗೌಡ ಎಂಬ ಅಭ್ಯರ್ಥಿ 'ಬ್ಲೂ ಟೂತ್' ಬಳಸಿ ಹೊರಗಿನಿಂದ ಉತ್ತರ ಪಡೆಯುತ್ತಿದ್ದುದನ್ನು ಮೇಲ್ವಿಚಾರಕರು ಪತ್ತೆಹಚ್ಚಿದ್ದರು. ಬಳಿಕ ಪೊಲೀಸರು ಪ್ರಕರಣ ದಾಖಲಿಸಿ, ಅಭ್ಯರ್ಥಿಯನ್ನು ಬಂಧಿಸಿದ್ದರು.

ಕಲಬುರಗಿ ಜಿಲ್ಲೆಯ ಪರೀಕ್ಷಾ ಕೇಂದ್ರವೊಂದರಲ್ಲಿ ಇದೇ ಪರೀಕ್ಷೆ ಬರೆಯುತ್ತಿದ್ದ ಅಭ್ಯರ್ಥಿಗೆ ಹೊರಗಿನಿಂದ ಯುವಕನೊಬ್ಬ 'ಬ್ಲೂ ಟೂತ್' ಮೂಲಕ ಉತ್ತರ ರವಾನಿಸುತ್ತಿದ್ದ ದೃಶ್ಯಾವಳಿ ಇರುವ ವಿಡಿಯೊ ತುಣುಕು ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಇದು ಎಂಜಿನಿಯರ್‌ಗಳ ನೇಮಕಾತಿಯಲ್ಲಿ ಬ್ಲೂ ಟೂತ್ ಸಾಧನದ ನೆರವಿನಲ್ಲಿ ವ್ಯಾಪಕ ಅಕ್ರಮಗಳು ನಡೆಯುತ್ತಿರುವುದಕ್ಕೆ ಸಾಕ್ಷ್ಯ ಒದಗಿಸಿತ್ತು.

'ಅರ್ಹತೆ'ಯೇ ಅಕ್ರಮಕ್ಕೆ ರಹದಾರಿ

ಬೆಂಗಳೂರು: ಕೆಲವು ಪ್ರಮುಖ ಇಲಾಖೆಗಳಲ್ಲಿ ನೌಕರರ ನೇಮಕಾತಿ ಪ್ರಕ್ರಿಯೆ ನಡೆಸುವಾಗ ಅಭ್ಯರ್ಥಿಗಳಿಗೆ ನಿಗದಿಪಡಿಸುವ ಅರ್ಹತೆಗಳೇ ಅಕ್ರಮಕ್ಕೆ ರಹದಾರಿಯಾಗುತ್ತಿವೆ. ಸಾರಿಗೆ ಇಲಾಖೆಯ ಮೋಟಾರು ವಾಹನ ಇನ್‌ಸ್ಪೆಕ್ಟರ್ (ಎಂವಿಐ) ನೇಮಕಾತಿ ಪ್ರಕ್ರಿಯೆ ಆರು ವರ್ಷಗಳಿಂದ ಕಗ್ಗಂಟಾಗಿ ಉಳಿದಿರುವುದು ಇದಕ್ಕೆ ಉದಾಹರಣೆ. 150 ಎಂವಿಐ ಹುದ್ದೆಗಳ ಭರ್ತಿಗೆ ಸಾರಿಗೆ ಇಲಾಖೆ 2016ರ ಫೆಬ್ರುವರಿಯಲ್ಲಿ ಅಧಿಸೂಚನೆ ಹೊರಡಿಸಿತ್ತು. 129 ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸಿ 2019ರ ಜುಲೈ 4ರಂದು ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಿಸಲಾಗಿತ್ತು. ಕಳೆದ ವಾರ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಹಿಂಪಡೆದು, ಪುನಃ ಪರಿಷ್ಕೃತ ಪಟ್ಟಿ ಪ್ರಕಟಿಸಲಾಗಿದೆ.

'ಪ್ರತಿಷ್ಠಿತ ವರ್ಕ್‌ಶಾಪ್‌ನಲ್ಲಿ ಒಂದು ವರ್ಷ ಕೆಲಸ ಮಾಡಿರುವ ಅನುಭವ ಇರಬೇಕು' ಎಂಬ ಷರತ್ತನ್ನು ಎಂವಿಐ ನೇಮಕಾತಿಯಲ್ಲಿ ಹಾಕಲಾಗಿತ್ತು. ಪೆಟ್ರೋಲ್ ಮೂಲಕ ಓಡುವ ಲಾರಿ ಮತ್ತು ಬಸ್‌ಗಳ ನಿರ್ವಹಣೆ, ದುರಸ್ತಿ ಮಾಡುವ ವರ್ಕ್‌ಶಾಪ್‌ಗಳನ್ನು ಈ ವರ್ಗಕ್ಕೆ ಸೇರಿಸಲಾಗಿತ್ತು. ಅಂತಹ ವರ್ಕ್‌ಶಾಪ್‌ಗಳು ಈಗ ಇಲ್ಲದಿದ್ದರೂ, 129 ಮಂದಿ ನಕಲಿ ಪ್ರಮಾಣಪತ್ರ ಸಲ್ಲಿಸಿ ಆಯ್ಕೆಯಾಗಿದ್ದಾರೆ ಎಂಬ ದೂರು ಸಲ್ಲಿಕೆಯಾಗಿತ್ತು. ಇದೇ ವಿಚಾರದಲ್ಲಿ ಮೂರು ವರ್ಷಗಳಿಂದ ಹಗ್ಗ ಜಗ್ಗಾಟ ನಡೆಯುತ್ತಲೇ ಇದೆ. ಸುಪ್ರೀಂಕೋರ್ಟ್ ನಿರ್ದೇಶನದಂತೆ ಈಗ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಪರಿಷ್ಕರಿಸಲಾಗಿದೆ.

ಕೆಪಿಎಸ್‌ಸಿ ಎಂದರೆ ಭ್ರಷ್ಟಾಚಾರದ ಕೂಪ

ಕೆಪಿಎಸ್‌ಸಿ ಮೂಲಕ ಸರ್ಕಾರದ ನಾನಾ ಹುದ್ದೆಗಳಿಗೆ 1998, 1999, 2004, 2011ನೇ ಸಾಲಿನಲ್ಲಿ ಒಟ್ಟು 989 ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ನೇಮಕಾತಿಗಳಲ್ಲಿ ನಡೆದಿದೆ ಎನ್ನಲಾದ ಹಗರಣಗಳ ಬಗ್ಗೆ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸಿವೆ. ಕೆಪಿಎಸ್‌ಸಿಯ ಅಧ್ಯಕ್ಷರಾಗಿದ್ದವರೊಬ್ಬರು ಜೈಲಿಗೂ ಹೋಗಿದ್ದರು. ಕಳಂಕದ ನಂಟು 2015ರ ಕೆಎಎಸ್ ನೇಮಕಾತಿಯನ್ನೂ ಬಿಟ್ಟಿಲ್ಲ. ನೇಮಕಾತಿಗಳಲ್ಲಿ ಆದ ಲೋಪ ಸರಿಪಡಿಸುವಂತೆ ಕೋರ್ಟ್‌ಗಳು ನೀಡಿದ್ದ ತೀರ್ಪುಗಳೂ ಅನುಷ್ಠಾನಕ್ಕೆ ಬಂದಿಲ್ಲ. 2011ನೇ ಸಾಲಿನ ಆಯ್ಕೆ ಪಟ್ಟಿಯನ್ನು ಹೈಕೋರ್ಟ್ ರದ್ದುಪಡಿಸಿದ್ದರೂ, ಸರ್ಕಾರ ಅಕ್ರಮಕ್ಕೆ 'ಸಕ್ರಮ'ದ ಮುದ್ರೆ ಒತ್ತಿದೆ.

'ಆಯೋಗದ ಅಧ್ಯಕ್ಷ, ಸದಸ್ಯರ ನೇಮಕ 'ರಾಜಕೀಯ' ಹಿನ್ನೆಲೆ ಹೊಂದಿರುವುದರಿಂದ ನೇಮಕಾತಿಯಲ್ಲಿ 'ರಾಜಿ' ವ್ಯವಹಾರಗಳು ನಿರೀಕ್ಷಿತ. ಹಣ, ಸ್ವಜನಪಕ್ಷಪಾತ ಮತ್ತು ಪ್ರಭಾವದ ಕಾರಣಕ್ಕಾಗಿಯೇ ಈ ಅವ್ಯವಹಾರಗಳು ನಡೆಯುತ್ತವೆ. ಎಸ್.ಎಂ. ಕೃಷ್ಣ, ಧರಂಸಿಂಗ್, ಎಚ್.ಡಿ. ಕುಮಾರಸ್ವಾಮಿ, ಸಿದ್ದರಾಮಯ್ಯ, ಬಿ.ಎಸ್. ಯಡಿಯೂರಪ್ಪ ಆಡಳಿತಾವಧಿಯಲ್ಲಿ ಈ ಎಲ್ಲ ಕೃತ್ಯಗಳು ನಡೆದಿವೆ. 'ಪುಟ್ಟಣ್ಣ (ಈಗ ವಿಧಾನ ಪರಿಷತ್ ಬಿಜೆಪಿ ಸದಸ್ಯ) ಜೆಡಿಎಸ್‌ನಲ್ಲಿದ್ದಾಗ ನನ್ನ ಮೂಲಕ ಅವರ ಕುಟುಂಬದ 10ರಿಂದ 12 ಜನರಿಗೆ ಕೆಪಿಎಸ್‌ಸಿ ಮೂಲಕ ಕ್ಲಾಸ್ ಒನ್ ಹುದ್ದೆ ಕೊಡಿಸಿದ್ದಾರೆ' ಎಂದು ಎರಡು ಬಾರಿ ಮುಖ್ಯಮಂತ್ರಿಯಾಗಿದ್ದ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದ ಮಾತೊಂದು ಕೆಪಿಎಸ್‌ಸಿಯಲ್ಲಿ ವಶೀಲಿ ಕೆಲಸಗಳು ನಡೆಯುತ್ತವೆ ಎನ್ನುವುದಕ್ಕೆ ಪುಷ್ಟಿ. ಭ್ರಷ್ಟಮಾರ್ಗದಿಂದ ನೇಮಕಗೊಂಡ ಅಧಿಕಾರಿಗಳನ್ನು ಮತ್ತು ಆಯ್ಕೆ ಮಾಡಿದ ಭ್ರಷ್ಟರನ್ನು ಸರ್ಕಾರ ರಕ್ಷಿಸುತ್ತಿದೆ. ಹೀಗಾಗಿ, ಅರ್ಹ, ಪ್ರಾಮಾಣಿಕ, ಪ್ರತಿಭಾವಂತ ಅಭ್ಯರ್ಥಿಗಳಿಗೆ ಅನ್ಯಾಯ ಮುಂದುವರೆಯುತ್ತದೆ' ಎನ್ನುತ್ತಾರೆ ಕೆಪಿಎಸ್‌ಸಿ ಮಾಜಿ ಸದಸ್ಯರೊಬ್ಬರು.

'ಭ್ರಷ್ಟಾಚಾರದ ಕೂಪ'ದಿಂದ ಕೆಪಿಎಸ್‌ಸಿಯನ್ನು ಹೊರತಂದು, ಸುಧಾರಣೆಗೆ ಶಿಫಾರಸುಗಳನ್ನು ಮಾಡಲು ಸಿದ್ದರಾಮಯ್ಯ ಸರ್ಕಾರ (2013) ಯುಪಿಎಸ್‌ಸಿ ಮಾಜಿ ಅಧ್ಯಕ್ಷ ಪಿ.ಸಿ. ಹೋಟಾ ನೇತೃತ್ವದಲ್ಲಿ ಸಮಿತಿ ರಚಿಸಿತ್ತು. ಆ ಸಮಿತಿಯ ಶಿಫಾರಸುಗಳಲ್ಲಿ ಸರ್ಕಾರ ಮತ್ತು ಕೆಪಿಎಸ್‌ಸಿ ತನಗೆ ಯಾವುದೋ ಬೇಕೋ ಅವುಗಳನ್ನು ಮಾತ್ರ ಆಯ್ದುಕೊಂಡು ಜಾರಿಗೊಳಿಸಿದೆ!

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 8-5-1997

• 111 ಕೋಟಿ ರಿಯಾಯ್ತಿ: ತೆರಿಗೆ ವಂಚನೆ ತಡೆಗೆ ಚಿದಂಬರಂ ಶಪಥ

ನವದೆಹಲಿ, ಮೇ 7 (ಯುಎನ್‌ಐ)– ಯಾವುದೇ ಬೆಲೆ ತೆತ್ತಾದರೂ ತೆರಿಗೆಗಳ್ಳತನವನ್ನು ತಡೆಗಟ್ಟುವುದಾಗಿ ಇಂದು ಘೋಷಿಸಿದ ಹಣಕಾಸು ಸಚಿವ ಪಿ.ಚಿದಂಬರಂ ಅವರು ಒಟ್ಟು 111 ಕೋಟಿ ರೂಪಾಯಿ ಮೊತ್ತದ, ಹಲವಾರು ವಸ್ತುಗಳ ಮೇಲಿನ ಆಮದು ಸುಂಕವನ್ನೂ ಎಕ್ಸೈಸ್ ಕರವನ್ನೂ ರಿಯಾಯಿತಿಗಳನ್ನು ಪ್ರಕಟಿಸಿದರು.

1997–98ನೇ ಸಾಲಿನ ಆಯವ್ಯಯ ಮುಂಗಡಪತ್ರಕ್ಕೆ ಅಂಗೀಕಾರ ಬಯಸುವ ಹಣಕಾಸು ಮಸೂದೆಯನ್ನು ಅವರು ಇಂದು ಲೋಕಸಭೆಯಲ್ಲಿ ಚರ್ಚೆಗೆ ಮಂಡಿಸಿಸುತ್ತ ಈ ರಿಯಾಯಿತಿಗಳನ್ನು ಪ್ರಕಟಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 8-5-1972

• ಬೆಲೆ ಏರಿಕೆ ತಡೆಗೆ ಸರ್ಕಾರದ ದೃಢ ಸಂಕಲ್ಪ: ಇಂದಿರಾ

ಲಖನೌ: ಮೇ 8– ಅಗತ್ಯ ವಸ್ತುಗಳ ಬೆಲೆ ಏರಿಕೆ ತಡೆಗಟ್ಟಲು ಸರ್ಕಾರ ನಿರ್ಧಾರ ಕೈಗೊಂಡಿರುವುದೆಂದು ಪ್ರಧಾನಮಂತ್ರಿ ಇಂದಿರಾ ಗಾಂಧಿ ಅವರು ಇಂದು ಇಲ್ಲಿ ಘೋಷಿಸಿದರು.

ಇದಕ್ಕಾಗಿ ಕಟ್ಟುನಿಟ್ಟಾದ ಬೆಲೆ ಹತೋಟಿ ಅಥವಾ ಹೆಚ್ಚು ಸಂಖ್ಯೆಯಲ್ಲಿ ನ್ಯಾಯ ಬೆಲೆ ಅಂಗಡಿಗಳನ್ನು ಆರಂಭಿಸುವುದು ಇಲ್ಲವೇ ಎರಡೂ ಕ್ರಮಗಳನ್ನು ಒಟ್ಟಾರೆ ಕಾರ್ಯರೂಕ್ಕೆ ತರುವುದನ್ನು ಅವರು ಪ್ರಕಟಿಸಿದರು.

ಕುಮಾಂವ್ ಗಿರಿಧಾಮದಲ್ಲಿ ಸಾರ್ವಜನಿಕ ಸಭೆ ಉದ್ದೇಶಿಸಿ ಭಾಷಣ ಮಾಡುತ್ತಾ, ಜನರು ಮತ್ತು ಹಿಂದುಳಿದ ಪ್ರದೇಶಗಳ ಕಲ್ಯಾಣಕ್ಕಾಗಿ ಸರ್ಕಾರ ತೀವ್ರ ಗಮನ ನೀಡುವುದೆಂದು ಹೇಳಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಮೇ 8, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ವೈಶಾಖ ಶುಕ್ಲ ಸಪ್ತಮಿ ಗಂ. 17-01 ನಕ್ಷತ್ರ: ಪುಷ್ಯ ಗಂ. 14-58 ಯೋಗ: ಗಂಡ ಗಂ. 20-33, ಕರಣ: ವಣಿಜ ಗಂ. 17-01, ಮೇಷ ಮಾಸದ 24 ನೇ ದಿನ.

ರಾಹುಕಾಲ: ಸಾಯಂಕಾಲ 04:30 – 06:00

ಸೂರ್ಯೋದಯ: 06-10 **ಸೂರ್ಯಾಸ್ತ:** 06-44

ಮುಸ್ಲಿಂ ದಿನಾಂಕ: 06 ಶವ್ವಾಲ್ ಅದೃಷ್ಟ ಸಂಖ್ಯೆ: 3, 11

ಮೇಷ: ಇಂದು ನೀವು ಮಾಡುವ ಹೊಸ ಕಾರ್ಯದಿಂದ ಹೆಜ್ಜೆ ಹೆಜ್ಜೆಗೂ ಸಮಸ್ಯೆಗಳು ಎದುರಾಗುವುದು. ಈ ದಿನ ಯಾವುದೇ ಹೊಸ ನಿರ್ಧಾರವನ್ನು ತೆಗೆದುಕೊಳ್ಳಬೇಡಿ. ಕುಟುಂಬದ ಶುಭ ಕಾರ್ಯಗಳಿಗಾಗಿ ಪ್ರಯಾಣ.

ವೃಷಭ: ಈ ದಿನ ನಿಮ್ಮ ಒಡಹುಟ್ಟಿದವರ ಸಹಾಯ ಸಹಕಾರದಿಂದ ಮಾನಸಿಕ ನೆಮ್ಮದಿ ಹಾಗೂ ಸಂಸಾರದಲ್ಲಿ ಸಮತೋಲನೆ. ನಿಮ್ಮ ಮನೋಭಿಲಾಷೆಗಳನ್ನು ವ್ಯಕ್ತ ಪಡಿಸಲು ಹಿಂಜರಿಯಬೇಡಿ. ಮಕ್ಕಳ ಆರೋಗ್ಯದ ಕಡೆ ಗಮನ ಹರಿಸಿ.

ಮಿಥುನ: ಅಭಿವೃದ್ಧಿಯಲ್ಲಿ ಹಲವು ಅಡೆತಡೆಗಳು ಎದುರಾಗುವುದು. ಸದಾಕಾಲ ಪಕ್ಕದಲ್ಲಿಯೇ ಇರುವ ಪರಿಚಿತರಿಂದ ವಂಚನಾ ಪ್ರಸಂಗ ಇರಲಿದೆ. ನೂತನ ಗೃಹ ನಿರ್ಮಾಣದ ಯೋಜನೆಗೆ ಯೋಚಿಸಬಹುದು.

ಕರ್ಕಾಟಕ: ದೈಹಿಕ ಸಹಾಯ ನಿರೀಕ್ಷಿಸಿದ ಕಡೆಯಿಂದ ದೊರಕಲಿದೆ. ಅಪರಿಚಿತರ ಹತ್ತಿರ ನಿಮ್ಮ ಯಾವುದೇ ಗೌಪ್ಯತೆ ಹಂಚಿಕೊಳ್ಳಬೇಡಿ. ಹೊಸ ಜವಾಬ್ದಾರಿಗಳು ನಿಮ್ಮನ್ನು ಅರಸಿ ಬರಲಿದೆ. ಹೊಸತನದಲ್ಲಿ ಜಯ ಕಾಣುವಿರಿ.

ಸಿಂಹ: ನಿಮ್ಮ ವ್ಯಕ್ತಿತ್ವವು ಇತರರನ್ನು ಇಂದು ವಿಶೇಷವಾಗಿ ಆಕರ್ಷಿಸುವುದು. ಮಾನಸಿಕ ಒತ್ತಡ ಹೆಚ್ಚಾಗಿರುವುದು, ಹಾಗೆಯೇ ತಾಂತ್ರಿಕವಾಗಿ ತಪ್ಪುಗಳು ಆಗದಂತೆ ಎಚ್ಚರವಹಿಸಿ. ಧಾರ್ಮಿಕ ಕೆಲಸ ಕಾರ್ಯಗಳಲ್ಲಿ ಪಾಲ್ಗೊಳ್ಳುವಿರಿ.

ಕನ್ಯಾ: ಅಧಿಕ ಆತ್ಮವಿಶ್ವಾಸದಿಂದ ಸಾಮರ್ಥ್ಯಕ್ಕಿಂತ ಹೆಚ್ಚಿನ ಕೆಲಸ ಮಾಡಲು ಹೋಗುವುದು ಸರಿಯಲ್ಲ. ಮಧ್ಯವರ್ತಿಗಳ ಸಹಾಯದಿಂದಾಗಿ ವಿವಾಹದ ವಿಷಯದಲ್ಲಿ ಅನುಕೂಲ. ವ್ಯಾವಹಾರಿಕವಾಗಿ ಸದಾಕಾಲ ಸಿದ್ಧವಿರಿ.

ತುಲಾ: ಸುಖ-ದುಃಖ, ಲಾಭ-ನಷ್ಟಗಳೆರಡು ಸಮಾನವಾಗಿದ್ದರೂ ಪ್ರತಿಷ್ಠಿತ ಜನರ ಸಹಕಾರದಿಂದ ಸುಧಾರಣೆ. ರೈತರಿಗೆ ಲಾಭಾಂಶ ಅದರಲ್ಲೂ ತೆಂಗಿನಕಾಯಿ ಬೆಳೆಗಾರರಿಗೆ ತಮ್ಮ ಬೆಳೆಗೆ ಅಧಿಕ ಬೆಲೆ ಕಂಡು ಬರುತ್ತದೆ.

ವೃಶ್ಚಿಕ: ಇಂದು ನೀವು ಭ್ರಾತೃ ವರ್ಗದವರಲ್ಲಿ ಸೌಮನಸ್ಯದಿಂದ ವರ್ತಿಸುವುದು ಒಳ್ಳೆಯದು. ಅದರ ಫಲವಾಗಿ ಸೋದರನ ಮೂಲಕ ಕಾರ್ಯ ಕೈಗೂಡುವುದು. ಮಕ್ಕಳಿಗೆ ವಿದ್ಯಾಭ್ಯಾಸದಲ್ಲಿ ಅಥವಾ ಉದ್ಯೋಗ ಅನ್ವೇಷಣೆಯಲ್ಲಿ ಅನುಕೂಲ.

ಧನು: ದೇಹದಲ್ಲಿ ವಾತದ ಬಾಧೆಯು ಉಪಶಮನವಾಗುವುದು. ವೃಥಾ ಅಲೆದಾಟದಿಂದ ಆಯಾಸ. ಕಾರ್ಯಕ್ಷೇತ್ರದಲ್ಲಿ ಕೆಲಸದ ಹೊರೆ ಬೆಟ್ಟದಂತೆ ಇರವುದು. ಪರಿಶ್ರಮದ ದುಡಿಮೆ ದೃಷ್ಟಿ ದೋಷಕ್ಕೆ ಗುರಿಯಾಗುವುದು.

ಮಕರ: ಲೇವಾದೇವಿ ವ್ಯವಹಾರದಲ್ಲಿ ಅಡ್ಡಿ ಆತಂಕ ಎದುರಾದರೂ ದುರ್ಗಾದೇವಿಯ ಆರಾಧನೆಯಿಂದ ಸಹಜವಾಗಿ ಇರಲಿದೆ. ಸಾಮಾಜಿಕವಾಗಿ ಬದುಕಿನಲ್ಲಿ ಹೊಸ ಹುರುಪು. ವಿವೇಕರಹಿತ ಕೆಲಸದಲ್ಲಿ ತೊಡಗಿಸಿಕೊಳ್ಳದಿರಿ.

ಕುಂಭ: ಅನಗತ್ಯ ಖರ್ಚು-ವೆಚ್ಚಗಳಿಗೆ ಕಡಿವಾಣ ಹಾಕುವುದರಿಂದ ಆರ್ಥಿಕ ಸಂಕಷ್ಟ ಅರ್ಧದಷ್ಟು ಕಳೆಯುವುದು. ವೃತ್ತಿಯ ಪರವಾಗಿ ಮುಖ್ಯವಾದ ಕೆಲಸವನ್ನು ಮಾತ್ರ ಕೈಗೆತ್ತಿಕೊಳ್ಳಿ.

ಮೀನ: ಅಪರೂಪದ ಅತಿಥಿಯ ಆಗಮನ ಸಂತೋಷ. ನಂಬಿಕೆಗಳನ್ನು ಪ್ರತಿಪಾದಿಸಲು ಅಂಜಿಕೆ ಬೇಡ. ಪೂರ್ವನಿಯೋಜಿತ ಕೆಲಸ ಕಾರ್ಯಗಳು ಸರ್ವರ ಸಹಾಯದಿಂದ ಮಂದಗತಿಯಲ್ಲಿ ಪೂರ್ಣಗೊಳ್ಳುವುದು.

ಪದಬಂಧ 4951

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈ ವಿಧವಾಗಿ ಪ್ರಾರಂಭವಾಗಿರುವ ಕಲಹ (3)
3.ಮಾನಿನಿಯ ಮೇಲೇ ಸಂದೇಹ! (3)
5.ಎಲ್ಲವೂ ನಶ್ವರವೆಂದು ಹೇಳುತ್ತಿರುವ ಮನುಷ್ಯ (2)
6.ಪೇರಿಸಿಕೊಂಡಿರುವ ಸಾಮಾನುಗಳ ದುರಸ್ತಿ (3)
7.ಪ್ರಾಣಾಯಾಮ ಮಾಡುವಾಗ ಸಾವನ್ನು ತಂದವನು (2)
9.ಜ್ವಾಲಾಮುಖಿಯಿಂದ ಹೊರಹೊಮ್ಮುವ ಧಾತುಗಳ ರಸ (4)
10.ಈತ ಸಾಕ್ಷಾತ್ಕಾರ ಹೊಂದಿದವನು (4)
11.ತಟಾಕದ ದಡ (2)
13.ಪದ್ಮರಾಗಕ್ಕೆ ಅಂಟಿರುವ ಹೂವಿನ ಧೂಳು (3)
15.ಸರೋವರದ ಬಳಿ ಬಿದ್ದಿರುವ ಮಾಲೆ (2)
16.ಭಾಗಲಬ್ಧ ಗೊತ್ತಿರದ ಜಿಪುಣ (3)
17.ಹತ್ತು ವರ್ಷಗಳ ಅವಧಿ (3)

ಮೇಲಿಂದ ಕೆಳಕ್ಕೆ
11.ವರ ಕೊಟ್ಟದ್ದು ವಿಸ್ತಾರವಾದ ನಿರೂಪಣೆ (3)
2. ಪ್ರಜ್ವಲಿಸುವ ಬೆಂಕಿ (3)
3.ಜರ್ಜರಿತ ವಸ್ತುಗಳನ್ನು ಮಾರುವ ಅಂಗಡಿ (3)
4.ನಿಶ್ಚಿತಾರ್ಥಕ್ಕೆ ಹೋಗಬೇಕೆನ್ನುವ ಗೊತ್ತುವಳಿ! (3)
5.ಕಾಲುಗುರಿನಿಂದ ತಲೆಯ ಮುಡಿಯವರೆಗೆ (5)
8.ಮರದಲ್ಲಿಯೇ ಚಿತ್ತವಿಕಲ್ಪ! (5)
12.ಟವಲು ಹಿಡಿದಾತನ ಕೈಯಲ್ಲಿರುವ ಅಂಚೆ (3)
13.ಹಾಡು ಹೇಳಿ ಗಿಟ್ಟಿಸಿಕೊಂಡಿರುವ ಮೆಡಲು (3)
14.ಗದ್ದಲ ನೋಡಿ ಬಿಗಿದ ಕಂಠ (3)
15.ಈತ ಸರಿಸಮನಾದವನು (3)

4950ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಕಪ್ಪ 4.ಡಾಮರ 5.ಅನುಭೂತಿ 6.ತಾಪತ್ರಯ 7.ನಗು 9.ತಮ 13.ತಳಮಳ 14.ಪ್ರತೀಹಾರ 15.ಗಂಜಲ 16.ಪುಂಡ

ಮೇಲಿಂದ ಕೆಳಕ್ಕೆ: 1.ಗಂಡಾಗುಂಡಿ 2.ಕರತಾಡನ 3.ವಿಭೂತಿ 5.ಅಯಸ್ಕಾಂತ 8.ಗುರುತರ 10.ಮಗಳಗಂಡ 11.ತರುಲತೆ 12.ಪ್ರತೀಕ

ಸುಡೊಕು 5337

	8			7			4	
		4	6		8			9
7				1			5	
						6	7	
6		1	7		2			4
								1
				6		5		
	3	6	2		5			7
8		5		4			6	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5336 ಸುಡೊಕು

4	8	1	6	9	7	5	2	3
6	7	5	3	2	4	9	1	8
3	9	2	1	8	5	4	7	6
9	6	4	8	1	3	2	5	7
7	5	3	4	6	2	1	8	9
2	1	8	7	5	9	3	6	4
1	2	7	9	4	6	8	3	5
5	3	9	2	7	8	6	4	1
8	4	6	5	3	1	7	9	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಮ್ಮ ಪದವೇ ಸುಂದರ ಕಾವ್ಯ...

ಅಮ್ಮ ಎಂದರೆ ನಗು, ಖುಷಿ, ಆರೈಕೆ, ಬೆಚ್ಚನೆಯ ಭಾವ, ನೆಮ್ಮದಿ, ಶಕ್ತಿ, ವಾತ್ಸಲ್ಯ ಬೆಳಕು, ನಂಬಿಕೆ ಹೀಗೆ ಇನ್ನೂ ಏನೇನೋ...ಅಲ್ಲವೇ. ಅವಳು ನಮ್ಮೆಲ್ಲರನ್ನ ಹಡೆದವಳು, ಪೊರೆದವಳು. ಅವಳ ದಿನ ಇಂದು. ವಿಶ್ವ ಅಮ್ಮಂದಿರ ದಿನ. ಆಕೆಯನ್ನು ನೆನಪು ಮಾಡಿಕೊಳ್ಳಲು ಈ ದಿನ ಮಾತ್ರವಲ್ಲ, ನಿತ್ಯ ಮಾಡಿಕೊಂಡರೂ ಕಡಿಮೆಯೇ...

• ಸಂಧ್ಯಾರಾಣಿ.ಎಚ್.ಎಂ.

'ಮದರ್ಸ್ ಡೇ' ಅಥವಾ ತಾಯಂದಿರ ದಿನವನ್ನು 1908ರಲ್ಲಿ ಅಮೆರಿಕದಲ್ಲಿ ಆಚರಿಸಲು ನಿರ್ಧರಿಸಲಾಯಿತು. ಅಮೆರಿಕದ ಶಾಂತಿ ಕಾರ್ಯಕರ್ತೆ ಅನಾ ಜಾರ್ವಿಸ್ ತನ್ನ ತಾಯಿಯನ್ನು ತುಂಬಾ ಪ್ರೀತಿಸುತ್ತಿದ್ದರು. ಅನಾ ಮದುವೆ ಆಗಿರಲಿಲ್ಲ. 1905ರಲ್ಲಿ ಅನಾಳ ತಾಯಿ ಮೃತರಾದರು. ತಾಯಿಯ ಮೇಲಿದ್ದ ಪ್ರೀತಿಯನ್ನು ವ್ಯಕ್ತಪಡಿಸಲು ಅನಾ ಈ ದಿನವನ್ನು ಆಯ್ಕೆ ಮಾಡಿಕೊಂಡಿದ್ದರು. ಅವರು ಈ ದಿನವನ್ನು ತಾಯಂದಿರ ದಿನವಾಗಿ ಆಚರಿಸಲು ಆರಂಭಿಸಿದರು. ಅಮೆರಿಕದ ಅಧ್ಯಕ್ಷರಾಗಿದ್ದ ವುಡ್ರೋ ವಿಲ್ಸನ್ ಮೇ 9, 1914 ರಂದು ಪ್ರತಿ ವರ್ಷ ಮೇ 2ನೇ ಭಾನುವಾರದಂದು ತಾಯಂದಿರ ದಿನ ಎಂದು ಆಚರಿಸಲು ಕಾನೂನನ್ನು ಜಾರಿಗೊಳಿಸಿದರು. ಈ ಕಾನೂನು ಜಾರಿಯಾದ ನಂತರ ಹಲವು ದೇಶಗಳಲ್ಲಿ ಮೇ ತಿಂಗಳ 2ನೇ ಭಾನುವಾರ ತಾಯಂದಿರ ದಿನವನ್ನು ಆಚರಿಸಲಾಗುತ್ತದೆ.

ಆದರೆ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ದಿನ ತಾಯಂದಿರ ದಿನವನ್ನು ಆಚರಿಸಲಾಗುತ್ತದೆ. ಲಂಡನ್‌ನಲ್ಲಿ ತಾಯಂದಿರ ದಿನವನ್ನು ಮಾರ್ಚ್ ತಿಂಗಳ 4ನೇ ಭಾನುವಾರ ಆಚರಿಸಲಾಗುತ್ತದೆ. ಗ್ರೀಸ್ ದೇಶದಲ್ಲಿ ಫೆಬ್ರವರಿ 2ರಂದು ಆಚರಿಸಲಾಗುತ್ತದೆ. ಭಾರತ ಸೇರಿ ಹಲವು ದೇಶಗಳಲ್ಲಿ ಪ್ರತಿ ವರ್ಷ ಮೇ ತಿಂಗಳ 2ನೇ ಭಾನುವಾರ ತಾಯಂದಿರ ದಿನ ಆಚರಿಸಲಾಗುತ್ತದೆ.

ಆಡಿ ಬಾ ನನ್ನ ಕಂದ, ಅಂಗಾಲ ತೊಳೆದೇನು ತೆಂಗಿನ ಕಾಯಿ ತಿಳಿನೀರ, ತೆಂಗಿನ ಕಾಯಿ ತಿಳಿನೀರ ತಕ್ಕೊಂಡು ಬಂಗಾರದ ಮೊರೆ ತೊಳೆದೇನಾ...ಎಂದು ಅಂದಿನ ತಾಯಂದಿರು ಹಾಡುತ್ತಿದ್ದರೆ, ಅವರಿಗೆ ಸಮಯವಿತ್ತು. ತನ್ನ ಕಂದನ ಸಾಕುವ ಖುಷಿಯಿತ್ತು. ಇಂದಿನ ತಾಯಂದಿರಿಗೆ ಮಗುವನ್ನು ಸಾಕುವ ಮನಸ್ಸಿದೆ, ಸಮಯವಿಲ್ಲ ಎಂದರೆ ಅತಿಶಯೋಕ್ತಿಯಾಗಲಾರದು.

ಅಮ್ಮ ಎಂದಿಗೂ ಬದಲಾಗದ ಜೀವ. ಆದರೆ ಅಮ್ಮ ನಿರ್ವಹಿಸುವ ಪಾತ್ರಗಳು ಬದಲಾಗಿವೆ. ಬದಲಾದ ಕಾಲ ಘಟ್ಟದಲ್ಲಿ ಅಮ್ಮನ ಪರಿಸ್ಥಿತಿಯನ್ನು ನಿಭಾಯಿಸುವ ಸಂದರ್ಭಗಳು ಬದಲಾಯಿಸಿವೆ. ದುಡಿಮೆ, ಸಂಸಾರ, ಜೀವನದ ಮಜಲುಗಳು ಇಂದಿನ ಹೆಣ್ಣು ಮಕ್ಕಳನ್ನು ಬೇರೊಂದು ದಾರಿಯಲ್ಲಿ ನಡೆಸುತ್ತಿವೆ. ಅಮ್ಮನ ದಾರಿಯಲ್ಲಿ ಮನೆ, ಗಂಡ, ಮಕ್ಕಳು, ಸಂಸಾರ, ಹಬ್ಬ, ತವರುಮನೆ ಇವೇ ಉತ್ತುಂಗದಲ್ಲಿದ್ದ ಕಾಲ ಒಂದಿತ್ತು. ಆದರೆ ಮಗಳ ಕಾಲದಲ್ಲಿ ವಿದ್ಯೆ, ಸ್ನಾತಕೋತ್ತರ ಪದವಿ, ದುಡಿಮೆ, ಸ್ವಾವಲಂಬನೆ, ವೈಯಕ್ತಿಕ ಬದುಕು ಇವೇ ಪ್ರಾಶಸ್ತ್ಯ ಪಡೆದಿವೆ.

ಅಮ್ಮ ಇಂದು ಮಮ್ಮಿಯಾಗಿದ್ದಾಳೆ ಅಷ್ಟೇ... ಪ್ರೀತಿಯಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಇಂದಿನ ಅಮ್ಮ ಸ್ಪರ್ಧಾ ಜಗತ್ತಿನ ಅಮ್ಮನಾಗಿದ್ದಾಳೆ. ಎಲ್ಲದರಲ್ಲಿಯೂ ಸ್ಪರ್ಧೆಯೇ ಸರಿ ಎನ್ನುವ ಅಮ್ಮನಾಗಿದ್ದಾಳೆ. ದುಡಿಮೆಯ ಜೊತೆ ಮಗು ಸಾಕುವ ದೊಡ್ಡ ಜವಾಬ್ದಾರಿ ಇಂದು ದುಡಿಯುವ ಹೆಣ್ಣುಮಕ್ಕಳ ಮೇಲೆ ಇದೆ.

ಅಮ್ಮ ತ್ಯಾಗಮೂರ್ತಿ ಎಂಬ ಮಾತಿದೆ. ಅದು ಸತ್ಯವೂ ಹೌದು. ತನ್ನ ಖುಷಿಗಳನ್ನು ತ್ಯಾಗ ಮಾಡಿ ವರ್ಷಕ್ಕೆ ಒಂದು ಬಾರಿ ಬಟ್ಟೆ, ಪ್ರವಾಸ ಎಂದು ಖರ್ಚು ಮಾಡುತ್ತಿದ್ದರು ಅಂದಿನ ಅಮ್ಮಂದಿರು. ತಾವು ದುಡಿದು ಮಕ್ಕಳನ್ನು ಎಂಜಿನಿಯರ್, ಡಾಕ್ಟರ್ ಮಾಡುವ ಕನಸು ಕಟ್ಟಿಕೊಳ್ಳುತ್ತಾರೆ ಇಂದಿನ ಅಮ್ಮಂದಿರು.

ಅಮ್ಮನನ್ನು ವರ್ಣಿಸಲು ಪದಗಳ ಕೊರತೆಯಾಗಬಹುದು. ಆದರೆ ಪದಗಳಿಗೂ ನಿಲುಕದ ಪ್ರೀತಿಯ ಗಣಿ ಅಮ್ಮ, ಅಮ್ಮನ ದಿನವಿಂದು, ನಾ ಬೇಡುವೆನು ಇಂದು, ಜನ್ಮ, ಜನ್ಮಕ್ಕೂ ನಿನ್ನನ್ನೇ ತಾಯಿಯಾಗಿ ಆ ದೇವರು ನೀಡಲೆಂದು... ಎಂದೆಂದಿಗೂ ನಗುತಿರು ಅಮ್ಮ.

ಪ್ರತಿಮೆ ಸ್ಥಾಪಿಸಿದ ಶಾಸಕ ರಾಜುಗೌಡ, ಉದ್ಯಮಿ ದಯಾನಂದ, ಇಲ್ಲಿ ತಾಯಿಗೆ ನಿತ್ಯ ಪೂಜೆ

• ಭೀಮಶೇನರಾವ ಕುಲಕರ್ಣಿ

ಹುಣಸಗಿ (ಯಾದಗಿರಿ ಜಿಲ್ಲೆ): ಉದ್ಯಮಿ ಎಸ್.ಪಿ. ದಯಾನಂದ ಹಾಗೂ ಸುರಪುರ ಶಾಸಕ ರಾಜೂಗೌಡ ಅವರು ತಮ್ಮೂರಲ್ಲಿ ತಮ್ಮ ತಾಯಿ ಮೂರ್ತಿಗಳನ್ನು ನಿರ್ಮಿಸಿದ್ದಾರೆ.

ತಾಲ್ಲೂಕಿನ ವಜ್ಜಲ ಗ್ರಾಮದ ಉದ್ಯಮಿ ಎಸ್.ಪಿ. ದಯಾನಂದ ಸದ್ಯ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ಹತ್ತು ವರ್ಷಗಳ ಹಿಂದೆ ಹುಣಸಗಿ–ವಜ್ಜಲ ಮುಖ್ಯ ರಸ್ತೆಯಲ್ಲಿ ತಮ್ಮ ತಾಯಿ ಸುಶೀಲಮ್ಮ ಪಟ್ಟಣಶೆಟ್ಟಿ ಅವರ ನೆನಪಿಗಾಗಿ ದೇವಸ್ಥಾನ ನಿರ್ಮಿಸಿದ್ದಾರೆ. ಅವರ ಮೂರ್ತಿಯನ್ನೂ ಅಲ್ಲಿ ಪ್ರತಿಷ್ಠಾಪಿಸಿದ್ದು, ಇಲ್ಲಿ ನಿತ್ಯ ಪೂಜೆ ನಡೆಯುತ್ತಿದೆ.

'ಕಷ್ಟಪಟ್ಟು ದುಡಿದರೆ ಮುಂದೆ ರಾಜನಂತೆ ಮೆರೆಯುತ್ತೀಯಾ ಎಂದು ತಾಯಿ ಹೇಳುತ್ತಿದ್ದಳು. ಆಕೆಯ ಮಾತು ಇಂದು ಸತ್ಯವಾಗಿದೆ. ನಿತ್ಯ ನಾನು ತಾಯಿಯ ಚಿತ್ರಕ್ಕೆ ಪೂಜೆ ಸಲ್ಲಿಸಿಯೇ ಮನೆಯಿಂದ ಹೊರಡುತ್ತೇನೆ' ಎಂದು ದಯಾನಂದ ಹೇಳಿದರು.

ಶಾಸಕ ರಾಜೂಗೌಡ ಅವರು ಕೊಡೇಕಲ್ ಗ್ರಾಮದಲ್ಲಿ ಅಮೃತ ಶಿಲೆಯ ತಾಯಿಯ ಮೂರ್ತಿಯನ್ನು ಪ್ರತಿಷ್ಠಾಪಿಸಿ ನಿತ್ಯವೂ ಪೂಜೆ ನಡೆಯುವಂತೆ ನೋಡಿಕೊಳ್ಳುತ್ತಿದ್ದಾರೆ.

'ಜಗತ್ತಿನಲ್ಲಿ ಎಲ್ಲರಿಗೂ ಒಳ್ಳೆಯದನ್ನು ಬಯಸುವ ಏಕೈಕ ಜೀವ ತಾಯಿ. ಆ ತಾಯಿಯನ್ನು ಎಷ್ಟು ಪೂಜಿಸಿದರೂ ಕಡಿಮೆ. ಸಮಾಜದಲ್ಲಿ ಹೇಗೆ ಬದುಕಬೇಕು ಎಂಬುದನ್ನು ಕಲಿಸಿರುವ ನನ್ನ ತಾಯಿ ತಿಮ್ಮಮ್ಮ ಅವರೇ ನನ್ನ ಪಾಲಿನ ದೇವರು' ಎಂದು ರಾಜೂಗೌಡ ಹೇಳಿದರು.



ಹುಣಸಗಿ–ವಜ್ಜಲ ಮುಖ್ಯ ರಸ್ತೆಯಲ್ಲಿರುವ ತಮ್ಮ ತಾಯಿಯ ಮೂರ್ತಿಯೊಂದಿಗೆ ಉದ್ಯಮಿ ಎಸ್.ಪಿ.ದಯಾನಂದ

ಸುರಪುರ ಕ್ಷೇತ್ರದ ಶಾಸಕ ರಾಜೂಗೌಡ ಅವರು ಕೊಡೇಕಲ್ ಗ್ರಾಮದಲ್ಲಿ ನಿರ್ಮಿಸಿರುವ ತಮ್ಮ ತಾಯಿಯ ಮೂರ್ತಿ

ಇಂದೋರ್: ಅಗ್ನಿ ಅವಘಡ- 7 ಮಂದಿ ಸಾವು

ಇಂದೋರ್ (ಪಿಟಿಐ): ಇಲ್ಲಿನ ವಿಜಯನಗರ ಪ್ರದೇಶದ ಎರಡು ಅಂತಸ್ತಿನ ವಸತಿ ಕಟ್ಟಡದಲ್ಲಿ ಶನಿವಾರ ನಸುಕಿನಲ್ಲಿ ಸಂಭವಿಸಿದ ಅಗ್ನಿ ಅವಘಡದಲ್ಲಿ 7 ಮಂದಿ ಸಾವಿಗೀಡಾಗಿದ್ದು, ಇತರ 9 ಜನರು ಗಾಯಗೊಂಡಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಬೆಂಕಿ ಹೊತ್ತಿಕೊಂಡಿದೆ. ಬಳಿಕ, ವಸತಿ ಸಂಕೀರ್ಣದ ಪಾರ್ಕಿಂಗ್‌ನಲ್ಲಿದ್ದ ವಾಹನಗಳಿಗೂ ಆವರಿಸಿದೆ ಎಂದು ವಿಜಯನಗರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ತಹಜೀಬ್ ಖಾಜಿ ಪಿಟಿಐಗೆ ತಿಳಿಸಿದ್ದಾರೆ. 'ಪ್ರಾಣ ಉಳಿಸಿಕೊಳ್ಳಲು ಕಟ್ಟಡದಿಂದ ಜಿಗಿದ ಕೆಲವರಿಗೆ ಗಾಯಗಳಾಗಿವೆ. ಅಗ್ನಿಶಾಮಕ ದಳ ಸಿಬ್ಬಂದಿ ಸ್ಥಳಕ್ಕೆ ತಡವಾಗಿ ಬಂದರು. ಅವರು ಬೇಗನೆ ಬಂದಿದ್ದರೆ ಕೆಲವರ ಪ್ರಾಣ ಉಳಿಸಬಹುದಿತ್ತು' ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

ಮಗಳ ಮೇಲೆ ತಂದೆ ಅತ್ಯಾಚಾರ

ಅರಕಲಗೂಡು: ತಾಲ್ಲೂಕಿನ ಗ್ರಾಮವೊಂದರಲ್ಲಿ 14 ವರ್ಷದ ಮಗಳ ಮೇಲೆ ಅತ್ಯಾಚಾರ ನಡೆಸಿದ ತಂದೆಯನ್ನು ಪೊಲೀಸರು ಬಂಧಿಸಿದ್ದಾರೆ. ಗರ್ಭಿಣಿಯಾಗಿರುವ ಮಗಳು ದೂರು ನೀಡಿದ್ದಾರೆ.

ನ್ಯಾಯಮೂರ್ತಿಗಳ ಸಂಖ್ಯೆ 34ಕ್ಕೆ ಏರಿಕೆ
'ಸುಪ್ರೀಂ'ಗೆ ಧುಲಿಯಾ, ಪಾರ್ದೀವಾಲಾ

ನವದೆಹಲಿ (ಪಿಟಿಐ): ಗುವಾಹಟಿ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸುಧಾಂಶು ಧುಲಿಯಾ ಮತ್ತು ಗುಜರಾತ್ ಹೈಕೋರ್ಟ್‌ನ ನ್ಯಾಯಮೂರ್ತಿ ಜಮ್‌ಶೇದ್ ಬಿ. ಪಾರ್ದೀವಾಲಾ ಅವರಿಗೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ಕೇಂದ್ರ ಸರ್ಕಾರ ಶನಿವಾರ ಬಡ್ತಿ ನೀಡಿದೆ. ಇದರೊಂದಿಗೆ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳ ಒಟ್ಟು ಸಂಖ್ಯೆ 34ಕ್ಕೆ ಏರಿದೆ ಮತ್ತು ಮಂಜೂರಾದ ಎಲ್ಲ ಹುದ್ದೆಗಳೂ ಭರ್ತಿ ಆದಂತಾಗಿದೆ.

ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ಕೊಲಿಜಿಯಂ, ಈ ಇಬ್ಬರ ಬಡ್ತಿಗೆ ಎರಡು ದಿನಗಳ ಹಿಂದೆ ಶಿಫಾರಸು ಮಾಡಿತ್ತು.

1965ರಲ್ಲಿ ಜನಿಸಿದ ಪಾರ್ದೀವಾಲಾ ಅವರು 2028ರಲ್ಲಿ ಮುಖ್ಯ ನ್ಯಾಯಮೂರ್ತಿ ಹುದ್ದೆಗೆ ಏರಲಿದ್ದಾರೆ. ಎರಡು ವರ್ಷಕ್ಕೂ ಹೆಚ್ಚಿನ ಅವಧಿಗೆ ಅವರು ಈ ಹುದ್ದೆಯಲ್ಲಿ ಇರಲಿದ್ದಾರೆ. ಸುಪ್ರೀಂ ಕೋರ್ಟ್‌ನ ಮೊದಲ ಮಹಿಳಾ ಮುಖ್ಯ ನ್ಯಾಯಮೂರ್ತಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿರುವ ಬಿ.ವಿ. ನಾಗರತ್ನ ಅವರು ನಿವೃತ್ತರಾದ ಬಳಿಕ ಪಾರ್ದೀವಾಲಾ ಅವರು ಮುಖ್ಯ ನ್ಯಾಯಮೂರ್ತಿ ಆಗಲಿದ್ದಾರೆ.

ಧುಲಿಯಾ ಅವರಿಗೆ ಮೂರು ವರ್ಷಗಳಿಗೂ ಹೆಚ್ಚಿನ ಅವಧಿ ಇದೆ. ಅವರ ತಮ್ಮ ತಿಗಮಾಂಶು ಧುಲಿಯಾ ಅವರು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಸಿನಿಮಾ ನಿರ್ದೇಶಕ ಮತ್ತು ನಟ.

2022ರಲ್ಲಿ ಸುಪ್ರೀಂ ಕೋರ್ಟ್ ಮೂವರು ಮುಖ್ಯ ನ್ಯಾಯಮೂರ್ತಿಗಳನ್ನು ಕಾಣಲಿದೆ. 1950ರಲ್ಲಿ ಸುಪ್ರೀಂ ಕೋರ್ಟ್ ಸ್ಥಾಪನೆಯಾದ ಬಳಿಕ ಎರಡನೇ ಬಾರಿ ಇಂತಹ ಸನ್ನಿವೇಶ ಸೃಷ್ಟಿಯಾಗಲಿದೆ.

ರಮಣ ಅವರು ಇದೇ ಆಗಸ್ಟ್ 26ರಂದು ನಿವೃತ್ತ ರಾಗಲಿದ್ದಾರೆ. ನಂತರ ಈ ಹುದ್ದೆಗೇರಲಿರುವ ನ್ಯಾಯಮೂರ್ತಿ ಉದಯ್ ಉಮೇಶ್ ಲಲಿತ್ ಅವರ ಅವಧಿ ಸುಮಾರು ಎರಡು ತಿಂಗಳು ಮಾತ್ರ. ಲಲಿತ್ ಅವರ ನಿವೃತ್ತಿಯ ಬಳಿಕ, ನ್ಯಾಯ ಮೂರ್ತಿ ಡಿ.ವೈ. ಚಂದ್ರಚೂಡ್ ಮುಖ್ಯ ನ್ಯಾಯಮೂರ್ತಿ ಆಗಲಿದ್ದಾರೆ. ಎರಡು ವರ್ಷಕ್ಕೂ ಹೆಚ್ಚು ಕಾಲ ಅವರು ಈ ಹುದ್ದೆಯಲ್ಲಿ ಇರಲಿದ್ದಾರೆ.

5 ವರ್ಷ ಬಳಿಕ ಅಲ್ಪಸಂಖ್ಯಾತರ ನೇಮಕ

ಪಾರ್ದೀವಾಲಾ ಅವರು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಹುದ್ದೆಗೇರಿದ ಪಾರ್ಸಿ ಸಮುದಾಯದ ನಾಲ್ಕನೇ ವ್ಯಕ್ತಿ. ಐದು ವರ್ಷಗಳಲ್ಲಿ ಇದೇ ಮೊದಲಿಗೆ ಅಲ್ಪಸಂಖ್ಯಾತ ಸಮುದಾಯದ ವ್ಯಕ್ತಿಯೊಬ್ಬರನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಹುದ್ದೆಗೆ ನೇಮಿಸಲಾಗಿದೆ. ಕರ್ನಾಟಕ ಹೈಕೋರ್ಟ್‌ನಲ್ಲಿ ನ್ಯಾಯಮೂರ್ತಿಯಾಗಿದ್ದ ಅಬ್ದುಲ್ ನಝೀರ್ ಅವರಿಗೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಹುದ್ದೆಗೆ 2017ರಲ್ಲಿ ಬಡ್ತಿ ನೀಡಲಾಗಿತ್ತು.

ಬಗ್ಗಾ ಬಂಧನ ಪ್ರಕರಣ: ಹೈಕೋರ್ಟ್‌ಗೆ ಪಂಜಾಬ್ ಅರ್ಜಿ
'ಸಿಸಿಟಿವಿ ಕ್ಯಾಮೆರಾ ದೃಶ್ಯ ಸಂರಕ್ಷಿಸಿ'

ಚಂಡೀಗಡ (ಪಿಟಿಐ): ಬಿಜೆಪಿ ಮುಖಂಡ ತಜಿಂದರ್ ಪಾಲ್ ಬಗ್ಗಾ ಬಂಧನ ಕುರಿತಂತೆ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ಗೆ ಪಂಜಾಬ್ ಸರ್ಕಾರವು ಶನಿವಾರ ಎರಡು ಅರ್ಜಿಗಳನ್ನು ಸಲ್ಲಿಸಿದೆ. ಕೇಂದ್ರ ಸರ್ಕಾರ ಹಾಗೂ ದೆಹಲಿ ಪೊಲೀಸರನ್ನು ಈ ಪ್ರಕರಣದಲ್ಲಿ ಪ್ರತಿವಾದಿಗಳಾಗಿ ಮಾಡುವಂತೆ ಒಂದು ಅರ್ಜಿಯಲ್ಲಿ ಕೋರಿದೆ.

ಹರಿಯಾಣದ ಕುರುಕ್ಷೇತ್ರದ ಪಿಪ್ಲಿ ಹಾಗೂ ಸಾದರ್ ಪೊಲೀಸ್ ಠಾಣೆಗಳು ಹಾಗೂ ದೆಹಲಿಯ ಜನಕಪುರಿ ಪೊಲೀಸ್ ಠಾಣೆಗಳಲ್ಲಿ ಶುಕ್ರವಾರ ನಡೆದ ಚಟುವಟಿಕೆಗಳ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಸಂರಕ್ಷಿಸಿ ಇಡಬೇಕು ಎಂದು ಮತ್ತೊಂದು ಅರ್ಜಿಯಲ್ಲಿ ಮನವಿ ಮಾಡಲಾಗಿದೆ.

'ಪಂಜಾಬ್ ಸರ್ಕಾರ ಎರಡು ಅರ್ಜಿಗಳನ್ನು ಸಲ್ಲಿಸಿದ್ದು, ಈ ಕುರಿತಂತೆ ಕೋರ್ಟ್ ನೋಟಿಸ್ ಹೊರಡಿಸಿದರೆ, ಅದಕ್ಕೆ ಪ್ರತಿಕ್ರಿಯೆ ನೀಡುತ್ತೇವೆ' ಎಂದು ದೆಹಲಿ ಪೊಲೀಸರ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಸತ್ಯಪಾಲ್ ಜೈನ್ ತಿಳಿಸಿದರು.

ಬಗ್ಗಾ ಬಂಧನಕ್ಕೆ ತೆರಳಿದ್ದ ತಮ್ಮ ರಾಜ್ಯದ ಪೊಲೀಸ್ ಸಿಬ್ಬಂದಿಯನ್ನು ಜನಕಪುರಿ ಹಾಗೂ ಕುರುಕ್ಷೇತ್ರ ಪೊಲೀಸ್ ಠಾಣೆಗಳಲ್ಲಿ ವಶಕ್ಕೆ ಪಡೆಯಲಾಗಿತ್ತು ಎಂದು ಪಂಜಾಬ್ ಸರ್ಕಾರ ಶುಕ್ರವಾರ ಆರೋಪಿಸಿತ್ತು. ಈ ಸಂಬಂಧ ಹೈಕೋರ್ಟ್‌ನಲ್ಲಿ ಪಂಜಾಬ್ ಸರ್ಕಾರ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿತ್ತು. ಆದರೆ, ಪೊಲೀಸರನ್ನು ವಶಕ್ಕೆ ಪಡೆಯಲಾಗಿತ್ತು ಎಂಬ ಆರೋಪವನ್ನು ದೆಹಲಿ ಹಾಗೂ ಹರಿಯಾಣ ಪೊಲೀಸರು ಅಲ್ಲಗಳೆದಿದ್ದಾರೆ. ನ್ಯಾಯಮೂರ್ತಿ ಲಲಿತ್ ಬಾತ್ರಾ ಅವರ ಪೀಠದಲ್ಲಿ ಹೇಬಿಯಸ್ ಕಾರ್ಪಸ್ ಅರ್ಜಿ ವಿಚಾರಣೆ ನಡೆಯುತ್ತಿರುವ ಕಾರಣ, ನ್ಯಾಯಮೂರ್ತಿ ಜಿ.ಎಸ್. ಗಿಲ್ ಅವರ ಪೀಠವು ವಿಚಾರಣೆಯನ್ನು ಮಂಗಳವಾರಕ್ಕೆ ಮುಂದೂಡಿತು.

'ಪಂಜಾಬ್ ರಾಜ್ಯದ ಯಾವ ಪೊಲೀಸರನ್ನೂ ನಮ್ಮ (ದೆಹಲಿ) ಪೊಲೀಸರು ವಶಕ್ಕೆ ಪಡೆದಿಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತೇನೆ. ದೆಹಲಿ ಕೋರ್ಟ್ ಆದೇಶದ ಪ್ರಕಾರ, ಹರಿಯಾಣದ ಪಿಪ್ಲಿಯಲ್ಲಿ ಬಗ್ಗಾ ಅವರನ್ನ ನಮ್ಮ ಕಸ್ಟಡಿಗೆ ಪಡೆಯಲಾಗಿದೆ' ಎಂದು ಜೈನ್ ಹೇಳಿದರು.

ದೆಹಲಿಯ ಜನಕಪುರಿಯಲ್ಲಿರುವ ತಜಿಂದರ್ ಬಗ್ಗಾ ನಿವಾಸಕ್ಕೆ ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಶನಿವಾರ ಭೇಟಿ ನೀಡಿದರು –ಪಿಟಿಐ ಚಿತ್ರ

ಪೊಲೀಸರ ಭರವಸೆ

ನವದೆಹಲಿ (ಪಿಟಿಐ): ಬಿಜೆಪಿ ಮುಖಂಡ ತಜಿಂದರ್ ಪಾಲ್ ಬಗ್ಗಾ ಅವರು ತಮ್ಮ ಸುರಕ್ಷತೆ ಬಗ್ಗೆ ಆತಂಕ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ, ಅವರಿಗೆ ಸೂಕ್ತ ಭದ್ರತೆ ಒದಗಿಸಲು ಕ್ರಮ ಕೈಗೊಳ್ಳುವುದಾಗಿ ದೆಹಲಿ ಪೊಲೀಸರು ಶನಿವಾರ ಭರವಸೆ ನೀಡಿದ್ದಾರೆ.

ಬಲವಂತದ ಕ್ರಮ ಬೇಡ: ಹೈಕೋರ್ಟ್

ಚಂಡೀಗಡ (ಪಿಟಿಐ): ಮೊಹಾಲಿ ನ್ಯಾಯಾಲಯ ಹೊರಡಿಸಿದ ಬಂಧನ ವಾರಂಟ್‌ಗೆ ತಡೆಯಾಜ್ಞೆ ನೀಡುವಂತೆ ಕೋರಿ ಬಿಜೆಪಿ ಮುಖಂಡ ತಜಿಂದರ್ ಪಾಲ್ ಬಗ್ಗಾ ಸಲ್ಲಿಸಿದ್ದ ಅರ್ಜಿಯನ್ನು ಶನಿವಾರ ಮಧ್ಯರಾತ್ರಿ ವಿಚಾರಣೆ ನಡೆಸಿದ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಬಗ್ಗಾ ವಿರುದ್ಧ ಬಲವಂತದ ಕ್ರಮ ತೆಗೆದುಕೊಳ್ಳದಂತೆ ಸೂಚಿಸಿತು.

'ನ್ಯಾಯಮೂರ್ತಿ ಅನೂಪ್ ಚಿತ್ಕಾರ ಅವರು ಬಗ್ಗಾ ಅವರ ಅರ್ಜಿಯನ್ನು ಅವರ ನಿವಾಸದಲ್ಲಿ ತುರ್ತು ವಿಚಾರಣೆಗೆ ಕೈಗೆತ್ತಿಕೊಂಡರು. ಮೇ 10ರವರೆಗೆ ಬಗ್ಗಾ ಅವರ ವಿರುದ್ಧ ಬಲವಂತದ ಕ್ರಮ ತೆಗೆದುಕೊಳ್ಳದಂತೆ ನ್ಯಾಯಮೂರ್ತಿಗಳು ಆದೇಶಿಸಿದ್ದಾರೆ' ಎಂದು ಬಗ್ಗಾ ಅವರ ವಕೀಲ ಚೇತನ್ ಮಿತ್ತಲ್ ಹೇಳಿದ್ದಾರೆ.

ದ್ವೇಷ ಭಾಷಣ: 'ಸುಪ್ರೀಂ' ಆಕ್ಷೇಪಣೆ ಬಳಿಕ ಪೊಲೀಸ್ ಕ್ರಮ
ವರಸೆ ಬದಲಿಸಿ ಎಫ್‌ಐಆರ್ ದಾಖಲಿಸಿದ ದೆಹಲಿ ಪೊಲೀಸ್

ಪ್ರಜಾವಾಣಿ ವಾರ್ತೆ



ನವದೆಹಲಿ: ಉತ್ತರಾಖಂಡದ ಹರಿದ್ವಾರದಲ್ಲಿ 2021ರ ಡಿಸೆಂಬರ್‌ನಲ್ಲಿ ಆಯೋಜಿಸಲಾಗಿದ್ದ ಧರ್ಮ ಸಂಸತ್ ಕಾರ್ಯಕ್ರಮದಲ್ಲಿ ಮಾಡಲಾಗಿತ್ತು ಎನ್ನಲಾದ ದ್ವೇಷ ಭಾಷಣ ಕುರಿತು ಎಫ್‌ಐಆರ್ ದಾಖಲಿಸಲಾಗಿದೆ ಎಂದು ದೆಹಲಿ ಪೊಲೀಸರು ತಿಳಿಸಿದ್ದಾರೆ.

ಈ ಕಾರ್ಯಕ್ರಮದಲ್ಲಿ ದ್ವೇಷ ಭಾಷಣ ಮಾಡಲಾಗಿಲ್ಲ ಎಂದು ಈ ಮೊದಲು ದೆಹಲಿ ಪೊಲೀಸರು ಹೇಳಿದ್ದರು. ಆದರೆ ದೆಹಲಿ ಪೊಲೀಸರ ಈ ಕ್ರಮವನ್ನು ಸುಪ್ರೀಂ ಕೋರ್ಟ್ ಆಕ್ಷೇಪಿಸಿದ ಬಳಿಕ, ವರಸೆ ಬದಲಿಸಿದ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಈ ಕುರಿತು ಪ್ರಮಾಣಪತ್ರ ಸಲ್ಲಿಸಿರುವ ದೆಹಲಿ ಪೊಲೀಸ್, 'ಸಾಕ್ಷ್ಯಗಳನ್ನು ಪರಿಶೀಲಿಸಿದ ಬಳಿಕ ದ್ವೇಷ ಭಾಷಣ ಪ್ರಕರಣಕ್ಕೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಿಸಲಾಗಿದೆ' ಎಂದಿದೆ.

ಕಾರ್ಯಕ್ರಮಕ್ಕೆ ಸಂಬಂಧಿಸಿದ ವಿಡಿಯೊವೊಂದು ಯೂಟ್ಯೂಬ್‌ನಲ್ಲಿ ದೊರೆತಿದೆ. ಹಲವಾರು ಸಾಕ್ಷ್ಯಗಳ ಪರಿಶೀಲನೆ ನಡೆಸಿದ ಬಳಿಕ ಭಾರತೀಯ ದಂಡ ಸಂಹಿತೆಯ 153ಎ, 295ಎ, 298 ಮತ್ತು 34 ಸೆಕ್ಷನ್ ಅಡಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇದಕ್ಕೂ ಮೊದಲು ದ್ವೇಷ ಭಾಷಣ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ್ದ ದೆಹಲಿ ಪೊಲೀಸ್, 'ಧರ್ಮ ಸಂಸತ್‌ನಲ್ಲಿ ಯಾವುದೇ ಸಮುದಾಯದ ವಿರುದ್ಧ ದ್ವೇಷ ಬಿತ್ತುವ ಮಾತುಗಳನ್ನು ಆಡಲಾಗಿಲ್ಲ. ಮುಸ್ಲಿಮರ ಹತ್ಯೆ ನಡೆಸುವಂತೆ ಯಾರೂ ಕರೆ ನೀಡಿಲ್ಲ' ಎಂದು ಹೇಳಿತ್ತು.

ದೂರುದಾರರಾದ ಪತ್ರಕರ್ತ ಖುರ್ಬಾನ್ ಆಲಿ ಮತ್ತು ಪಟ್ನಾ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಅಂಜನಾ ಪ್ರಕಾಶ್ ಅವರ ಪರ ಹಾಜರಾಗಿದ್ದ ಹಿರಿಯ ವಕೀಲ ಕಪಿಲ್ ಸಿಬಲ್ ಅವರು ದೆಹಲಿ ಪೊಲೀಸರ ನಿಲುವನ್ನು ಪ್ರಶ್ನಿಸಿದ್ದರು.

ಯಮುನಾ ಎಕ್ಸ್‌ಪ್ರೆಸ್‌ವೇನಲ್ಲಿ ಅಪಘಾತ- 7 ಸಾವು

ಮಥುರಾ (ಪಿಟಿಐ): ಇಲ್ಲಿನ ಯಮುನಾ ಎಕ್ಸ್‌ಪ್ರೆಸ್‌ವೇನಲ್ಲಿ ಶನಿವಾರ ಸಂಭವಿಸಿದ ಅಪಘಾತದಲ್ಲಿ ಒಂದೇ ಕುಟುಂಬದ ಏಳು ಜನರು ಸ್ಥಳದಲ್ಲೇ ಮೃತಪಟ್ಟು, ಇಬ್ಬರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮೃತರು ಹರ್ದೋಯಿಯಲ್ಲಿ ಮದುವೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ನೋಯ್ಡಾಕ್ಕೆ ಹಿಂತಿರುಗುತ್ತಿದ್ದರು. ಅವರಿದ್ದ ಕಾರು ಮುಂದಿದ್ದ ವಾಹನವೊಂದಕ್ಕೆ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದೆ ಎಂದು ಎಸ್ಪಿ ಶ್ರೀಶ ಚಂದ್ರ ಹೇಳಿದ್ದಾರೆ. 'ಕಾರಿನ ಅತಿ ವೇಗವೇ ಈ ಅಪಘಾತಕ್ಕೆ ಕಾರಣ ಆಗಿರಬೇಕು ಎಂದು ಪೊಲೀಸರು ಅಂದಾಜಿಸಿದ್ದಾರೆ.

ಪಟ್ಟಣ ಪಂಚಾಯತ ಕಾರ್ಯಾಲಯ, ಮುಳಗುಂದ | **TOWN PANCHAYATH MULGUND**

ಜಿಲ್ಲಾ:ಗದಗ ತಾ|| ಗದಗ | DI:GADAG TQ:GADAG
ವೆಬ್: www.mulagundatown.mrc.gov.in | WEB: www.mulagundatown.mrc.gov.in
ಇ–ಮೇಲ್: tpcmulgund@yahoo.in | E-mail:tpcmulgund@yahoo.in
ದೂರವಾಣಿ: 08372–280128 | Phone: 08372-280128
ಪೌರಾಡಳಿತ ಇಲಾಖೆ

ಕ್ರ.ಸಂ/ಪ.ಪಂ.ಮು/ತಾಂತ್ರೀಕ.ವಿ/ಘ.ತ್ಯಾ.ಸ.ವಿ.ವಾ.ಚಾ.ಟೆಂ./ವಹಿ/ /2022–23 ದಿನಾಂಕ: 06/05/2022

ಅಲ್ಪಾವದಿ ಟೆಂಡರ್ ಪ್ರಕಟಣೆ

ಕರ್ನಾಟಕ ಪಾರದರ್ಶಕ ಅಧಿನಿಯಮ 1999 & 2020 ರಡಿ ಮುಳಗುಂದ ಪಟ್ಟಣ ಪಂಚಾಯತಿಯ ಸನ್ 2022–23ನೇ ಸಾಲಿನ ಪಟ್ಟಣ ಪಂಚಾಯತಿಯ ಅನುದಾನದಲ್ಲಿ **ಇಂಡೆಂಟ್ ನಂಬರ. DMA/2022-23/SWM/DRIVER** ನೇದ್ದರ್ ತ್ಯಾಜ್ಯ ಸಾಗಾಟದ ವಾಹನಗಳಿಗೆ ಡ್ರೈವರ್‌ಗಳು, ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಮಷಿನ್ ಅಪರೇಟರ್ ಹಾಗೂ ವಾಚಮನ್‌ಗಳನ್ನು ಹೊರಗುತ್ತಿಗೆ ಮೂಲಕ ಪೂರೈಸಲು ಅರ್ಹ ಗುತ್ತಿಗೆದಾರರಿಂದ ಇ_ಪ್ರೊಕ್ಯೂರಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಆಸಕ್ತ ಅರ್ಹ ಬಿಜನ್ನಿದಾರರು ವಿವರಗಳಿಗೆ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆಯಬಹುದು.

1.ಇ_ಪ್ರೊಕ್ಯೂರಮೆಂಟ್ ವೇದಿಕೆಯಡಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:21/05/2022 ಸಾಯಂಕಾಲ 04:30 ಘಂಟೆವರೆಗೆ.
2.ಇ_ಪ್ರೊಕ್ಯೂರಮೆಂಟ್ ವೇದಿಕೆಯಡಿ ಟೆಂಡರ್ ತೆರೆಯುವ ದಿನಾಂಕ ದಿನಾಂಕ:23/05/2022 ಬೆಳಿಗ್ಗೆ 11:00 ಘಂಟೆವರೆಗೆ.

ಸಹಿ/– ಮುಖ್ಯಾಧಿಕಾರಿಗಳು (ಶ್ರೀ ಎಮ್ ಎಸ್ ಬೆಂತೂರು) ಪಟ್ಟಣ ಪಂಚಾಯತ ಮುಳಗುಂದ
ಸಹಿ/– ಅಧ್ಯಕ್ಷರು (ಶ್ರೀ ಹೊನ್ನಪ್ಪ ದೊಡ್ಡಹನಮಪ್ಪ ಹಳ್ಳಿ ಉರ್ಫ ವಡ್ಡರ) ಪಟ್ಟಣ ಪಂಚಾಯತ ಮುಳಗುಂದ

ವಾ.ಸಾ.ಇ/ಗದಗ/67/2022–23/ದೇಶಪಾಂಡೆಪಬ್ಲಿಸಿಟಿ

ಮುಖ್ಯ ಅಧೀಕ್ಷಕರ ಕಾರ್ಯಾಲಯ, ಕೇಂದ್ರ ಕಾರಾಗೃಹ, ಹಿಂಡಲಗಾ, ಬೆಳಗಾವಿ–591108.

ಸಂಖ್ಯೆ:ಕೇಕಾಬೆ/ದರಖಾಸ್ತು/679/2021–22, ದಿನಾಂಕ: 07–05–2022

ಇ–ಟೆಂಡರ್ ನೋಟಿಸ್ ಕರೆ–3

ಪ್ರಧಾನ ಕಛೇರಿ ಆದೇಶ ಪತ್ರ ಸಂಖ್ಯೆ:ಎಡಿಎಂ–2/ಸಿಆರ್21/2021–22, ಬೆಂಗಳೂರು ದಿನಾಂಕ:18–12–2021ರ ಮೇರೆಗೆ 2022–23 ನೇ ಸಾಲಿಗೆ ಬೆಳಗಾವಿ ಕೇಂದ್ರ ಕಾರಾಗೃಹ ಕಾರಾಗೃಹ & ವ್ಯಾಪ್ತಿಯ ಕಾರಾಗೃಹಗಳ ಬಂದಿಗಳಿಗೆ ಅವಶ್ಯವಿರುವ ಆಹಾರ ಪದಾರ್ಥಗಳು, ಕಾರ್ಖಾನೆ ವಿಭಾಗಕ್ಕೆ ಬೇಕರಿ ಪದಾರ್ಥಗಳು/ ಕಾರ್ಖಾನೆ ಕಚ್ಚಾ ವಸ್ತುಗಳನ್ನು ಕೆ.ಟಿ.ಟಿ.ಪಿ ನಿಯಮದನ್ವಯ ಇ–ಖರೀದಿ ಮೂಲಕ ಖರೀದಿಸಲು ನಿರ್ಧರಿಸಿದೆ.

ಕ್ರ. ಸಂ	ಟೆಂಡರ್ ಇಂಡೆಂಟ್ ಸಂಖ್ಯೆ	ಲಾಟ್ ನಂ	ದರಖಾಸ್ತು ವಿವರ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
1	DP/2022-23/ IND1303/CALL-2	ಲಾಟ್–6	ಬೆಳಗಾವಿ ವಲಯದ ಕಾರಾಗೃಹಗಳಿಗೆ ಆಹಾರ ಪದಾರ್ಥಗಳನ್ನು ಖರೀದಿಸುವ ಬಗ್ಗೆ.	ಇ–ಪೋರ್ಟಲ್‌ನಲ್ಲಿ ನಮೂದಿಸಿದಂತೆ
2	DP/2021-22/ IND1281/ CALL-2	ಲಾಟ್–11	ಬೆಳಗಾವಿ ವಲಯದ ಕಾರಾಗೃಹಗಳಿಗೆ ಆಹಾರ ಪದಾರ್ಥಗಳನ್ನು ಖರೀದಿಸುವ ಬಗ್ಗೆ.	ಇ–ಪೋರ್ಟಲ್‌ನಲ್ಲಿ ನಮೂದಿಸಿದಂತೆ
3	DP/2021-22/IND 1283/CALL-3	ಲಾಟ್–13	ಬೆಳಗಾವಿ ವಲಯದ ಕಾರಾಗೃಹಗಳಿಗೆ ಬೇಕರಿ ಪದಾರ್ಥಗಳನ್ನು ಖರೀದಿಸುವ ಬಗ್ಗೆ.	ಇ–ಪೋರ್ಟಲ್‌ನಲ್ಲಿ ನಮೂದಿಸಿದಂತೆ
4	DP/2021-22/IND 1284/ CALL-3	ಲಾಟ್–14	ಬೆಳಗಾವಿ, ಕೇಂದ್ರ ಕಾರಾಗೃಹ, ಕರ್ಖಾನೆ ಕಚ್ಚಾ ಪದಾರ್ಥಗಳನ್ನು ಖರೀದಿಸುವ ಬಗ್ಗೆ.	ಇ–ಪೋರ್ಟಲ್‌ನಲ್ಲಿ ನಮೂದಿಸಿದಂತೆ
5	DP/2021-22/IND 1285/ CALL-3	ಲಾಟ್–15	ಬೆಳಗಾವಿ, ಕೇಂದ್ರ ಕಾರಾಗೃಹ, ಕರ್ಖಾನೆ ಕಚ್ಚಾ ಸೋಪು, ಮತ್ತು ಪೇನ್ಯೆಲ್ ಪದಾರ್ಥಗಳನ್ನು ಖರೀದಿಸುವ ಬಗ್ಗೆ	ಇ–ಪೋರ್ಟಲ್‌ನಲ್ಲಿ ನಮೂದಿಸಿದಂತೆ

ದರಖಾಸ್ತುದಾರರು ಇ–ಪೋರ್ಟಲ್ ದೂರವಾಣಿ ಸಂಖ್ಯೆ: 080–25501227, 25501216 ಗಳಿಗೆ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ https://eproc.karnataka.gov.in or Helpline No. 080-25501227, 25501216 ಗಳಿಗೆ ಸಂಪರ್ಕಿಸತಕ್ಕದ್ದು.

ಸಹಿ/–(ಕೃಷ್ಣಕುಮಾರ್) ಮುಖ್ಯ ಅಧೀಕ್ಷಕರು ಕೇಂದ್ರ ಕಾರಾಗೃಹ, ಬೆಳಗಾವಿ

DIPR/BGM/RO-NO-199/MCA/2022-23

KARNTAKA STATE LAW UNIVERSITY
Accredited with 'A' Grade by NAACNavanagar, HUBBALLI - 580 025
Phone: 0836–2222472 Website: www.kslu.karnataka.gov.in
Fax: 0836–2223392 Email : kslu.registrar@gmail.com

No. KSLU/DPAR/2022-23/0297(A) Date: 07-05-2022

NOTIFICATION FOR APPOINTMENT OF GUEST FACULTY

Applications are invited for appointment of guest Faculty for Even Semester for the Academic Year 2021-22 for the Law School of Karnataka State Law University, Navanagar, Hubballi.

Guest Faculty:

Sl. No.	Subjects	Faculty Required	Qualification & Experience
1	Law	11	A good academic record with at least 55% marks at Masters Degree level preferably with NET/SLET/SET/Ph.D. (in accordance with the UGC Regulations 2018)
2	Political Science - II	01	
3	Economics - I & II	01	
4	Production & Operation Management International Business	01	
5	Sociology - I	01	
6	Marketing Management	01	
7	Psychology (Sociology - III)	01	

PAYMENT:
- UGC Qualified Guest Faculty (NET/SLET/SET/Ph.D)-**Rs. 525/-** per hour
- Non UGC Qualified Guest Faculty (only LL.M. with 55%) - **Rs.450/-** per hour
- Retired Teacher / Practicing Advocates- **Rs.525/-**per hour
- Local Conveyance per day **Rs. 150/-**

Interested Candidates are informed to submit their Applications along with Curriculum Vitae to the undersigned on or before **16-05-2022.** The Candidates have to appear for an interview before the Selection Commitee at **10.30 am on 18-05-2022**. The Candidates are advised to come with preparation for a demonstration lecture of **20 minutes**. They have to submit sttested copies of their documents and produce the original for verification before the interview to the Office at 10.00am.
Applications can be emailed to : **kslu.registrar@gmail.com or**
Application can be sent through post at:
The Registrar, Karnataka State Law University Navanagar, Hubballi-580025

Sd/- REGISTRAR

DIPR/DWD/148/2022-23/DESHPANDEPUBLICITY

COVID-19. DO NOT PANIC, BE AWARE
Wear Mask | 6 Feet Follow Physical Distancing | Maintain Hand Hygiene

---

ಮಂಗಳೂರು ಮಹಾನಗರ ಪಾಲಿಕೆ

ಮಂಮಪಾ/ಇಇ/ಎಸ್.ಎಫ್.ಸಿ/2021–22 ದಿನಾಂಕ : 06.05.2022

ಟೆಂಡರ್ ಪ್ರಕಟಣೆ –2ನೇ ಕರೆ E-PROCUREMENT OF KARNATAKA

ಮಂಗಳೂರು ಮಹಾನಗಪಾಲಿಕೆ ವ್ಯಾಪ್ತಿಯಲ್ಲಿ ಈ ಕೆಳಗೆ ಸೂಚಿಸಿರುವ ಇಂಡೆಂಟ್‌ಗಳ ಕಾಮಗಾರಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ. **2021–22ನೇ ಸಾಲಿನ ಎಸ್.ಎಫ್.ಸಿ ಅನುದಾನದಲ್ಲಿ** WORK INDENT NO. 130636, 129728, 129736, 129737, 129734, 127949/call-3, 127944, 129488, 130393, 129747,129730, 129740 ಮತ್ತು **2019-20 ನೇ ಸಾಲಿನ ಎಸ್.ಎಫ್.ಸಿ ಅನುದಾನದಲ್ಲಿ** WORK INDENT NO. 130396 ಹಾಗೂ **2017-18 ನೇ ಸಾಲಿನ ಎಸ್.ಎಫ್.ಸಿ ಉಳಿಕೆ ಅನುದಾನದಲ್ಲಿ** WORK INDENT NO. 125147/call-4, 125150 ಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ **23.05.2022** ಅಪರಾಹ್ನ 4.00 ಗಂಟೆ ಹೆಚ್ಚಿನ ವಿವರವನ್ನು ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್ https://eproc.karnataka.gov.in ಮುಖಾಂತರ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರಪಾಲಿಕೆ, ಮಂಗಳೂರು

DIPR/ADM/MCA/124/22-23 dt.07.05.2022

ಮಹಾನಗರ ಪಾಲಿಕೆ, ವಿಜಯಪುರ

ನಂ:ಮನಪಾ/:ಲೋ.ವಿ/ಕಾಅ/ಡಿಎಮ್/ಟಿಎನ್‌ಡಿ/ಇಪ್ರೋ–439/2022–23
ದಿನಾಂಕ:07.05.2022

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಜಯಪುರ ಮಹಾನಗರ ಪಾಲಿಕೆ ಬಿಡುಗಡೆಯಾದಸನ್ **2022–23ನೇ ಸಾಲಿನ ಮಹಾನಗರಪಾಲಿಕೆಯ ಅನುದಾನದಲ್ಲಿ 01 ಕಾಮಗಾರಿ ಮತ್ತು ಲೀಸ್ ಆಸ್ತಿಗಳನ್ನು ಮಾರಾಟ ಮಾಡಿ ಸಂಗ್ರಹಗೊಂಡ ಮೊತ್ತ ಹಾಗೂ ಪಾಲಿಕೆಯ ಸಾಮಾನ್ಯ ನಿಧಿಯನ್ನೊಳಗಹೊಂಡ01 ಕಾಮಗಾರಿ** ಕೆ.ಪಿ.ಡಬ್ಲ್ಯೂಡಿ/ ಜಿಲ್ಲಾಪಂಚಾಯತ/ ಸಿ.ಪಿ.ಡಬ್ಲ್ಯೂಡಿ ಇವರಿಂದ ನೋಂದಾಯಿತ ಗುತ್ತಿಗೆದಾರರಿಂದ ಇ–ಪ್ರೋಕ್ಯೂರಮೆಂಟ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರನ್ನು ಅವ್ಹಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ ಮೂಲಕ ವೆಬ್‌ಸೈಟ್ **(https://www.eproc.karnataka.gov.in)** ನಲ್ಲಿ ಪ್ರಕಟಿಸಲಾಗಿದೆ.
ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 23–05–2022

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ವಿಜಯಪುರ

ವಾಸಾಸಂಇ/ವಿಜಯಪುರ/91/ಎಂಸಿಎ/2022–23

ನಗರ ಸಿವಿಲ್ ನ್ಯಾಯಾಲಯ
ನಗರ ಸಿವಿಲ್ ನ್ಯಾಯಾಲಯದ ಕಾರ್ಯಾಲಯ, ನ್ಯಾಯಾಲಯಗಳ ಸಂಕೀರ್ಣ, ಬೆಂಗಳೂರು.

ಅಧಿಸೂಚನೆ ಸಂಖ್ಯೆ: ಆ.ವಿ.1(ಎ)/246/2022 ದಿನಾಂಕ: 20–04–2022

ನೇಮಕಾತಿ ಬಗ್ಗೆ ಸಂಕ್ಷಿಪ್ತ ಪ್ರಕಟಣೆ

ಬೆಂಗಳೂರು ನಗರ ಸಿವಿಲ್ ನ್ಯಾಯಾಲಯದ ಘಟಕದಲ್ಲಿ ಖಾಲಿಯಿರುವ ಕೆಳಕಂಡ ಹುದ್ದೆಗಳಿಗೆ ನಿಯಮಾನುಸಾರ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1) **ಶೀಘ್ರಲಿಪಿಗಾರರು ಗ್ರೇಡ್–III – 17 ಹುದ್ದೆಗಳು**
2) **ಬೆರಳಚ್ಚುಗಾರರ ಹುದ್ದೆಗಳು – 24 ಹುದ್ದೆಗಳು**
3) **ಆದೇಶಜಾರಿಕಾರರ ಹುದ್ದೆಗಳು – 05 ಹುದ್ದೆಗಳು**
4) **ಜವಾನ ಹುದ್ದೆಗಳು – 87 ಹುದ್ದೆಗಳು**

ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕ: 20–05–2022ರ ರಾತ್ರಿ 11.59 ಗಂಟೆವರೆಗೆ.

ಮೇಲ್ಕಂಡ ಹುದ್ದೆಗಳಿಗೆ ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ಮೀಸಲಾತಿಯ ವಿವರ, ಅರ್ಜಿ ಸಲ್ಲಿಸುವ ವಿಧಾನ, ಶುಲ್ಕ ಪಾವತಿಸುವ ವಿಧಾನ, ಆಯ್ಕೆ ವಿಧಾನ ಮತ್ತಿತರ ವಿವರಗಳಿಗೆ ನಗರ ಸಿವಿಲ್ ನ್ಯಾಯಾಲಯದ ವೆಬ್‌ಸೈಟ್: **https://districts.ecourts.gov.in/ccc-online-recruitment** ನಲ್ಲಿ ಪ್ರಕಟವಾಗಿರುವ ನೇಮಕಾತಿ ಪ್ರಕಟಣೆಯನ್ನು ಪರಿಶೀಲಿಸಬಹುದು.

ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರ ಆದೇಶದ ಮೇರೆಗೆ
ಸಹಿ/– ವಿಲೇಖನಾಧಿಕಾರಿಗಳು
ನಗರ ಸಿವಿಲ್ ನ್ಯಾಯಾಲಯ, ಬೆಂಗಳೂರು.

ವಾಸಾಸಂಇ/ವಾ.ಪ್ರ/387/ ಅಡ್ವಟೋರ್/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಕಾರ್ಯಪಾಲಕ ಅಭಿಯಂತರರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರ.

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 01/2022–23/106 ದಿನಾಂಕ: 07.05.2022

(ಇ_ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರರವರು 2021–2022ನೇ ಸಾಲಿನ 2215 JJM ಲೆಕ್ಕಶೀರ್ಷಿಕೆಯಡಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ, ದೊಡ್ಡಬಳ್ಳಾಪುರ ಮತ್ತು ನೆಲಮಂಗಲ ತಾಲ್ಲೂಕುಗಳಲ್ಲಿನ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿಯಾಗಿರುವ ಅರ್ಹ ಗುತ್ತಿಗೆದಾರರಿಂದ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಸಂಸ್ಥೆಯಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ನಿಯಮಾನುಸಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ KW-1, KW-2, KW-3 & KW-4 ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಮತ್ತು ಇ.ಎಂ.ಡಿಯನ್ನು ಇ–ಪೇಮೆಂಟ್ ಮುಖಾಂತರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.

(1) ಟೆಂಡರ್ ದಸ್ತಾವೇಜುಗಳನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: **09.05.2022ರ ಸಂಜೆ 4.00 ಗಂಟೆಯ ನಂತರ.** (2) ಪ್ರೀಬಿಡ್ ಮೀಟಿಂಗ್ ಸ್ಥಳ/ದಿನಾಂಕ: **ಕಾರ್ಯಪಾಲಕ ಅಭಿಯಂತರರ ಕಛೇರಿ, #124, ಜಿಲ್ಲಾಡಳಿತ ಭವನ, ಬೀರಸಂದ್ರ, ದೇವನಹಳ್ಳಿ ತಾಲ್ಲೂಕು (KW-4 ಕಾಮಗಾರಿಗಳಿಗೆ ಮಾತ್ರ) 17.05.2022 ಬೆಳಿಗ್ಗೆ 11.00 ಗಂಟೆಗೆ.** (3) ಭರ್ತಿಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **24.05.2022 ಸಂಜೆ 4.00 ಗಂಟೆಯವರೆಗೆ.** (4) ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **25.05.2022 ಸಂಜೆ 4.05 ಗಂಟೆಗೆ.** (5) ಆರ್ಥಿಕ ಬಿಡ್ ತೆರೆಯುವ ದಿನಾಂಕ: **30.05.2022 ಸಂಜೆ 4.05 ಗಂಟೆಗೆ.**

ಸಹಿ/- ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರ.

ವಾಸಾಸಂಇ/ಉ.ನಿ.–ಸಿ.ಪಿ/428/ಎಂ.ಸಿ.ಎ/2022–23

ಕಷ್ಟದ ರಾಗಗಳ ಇಷ್ಟದ ಗುರು 9

ಜೋನ್‌ಬೀಲ್ ಮೇಳ; ದುಡ್ಡು ಬೇಕಿಲ್ಲ! 11

ಸೇನೆಯ 29ನೇ ಉಪಮುಖ್ಯಸ್ಥರಾದ ಬಳಿಕ ಬಿ.ಎಸ್.ರಾಜು ಅವರು ನವದೆಹಲಿಯಲ್ಲಿ ಗೌರವ ವಂದನೆ ಸ್ವೀಕರಿಸಿದ ಕ್ಷಣ

ಸೇನೆಯ ತುರಾಯಿ ಬಗ್ಗವಳ್ಳಿ ಸಿಪಾಯಿ!

ಚಿಕ್ಕಮಗಳೂರಿನ ಬಗ್ಗವಳ್ಳಿಯ ಸಾಮಾನ್ಯ ಕುಟುಂಬದ ಕುಡಿ, ಕನ್ನಡಿಗ ಬಿ.ಎಸ್. ರಾಜು ಸೇನೆಯಲ್ಲಿ ಏರಿದ ಎತ್ತರ ಬೆರಗುಗೊಳಿಸುವಂಥದ್ದು. ಮಾನವೀಯ ಅಂತಃಕರಣದ ಈ ಸೇನಾನಿಯ ವ್ಯಕ್ತಿತ್ವ ಹೆಮ್ಮೆ ಮೂಡಿಸುವಂಥದ್ದು. ಇದೋ ರಾಜು ಅವರ ಸಾಧನೆಯ ಬದುಕಿನಲ್ಲಿ ಒಂದು ಯಾತ್ರೆ, ವಯಾ ಬಗ್ಗವಳ್ಳಿ!

ಬಿ.ಜೆ. ಧನ್ಯಪ್ರಸಾದ್

ಚಿಕ್ಕಮಗಳೂರು ಜಿಲ್ಲೆಯ ಆ ಪುಟ್ಟ ಊರಿನ ಮನೆಯೊಂದರ ಜಗುಲಿಯ ಮೇಲೆ ಕುಳಿತು ಅಲ್ಲಿ ಹರಡಿದ್ದ ಛಾಯಾಚಿತ್ರಗಳ ಮೇಲೆ ಕಣ್ಣು ಹಾಯಿಸುವಾಗ ಎಲ್ಲರಿಗೂ ದೊಡ್ಡ ಸೋಜಿಗ. ಆ ಹೆಂಚಿನ ಗೂಡನ್ನು ಭಾರತೀಯ ಸೇನೆಯ ಉಪ ಮುಖ್ಯಸ್ಥನ ಹುದ್ದೆಗೇರಿದವರ ಮನೆಯೆಂದು ನಂಬಲು ಯಾರೂ ತಯಾರಿರಲಿಲ್ಲ. ಅಲ್ಲಿದ್ದ ಚಿತ್ರಗಳ ರಾಶಿಯಲ್ಲಿ ಬೈಕ್ ಮೇಲೆ ಪತ್ನಿಯನ್ನು ಕೂರಿಸಿಕೊಂಡು ಹೊರಟ ವ್ಯಕ್ತಿಯ ಚಿತ್ರವೊಂದು ಥಟ್ಟನೇ ಗಮನಸೆಳೆಯಿತು. 'ಇವರೇ ಸರ್, ನಮ್ಮೂರಿನ ಹೆಮ್ಮೆಯ ಪುತ್ರ ಬಗ್ಗವಳ್ಳಿ ಸೋಮಶೇಖರ್ (ಬಿ. ಎಸ್.) ರಾಜು. ನಮ್ಮೂರಿಗೆ ಬಂದಾಗ ಅವರು ಇಷ್ಟೇ ಸಿಂಪಲ್ಲಾಗಿ ಇರೋದು ನೋಡಿ' ಎಂದು ಜತೆಯಲ್ಲಿದ್ದವರು ಖುಷಿಯಿಂದ ಹೇಳಿದರು.

ಸೇನೆಯ ಎರಡನೇ ಉನ್ನತ ಹುದ್ದೆಗೇರಿದ ಯೋಧರೊಬ್ಬರನ್ನು ಕೊಟ್ಟ ಈ ಪುಟ್ಟ ಗ್ರಾಮವನ್ನು ಹುಡುಕಿಕೊಂಡು ನಮ್ಮ ಸವಾರಿ ಬಂದಿತ್ತು. ಸಾಮಾನ್ಯ ಕುಟುಂಬದಲ್ಲಿ ಜನಿಸಿ, ದೊಡ್ಡ ಎತ್ತರಕ್ಕೆ ಬೆಳೆದ ಈ ಹೆಮ್ಮೆಯ ಯೋಧನ ಕಥೆ, ಊರಿನ ಪ್ರತಿಯೊಂದು ಹಾದಿ-ಬೀದಿಯಲ್ಲೂ ಅನುರಣಿಸುತ್ತಿತ್ತು. ಕೆಲವು ದಿನಗಳ ಹಿಂದೆ ನವದೆಹಲಿಯಲ್ಲಿ ಹೊಸ ಹುದ್ದೆ ಅಲಂಕರಿಸುವ ಸಮಾರಂಭದಲ್ಲಿ ಅಮ್ಮ ಮತ್ತು ಪತ್ನಿಯೊಂದಿಗೆ ರಾಜು ಅವರು ಭಾಗವಹಿಸಿದ್ದ ಚಿತ್ರವನ್ನು ನೋಡಿದ್ದೆವು. ಅವರ ಸರಳ ವ್ಯಕ್ತಿತ್ವದ ಝಲಕ್‌ವೊಂದು ಆಗಲೇ ಸಿಕ್ಕಿತ್ತು. ಆ ದೃಶ್ಯವನ್ನೇ ಚಿತ್ತಭಿತ್ತಿಯಲ್ಲಿ ಹೊತ್ತುಕೊಂಡು ಬಗ್ಗವಳ್ಳಿಗೆ ಹೋದಾಗ ರಾಜು ಅವರ ಮಾನವೀಯ ಅಂತಃಕರಣದ ಹಲವು ಕಥೆಗಳು ಸುರುಳಿಯಂತೆ ಬಿಚ್ಚಿಕೊಂಡವು.

ಪುಟಾಣಿ ರಾಜು

ಬಗ್ಗವಳ್ಳಿಯ ಸೋಮಶೇಖರ್ ಮತ್ತು ವಿಮಲಾ ದಂಪತಿಯ ಪುತ್ರ ಈ ಯೋಧ. ಬಾಲ್ಯದಲ್ಲಿ ಇದೇ ಹೆಂಚಿನ ಮನೆಯಲ್ಲಿ ಓಡಾಡಿ ಬೆಳೆದ ಹುಡುಗ. ಸಹೋದರಿಯರಾದ ಶೀಲಾ, ಶೈಲಾ, ಮತ್ತು ಸಹೋದರ ಗಿರೀಶ್ ಅವರಿದ್ದ ದೊಡ್ಡ ಕುಟುಂಬದಲ್ಲಿ ರಾಜು ಬೆಳೆದರು. 'ಚಿಕ್ಕಂದಿನಿಂದಲೂ ರಾಜು ವಿದ್ಯಾಭ್ಯಾಸ ಮತ್ತು ಕ್ರೀಡೆ ಎರಡರಲ್ಲೂ ಮುಂದಿದ್ದರು. ನಾಯಕತ್ವ ಗುಣ ಕೂಡ ಅವರಲ್ಲಿ ಮೊದಲಿನಿಂದಲೂ ಇತ್ತು. ಮಗ ಸೇನೆಗೆ ಸೇರಬೇಕು ಎಂಬ ಅಭಿಲಾಷೆ ಸೋಮಶೇಖರ್ ಅವರಿಗಿತ್ತು. ರಾಜು ಎನ್‌ಡಿಎ ಪರೀಕ್ಷೆ ಪಾಸಾಗಿ ಸೇನೆ ಸೇರಿದಾಗ ಕುಟುಂಬದ ಹರ್ಷಕ್ಕೆ ಪಾರವೇ ಇರಲಿಲ್ಲ' ಎಂದು ರಾಜು ಅವರ ಸಹೋದರ (ಚಿಕ್ಕಪ್ಪನ ಪುತ್ರ) ಬಿ.ಪಿ. ಪ್ರಭುಕುಮಾರ್ ನೆನೆದರು.

ವಿಜಯಪುರದ ಸೈನಿಕ ಶಾಲೆಯಲ್ಲಿ ಓದಿದ ರಾಜು ಅವರು, ಮುಂದೆ ಪುಣೆಯ ನ್ಯಾಷನಲ್ ಡಿಫೆನ್ಸ್ ಅಕಾಡೆಮಿಯನ್ನು ಸೇರಿದರು. ಅಲ್ಲಿಂದ ವೆಲ್ಲಿಂಗ್ಟನ್‌ನ ಡಿಫೆನ್ಸ್ ಸರ್ವೀಸಸ್ ಸ್ಟಾಫ್ ಕಾಲೇಜ್ ಮತ್ತು ಇಂಗ್ಲೆಂಡ್‌ನ 'ರಾಯಲ್ ಕಾಲೇಜ್ ಆಫ್ ಡಿಫೆನ್ಸ್ ಸ್ಟಡಿ'ಯಲ್ಲಿ ಉನ್ನತ ವ್ಯಾಸಂಗ ನಡೆಸಿದರು. ಅಮೆರಿಕದ ಸೇನಾ ಶಾಲೆಯಿಂದ ಭಯೋತ್ಪಾದನೆ ನಿಗ್ರಹ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನೂ ಅವರು ಪಡೆದರು. ಸೋಮಶೇಖರ್ ಅವರ ಕುಟುಂಬದಲ್ಲಿ ಸೇನೆ ಸೇರಿದ ಮೊದಲಿಗ ರಾಜು. ಅವರ ತಂದೆ ಉಪನ್ಯಾಸಕರಾಗಿದ್ದನ್ನು ಬಿಟ್ಟರೆ ಪೂರ್ವಿಕರು ಪಕ್ಕಾ ಕೃಷಿಕರು. ಗ್ರಾಮದಲ್ಲಿರುವ ಕರಳುಬಳ್ಳಿಯವರು ಈಗಲೂ ಕೃಷಿಯಲ್ಲಿ ಮುಂಚೂಣಿಯಲ್ಲಿ ಇದ್ದಾರೆ. ಸೋಮಶೇಖರ್ ಅವರು ಪಾಲಿಟೆಕ್ನಿಕ್‌ನಲ್ಲಿ ಬೋಧಕರಾಗಿದ್ದರು.

ಹಲವು ಗೆಲುವುಗಳಿಗೆ ಕಾರಣವಾದ ಹಿರಿಮೆ ಹೊಂದಿರುವ ಜಾಟ್ ರೆಜಿಮೆಂಟ್‌ನ 11ನೇ ಬೆಟಾಲಿಯನ್ನಿನ ಯೋಧನಾಗಿ 1984ರ ಡಿಸೆಂಬರ್‌ನಲ್ಲಿ ರಾಜು ಅವರು ಭಾರತೀಯ ಸೇನೆಯನ್ನು ಸೇರಿದರು. ಹಲವು ಸಮರಗಳಲ್ಲಿ ಭಾಗಿಯಾದ ವ್ಯಾಪಕ ಅನುಭವ ಅವರಿಗಿದೆ. ಕಾಶ್ಮೀರ ಕಣಿವೆಯಲ್ಲಿ ಮಿಲಿಟರಿ ಕಾರ್ಯಾಚರಣೆಯ ಹೊಣೆ ಹೊತ್ತ ಚಿನಾರ್ ಕೋರ್‌ನ ಮುಖ್ಯಸ್ಥರಾಗಿಯೂ ಅವರು ಕರ್ತವ್ಯ ನಿರ್ವಹಿಸಿದ್ದಾರೆ.

ರಾಜು ಅವರ ಮುಖ್ಯ ಕೊಡುಗೆ ಇರುವುದು ಉಗ್ರರ ಚಟುವಟಿಕೆಗಳನ್ನು ತಹಬಂದಿಗೆ ತರಲು ಅವರು ಬಳಸಿದ ದಾರಿಯಲ್ಲಿ. ಶಸ್ತ್ರಾಸ್ತ್ರ ತ್ಯಾಗಮಾಡಿ ಬಂದ ಯುವಕರನ್ನು ಮುಖ್ಯವಾಹಿನಿಗೆ ಸೇರಿಸಿಕೊಳ್ಳಲು ಅವರು ಮುತುವರ್ಜಿ ತೋರಿದರು.

9ನೇ ಪುಟಕ್ಕೆ...

ರಾಜು ಅವರ ಬಗ್ಗವಳ್ಳಿಯ ಮನೆ. ಪ್ರಜಾವಾಣಿ ಚಿತ್ರ/ ಎ.ಎನ್.ಮೂರ್ತಿ

ಮೀರಾಲಂ

ಸಿಂಧು ದಡದಿಂದ ಬಂದ ಸಂತ

ಹಿಂದೂ–ಮುಸ್ಲಿಂ ಭಾವೈಕ್ಯಕ್ಕೆ ಬಹುದೊಡ್ಡ ಕೊಡುಗೆ ನೀಡಿದವರಲ್ಲಿ ಹೊಸಪೇಟೆಯ ಸೂಫಿಸಂತ, ಕವಿ ಮೀರಾಲಂ ಸಹ ಒಬ್ಬರು. ದೊಡ್ಡ ಶಿಷ್ಯಪಡೆಯನ್ನೇ ಅವರು ಕಟ್ಟಿದರು. ಪ್ರಸಕ್ತ ವಾತಾವರಣದಲ್ಲಿ ವ್ಯಾಪಿಸಿರುವ ನಂಜಿಗೆ ಅವರ ಬದುಕಿನಿಂದ ನಾವು ಕಲಿಯುವ ಪಾಠವೇ ಮುಲಾಮು

ರಹಮತ್ ತರೀಕೆರೆ

ನಾನು ಶಿವಮೊಗ್ಗ ಸೀಮೆಯನ್ನು ಬಿಟ್ಟು ಹಂಪಿ ಸೀಮೆಗೆ ವಲಸೆ ಬಂದಾಗ, 'ಮೀರಾಲಂ' ಹೆಸರುಳ್ಳ ಟಾಕೀಸು, ಬಸ್ಸು, ಅಂಗಡಿಗಳನ್ನು ಗಮನಿಸಿದೆ. ಇದು ಈ ಭಾಗದ ಜನಪ್ರಿಯ ಸೂಫಿಸಂತನ ಹೆಸರಾಗಿತ್ತು. ಸಂತನ ಚರಿತ್ರೆಯನ್ನು ತಡಕುತ್ತ ಹೋದೆ. ಚಾರಿತ್ರಿಕ ಮಹತ್ವವುಳ್ಳ ಕವಿಯೆಂದು ತಿಳಿಯಿತು. ರಂಜಾನ್ ಮುಗಿದ ಎಂಟು ದಿನಕ್ಕೆ ಬರುವ ಉರುಸಿಗೆ ಕಾದುಕೊಂಡಿದ್ದು ಹೋದೆ. ಉರುಸಿಗೆ ಅಕ್ಕಲಕೋಟೆಯಿಂದ ಗಾಯಕರ ತಂಡ ಬಂದಿತ್ತು. ಈ ತಂಡದವರು ಕರೆದಲ್ಲಿ ಹೋಗುವ ವೃತ್ತಿಪರ ಖವಾಲಿ ಗಾಯಕರಾಗಿರಲಿಲ್ಲ. ಸೂಫಿದೀಕ್ಷೆಯನ್ನು ಪಡೆದವರಾಗಿದ್ದರು. ಕೇವಲ ಮೀರಾಲಂ ರಚನೆಗಳನ್ನು ಹಾಡುವವರಾಗಿದ್ದರು. ತಾವು ಹಾಡುತ್ತಿದ್ದ ಮೀರಾಲಂ ರಚನೆಗಳನ್ನು 'ಭಜನ್' ಎಂದು ಕರೆಯುತ್ತಿದ್ದರು.

ಭಜನ್‌ಗಳು, ಹಿಂದಿಮಿಶ್ರಿತ ಉರ್ದುವಿನಲ್ಲಿದ್ದವು. ಹಾಡಿಕೆಯಲ್ಲಿ ಖವಾಲಿಯಲ್ಲಿ ಸಾಮಾನ್ಯವಾಗಿ ಬಳಸಲಾಗುವ ಹಾರ್ಮೋನಿಯಂ ಇರಲಿಲ್ಲ. ಬದಲಿಗೆ ಢೋಲಕ್ ಇತ್ತು. ತತ್ವಪದ ಹಾಡಿಕೆಯಲ್ಲಿ ಬಳಸುವ ತಾಳವಿತ್ತು. ಎಲ್ಲ ಗಾಯಕರು ತಾಳವನ್ನು ಬಾರಿಸುತ್ತ ಹಾಡುತ್ತಿದ್ದರು. ಗಾಯಕರಲ್ಲಿ ಕೆಲವರು ಮಹಾರಾಷ್ಟ್ರದ ಸ್ಥಳೀಯ ಉಡುಗೆಯಾದ ಗಾಂಧಿಟೋಪಿ-ಪೈಜಾಮ ಧರಿಸಿದ್ದರು. ಹಾಡುಗೋಷ್ಠಿಯ ಮಧ್ಯದಲ್ಲಿ ಅಕ್ಕಲಕೋಟೆಯ ಚನ್ನಬಸಪ್ಪ ಕಲಬುರ್ಗಿಯವರು ಆಸೀನರಾಗಿದ್ದರು.

ಗಾಯನ ಬೆಳಗಿನ ಜಾವಕ್ಕೆ ಮುಗಿಯಿತು. ಗಾಯಕರ ಜತೆ ಮಾತುಕತೆ ನಡೆಸಿದೆ. ಹೆಚ್ಚಿನ ಗಾಯಕರು ಕಿರಾಣಿ ವ್ಯಾಪಾರಿ, ಗಡಿಯಾರ ರಿಪೇರಿಗಾರ, ಕೃಷಿಕ, ಶಿಕ್ಷಕ, ಟೈಲರ್, ಕುರಿ ವ್ಯಾಪಾರಿ ಮುಂತಾದ ಕಸುಬಿನವರು. ಮೀರಾಲಂ ಕಾವ್ಯವನ್ನು ಕಂಠಸ್ಥ ಮಾಡಿಕೊಂಡಿದ್ದರು; ತಮ್ಮ ಮಾತುಕತೆಯಲ್ಲಿ ಚರಣ ಚರಣಗಳನ್ನು ಉದ್ಧರಿಸುತ್ತಿದ್ದರು. ನನ್ನ ಕುತೂಹಲವನ್ನು ಕಂಡ ಅವರು, ಅಕ್ಕಲಕೋಟೆಯಲ್ಲಿ ಮೀರಾಲಂ ಅವರ ಖಲೀಫರಾದ (ಪಟ್ಟಶಿಷ್ಯ) ಮೀರ್ ಮಸ್ತೂರಲಿಶಾ ಉರುಫ್ ದಾತಾಪೀರರ ಉರುಸು ನಡೆಯುತ್ತದೆಯೆಂದೂ ಅಲ್ಲಿ ಇತರೆ ಗಾಯಕರನ್ನು ಆಲಿಸಬಹುದೆಂದೂ ಆಹ್ವಾನ ಕೊಟ್ಟರು.

ಮೀರಾಲಂ ಹಾಗೂ ಮೀರ್ ಮಸ್ತೂರಲಿ ಶಾ

ಮೀರಾಲಂ ಭಜನ್ ಹಾಡುತ್ತಿರುವ ಗಾಯಕರು

ಸೂಫಿ ಸಂತರಾದ ಸೈಯದ್ ಮೀರಾಲಂ ನವಾಜ್ ಶಾಖಾದ್ರಿ (1834-1932) ಮೂಲತಃ ಸಿಂಧ್ ಪ್ರಾಂತ್ಯದ ಜೆಮಸಾಬಾದ್ ಪಟ್ಟಣದವರು. ಸಿಂಧ್ ಪ್ರಾಂತ್ಯವು 'ಧಮಾಧಂ ಮಸ್ತ ಖಲಂದರ್' ಮುಂತಾದ ಜನಪ್ರಿಯ ತತ್ವಪದಗಳನ್ನು ಕಟ್ಟಿದ ಕವಿಯಾದ ಶಾಬಾಸ್ ಖಲಂದರ್ ಮುಂತಾದ ಸೂಫಿಗಳ ಸೀಮೆ. ಈ ಪ್ರಾಂತ್ಯದ ಡೆಪ್ಯೂಟಿ ಕಮಿಶನರ್ ಆಗಿದ್ದ ಸರ್ ಈವನ್ ಜೇಮ್ಸ್‌ನ ಕಾರಣದಿಂದ ಊರಿಗೆ ಈ ಹೆಸರು ಬಂತಂತೆ. ಮೀರಾಲಂ, 19ನೇ ಶತಮಾನದ ಕೊನೆಯಲ್ಲಿ ಶಿಷ್ಯ ಮೀರ್ ಮಸ್ತೂರಲಿ ಶಾ ದಾತಾಪೀರ್ ಅವರ ಜತೆ ಅಕ್ಕಲಕೋಟೆಗೆ ಬಂದರಂತೆ. ಅಕ್ಕಲಕೋಟೆಯ ಹಿರಿಯರಾದ ಬಾಶಾಭಾಯಿ ಶೇರಿಕಾರರ ಪ್ರಕಾರ, ಮೀರಾಲಂ 1857ರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದವರು; ಉರ್ದು ಕವಿಗಳಾದ ಅಮೀರ್ ಮಿನಾಯಿ, ದಾಗ್ ದೆಹಲ್ವಿ, ಅಮಿರ್ ಹಂಜಾ ಅವರ ಜತೆಗಿದ್ದವರು. ಬಹುಶಃ ಅವರು ಬ್ರಿಟಿಷರ ಕಿರುಕುಳದಿಂದಲೇ ಸಿಂಧ್ ಪ್ರಾಂತ್ಯವನ್ನು ತೊರೆದಿರುವ ಸಾಧ್ಯತೆಯಿದೆ.

ಸಂತನ ಎರಡನೇ ಪ್ರಸ್ಥಾನವು ಅಕ್ಕಲಕೋಟೆಯಿಂದ ಸಂಡೂರಿಗೆ ನಡೆಯಿತು. ಎರಡೂ ಸಂಸ್ಥಾನಿಕರ ನಡು ಬೀಗತನ ಇದ್ದುದರಿಂದ, ಸಂತರ ಈ ವಿನಿಮಯ ನಡೆದಿರಬೇಕು. ತಮಗೆ ವಿರೋಧಿಯಾಗಿರುವ ಸಂತನನ್ನು ರಾಜ್ಯದಲ್ಲಿ ಇಟ್ಟುಕೊಳ್ಳಬಾರದು ಎಂದು ಬ್ರಿಟಿಷರು ದೊರೆಯ ಮೇಲೆ ತಂದ ಒತ್ತಡದ ಫಲವಾಗಿಯೊ, ದೊರೆಯ ಜತೆಗಿನ ಭಿನ್ನಮತದಿಂದಲೊ, ಮೀರಾಲಂ ಸಂಡೂರು ಸಂಸ್ಥಾನವನ್ನು ಬಿಟ್ಟು ಹೊರಬರಬೇಕಾಯಿತು. ಆಗವರು ಮದರಾಸು ಪ್ರಾಂತ್ಯಕ್ಕೆ ಸೇರಿದ ಹೊಸಪೇಟೆಗೆ ಬಂದು ನೆಲೆಸಿದರು. ಈ ವಲಸೆ ಮತ್ತು ನೆಲಸುವಿಕೆಗಳಿಗೆ ಇನ್ನೊಂದು ಕಾರಣ, ಸ್ವಭಾವತಃ ಸಂಚಾರಿಗಳಾದ ಸಂತರು, ತಮ್ಮ ದರ್ಶನವನ್ನು ಹರಡುತ್ತ ತಕ್ಕ ಶಿಷ್ಯರ ಹುಡುಕಾಟದಲ್ಲಿ ತಿರುಗಾಟ ಮಾಡುವುದು ಸಹ ಆಗಿರಬಹುದು. ಜೆಮಸಾಬಾದ್‌ನಿಂದ ಶುರುವಾದ ಸಂತನ ಪಯಣ, ಅಕ್ಕಲಕೋಟೆ, ಸಂಡೂರುಗಳನ್ನು ಹಾದು ಹೊಸಪೇಟೆಯಲ್ಲಿ ಮುಕ್ತಾಯವಾಯಿತು. ದೇಹಬಿಡುವಾಗ ಮೀರಾಲಂ ಅವರಿಗೆ 98 ವರುಷ.

ಮೀರಾಲಂ ಜಾತ್ಯತೀತ ಶಿಷ್ಯ ಪರಂಪರೆಯನ್ನು ಹೊಂದಿದ್ದರು. ಅವರ ಅನುಯಾಯಿಯಾದ ಸಂಡೂರಿನ ಜೀಲಾನಿಯವರ ಪ್ರಕಾರ, ಸಂತನ ಶಿಷ್ಯರಲ್ಲಿ ಸಂಡೂರು ಅರಮನೆಯ ಖಜಾನೆ ಅಧಿಕಾರಿಯಾಗಿದ್ದ ನೀಲಕಂಠ ಭಟ್, ಅಬ್ದುಲ್ ರಹಮಾನ್, ಅಲ್ಲಾಬಕ್ಷ್ ಸಾಹೇಬ್, ಸೋಮಪ್ಪ, ದೊಡ್ಡನಗೌಡ, ಮಹದೇವ ಭಟ್ ಜೋಗಿ, ನರಸಿಂಹ ಭಟ್ ಜೋಗಿ ಮುಂತಾದವರು ಮುಖ್ಯರು. ಅತ್ತ ಅಕ್ಕಲಕೋಟೆಯಲ್ಲಿ ಮೀರಾಲಂ ಶಿಷ್ಯರಾದ ದಾತಾಪೀರ್ ಅವರಿಗೆ ಸಾಹುಕಾರ ಸಿದ್ಧರಾಮಪ್ಪ ಕಲಬುರ್ಗಿ ಮುಖ್ಯ ಶಿಷ್ಯರಾಗಿದ್ದರು.

ಸೂಫಿ ಸಂತರ ಈ ಜಾತ್ಯತೀತ ಗುರುಶಿಷ್ಯ ಸಂಬಂಧವು ಕರ್ನಾಟಕದ ಮಟ್ಟಿಗೆ ಹೊಸ ಸಂಗತಿಯಾಗಿರಲಿಲ್ಲ. ಅಮೀನುದ್ದೀನ್ ಚಿಸ್ತಿ-ಶಿರಹಟ್ಟಿ ಫಕೀರೇಶ್ವರ, ನಂಗಾಶಾಹ-ಮಹಿಪತಿರಾಯ, ಕಡಕೋಳ ಮಡಿವಾಳಪ್ಪ-ಮೋಟ್ನಳ್ಳಿ ಹಸನಸಾಬ್, ಗೋವಿಂದಭಟ್ಟ-ಶಿಶುನಾಳ ಶರೀಫರು, ಅಲ್ಲಿಪೀರಾ-ಶಿಲವೇರಿ ಶಿವಪ್ಪ, ಹುಬ್ಬಳ್ಳಿ ಸಿದ್ಧಾರೂಢರು-ಸೈಯದ್ ಅಮೀರ್ ಹುಸೇನ್ (ಕಬೀರ್ ದಾಸರು), ಸಾಲಗುಂದಿ ಗುರುಪೀರಾ ಖಾದ್ರಿ-ಮದಿರೆಯ ತಿಮ್ಮಪ್ಪ ಮೊದಲಾವರು ರೂಪಿಸಿದ ಪರಂಪರೆಯ ಮುಂದುವರೆದ ಭಾಗವಾಗಿತ್ತು.

10ನೇ ಪುಟಕ್ಕೆ

ಮಾವು ದೇವರಿಗಿಂತ ಬೇರೆ ದೇವರಿಲ್ಲ!

ರಶ್ಮಿ ಎಸ್.

ಮಾವಿನ ಸೀಸನ್ ಬಂದ್ರ, ನೀವು ಬೀದರ್ ಜಿಲ್ಲೆಗೆ ಬರಬೇಕು. ಇಲ್ಲಿ ಮಾವಿನಹಣ್ಣು ತಿನ್ನುವ ಸೊಗಸೇ ಬ್ಯಾರೆ. ಇಲ್ಲಿ ಬೈಗನ್‌ಪಲ್ಲಿಯಿಂದ ಮಾವಿನ ಋತು ಶುರುವಾದ್ರ, ನೀಲಂನಿಂದ ಮುಗೀತದ.

ನಾವರೆ ನಾಮ್ ಮೆ ಕ್ಯಾ ರಕ್ಖಾ ಹೈ... ಆಮ್ ಹೈ... ಖಾನೆ ಕಾ ಕಾಮ್ ಹೈ ಅಂತಿದ್ವಿ (ಹೆಸರಿನೊಳಗೇನದ... ಮಾವದ, ತಿನ್ನುವ ಕೆಲಸದ). ಈ ಮಾವಿನ ಹಣ್ಣಿಗೂ ಹಿಂದಿ ಗಾದೆಗೂ ಅಗ್ದಿ ಆಳವಾದ ನಂಟದ ನೋಡ್ರಿ. ಆಮ್ ತು ಖಾ ಘುಟ್ಲಿ ನ ದೇಖ್ (ಮಾವು ಸವಿ ನೀ... ವಾಟೆ ನೋಡಬ್ಯಾಡ), ಆಮ್ ಸೆ ಮತ್ಲಬ್, ಘುಟ್ಲಿ ಸೆ ನಹಿ (ಮಾವಿನೊಂದಿಗೆ ನಂಟು, ವಾಟೆಯ ಜೊತೆಗಲ್ಲ), ಆಮ್ ಖಾಲೆ, ಘುಟ್ಲಿ ಕ್ಯೂಂ ಗಿನ್ತಾ ಹೈ (ಮಾವು ಸವೀರಿ, ವಾಟೆ ಯಾಕ ಎಣಸ್ತೀರಿ) ಹಿಂಗ ವಾಟೆಯನ್ನು ಕಡೆಗಣಿಸುವಂಥವೇ ಮಾತದಾವ. ಆದ್ರ ವಾಟೆನೆ ಇರಲಿಲ್ಲಂದ್ರ ಮಾವು ಎಲ್ಲಿಂದ ಬರ್ತದ?

ಬೆನಿಶಾನ್, ಇದು ಈಗ ಬೇನಿಸಾನ್ ಆಗೇದ. ಬೈಗನ್‌ಪಲ್ಲಿಗೇನೆ ಹಿಂಗ ಅನ್ನೂದು. ಇಲ್ಲಾಂದ್ರ ಸಫೇದಾ ಅಂತಲೂ ಕರೀತಾರ. ಪೂರ್ಣ ಬಿಸಿಲಾಗ ಮಾಗಿದ್ರ ಇದರ ಮಾಧುರ್ಯನೇ ಬೇರೆ. ಕಣ್ಣಿಕಣ್ಣಿ ರಸ, ತೆಳುವಾದ ಸಿಪ್ಪಿ. ಹೆಚ್ಚಿ ತಿನ್ನಾಕ ಅಗ್ದಿ ಹೇಳಿ ಮಾಡಿಸಿದ ಹಣ್ಣಿದು.

ಇಲ್ಲಿಂದ ಶುರುವಾಗ್ತದ ನಮ್ಮಲ್ಲಿ ಮಾವಿನ ಋತು. ಆಮೇಲೆ ಸೌಕಾಶ ನಮ್ಮ ಮಲ್ಲಿಕಾ ರಾಣಿ ಬರ್ತಾಳ. ಅಗ್ದಿ ಅಂಗಸೌಷ್ಠವ ತುಂಬಿಕೊಂಡ ರಸಭರಿತ ಗಂಧರ್ವ ಕನ್ನೆಯಂಥ ಹಣ್ಣಿದು. ಅದೇ ನಾವು ಪಾಟಿ ಮ್ಯಾಲೆ ಆ ಸೆ ಆಮ್ ಅಂತ ಬರಿಯೂದು ಕಲಿತಾಗ ಚಿತ್ರಾ ತಗೀತೀವೆಲ್ಲ, ಅಂಥದ್ದೇ ಅಂಥದ್ದೇ ಮಾವಿದು ಮಲ್ಲಿಕಾ. ಮಾವುಗಳ ರಾಣಿ. ಹುಳಿಯನ್ನೂದು ಗೊತ್ತೇ ಇಲ್ಲ. ಮಲ್ಲಿಕಾನ ಗಾತ್ರ, ರುಚಿ ಕಂಡು ಹೊಟ್ಟೆ ಉರುಕೊಂಡ ಬೇರೆ ಮಾವಿನೊಳಗ ಹುಳಿ ಕಾಣಬಹುದೇನೋ. ಇದರ ಕಾಯಿನೂ ಅಗ್ದಿ ರುಚಿ. ಹಾಂ, ಹೇಳೂದು ಮರತಿದ್ದೆ. ಮಲ್ಲಿಕಾ ಮಾವಿನ ರಾಣಿಯಾಗಿದ್ದು ಹೆಂಗಂದ್ರ, ದಶೇರಿ ಮತ್ತು ನೀಲಂಗಳ ಮಿಲನದಿಂದ. ಅಂದ್ರ ಇವೆರಡೂ ತಳಿಗಳ ಹೈಬ್ರಿಡ್ ತಳಿ ಮಲ್ಲಿಕಾ. ದಶೇರಿಯ ಸವಿ, ನೀಲಂನ ಗಾತ್ರ ಎರಡೂ ಕೂಡಿ, ಘಮ್ ಅನ್ನುವ ಘಮದೊಂದಿಗೆ ಕಿತ್ತಲೆಬಣ್ಣದ ತಿರುಳಿನೊಂದಿಗೆ ಅಗ್ದಿ ಸಿರಿವಂತ ಮಲ್ಲಿಕಾ ಇಕಿ.

ಇನ್ನ ನೀಲಂ ಮತ್ತು ದಶೇರಿ ಬಗ್ಗೆ ಹೇಳಬೇಕಲ್ಲ. ನೀಲಂ ನಮ್ಮ ಭಾರತದ ಎಲ್ಲ ಭಾಗದೊಳಗೂ ಬೆಳೆಯುವ ಹಣ್ಣು. ದಶೇರಿ ಹಂಗಲ್ಲ. ಉತ್ತರ ಭಾರತದೊಳಗ ಅಗ್ದಿ ಹೆಚ್ಚಿನ ಭರಾಟೆ. ದಶೇರಿಯ ವಿಶೇಷ ಏನಂದ್ರ ಕಾರ್ಬಾಯ್ಡ್ ಹಾಕಿದ್ರ ಹಣ್ಣಾಗೂದಿಲ್ಲಿದು. ಬಣ್ಣೂ ಇಲ್ಲ. ಗುಣಕ್ಕ ಯಾಕ ಬಣ್ಣದ ಹಂಗು ಅನ್ನೊಹಂಗ ತಿಳಿಹಸಿರು, ತಿಳಿ ಹಳದಿ ಬಣ್ಣದ ಸಣ್ಣಗಾತ್ರದ ಹಣ್ಣಿದು. ಅಗ್ದಿ ಅಂಗೈಯೊಳಗ ಮುಚ್ಚಿಟ್ಕೊಂಡು, ತೋರು ಬೆರಳು ಮತ್ತು ಹೆಬ್ಬೆರಳಿನ ನಡುವಿನ ಬಾವಿಯಿಂದಲೇ ಸೊರಕ್ ಅಂತ ರಸ ಹೀರಬಹುದು. ತಿಂದ ಮ್ಯಾಲೆ ನೀರು ಕುಡಿಬೇಕು ಅನಿಸುವಷ್ಟು ಸಿಹಿ. ದಶೇಹರಿ. ಅದಕ್ಕ ಮಿಶ್ರಿ (ಸಕ್ಕರಿ)ಗಿಂತ ಸಿಹಿ ಅನ್ನುವ ಬಿರುದೂ ಇದಕ್ಕದ.

ಇನ್ನ ರಸಪುರಿ ಬಗ್ಗೆ ಏನು ಹೇಳೂದು.. ಹೆಚ್ಚಿದ್ರೂ, ಹಿಂಡಿದ್ರೂ, ಎರಡಕ್ಕೂ ಸೈ ಅನ್ನುವಂಥ ತಿರುಳು ಇದಕ್ಕ. ಮನಿಯೊಳಗಿದ್ರ, ಸಣ್ಣಗೆ ತನ್ನ ಸುವಾಸನೆ ಬೀರಕೊಂತ ತನ್ನ ಅಸ್ಮಿತೆಯನ್ನ ಎಲ್ಲಾ ಕಡೆಗೆ ಹರಡುವ ಸುಂದರಿ ಈ ಮಾವು.

ಇನ್ನು ಲಂಗ್ಡಾ, ಗಧಾಮಾರ್ ಅಂತ ಕರೆಯುವ ದೊಡ್ಡಗಾತ್ರದ ಮಾವಿನ ಹಣ್ಣಿಗೆ ಹುಳಿಮಧುರ ವಾಸನಿ. ವಾರಾಣಸಿ ಮೂಲದ ಈ ಹಣ್ಣಿಗೆ ಈ ಹೆಸರು ಯಾಕ ಬಂದ್ವು ಅಂದ್ರ, ಒಂದು ಹಣ್ಣು ಮ್ಯಾಲಿಂದ ಉದುರಿದ್ರ, ಕೈ, ಕಾಲು ಮುರಿಯೂದು ಖಾತ್ರಿ ಅಂತ. ಮರದ ನೆರಳಿನಾಗ ಮಲಗಿದ್ದ ಕತ್ತಿ ತಲಿಮ್ಯಾಲೆ ಹಿಂಗೊಂದು ಹಣ್ಣು ಬಿದ್ದಾಗ ಕತ್ತಿ ಸತ್ತು ಹೋಗಿತ್ತಂತ. ಅದಕ್ಕೇ ಗಧಾಮಾರ್ ಅಂತಲೂ ಕರೀತಾರ ಇದಕ್ಕ. ಹೆಚ್ಚಾಕ ಚಾಕೂ ಸಾಕಾಗೂದಿಲ್ಲ. ಕತ್ತಿನೆ ಬೇಕು.

ಗುಜರಾತ್ ಮೂಲದ ಕೇಸರ್ ತಿನ್ಲಿಕ್ರ, ಮಾವಿನ ಋತುಮಾನ ಪೂರ್ಣ ಆಗೂದಿಲ್ಲ. ಕೇಸರಿ ಬಣ್ಣದ ತಿರುಳಿರುವ ಈ ಹಣ್ಣು ಅಗ್ದಿ ಮಧುರ, ಮಾಧುರ್ಯದ ಹಣ್ಣು. ಕೇಸರಿಯಾ... ಅಂತ ಏರು ಧ್ವನಿಯೊಳಗ ನಮ್ಮ ಮುಕ್ತಿಯಾರ್ ಅಲಿ ಸಾಹೇಬ್ರು ಹಾಡಿದ್ದಂಗ.. ಹಾಡಬೇಕಂತನಿಸ್ತದ.

ನಮ್ಮ ಬಾಗಲಕೋಟೆಯ ತಳಿ, ಬಾದಾಮಿ ಅಂತ. ಬಾದಾಮ್ ಅಂತ ಕರೆಯುವ ಈ ಹಣ್ಣು ನಮ್ದಲ್ಲ ಅಂತ ಅನ್ಕೊಂಡಿದ್ದೆ. ಅಗ್ದಿ ಸಣ್ಣ ವಾಟೆ ದಪ್ಪ ಹಣ್ಣಿನ ಬಾದಾಮಿ ನಮ್ದೇ ತಳಿ ಅಂದಾಗ ರುಚಿ ಇಮ್ಮಡಿ ಅನಿಸಿತ್ತು. ಈ ಹಣ್ಣು ಹಿಂಡಿ, ತಿರುಳಿಗೆ ಬೆಲ್ಲ, ಏಲಕ್ಕಿ ಬೆರೆಸಿ, ಹೋಳಿಗಿ, ಚಪಾತಿ ಜೊತಿಗೆ ತಿನ್ನಾಕ ಕೊಟ್ರ... ಬಾದಾಮಿ ಮಂಗ್ಯಾನ್ಹಂಗ ಹಾರಾಡುವ ಮನಸು ಸಹ, ಅಷ್ಟೂ ಹೊತ್ತು ಮಾವಿನ ಜಿಜ್ಞಾಸೆಯೊಳಗ ತೊಡಗ್ತದ. ಇದನ್ನು ಸೃಷ್ಟಿಸಿದ ದೇವರಿಗೆ ಇಷ್ಟು ಬಣ್ಣಗಳು ಹೆಂಗ ಹೊಳದ್ವು, ಇಷ್ಟು ವೈವಿಧ್ಯಮಯವಾಗಿ ಹೆಂಗ ಸೃಷ್ಟಿಸಿದ? ರುಚಿಯೊಳಗೂ ಸಣ್ಣಸಣ್ಣ ಫರಕು ಹೆಂಗ ತಂದ? ಹಿಂಗ ಫರಕ್ ಮಾಡ್ಕೊಂತ ಒಂದು ಅತ್ಯುತ್ಕೃಷ್ಟ ಮಾವು ಸೃಷ್ಟಿಸಿದ್ನಲ್ಲ. ಅದು ಯಾವ ಮಾವು? ಆಪೂಸು ಇರಬಹುದಾ?

ಜೀರಗಿ ಮಾವು ಚೂರು ಹುಳಿ ಮಧುರ ಇರುವ ಚುಟ್ಕಿಲೆ ಮಾವು ಅದು. ಇಟೀಟೆ ಇದ್ರೂ ಜುಬ್ರ ಭಾಳ. ಹಲ್ಲಿನ ಸಂದಿಯೆಲ್ಲ ಸ್ವಚ್ಛ ಮಾಡುವ ಕೆಲಸ ತಾನೇ ಹೊತ್ತೇದೇನೋ ಅನ್ನೊಹಂಗ ನಾಟಕ ಮಾಡುವ ಮಾವಿದು.

9ನೇ ಪುಟಕ್ಕೆ...

ರಸಭರಿತ ಗಂಧರ್ವ ಕನ್ನೆ ಮಲ್ಲಿಕಾ, ಕಣ್ಣಿಕಣ್ಣಿ ರಸದ ಬೈಗನ್‌ಪಲ್ಲಿ, ಸಣ್ಣಗೆ ಸುವಾಸನೆ ಬೀರಕೊಂತ ತನ್ನ ಅಸ್ಮಿತೆಯನ್ನ ಹರಡುವ ಸುಂದರಿ ರಸಪೂರಿ, ದೊಡ್ಡಗಾತ್ರದ ಗಧಾಮಾರ್, ಗಾಢವಾದ ವಾಸನಿಯ ಇಮಾಮ್ ಪಸಂದ್... ಅಬ್ಬಬ್ಬಾ, ಹಿಂಗ್ ಶುರುವಾತಂದ್ರ ಈ ಮಾವಿನ ಸುಗ್ಗಿ ಹಂಗ್ ಮುಗಿಯೂದಲ್ಲ ಬಿಡ್ರಿ!

ಕಷ್ಟದ ರಾಗಗಳ ಇಷ್ಟದ ಗುರು

ಚಂದ್ರಿಕಾ ಕಾಮತ್

ಸ್ಮರಣೆ

ಪಂ.ರಾಜಶೇಖರ್ ಮನಸೂರ ಅವರ ಹಿಂದೂಸ್ತಾನಿ ಸಂಗೀತ ಕಛೇರಿಯಲ್ಲಿ ಚಂದ್ರಿಕಾ ಕಾಮತ್ (ಸಂಗ್ರಹ ಚಿತ್ರ)

ಕಷ್ಟದ ರಾಗಗಳನ್ನು ಸುಲಭವಾಗಿ ಹೇಳುತ್ತ, ಸಂಗೀತ ಕಲಿಕೆ ಕಬ್ಬಿಣದ ಕಡಲೆಯಲ್ಲ ಎಂದು ತಿಳಿಸಿದ ಪಂ. ರಾಜಶೇಖರ ಮನಸೂರ ಅಪ್ರತಿಮ ಸಂಗೀತ ಕಲಾವಿದರಾಗಿದ್ದರು. ಸಂಗೀತದ ಗಂಧ-ಗಾಳಿಯೂ ಇಲ್ಲದ ನನಗೆ ಸಂಗೀತ ಕಲಿಸಿದ ಮಹಾನ್ ಗುರು ಅವರು. ನಾನು ಅವರಲ್ಲಿ ಸಂಗೀತ ಕಲಿತಿದ್ದೇ ಒಂದು ಕಥೆ. ಅವರ ಬಳಿ ನಾನು ಪಿಎಚ್.ಡಿ ಅಧ್ಯಯನ ಮಾಡುತ್ತಿದ್ದೆ. ಆ ವೇಳೆ, ಅವರ ತಂದೆ ಪಂಡಿತ್ ಮಲ್ಲಿಕಾರ್ಜುನ ಮನಸೂರ ಅವರ 'ಮೈ ಜರ್ನಿ ಇನ್ ಮ್ಯೂಸಿಕ್' ಆತ್ಮಕಥನವನ್ನು ಕನ್ನಡಕ್ಕೆ ಅನುವಾದಿಸುವ ಅವಕಾಶ ದೊರಕಿತ್ತು. ಅದನ್ನು 'ರಸಯಾತ್ರೆ' ಹೆಸರಲ್ಲಿ ಅನುವಾದಿಸಿದ್ದೆ.

ಅದಕ್ಕೆ ಪ್ರತಿಯಾಗಿ ಏನು ಬೇಕು ಎಂದು ಕೇಳಿದಾಗ, 'ಅನುವಾದ ಮಾಡಲು ಅವಕಾಶ ನೀಡಿದ್ದೇ ನನ್ನ ಭಾಗ್ಯ' ಎಂದಿದ್ದೆ. 'ಅನುವಾದಿಸಿದ್ದಕ್ಕೆ ಪ್ರತಿಯಾಗಿ ನಾನೊಂದು ರಾಗ ಕಲಿಸುತ್ತೇನೆ' ಎಂದು ಸಂಗೀತ ಕ್ಷೇತ್ರಕ್ಕೆ ಕರೆ ತಂದರು. ಆಗ ನನಗೆ 44 ವರ್ಷ.

ಸಂಗೀತ ಕಾರ್ಯಕ್ರಮ ಇದ್ದಾಗಲೆಲ್ಲ ಪಂ. ರಾಜಶೇಖರ ಅವರು ಧಾರವಾಡ, ಹುಬ್ಬಳ್ಳಿಗೆ ಬರುತ್ತಿದ್ದರು. ನಮ್ಮ ಮಾವನವರಿಗೆ ಪರಿಚಿತರು. ಹುಬ್ಬಳ್ಳಿಯಲ್ಲಿರುವ ನಮ್ಮ ಮನೆಯಲ್ಲಿಯೇ ತಂಗುತ್ತಿದ್ದರು. ಅವರು ಬಂದ ಸುದ್ದಿ ತಿಳಿದು ಸಂಗೀತಾಸಕ್ತರು ಮನೆಗೆ ಬಂದು ಅವರಲ್ಲಿ ಸಂಗೀತ ಕಲಿಯುತ್ತಿದ್ದರು. ಕ್ಲಿಷ್ಟಕರ ರಾಗಗಳನ್ನು ಸರಳವಾಗಿ, ಮನಮುಟ್ಟುವಂತೆ ಹಾಡುವ ಅವರ ಶೈಲಿ ನಿಜಕ್ಕೂ ಅದ್ಭುತ.

ತಂದೆಯಿಂದ ಕೇಳಿ, ಕೂತು ಅವರು ಸಂಗೀತವನ್ನು ಮನದಟ್ಟು ಮಾಡಿಕೊಂಡಿದ್ದರು. ಸಂಗೀತ ಹಾಡುವುದಷ್ಟೇ ಅಲ್ಲ, ಅದರ ಕುರಿತು ಚಿಂತನೆ, ಮನನ ಮಾಡುತ್ತಲೇ ಇರುತ್ತಿದ್ದರು. ರಾಗ, ಲಯ, ತಾಳಗಳ ಬಗ್ಗೆ ಗಹನವಾದ ಚಿಂತನೆ ಅವರೊಳಗೆ ಮೌನವಾಗಿಯೇ ನಡೆಯುತ್ತಿತ್ತು. ಹಾಗಾಗಿಯೇ ಅವರು ಮಾತಿಗಿಂತ ಮೌನಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡುತ್ತಿದ್ದರು.

ಸಂಗೀತದ ಮೂಲ ಅರಿತರೆ ಕಲಿಕೆಗೆ ಅನುಕೂಲವೆಂದು ಕೆಲವರು ಸಂಗೀತ ಕಲಿಸುವಾಗ ರಾಗ, ಧಾಟಿ, ಸಂವಾದಿ ಕುರಿತು ಪಾಠ ಮಾಡುತ್ತಾರೆ. ಆದರೆ, ನನ್ನ ಗುರುಗಳು ಎಂದಿಗೂ ಶಿಷ್ಯರಿಗೆ ಪಾಠ ಮಾಡಿಲ್ಲ. ಪ್ರಾಯೋಗಿಕ ಕಲಿಕೆ ಮೂಲಕ ಸಂಗೀತ ಹೇಳಿಕೊಟ್ಟು, ಅದನ್ನು ಆಸ್ವಾದಿಸುತ್ತ ಕಲಿಯುವಂತೆ ಮಾಡುತ್ತಿದ್ದರು. ಉದಾಹರಣೆಗೆ ಶುದ್ಧ ಗಂಧಾರ, ತೀವ್ರ ಗಂಧಾರದ ಬಗ್ಗೆ ಹೇಳುವುದಕ್ಕಿಂತ, ಅದು ಎಷ್ಟರ ಮಟ್ಟಿಗೆ ಶುದ್ಧ, ತೀವ್ರತೆ ಇರಬೇಕು ಎನ್ನುವುದನ್ನು ಹಾಡಿಯೇ ತಿಳಿಸುತ್ತಿದ್ದರು. ಅವರು ಸ್ವರದ ವಜನ ತಿಳಿಸುವ ಕ್ರಮವನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ.

ವೇದಿಕೆ ಮೇಲೆ ಹಾಡುವಂತೆಯೇ, ಮನೆಯಲ್ಲಿ ಹಾಗೂ ಶಿಷ್ಯರಿಗೆ ಕಲಿಸುವಾಗಲು ಅಷ್ಟೇ ಗಂಭೀರವಾಗಿ ಹಾಡುತ್ತಿದ್ದರು. ಸಂಗೀತ ಅವರ ನರ ನಾಡಿಗಳಲ್ಲಿ ಹಾಸು ಹೊಕ್ಕಾಗಿತ್ತು. ಅವರು ಕಲಿಸುವ ರೀತಿಯೇ ಆಪ್ತವಾಗಿರುತ್ತಿತ್ತು. ಜನಪ್ರಿಯತೆಗೆ ಹಾಡುತ್ತಿಯೋ, ಆತ್ಮತೃಪ್ತಿಗೋ ಎಂದು ಕೇಳುತ್ತಿದ್ದರು. ದೇವರನ್ನು ಸಂಗೀತದಲ್ಲಿ ಯಾವಾಗ ನೋಡುತ್ತಿಯೋ ಆವಾಗ ನಿನಗೆ ಸಂಗೀತ ಸಾಕ್ಷಾತ್ಕಾರ ಆಗುತ್ತದೆ ಎಂದು ಅವರು ಹೇಳಿರುವ ಮಾತು ಬಹುದೊಡ್ಡ ಜ್ಞಾನ.

ಜೈಪುರ್-ಅತ್ರೌಲಿ ಘರಾಣಾ ಸಂಗೀತದ ವಿಶೇಷವೆಂದರೆ ಅಪರೂಪದ, ಅಪ್ರಚಲಿತ ಹಾಗೂ ಸಂಕೀರ್ಣ ರಾಗಗಳ ಖಜಾನೆ. ಇಂಥ ರಾಗಗಳ ಕಲಿಕೆ ಕಠಿಣ ಎಂಬುದು ಅನೇಕರ ಅಭಿಪ್ರಾಯ. ಆದರೆ, ಗುರುಗಳು ಈ ಅನವಟ ರಾಗಗಳನ್ನು ಲೀಲಾಜಾಲವಾಗಿ ಸುಲಭ ಎನಿಸುವ ಹಾಗೆ ಕಲಿಸುತ್ತಿದ್ದರು. ಅವರೊಬ್ಬ ಮಾಂತ್ರಿಕನಂತೆ ಈ ರಾಗಗಳನ್ನು ಅರ್ಥ ಮಾಡಿಸಿ ಕಲಿಸುತ್ತಿದ್ದರು. ಸಂಕೀರ್ಣ ರಾಗಗಳನ್ನು ಹೊಸ ಮನುಷ್ಯರಂತೆ ನೋಡಬೇಕು ಎನ್ನುತ್ತಿದ್ದರು. ಜೋಡ್-ರಾಗ ಎನ್ನುವ ಶಬ್ದದ ಬಳಕೆ ಸರಿಯಾದದ್ದಲ್ಲ ಎಂದು ಅವರು ಅಭಿಪ್ರಾಯಪಡುತ್ತಿದ್ದರು. ಅದು ಎರಡು ರಾಗಗಳ ಮಿಶ್ರಣ ಅಲ್ಲ, ಬದಲಾಗಿ ಅದ್ವಿತೀಯ ಸಂಯೋಗ. ಆ ರಾಗದ ಅಪ್ಪ-ಅಮ್ಮನ ಹುಡುಕಾಟ ವ್ಯರ್ಥ. ಈ ಸಂಯೋಗ ಪ್ರಕ್ರಿಯೆ ಹೊಸ ರಾಗದ ಹುಟ್ಟಿಗೆ ಕಾರಣವಾಗಿರುವುದರಿಂದ ಆ ಹೊಸರಾಗಕ್ಕೆ ಆ ವಿಶಿಷ್ಟ ಅನನ್ಯತೆಯನ್ನು ಕೊಟ್ಟಾಗ ಮಾತ್ರ ಅದು ಪ್ರಸ್ತುತಿಯಲ್ಲಿ ಅರಳುತ್ತದೆ ಎನ್ನುತ್ತಿದ್ದರು.

ಗುರುಗಳು ಒಮ್ಮೆ ಹೇಳಿದ ಕಥೆ. ಇಬ್ಬರು ಸಂಗೀತಗಾರರು ನಾ ಹೆಚ್ಚು, ತಾ ಹೆಚ್ಚು ಎಂದು ಜಗಳವಾಡಲು ಪ್ರಾರಂಭಿಸಿದರು. ಬಗೆಹರಿಯದಾದಾಗ ಶಿವನ ಬಳಿ ನಿರ್ಣಯಿಸಲು ಬೇಡಿಕೊಂಡರು. ಶಿವನು ಒಬ್ಬನನ್ನು ಎತ್ತಿ ತನ್ನ ಕಿವಿಯಲ್ಲಿ ಸಿಕ್ಕಿಸಿ, ಇನ್ನೊಬ್ಬನನ್ನು ತನ್ನ ಇನ್ನೊಂದು ಕಿವಿಯಲ್ಲಿ ಸಿಕ್ಕಿಸಿಕೊಂಡ. ಅವರಿಬ್ಬರೂ ಇನ್ನೂ ಶಿವನ ಕಿವಿಯಲ್ಲಿ ಹಾಡುತ್ತಲೇ ಇದ್ದಾರೆ ಎಂದು ಗುರುಗಳು ನಗುತ್ತ ಹೇಳುತ್ತಿದ್ದರು. ಇಂತಹ ಕತೆಯ ಮೂಲಕ ಕಲಿಯಬೇಕಾದ್ದೇನೆಂದರೆ ಸಂಗೀತ ವಿದ್ಯೆ ಎಂಬುದು ಮಾಡುವ ಕೆಲಸ, ಮಾತಾಡುವವರದ್ದಲ್ಲ (ಏ ವಿದ್ಯಾ ಕರನೇವಾಲೋಂಕಾ ಕಾಮ್ ಹೈ, ಬಾತ್ ಕರನೇವಾಲೋಂಕಾ ನಹೀ). ಸಾಧನೆ ಪ್ರಾರ್ಥನೆಯಂತೆ ನಿರಂತರವಾಗಿರಬೇಕು. ಘರಾಣಾದ ಪರಿಶುದ್ಧತೆಯನ್ನು ಉಳಿಸಿಕೊಳ್ಳಬೇಕು. ಬಂದಿಶ್ ಎನ್ನುವುದು ಬೀಜ ಮಂತ್ರ. ಪ್ರತಿ ಬಾರಿಯ ಪುನರಾವರ್ತನೆಯೂ ನಾದಬ್ರಹ್ಮನ ಹತ್ತಿರ ಕರೆದೊಯ್ಯುತ್ತದೆ ಎನ್ನುತ್ತಿದ್ದರು.

'ಸಂಗೀತ ಕಲಾವಿದ ಎಂದಿಗೂ ಜನಪ್ರಿಯತೆ ಹಿಂದೆ ಹೋಗಬಾರದು. ಅವನು ರಾಗ, ಲಯ, ತಾಳಗಳ ಮೂಲಕ ಪ್ರಸ್ತುತಿಪಡಿಸುವ ಸಂಗೀತ ಸಹೃದಯರಿಗೆ ಆತ್ಮತೃಪ್ತಿ ನೀಡುವಂತಿರಬೇಕು. ಯಾವಾಗ ಕೇಳುಗ ತಲೆದೂಗುತ್ತಾನೋ ಅದೇ ಅವನಿಗೆ ಸಿಗುವ ಬಹುದೊಡ್ಡ ಸಮ್ಮಾನ' ಎನ್ನುವ ಅವರ ಮಾತು ಕಿವಿಯಲ್ಲಿ ಈಗಲೂ ಅನುರಣಿಸುತ್ತದೆ. ಅವರು ಸಂಗೀತವಷ್ಟೇ ಅಲ್ಲ, ಶಿಷ್ಯರಿಗೆ ಬದುಕಿನ ಮೌಲ್ಯದ ಬಗ್ಗೆಯೂ ಸಾಕಷ್ಟು ಮಾರ್ಗದರ್ಶನ ನೀಡಿದ್ದರು. ಎಲ್ಲರನ್ನೂ ಪ್ರೀತಿಯಿಂದ ಮಾತನಾಡಿಸುತ್ತ, ಎಲ್ಲರೊಂದಾಗಿರುತ್ತಿದ್ದರು.

ಜನಪ್ರಿಯವಲ್ಲದ ಗೌರಿ, ಬಸಂತಿ ಕಾನಡ ರಾಗಗಳನ್ನು ಕೇಳುಗರಿಗೆ ಉಣಬಡಿಸಬೇಕು ಎನ್ನುತ್ತಿದ್ದರು. ಈಗ ನಾದಗಳೊಂದಿಗೆ ಲೀನವಾಗಿದ್ದಾರೆ, ಅದೂ ನಮ್ಮನ್ನೆಲ್ಲ ಬಡವರನ್ನಾಗಿ ಮಾಡಿ.

ನಿರೂಪಣೆ: ನಾಗರಾಜ್ ಬಿ.ಎನ್

ಮಾವು ದೇವರಿಗಿಂತ...

8ನೇ ಪುಟದಿಂದ...

ಹಣ್ಣು ತರಾಕ ಹೋದಾಗೆಲ್ಲ ನಮ್ಮ ಶಾರುಖ್ ಭಾಯ್ ಇಮಾಮ್ ಪಸಂದ್ ಆಯಾ.. ಆಪ್‌ಕೆ ಲಿಯೆ ಬಚಾಕೆ ರಖಾ (ಇಮಾಮ್ ಪಸಂದ್ ಹಣ್ಣು ಬಂದಾವ. ನಿಮಗಂತೇ ಉಳಿಸಿ ಇಟ್ಟೇನಿ) ಅಂತ ಅಗ್ದಿ ಗುಟ್ಟು ಹೇಳಿದ್ಹಂಗ ಹೇಳ್ತಾರ. ಇದು ತೆಲಂಗಾಣಾದ ತಳಿ. ಅಗ್ದಿ ತೆಳು ಚರ್ಮ. ನಮ್ಮ ಚರ್ಮದಷ್ಟೇ ತೆಳು. ಮತ್ತ ಅಗ್ದಿ ರುಚಿಕರ ರಸ. ಈ ರುಚಿಯೇ ವಿಭಿನ್ನ. ಹಣ್ಣು ಹೀರಿ, ಬಾಯಿ ತೊಳಕೊಂಡ್ರು, ಮಾವಿನ ಹಣ್ಣು ತಿಂದು ಬಂದಾರ ಇವರು ಅಂತ ಹೇಳುವಷ್ಟು ಗಾಢವಾದ ವಾಸನಿ ಇವಕ್ಕ.

ಹಣ್ಣುಗಳ ರಾಜ ಅಂತ್ಹೇಳೂದಾದ್ರ ಅದು ಇಮಾಮ್ ಪಸಂದ್‌ಗೆ ಅಂತ ಹೇಳ್ತಾರ. ನಮಗ ರಾಜಾ ಆದ್ರೇನು, ರಾಣಿ ಆದ್ರೇನು, ಪ್ಯಾದೆಗಳಾದ್ರೇನು, ಮಾವು ಅಂದ್ರ ಮಾವು ಅಷ್ಟ.

ಆಹಹಾ.. ಆಪೂಸು ಅಂದ್ಕೂಡಲೆ ಎಲ್ಲಾರಿಗೆ ರತ್ನಗಿರಿ ನೆನಪಾದ್ರ ನಮಗ ಧಾರವಾಡ ನೆನಪಾಗ್ತದ. ಧಾರವಾಡದ ಪ್ಯಾಟಿಯೊಳಗ ಆಪೂಸು, ಡಬ್ಬಿಯೊಳಗ ಶಿಸ್ತಗೆ ಕುಂತ್ರ, ಬಾಲವಾಡಿ ಮಕ್ಕಳು ಸಾಲಾಗಿ ಕೈ ಕಟ್ಕೊಂಡು ಶಿಸ್ತಿನಿಂದ ಕುಂತ್ಹಂಗ ಕಾಣ್ತಾವ. ಆಪೂಸು ಮತ್ತು ದಶೇರಿ ತಿನ್ನೂದೆ ಒಂದು ಕಲಾ. ಹೆಬ್ಬೆರಳು ತೋರು ಬೆರಳಿನ ನಡುವೆ ಹಣ್ಣು ಹಿಡಿದು ಭೂಮಿ ಹಂಗ ತಿರಗಸ್ಕೊಂತ ನಿಧಾನಕ್ಕ ಹಣ್ಣು ಮಾಡಬೇಕು. ಇಷ್ಟಿಷ್ಟೇ ಹಿಚುಕಿಕೊಂಡು ಒಳಗಿನ ತಿರುಳು ಮಿದುಗೊಳಿಸಬೇಕು. ಆಮೇಲೆ ಹೀರಕೊಂತ ಕುಂದರಬೇಕು. ನಮ್ಮ ಸಿಂದಗಿ ಅಜ್ಜನ ಮನ್ಯಾಗ ಆಪೂಸಿನ ಶೀಕರಣೆ ಮಾಡಿದ್ರ, ವಾಟೆ ಸಹಿತ ತೊಳದು ಹಾಕ್ತಿದ್ರು. ಹಂಗ ತೊಳದಿಟ್ಟ ವಾಟೆ ಚೀಪಾಕೂ ಸ್ಪರ್ಧೆ ಇರ್ತಿತ್ತು. ಕಟುಕನ ಅಂಗಡಿ ಮುಂದ ಜೊಲ್ಲು ಸುರಸ್ಕೊಂಡು ಓಡಾಡುವ ನಾಯಿ ಹಂಗ ನಾವೂ ಠಳಾಯಿಸ್ತಿದ್ವಿ. ಅದ್ಯಾವಾಗ ಆ ವಾಟೆಗಳಿಟ್ಟ ಫರಾತ ಅಲ್ಲಿಂದ ಸರಸ್ತಾರಂತ. ಆಮೇಲೆ ಅಂಗೈ ಮುಷ್ಟಿಯೊಳಗ ವಾಟೆ ಹಿಡ್ಕೊಂಡು ತಿನ್ನಾಕತ್ರ... ಸ್ವರ್ಗ ಸುಖ ಅನ್ನೂದು ಅಲ್ಲೇ ಸಿಗ್ತಿತ್ತು.

ನನ್ನ ಸೋದರಮಾವ, ಬಸು ಮಾಮಾ, ನನಗ ಯಾವಾಗಲೂ ಕಾಡ್ತಿದ್ದ. ಬ್ಯಾರೆದೋರ ಮನಿಮುಂದ ಬಿದ್ದ ವಾಟೆ ತಿನ್ನಾಕ ಹಂದಿಗಳು ಬರ್ತಾವ. ನಮ್ಮನಿ ದಾಟ್ಕೊಂಡೆ ಹೋಗ್ತಾವ. ಆ ಹಂದಿಗೆ ಏನೇನೂ ಉಳಿಸಿರೂದಿಲ್ಲ ಅಂತ. ಹಂದಿಗೆ ಅನ್ಯಾಯ ಮಾಡಿದೋರ್ಹಂಗ ಮಾತಾಡ್ತಿದ್ದ. ಪಿಸ್ಸ... ಯಾರು ಏನಂದ್ರ ಏನು? ನಾವು ನಮ್ಮ ಮಾವಿನ ಹಣ್ಣಿಗೆ, ಸೃಷ್ಟಿಕರ್ತನ ಈ ಅದ್ಭುತ ಸೃಷ್ಟಿಯ ಒಂದೆಳಿಗೂ ಅನ್ಯಾಯ ಆಗದೇ ಇರುಹಂಗ ಹೀರ್ತಿದ್ದೆ, ಚೀಪ್ತಿದ್ದೆ, ನೆಕ್ತಿದ್ದೆ. ಅಗ್ದಿ ತಾಜ್ ಮಹಲ್ಲಿನ ಸಂಗಮರಿ ಕಲ್ಲಿನ್ಹಂಗ ಸಪಾಟು ಮಾಡಿ ಎಸೀತಿದ್ದೆ.

ಖರೇವಂದ್ರ ದೇವರು ಮಾವಿನ ಹಣ್ಣಿನಾಗ ಬದುಕಿನ ಸೂತ್ರನೇ ಮಾಡಿಟ್ಟಾನ. ಮಾಗದಾಗ ಉಪ್ಪುಖಾರ ಮೈ ಉಣಿಸಿ, ಭಾಳ ವರ್ಷಗಳ ತನ ಹುಳಿಯುಳಿಸುವ ಹಂಗ ನಮ್ಮ ಯೌವ್ವನ. ಹಿಂಡಿ ಹಿಪ್ಪಿ ಮಾಡಿ ರಸ ಹೀರೂದೆ ನಮ್ಮ ಜೀವನಪ್ರೀತಿ. ಹಂಗ ಹಿಂಡಿ ಹಿಪ್ಪಿಯಾದಾಗಲೇ ಜೀವನಾಮೃತ ಸಿಗೂದು ಮತ್ತ. ಅವಾಗವಾಗ ಹಲ್ಲಿನ ನಡುವೆ ನುಸುಳುವ ಜುಬ್ರ, ಎಳಿಗಳೆಲ್ಲ ನಮ್ಮ ಬದುಕಿನೊಳಗಿನ ಅಡೆತಡೆಗಳು. ಕೆಲವನ್ನು ಅನುಭವಿಸಿ ಹೊರಗ ಎಸದು ಬಿಡಬೇಕು. ಕೆಲವೊಮ್ಮೆ ಹುಳಿ ಅಂತ ಗೊತ್ತಾದಾಗ ಬಿಟ್‌ಬಿಡಬೇಕು. ಪಾನಕ, ಶೀಕರಣೆ, ಉಪ್ಪಿನಕಾಯಿ ಏನರೆ ಮಾಡ್ರಿ ತನ್ನತನ ಬಿಟ್ಟುಕೊಡದ ಆ ಗುಣ ನಾವೂ ಕಲೀಬೇಕು. ಯಾವುದರೆ ಹೆಸರು ಇರಲಿ, ವಾಸನಿ, ರುಚಿ ಎಲ್ಲರೊಳಗೊಂದಾಗು, ಎಲ್ಲರ ಬೆಸೆಯುವ ಗೊಂದಾಗು ಅಂತ ಹೇಳ್ತದ ಈ ಹಣ್ಣು. ನನಗ ಮಾವು ದೇವರಿಗಿಂತ ಬ್ಯಾರೆ ದೇವರೇ ಗೊತ್ತಿಲ್ಲ.

ಸೇನೆಯ ತುರಾಯಿ

ಬಯೊಡೇಟಾ

ಪೂರ್ಣ ಹೆಸರು: ಬಗ್ಗವಳ್ಳಿ ಸೋಮಶೇಖರ್ ರಾಜು

ಪೋಷಕರು: ಸೋಮಶೇಖರ್, ವಿಮಲಾ

ಜನನ: 1963 ಅ.19

ಶಿಕ್ಷಣ: ಪ್ರಾಥಮಿಕ ಶಿಕ್ಷಣ – ಕಲಬುರಗಿ ಮತ್ತು ಮೈಸೂರು, 5ರಿಂದ11ನೇ ತರಗತಿ–ವಿಜಯಪುರದ ಸೈನಿಕ ಶಾಲೆ. 11ನೇ ತರಗತಿಯಲ್ಲಿದ್ದಾಗ ಪುಣೆಯ ರಾಷ್ಟ್ರೀಯ ರಕ್ಷಣಾ ಅಕಾಡೆಮಿ (ಎನ್‌ಡಿಎ) ಪ್ರವೇಶ ಪರೀಕ್ಷೆ ಪಾಸು. 1984ರಲ್ಲಿ ಜಾಟ್ ರೆಜಿಮೆಂಟ್ ಸೇರ್ಪಡೆ.

ನಿರ್ವಹಿಸಿದ ಹುದ್ದೆಗಳು: 'ಸೆಕೆಂಡ್ ಲೆಫ್ಟಿನೆಂಟ್', 'ಕ್ಯಾಪ್ಟನ್', 'ಮೇಜರ್', 'ಲೆಫ್ಟಿನೆಂಟ್ ಕರ್ನಲ್', 'ಕರ್ನಲ್ ಬ್ರಿಗೇಡಿಯರ್', 'ಮೇಜರ್ ಜನರಲ್', 'ಲೆಫ್ಟಿನೆಂಟ್ ಜನರಲ್'

ಪುರಸ್ಕಾರಗಳು: ಉತ್ತಮ್ ಆಯುಷ್ ಸೇವಾ ಪದಕ, ಅತಿ ವಿಶಿಷ್ಟ ಸೇವಾ ಪದಕ (ಎವಿಎಸ್‌ಎಂ), ಯುದ್ಧ ಸೇವಾ ಪದಕ (ವೈಎಸ್‌ಎಂ).

ಕುಟುಂಬ: ಪತ್ನಿ ಶಕುಂತಲಾ, ಪುತ್ರ ಶೇಖರ್ ಹಾಗೂ ಪುತ್ರಿ ಪೂರ್ವಿ

ಸಹೋದರಿಯರಾದ ಶೀಲಾ, ಶೈಲಾ, ಸಹೋದರ ಗಿರೀಶ್ ಹಾಗೂ ತಂದೆ-ತಾಯಿ ಜೊತೆ ರಾಜು (ಸಂಗ್ರಹ ಚಿತ್ರ)

8ನೇ ಪುಟದಿಂದ...

'ನೀವು ಮುಖ್ಯವಾಹಿನಿಗೆ ವಾಪಸು ಬನ್ನಿ. ನಿಮ್ಮ ಕಾಳಜಿಯನ್ನು ನಾವು ಮಾಡುತ್ತೇವೆ. ಕಾರ್ಯಾಚರಣೆ ಸಂದರ್ಭದಲ್ಲೂ ನೀವು ವಾಪಸ್ ಬರಲು ಇಚ್ಛಿಸಿದರೆ ನಿಮ್ಮನ್ನು ಬರಮಾಡಿಕೊಳ್ಳಲು ಸಿದ್ಧ' ಎಂದು ರಾಜು ಕರೆಕೊಟ್ಟಿದ್ದರು. ಇದರಿಂದ ಕಣಿವೆಯಲ್ಲಿ ಉಗ್ರರ ಚಟುವಟಿಕೆಗಳು ಬಹುಪಾಲು ತಗ್ಗಲು ಸಾಧ್ಯವಾಯಿತು. ಭಯೋತ್ಪಾದನೆ ಚಟುವಟಿಕೆಗಳತ್ತ ಒಲವು ತೋರುವ ಯುವಕರ ಸಂಖ್ಯೆಯೂ ಕಡಿಮೆಯಾಯಿತು.

ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯ ಅಧಿಕಾರಿಯಾಗಿ ಸೋಮಾಲಿಯಾದಲ್ಲಿ, ಭೂತಾನ್‌ನಲ್ಲಿ ಕಾರ್ಯನಿರ್ವಹಿಸಿದ್ದಾರೆ. 'ಆಪರೇಷನ್ ಪರಾಕ್ರಮ್' ಕಾರ್ಯಾಚರಣೆಯಲ್ಲೂ ಅವರು ಭಾಗಿಯಾಗಿದ್ದರು. ಭಾರತ-ಪಾಕಿಸ್ತಾನ ಗಡಿಯಲ್ಲಿ ಭದ್ರತೆಯ ಹೊಣೆಯನ್ನೂ ಹೊತ್ತಿದ್ದರು. 2017-18ರಲ್ಲಿ ಕಾಶ್ಮೀರದಲ್ಲಿ ದಂಗೆಯನ್ನು ಹತ್ತಿಕ್ಕುವ ನೇತೃತ್ವ ವಹಿಸಿಕೊಂಡಾಗ ಅವರ ಮಾನವೀಯ ನಡೆ ಸ್ಥಳೀಯರ ಮನ ಗೆದ್ದಿತ್ತು. 'ಸೇನೆಯು ಪ್ರತಿಯೊಬ್ಬ ಭಾರತೀಯ ಪ್ರಜೆಯ ಸ್ನೇಹಿತ. ನನ್ನ ಹಿಂದಿದ್ದ ಅಧಿಕಾರಿಯ ಸಂದೇಶವೂ ಇದೇ ಆಗಿತ್ತು. ನನ್ನ ಪ್ರತಿಯೊಂದು ನಡೆಯೂ ಈ ಪರಿಪಾಟವನ್ನು ಮುಂದುವರಿಸುವುದಕ್ಕೆ ಪೂರಕವಾಗಿ ಇರಲಿದೆ' ಎಂದು ರಾಜು ಹೇಳಿದ್ದರು.

'ಪ್ರತಿಯೊಂದು ಸಾವೂ ದುರದೃಷ್ಟಕರ. ಉಗ್ರರನ್ನು ಕೊಲ್ಲುವುದು ನಮ್ಮ ಬಯಕೆಯಲ್ಲ. ಶರಣಾಗತಿಗಾಗಿ ನಾವು ಅವರಿಗೆ ಅವಕಾಶವನ್ನು ನೀಡಲು ಇಚ್ಛಿಸುತ್ತೇವೆ' ಎನ್ನುವ ಅವರ ಹೇಳಿಕೆ ಕಣಿವೆಯಲ್ಲಿ ದೊಡ್ಡ ಸಂಚಲನವನ್ನು ಉಂಟು ಮಾಡಿತ್ತು. ಚಿನಾರ್ ಕೋರ್‌ನಿಂದ ಶುರುಮಾಡಿದ್ದ ಹೆಲ್ಪ್‌ಲೈನ್‌ನ ಪ್ರಯೋಜನವನ್ನು ಕಾಶ್ಮೀರದ ನಾಗರಿಕರು ದೊಡ್ಡ ಪ್ರಮಾಣದಲ್ಲೇ ಪಡೆದುಕೊಂಡರು. ಕೋವಿಡ್ ಸಾಂಕ್ರಾಮಿಕದ ಕಾಲಘಟ್ಟದಲ್ಲಿ 'ಖೈರಿಯತ್ ಗಸ್ತು' ಮೂಲಕ ನಾಗರಿಕರಿಗೆ ಔಷಧೋಪಚಾರ ಮಾಡಿದ್ದು ಸಹ ರಾಜು ಅವರ ನೇತೃತ್ವದ ಸೇನಾಪಡೆ.

ಹುಟ್ಟೂರಿನ ಜನರ ಜತೆ ರಾಜು ಅವರಿಗೆ ಅವಿನಾಭಾವ ಸಂಬಂಧ. ಆರು ತಿಂಗಳು, ವರ್ಷಕ್ಕೊಮ್ಮೆ ಊರಿಗೆ ಭೇಟಿ ಕಾಯಂ. ವಾಹನ ಚಾಲನೆ ಅಚ್ಚುಮೆಚ್ಚು. ಊರಿಗೆ ಬಂದಾಗ ಬೈಕಿನಲ್ಲಿ ತೋಟ, ಜಮೀನುಗಳಿಗೆ ಓಡಾಡುವುದು ರೂಢಿ. ಮಿಲಿಟರಿ ಸೇರಬಯಸುವವರಿಗೆ ರಾಜು ಅವರು ಸ್ಫೂರ್ತಿಯ ಸೆಲೆ. ಸೇನೆಗೆ ಸೇರಿ ದೇಶ ಸೇವೆ ಮಾಡುವಂತೆ ಯುವಜನರಿಗೆ ಪ್ರೋತ್ಸಾಹ ನೀಡುವ ಗಣಿ. ರಾಜು ಅವರಿಗೆ ಚಾರಣ ಎಂದರೆ ಇಷ್ಟ. ಕುಟುಂಬದವರ ಜತೆ ಬೆಟ್ಟ ಪ್ರದೇಶಗಳಿಗೆ ಭೇಟಿ ನೀಡುತ್ತಾರೆ. ಛಾಯಾಗ್ರಹಣ, ಹಳೆಯ ಹಾಡು ಕೇಳುವುದು ನೆಚ್ಚಿನ ಹವ್ಯಾಸ. ತಂತ್ರಜ್ಞಾನದ ಬಗ್ಗೆ ಅದಮ್ಯ ಆಸಕ್ತಿ, ನವೀನ ಆವಿಷ್ಕಾರಗಳನ್ನು ತಿಳಿದುಕೊಳ್ಳುವ ಉತ್ಸಾಹಿ.

ರಾಜು ಅವರು ಮುದ್ದೆ, ಬಸ್ಸಾರು ಪ್ರಿಯ. ಅವರಿಗೆ ಒಗ್ಗರಣೆ ಚಟ್ನಿ, ಕಡ್ಲೆ ಚಟ್ನಿ ಇಷ್ಟ. 'ಊರಿಗೆ ಬಂದಾಗ ರಾಗಿ ಮುದ್ದೆ, ಬಸ್ಸಾರು ಮಾಡಿಸಿಕೊಂಡು ಊಟ ಮಾಡುತ್ತಾರೆ. ಊಟ ಮಾಡಿದ ತಟ್ಟೆ-ಲೋಟ ಅವರೇ ತೊಳೆದಿಡುತ್ತಾರೆ. ಶಿಸ್ತು, ಕಾರ್ಯಸಾಧನೆ, ಸಮಯಪಾಲನೆಯಲ್ಲಿ ಅವರದು ಮಾದರಿ ವ್ಯಕ್ತಿತ್ವ' ಎಂದು ಸಂಬಂಧಿಕರಾದ ರಾಜೇಶ್ವರಿ ಹೇಳಿದರು.

ಸೋಮಶೇಖರ್ ಅವರು ಸ್ವಗ್ರಾಮಕ್ಕೆ ಗ್ರಂಥಾಲಯವನ್ನು ಕೊಡುಗೆಯಾಗಿ ನೀಡಿದ್ದಾರೆ. ಅಪ್ಪ ಹಾಕಿಕೊಟ್ಟ ಸಮಾಜ ಕಾರ್ಯಗಳನ್ನು ರಾಜು ಅವರು ಮುಂದುವರೆಸಿದ್ದಾರೆ. ಗ್ರಾಮದ ಜನರ ಪ್ರೀತಿ-ವಿಶ್ವಾಸ ಗಳಿಸಿದ್ದಾರೆ. ಪ್ರತಿವರ್ಷ ಗ್ರಾಮದ ಶಾಲೆಯ ವಿದ್ಯಾರ್ಥಿಗಳಿಗೆ ಲೇಖನ ಸಾಮಗ್ರಿಗಳನ್ನು ಉಚಿತವಾಗಿ ನೀಡುವ ಪರಿಪಾಟ ಕಾಪಿಟ್ಟುಕೊಂಡು ಬಂದಿದ್ದಾರೆ.

'ದೊಡ್ಡಪ್ಪ ಪ್ರತಿವರ್ಷ ಎರಡು ಲಕ್ಷ ರೂಪಾಯಿಯ ಪುಸ್ತಕ, ಪೆನ್ನು ಮೊದಲಾದ ಲೇಖನ ಸಾಮಗ್ರಿಗಳನ್ನು ಗ್ರಾಮದ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ನೀಡುತ್ತಾರೆ. ಮಿಲಿಟರಿಗೆ ಸೇರಬಯಸುವ ಯುವಜನರಿಗೆ ತರಬೇತಿ ಕೇಂದ್ರ ಸ್ಥಾಪನೆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ. ನಿವೃತ್ತಿಗೆ ಒಂದೂವರೆ ವರ್ಷ ಇದೆ. ಸ್ವಗ್ರಾಮದಲ್ಲಿ ಮನೆಯೊಂದನ್ನು ಕಟ್ಟಿಸುವ ಯೋಚನೆಯೂ ಅವರಿಗಿದೆ' ಎಂದು ರಾಜು ಅವರ ಚಿಕ್ಕಪ್ಪನ ಮಗ ಯಶವಂತ್ ವಿವರಿಸಿದರು.

ಗ್ರಾಮದ ತುಂಬೆಲ್ಲ ಕಣ್ಮಣಿ ರಾಜು ಅವರ ಸಾಧನೆಯದ್ದೇ ಗುಣಗಾನ. ಊರಿನ ಮುಖ್ಯ ವೃತ್ತಕ್ಕೆ ಅವರ ಹೆಸರು ನಾಮಕರಣ ಮಾಡುವ ನಿಟ್ಟಿನಲ್ಲಿ ಚರ್ಚೆಗಳು ಗರಿಗೆದರಿವೆ. ಗ್ರಾಮದ ಹಿರಿಯರು ಗ್ರಾಮ ಪಂಚಾಯಿತಿಗೆ ಈ ಸಲಹೆಯನ್ನು ನೀಡಿದ್ದಾರೆ. 'ರಾಜು ಅವರು ಗ್ರಾಮದ ಬಡಕುಟುಂಬದ ಕೆಲ ವಿದ್ಯಾರ್ಥಿಗಳ ಶಿಕ್ಷಣ ವೆಚ್ಚವನ್ನು ಭರಿಸುತ್ತಾರೆ. ಅವರ ನೆರವು ಪಡೆದು ಒಬ್ಬರು ಹೈಸ್ಕೂಲು ಶಿಕ್ಷಕರಾಗಿದ್ದಾರೆ. ಈ ಯೋಧ ನಮಗೆಲ್ಲ ಮಾದರಿ' ಎಂದು ಗ್ರಾಮಸ್ಥ ಪ್ರಸನ್ನಕುಮಾರ್ ಹೆಮ್ಮೆಪಟ್ಟರು. ಇಂತಹ ಯೋಧ ಕನ್ನಡಿಗ ಎನ್ನುವುದು ನಾಡಿನ ಪಾಲಿಗೂ ಹೆಮ್ಮೆಯ ವಿಷಯವಾಗಿದೆ.

ಸೇನಾಧಿಕಾರಿ ರಾಜು



ಮುನ್ನೋಟ 08-05-2022 ರಿಂದ 14-05-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ನಿಮ್ಮ ಸಂಬಂಧಗಳ ಗಟ್ಟಿತನವನ್ನು ಕಾಣಬಹುದು. ಮಕ್ಕಳ ಬಗ್ಗೆ ಚಿಂತೆ ಹೆಚ್ಚಾಗುತ್ತದೆ. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ಗಮನ ಕೊಡಬೇಕಾದ ಸಂದರ್ಭವಿದೆ. ಆರೋಗ್ಯದಲ್ಲಿ ಚೇತರಿಕೆಯನ್ನು ಕಾಣಬಹುದು. ಸ್ತ್ರೀಯರು ಅವರ ಖರ್ಚಿನ ಮೇಲೆ ಸ್ವಯಂ ನಿಯಂತ್ರಣ ಮಾಡಿಕೊಳ್ಳುವುದು ಅಗತ್ಯ. ನಿವೃತ್ತರಾದವರಿಗೆ ಬದಲಿ ಕೆಲಸಗಳು ದೊರೆಯುವ ಸಾಧ್ಯತೆಗಳಿವೆ. ಹಣದ ಒಳಹರಿವು ನಿರೀಕ್ಷೆಯಷ್ಟು ಇರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ನಿತ್ಯ ವ್ಯವಹಾರಗಳಲ್ಲಿ ಮುನ್ನಡೆಯನ್ನು ಕಾಣಬಹುದು. ಬಹಳ ಶ್ರಮವಹಿಸಿ ಮಾಡಿದ್ದ ಕೆಲಸಗಳಿಗೆ ಈಗ ಪ್ರತಿಫಲ ಬರುತ್ತದೆ. ಹಿರಿಯ ಅಧಿಕಾರಿಗಳ ಸಹಾಯದಿಂದ ಉದ್ಯೋಗದಲ್ಲಿ ಪ್ರಗತಿಯನ್ನು ಕಾಣಬಹುದು. ಕೆಲವರು ನಿಮ್ಮ ಬಗ್ಗೆ ವಿಶೇಷ ಮಮಕಾರವನ್ನು ತೋರಿಸಿ ಸಾಕಷ್ಟು ಸಹಾಯ ಮಾಡುವರು. ನಿಸರ್ಗ ಪ್ರೇಮಿಗಳಿಗೆ ಸರ್ಕಾರದಿಂದ ಮನ್ನಣೆ ದೊರೆತು ಗೌರವಾದರಗಳು ಹರಿದುಬರುತ್ತವೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಈ ದಿನದ ಉತ್ತಮವಾಗಿರುತ್ತದೆ. ದೂರ ಪ್ರಯಾಣದ ಸಾಧ್ಯತೆಗಳು ಇರುತ್ತವೆ. ಹಣದ ಹರಿವು ಉತ್ತಮವಾಗಿರುತ್ತವೆ. ಸರ್ಕಾರಿ ಕೆಲಸಕಾರ್ಯಗಳು ಸರಾಗವಾಗಿ ನಡೆಯುತ್ತವೆ. ವಿದ್ಯಾರ್ಥಿಗಳು ಸ್ವಲ್ಪ ಹಿನ್ನಡೆಯನ್ನು ಕಾಣಬಹುದು. ಕೊಂಚ ಅನಾರೋಗ್ಯ ಕಾಡಬಹುದು. ವೃತ್ತಿಯಲ್ಲಿ ಹಿತಶತ್ರುಗಳು ಹೆಚ್ಚಾಗಬಹುದು. ಸಂಗಾತಿಯ ಜೊತೆ ಕಾವೇರಿದ ಮಾತುಗಳು ಆಗಬಹುದು, ತಾಳ್ಮೆಯಿಂದ ಇರಿ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಕೃಷಿ ಕಾರ್ಯದಲ್ಲಿ ಇರುವವರಿಗೆ ಅತ್ಯಂತ ತುರುಸಿನ ಕಾರ್ಯಗಳು ಎದುರಾಗಬಹುದು. ಕೆಲಸದ ಒತ್ತಡ ಹೆಚ್ಚಾಗುವ ಸಾಧ್ಯತೆ ಇದೆ. ಇಷ್ಟ ಮಿತ್ರರ ಆಗಮನದಿಂದ ಮನೆಯಲ್ಲಿ ಸಂತೋಷ ಹೆಚ್ಚುತ್ತದೆ. ಚಿಲ್ಲರೆ ವ್ಯಾಪಾರಿಗಳಿಗೆ ಹೆಚ್ಚು ವ್ಯವಹಾರವಾಗುವ ಸಾಧ್ಯತೆಗಳಿವೆ. ಮನಸ್ಸಿನಲ್ಲಿ ಇಲ್ಲದ ಆಲೋಚನೆಗಳು ಮೂಡಬಹುದು. ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ವ್ಯವಹಾರ ಕುದುರುವ ಸಾಧ್ಯತೆಗಳಿವೆ.

ಸಿಂಹ — ಮಖಾ, ಪೂರ್ವಫಲ್ಗುಣಿ, ಉತ್ತರ ಫಲ್ಗುಣಿ 1

ಮಹಿಳೆಯರಿಗೆ ಸಂಭ್ರಮಪಡುವ ಅವಕಾಶಗಳು ಹೆಚ್ಚಾಗುತ್ತವೆ. ಒಡಹುಟ್ಟಿದವರೊಂದಿಗೆ ಬೆರೆತು ಸಂತೋಷಪಡುವಿರಿ. ಪ್ರತಿಸ್ಪರ್ಧಿಗಳ ಸವಾಲನ್ನು ನೋಡಿ ಕಾರ್ಯವೈಖರಿಯನ್ನು ಬದಲಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಸಾಕಷ್ಟು ಯಶಸ್ಸು ದೊರೆಯುತ್ತದೆ. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ. ಹಣಕಾಸಿನ ವ್ಯವಹಾರದಲ್ಲಿ ಇದ್ದ ಅಪನಂಬಿಕೆಯನ್ನು ದೂರ ಮಾಡಿ ದೃಢತೆಯನ್ನು ಸಾಧಿಸುವಿರಿ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಬ್ಯಾಂಕ್ ನೌಕರರಿಗೆ ಅಭಿವೃದ್ಧಿಯ ಪಥ ಇರುತ್ತದೆ. ಹಣಕಾಸಿನ ವ್ಯವಹಾರವನ್ನು ಮಾಡುತ್ತಿರುವವರಿಗೆ ಸಾಮಾನ್ಯ ಮುನ್ನಡೆ ಇರುತ್ತದೆ. ಪತ್ರಿಕಾ ಪ್ರತಿನಿಧಿಗಳಿಗೆ ಉತ್ತಮ ಮಾನ್ಯತೆ ದೊರೆಯುತ್ತದೆ. ಕೃಷಿಕರಿಗೆ ಉತ್ತಮ ಬೆಳೆಯ ಜೊತೆಗೆ ಉತ್ತಮ ಆದಾಯವು ಇರುತ್ತದೆ. ಸ್ಥಿರಾಸ್ತಿ ಖರೀದಿ ಬಗ್ಗೆ ಚಿಂತಿಸಿ ಮುನ್ನಡೆಯಬಹುದು. ವ್ಯವಹಾರದಲ್ಲಿ ಉನ್ನತಿಯನ್ನು ಕಾಣಬಹುದು. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ರಾಯಭಾರ ಕಚೇರಿಯಲ್ಲಿ ಇರುವವರಿಗೆ ಸಾಕಷ್ಟು ಅಭಿವೃದ್ಧಿ ಇರುತ್ತದೆ. ರತ್ನ ವ್ಯಾಪಾರಿಗಳಿಗೆ ವ್ಯವಹಾರ ವಿಸ್ತರಣೆಯಾಗುವ ಯೋಗವಿದೆ. ಗುಡಿ ಕೈಗಾರಿಕೆಯವರಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತದೆ. ಭೂ ವ್ಯವಹಾರಗಳಲ್ಲಿ ಸ್ವಲ್ಪ ಲಾಭ ಬರುತ್ತದೆ. ಯಂತ್ರ ತಯಾರಿಕಾ ವಿಭಾಗದಲ್ಲಿರುವ ತಂತ್ರಜ್ಞರಿಗೆ ಹೆಚ್ಚಿನ ಪ್ರಾಮುಖ್ಯತೆ ಬರುತ್ತದೆ ಹಾಗೂ ಉತ್ತಮ ವೇತನ ದೊರೆಯುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಹೊಸ ಹೊಸ ಹೂಡಿಕೆಯಲ್ಲಿ ಹಣ ಹೂಡುವಂತೆ ಪ್ರೇರೇಪಿಸಲು ಜನರು ಬರುತ್ತಾರೆ. ಆದರೆ ಸರಿಯಾಗಿ ವಿಚಾರ ಮಾಡಿ ಹಣ ಹೂಡಿಕೆ ಮಾಡಿರಿ. ಮನೆಯಲ್ಲಿ ರಂಪಾಟಗಳು ಹೆಚ್ಚಾಗುವ ಸಾಧ್ಯತೆ ಇದೆ, ತಾಳ್ಮೆಯಿಂದ ಇದ್ದಲ್ಲಿ ಎಲ್ಲವೂ ಸರಿಯಾಗುತ್ತದೆ. ತರಕಾರಿ ಮಾರಾಟಗಾರರಿಗೆ ಆದಾಯ ಹೆಚ್ಚಾಗುವ ಸಾಧ್ಯತೆಯಿದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಆರ್ಥಿಕ ಸಂಕಷ್ಟಗಳು ಸ್ವಲ್ಪಮಟ್ಟಿಗೆ ದೂರಾಗುತ್ತವೆ. ಲೇವಾದೇವಿ ವ್ಯವಹಾರಗಳು ಸದ್ಯಕ್ಕೆ ಬೇಡ.ಪಾಲುದಾರಿಕೆ ವ್ಯವಹಾರವನ್ನು ಮುಂದುವರೆಸಬಹುದು. ಬಂಧುಗಳು ನಿಮ್ಮನ್ನು ನೋಡಿ ಅಸೂಯೆ ಪಡುವರು. ನಾಸ್ತಿಕ ಸ್ವಭಾವದವರಿಗೆ ಆಸ್ತಿಕತೆಯತ್ತ ಆಸಕ್ತಿ ಹೆಚ್ಚುತ್ತದೆ. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ. ಸಂಗಾತಿಯ ಕಡೆಯವರಿಂದ ಆಸ್ತಿ ಅಥವಾ ದವಸಗಳು ದೊರೆಯಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಹಿರಿಯ ಅಧಿಕಾರಿಗಳ ಭೇಟಿಯಿಂದ ಮುಂದೂಡಲ್ಪಡುತ್ತದೆ ಕೆಲವು ಕೆಲಸಗಳು ಆಗುತ್ತವೆ. ಕುಶಲಕರ್ಮಿಗಳಿಗೆ ಹೆಚ್ಚಿನ ಮಾರುಕಟ್ಟೆ ಒದಗುತ್ತದೆ. ನವೀನ ರೀತಿಯ ಗೃಹ ನಿರ್ಮಾಣಕ್ಕೆ ಚಾಲನೆಯನ್ನು ನೀಡುವಿರಿ.ತೆರಿಗೆತಜ್ಞರಿಗೆ ಬೇಡಿಕೆಹೆಚ್ಚಾಗಿಆದಾಯವು ಸಹ ಹೆಚ್ಚುತ್ತದೆ. ಸರ್ಕಾರಿ ನೌಕರರಿಗೆ ಬೆಂಬಲಕರ ವಾತಾವರಣ ದೊರೆಯುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಪ್ರೇಮಿಗಳು ವಂಚನೆಗೆ ಒಳಗಾಗುವ ಸಾಧ್ಯತೆಗಳಿವೆ. ಹಿರಿಯರ ಮಾತನ್ನು ಧಿಕ್ಕರಿಸುವುದರಿಂದ ನಿಮಗೆ ಹಾನಿಯಾಗಬಹುದು. ವಿದ್ಯಾರ್ಥಿಗಳು ಹೆಚ್ಚಿನ ಏಕಾಗ್ರತೆಯನ್ನು ಅಧ್ಯಯನದಲ್ಲಿ ಅಳವಡಿಸಿಕೊಳ್ಳಬೇಕು. ಹೋಟೆಲ್ ಉದ್ಯಮಿಗಳಿಗೆ ಸ್ವಲ್ಪಮಟ್ಟಿನ ಆದಾಯ ಏರಿಕೆ ಆಗಲಿದೆ. ಸಿದ್ಧವಸ್ತ್ರ ವ್ಯಾಪಾರಿಗಳಿಗೆ ಆದಾಯ ಹೆಚ್ಚುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಕೆಲವರಿಗೆ ಉದ್ಯೋಗದಲ್ಲಿ ಪದೋನ್ನತಿ ದೊರೆಯುವ ಸಾಧ್ಯತೆ ಇದೆ. ಬಂಗಾರದ ವಸ್ತುಗಳನ್ನು ಕೊಳ್ಳಲು ಉತ್ಸಾಹ ತೋರುವಿರಿ. ಉದ್ದಿಮೆಯನ್ನು ನಡೆಸುತ್ತಿರುವವರಿಗೆ ಅಗ್ನಿಅವಘಡಗಳು ಕಾಡುವ ಸಾಧ್ಯತೆಗಳಿವೆ. ನಿಮ್ಮ ಕೆಲವು ಕೆಲಸಗಳಿಗೆ ಅನಿರೀಕ್ಷಿತ ಅಡೆತಡೆ ಆಗಬಹುದು. ಮನಸ್ಸಿನ ಸಮಸ್ಯೆಗಳಿಗೆ ಶಾಂತಚಿತ್ತದಿಂದ ಯೋಚಿಸಿದಲ್ಲಿ ಪರಿಹಾರ ಕಾಣುತ್ತದೆ.

ಪದಬಂಧ 2737



ಮೇಲಿನಿಂದ ಕೆಳಕ್ಕೆ

1. ಸೂರ್ಯನಂತೆ ಪ್ರಕಾಶ ನೀಡದಿದ್ದರೂ ಸಣ್ಣ ಬೆಳಕನ್ನು ನೀಡುವ ದೀಪ 3
2. ಸಮ್ಮೇಳನಕ್ಕೆ ಮೀಸಲಾದ ಕಟ್ಟಡ 5
3. ಕೌರವ ಸೈನ್ಯಕ್ಕೆ ಉರಿ ಮುಟ್ಟಿಸಿದ ಅರ್ಜುನ 4
4. ನಾಲಗೆಗೆ ಮಧುರವೆನಿಸುವಷ್ಟು ಕಿವಿಗೆ ಹಿತವಾದ ವಾರ್ತೆ 6
6. ಸಂಸ್ಕೃತದ ತಾಯಿಗೆ ತಾಯಿ 4
8. ಕಾಯಕವೇ ಕೈಲಾಸವೆಂದ ಮಹಾನುಭಾವನ ಜನ್ಮದಿನದ ಆಚರಣೆ 6
10. ನೇಯ್ಗೆಗೆ ಹೆಸರಾಗಿರುವ ಬಾಗಲಕೋಟೆಯ ಕಲ್ಪನಾಜೀವಿಯ ಊರು 4
14. ಭೀಮ ದುರ್ಯೋಧನರ ಯುದ್ಧಾಯುಧ ಈಗ ಮಾತಿನಲ್ಲಿ ಬಳಕೆ 5
16. ನಿಧಾನವಾಗಿ ಮಂದವಾಗಿ ಹರಿವ ದ್ರವ್ಯದಲ್ಲಿ ಉದಯಿಸಿದ ತಾವರೆ 4
19. 'ಅಂದುಕೊಂಡಂತೆ ಆಗುವ' ಆಲೋಚನೆಯ ಸೋದರಿ ಪತಿ 3

ಎಡದಿಂದ ಬಲಕ್ಕೆ

1. ನಿಂತಲ್ಲಿ ನಿಲ್ಲದೆ ಸದಾ ಸಂಚರಿಸುತ್ತಾ ದೇವನಾಮ ಹಾಡಿದ ಭಕ್ತ 4
3. ಪರರಿಗೆ ದುಡಿದರೆ ಸಿಗುವ ತಿಂಗಳ ಸಂಬಳ 3
4. ಕಾರ್ಯಕ್ರಮಕ್ಕೆ ಮಾಡುವ ಪೂರ್ವ ತಯಾರಿ 3
5. ಭಕ್ತನಿಗೊದಗಿ ಬರುವ ಪರಮಾತ್ಮ 4
6. ರಾಧೆಯ ಪ್ರಿಯಕರ ಮಧುವನದ ಶ್ರೀಕೃಷ್ಣ 3
7. ಬ್ಲ್ಯಾಕ್‌ಬೋರ್ಡಿನ ಬರಹಸಾಧನ ಹಿಂದುಮುಂದು 3
9. ನಗರದ ಉತ್ಸವಕ್ಕೆ ಬಡಿಯು ಚರ್ಮ ವಾದ್ಯ 3
11. ಅಮ್ಮನ ಮೇಲಿರುವ ಅಪಾರ ಪ್ರೀತಿ 4
12. ಜಗನ್ನಾಥ ಪುರಿಯಲ್ಲಿ ಕೃಷ್ಣ ಸುಭದ್ರೆಯರಿಗೆ ಬಲನೀಡಿದ ಅವತಾರ ಪುರುಷ 4
13. ಹಿಂದಕ್ಕೆ ತಿರುಗಿದ ಮುಖ 3
15. ರಕ್ಷಣೆಗೆ ಒಳಪಟ್ಟ ಹುಡುಗಿ 3
17. ಎಲ್ಲವನ್ನೂ ಒಳಗೊಂಡಿರುವ ಮುಂಬೈ ನಗರದ ಮಹಾನ್ ಕೊಳಚೆ ಪ್ರದೇಶ 3
18. ವಿಶ್ವಾಮಿತ್ರನಿಗೆ ದೊರೆತ 'ಶ್ರೇಷ್ಠ ಬ್ರಾಹ್ಮಣ' ಬಿರುದು 4
19. ಈತ ಯತಿಯಲ್ಲಿ ಬಂದರೂ ಯೌವ್ವನದ ಭಿಕ್ಷೆ ಯಾಚಿಸಿದ 3
20. ಧೈರ್ಯ ಶೌರ್ಯದಿಂದ ಕೂಡಿದ ಮಹಾಯತ್ನ 3
21. ಈ ಸಂತೋಷದ ಸಮಾರಂಭದಲ್ಲಿ ತೇರನ್ನು ಎಳೆಯುತ್ತಾರೆ 4

ಪದಬಂಧ ಉತ್ತರ -2736

ಮೇಲಿಂದ ಕೆಳಕ್ಕೆ

1. ಆದರ 2.ವಸ್ತ್ರದ 3.ಅವನತಿ 4.ಮನೋಹರನೋಟ 6.ತರುಲತೆ 8.ಶಯನೋತ್ಸವ 11.ಗಂಭೀರನಡೆ 12.ಅನುಮಾನಾಸ್ಪದ 14.ಪರಹಿತ 17.ಮಾವಟಿಗ 19.ರಘೂಜ 21.ಮದನಿ

ಎಡದಿಂದ ಬಲಕ್ಕೆ

1.ಆತ್ಮಗೌರವ 3.ಅನುಪಮ 5.ರಹಿತ 7.ದರುಶನ 9.ಯತಿಕುಮಾರ 10.ಲಜಗಂ 12.ಅಳತೆ 13.ಭೀಭತ್ಸ 14.ಪಲ್ಲಟ 15.ವಕ್ತಾರ 16.ಮಾನಾಪಮಾನ 18.ವಡೆಹಾರ 20.ತತ್ಸಮ 22.ದತ್ತುಮಗ 23.ಜಗಜ್ಜನನಿ

ಕುಮಾರವ್ಯಾಸಭಾರತ ಇದೋ ನೂತನ 'ಪರ್ವ'

ಒಳನೋಟ

ಎಸ್. ಸೂರ್ಯಪ್ರಕಾಶ ಪಂಡಿತ್

ಕುಮಾರವ್ಯಾಸನು ಹಾಡಿದನೆಂದರೆ
ಕಲಿಯುಗ ದ್ವಾಪರವಾಗುವುದು
ಭಾರತ ಕಣ್ಣಲಿ ಕುಣಿವುದು! ಮೈಯಲಿ
ಮಿಂಚಿನ ಹೊಳೆ ತುಳುಕಾಡುವುದು!

ಕುಮಾರವ್ಯಾಸನ ಪ್ರಶಸ್ತಿಯನ್ನು ಈ ಪದ್ಯ ಸಮರ್ಥವಾಗಿ ನಿರೂಪಿಸಿದೆ ಎಂಬುದು 'ಕುಮಾರವ್ಯಾಸಭಾರತ'ವನ್ನು ಓದಿದವರಿಗೂ ಕೇಳಿದವರಿಗೂ ಸ್ಪಷ್ಟವಾಗುತ್ತದೆ. 'ಕುಮಾರವ್ಯಾಸಭಾರತ', 'ಗದುಗುಭಾರತ', 'ಕನ್ನಡಭಾರತ', 'ದಶಪರ್ವಭಾರತ', 'ಕರ್ಣಾಟಕ ಮಹಾಭಾರತ', 'ಕರ್ಣಾಟಭಾರತ ಕಥಾಮಂಜರಿ' – ಹೀಗೆ ಹಲವು ಹೆಸರುಗಳಿಂದ ಪ್ರಸಿದ್ಧವಾಗಿರುವ ಕುಮಾರವ್ಯಾಸನ ಮಹಾಕಾವ್ಯ ದಿಟವಾಗಿಯೂ ಕನ್ನಡದ ಮಹಾಭಾಗ್ಯವೇ ಹೌದು.

ಇಷ್ಟು ಜನಪ್ರಿಯವಾಗಿರುವ ಕೃತಿಯ ಶುದ್ಧಪಾಠವೊಂದರ ಆವಶ್ಯಕತೆ ಹಲವು ವರ್ಷಗಳಿಂದ ಇದೆ. ಈಗ ಅಂಥದೊಂದು ಪ್ರಯತ್ನ ನಡೆದಿದೆ. ಬೆಂಗಳೂರಿನ 'ಕನ್ನಡ ಗಣಕ ಪರಿಷತ್ತು' ಟಿ. ವಿ. ವೆಂಕಟಾಚಲಶಾಸ್ತ್ರೀ ಅವರ ಪ್ರಧಾನ ಸಂಪಾದಕತ್ವದಲ್ಲಿ ಎರಡು ಬೃಹತ್ ಸಂಪುಟಗಳಲ್ಲಿ 'ಕುಮಾರವ್ಯಾಸಭಾರತ ಎಂಬ ಕರ್ಣಾಟಭಾರತಕಥಾಮಂಜರಿ'ಯನ್ನು ಪ್ರಕಟಿಸಿದೆ. ಇದು ಕುಮಾರವ್ಯಾಸನ ಕಾವ್ಯಪ್ರತಿಭೆಯನ್ನು ಆಸ್ವಾದಿಸಬಯಸುವ ಸಹೃದಯರಿಗೆ ಹಲವು ವಿಧಗಳಲ್ಲಿ ನೆರವಾಗುತ್ತದೆ. ಹೀಗೆಂದು ಇದು ಪರಿಪೂರ್ಣ ಎಂದೇನೂ ಅಲ್ಲ; ಹೇಗೆ ಮೂಲ ವ್ಯಾಸಮಹಾಭಾರತದ 'ಇದಮಿತ್ಥಂ' ಎಂಬಂಥ 'ಶುದ್ಧಪಾಠ'ವನ್ನು ಸಂಪಾದಿಸುವುದು ಅಸಾಧ್ಯವೋ, ಹಾಗೆಯೇ ಅದನ್ನು ಅನುಸರಿಸಿರುವ 'ಕುಮಾರವ್ಯಾಸಭಾರತ'ದ ಶುದ್ಧಪಾಠವನ್ನು ಸಂಪಾದಿಸುವುದೂ ಸುಲಭವಲ್ಲ! ಹೀಗಿದ್ದರೂ ಇದುವರೆಗೂ ಪ್ರಟಕವಾಗಿರುವ 'ಕುಮಾರವ್ಯಾಸಭಾರತ'ದ ಆವೃತ್ತಿಗಳಿಗಿಂತಲೂ ಇದು ವಿಶಿಷ್ಟವಾಗಿದೆ, ಮೌಲಿಕವಾಗಿದೆ, ಶುದ್ಧವಾಗಿದೆ, ಸಮಗ್ರವಾಗಿದೆ ಎಂಬುದು ನಿಸ್ಸಂದೇಹ.

ಈಗ ನಾವೆಲ್ಲರೂ ಬಹುಪಾಲು ಬಳಸುತ್ತಿರುವುದು 'ಕುವೆಂಪು–ಮಾಸ್ತಿ ಸಂಪಾದಿತ' ಎಂದು ಜನಪ್ರಿಯವಾಗಿರುವ 'ಕುಮಾರವ್ಯಾಸಮಹಾಕವಿಯ ಕರ್ಣಾಟ ಭಾರತ ಕಥಾಮಂಜರಿ' (1958). ಇದು 'ಎರಡು ರೂಪಾಯಿ ಆವೃತ್ತಿ' ಎಂದೂ ಜನಜನಿತವಷ್ಟೆ! ಆ ಆವೃತ್ತಿಗೆ ಮುನ್ನುಡಿಯಂತಿರುವ 'ತೋರಣನಾಂದಿ'ಯ ಕೊನೆಯ ಮಾತುಗಳನ್ನು ಇಲ್ಲಿ ಉಲ್ಲೇಖಿಸಬಹುದೆನಿಸುತ್ತದೆ:

'ಒಟ್ಟಿನಲ್ಲಿ ನಾವು ಸಿದ್ಧಗೊಳಿಸಿರುವುದು ಜನಪ್ರಿಯ ಪ್ರತಿ ಮಾತ್ರ. ಸಂಶೋಧಿತ ವಿಶುದ್ಧ ಪ್ರತಿ ಬರದತನಕ ಕುಮಾರವ್ಯಾಸನ ಪ್ರತಿಭೆಯ ನಿಜಸ್ವರೂಪ ಸಂಪೂರ್ಣದರ್ಶನವಾಗುವುದಿಲ್ಲ. ಹಾಗೆ ಮಾಡಲು ಅತ್ಯಂತ ಪ್ರಾಚೀನವಾದ ಹಾಗೂ ಗದುಗಿನ ಸುತ್ತಮುತ್ತಣ ಪ್ರದೇಶದಲ್ಲಿ ದೊರೆಯಬಹುದಾದ ಪ್ರತಿಗಳನ್ನೆಲ್ಲಾ ಸಂಗ್ರಹಿಸಬೇಕು; 10–15ನೇ ಶತಮಾನದ ಶಾಸನಗಳನ್ನೆಲ್ಲಾ ಸಂಗ್ರಹಿಸಿ ಅಭ್ಯಸಿಸಬೇಕು. ಇದು ಒಂದೆರಡು ದಶಕದ ನಾಲ್ಕಾರು ವಿದ್ವಾಂಸರ ಕೆಲಸ.'

ಅಂದಿನ ಆಶಯ ಸುಮಾರು ಆರು ದಶಕಗಳ ಬಳಿಕ ಆಂಶಿಕವಾಗಿಯಾದರೂ ನೆರವೇರಿದೆ ಎಂದು ಇಂದು ಸಂತಸಪಡಬಹುದೆನಿಸುತ್ತದೆ. ಸದ್ಯದ ಈ ಪರಿಚಯ, ಪ್ರಕೃತ ಕೃತಿಯ ಸುಮಾರು ಎರಡು ಸಾವಿರ ಪುಟಗಳ ಸಮಗ್ರ ಅವಲೋಕನದಿಂದ ಸಿದ್ಧವಾದುದಲ್ಲ; ಇಂಥದೊಂದು ವಿದ್ವತ್ ಕಾರ್ಯವು ತುಂಬ ಸಮಯಾವಕಾಶವನ್ನೂ ಪರಿಶ್ರಮವನ್ನೂ ಕೋರುತ್ತದೆ ಎಂಬುದನ್ನು ಇಲ್ಲಿ ಮರೆಯುವಂತಿಲ್ಲವೆನ್ನಿ. ಮುಂದಿನ ದಿನಗಳಲ್ಲಿ ಈ ಕೃತಿಯು ವಿದ್ವಾಂಸರ ನಿಕಷಕ್ಕೆ ಒದಗಲಿ; ಆ ಮೂಲಕ ಕೃತಿಯ ಮೌಲ್ಯನಿರ್ಣಯ ನಡೆಯಲಿ ಎಂದು ಹಾರೈಸೋಣ.

ಪ್ರಕೃತ ಕೃತಿಯ ಕೆಲವೊಂದು ವಿಶೇಷಗಳನ್ನು ಇಲ್ಲಿ ಹೇಳಬಹುದು:

- ಶಕಟರೇಫ ಮತ್ತು ಸಾಮಾನ್ಯರೇಫದ ಶಬ್ದಗಳನ್ನು ಆಯಾ ರೂಪದಲ್ಲಿಯೇ ಕಾಣಿಸಲಾಗಿದೆ.
- 1958ರ ಆವೃತ್ತಿ, ಅದರ ಅನಂತರದ ಮುದ್ರಣಗಳಲ್ಲಿ ಆಗಿರುವ ಮುದ್ರಣದೋಷಗಳು, ಪದವಿಭಾಗದ ತಪ್ಪುಗಳಂಥವನ್ನು ತಿದ್ದಲಾಗಿದೆ.
- ವಿಸ್ತಾರವಾದ ಪ್ರಸ್ತಾವನೆ ಇದೆ; ಇದರಲ್ಲಿ ಕವಿಚರಿತ್ರೆ, ಕಾವ್ಯಸಮೀಕ್ಷೆ, ಪರಿಷ್ಕರಣಗಳು, ಕಥಾಸಮೀಕ್ಷೆ, ಭಾಷೆ–ಶೈಲಿ, ಸಂಗ್ರಹಗಳು – ಎಂಬ ವಿಭಾಗಗಳಿವೆ.
- ಪ್ರತಿಪದ್ಯಕ್ಕೂ ಅಲ್ಲಲ್ಲಿಯೇ ಹೊಸಗನ್ನಡದಲ್ಲಿ ಗದ್ಯಾನುವಾದವನ್ನು ನೀಡಲಾಗಿದೆ. ಕ್ಲಿಷ್ಟಪದಗಳ ಅರ್ಥವನ್ನೂ ಅಲ್ಲಲ್ಲಿಯೇ ಕೊಡಲಾಗಿದೆ.
- ಪ್ರತಿ ಸಂಪುಟದಲ್ಲೂ ವ್ಯಕ್ತಿವಿವರಗಳನ್ನೂ ಪೂರ್ವಕಥಾ ಸಂದರ್ಭವನ್ನೂ ಪಾಠಭೇದಗಳನ್ನೂ ಕೊಡಲಾಗಿದೆ.
- ಕಾವ್ಯದಲ್ಲಿ ಬಂದಿರುವ ಗಾದೆಗಳ ಪಟ್ಟಿಯನ್ನು ಕೊಡಲಾಗಿದೆ.
- ಇದುವರೆಗೆ ಪ್ರಕಟವಾಗಿರುವ ಕುಮಾರವ್ಯಾಸಭಾರತದ ಆವೃತ್ತಿಗಳು, ಪರಾಮರ್ಶನಗ್ರಂಥಗಳು, ಮಹಾಪ್ರಬಂಧಗಳು, ಲೇಖನಗಳು – ಇವುಗಳ ಪಟ್ಟಿಯನ್ನು ಸಾಧ್ಯವಿದ್ದಷ್ಟು ಒದಗಿಸಲಾಗಿದೆ.
- ಅಜ್ಞಾತಕರ್ತೃಕವಾದ 'ಕರ್ಣಾಟಕ ಭಾರತ ನಿಘಂಟು'ವಿನ ನೂತನ ಪರಿಷ್ಕರಣವನ್ನು ಗ್ರಂಥಸಂಪಾದನೆಯ ಸಾಮಗ್ರಿಸಹಿತವಾಗಿ ಕೊಡಲಾಗಿದೆ.



ಪು: 1998 ₹2000

ಕುಮಾರವ್ಯಾಸಭಾರತ ಎಂಬ ಕರ್ಣಾಟಭಾರತ ಕಥಾಮಂಜರಿ-2 ಸಂಪುಟ

ಪ್ರಧಾನ ಸಂಪಾದಕ: ಟಿ.ವಿ. ವೆಂಕಟಾಚಲಶಾಸ್ತ್ರೀ
ಪ್ರ: ಕನ್ನಡ ಗಣಕ ಪರಿಷತ್ತು
ಸಂ: 98453 62956

- ಸಮಗ್ರ ಕಾವ್ಯದ ಪದ್ಯಗಳ ಅಕಾರದಿ ಸೂಚಿಯನ್ನು ಮೊದಲ ಬಾರಿಗೆ ಸಿದ್ಧಪಡಿಸಿ, ಇಲ್ಲಿ ಅದನ್ನು ಒದಗಿಸಲಾಗಿದೆ.

ಇದುವರೆಗೂ ಕುಮಾರವ್ಯಾಸಭಾರತದ ಸುಮಾರು 120 ಹಸ್ತಪ್ರತಿಗಳಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಕುಮಾರವ್ಯಾಸಭಾರತವನ್ನು ಮೊದಲು ಮುದ್ರಣಕ್ಕೆ ಸಿದ್ಧಪಡಿಸಿದ್ದು 1851ರಲ್ಲಿ. ಅಂದಿನಿಂದ ಇಂದಿನವರೆಗೂ ನೂರಾರು ವಿದ್ವಾಂಸರು ಗ್ರಂಥಸಂಪಾದನೆಯೂ ಸೇರಿದಂತೆ ನಾಲ್ಕಾರು ಆಯಾಮಗಳಲ್ಲಿ ಈ ಕೃತಿಯ ಮುದ್ರಣಕಾರ್ಯದಲ್ಲಿ ಕೊಡುಗೆಗಳನ್ನು ನೀಡಿದ್ದಾರೆ. ಈ ಎಲ್ಲ ಪೂರ್ವಸೂರಿಗಳ ವಿದ್ವತ್ತು, ಪರಿಶ್ರಮ, ಶ್ರದ್ಧೆ, ಸಾರಸ್ವತ ತಪಸ್ಸುಗಳ ಕಾರಣದಿಂದ ಕುಮಾರವ್ಯಾಸನ ಪ್ರತಿಭೆಯ ಹೊಳಹು ನಮಗೆ ಹೆಚ್ಚೆಚ್ಚು ದಕ್ಕುವಂತಾಗಿದೆ. ಈಗ ಟಿ. ವಿ. ವೆಂಕಟಾಚಲಶಾಸ್ತ್ರೀ ಅವರ ಪ್ರಧಾನ ಸಂಪಾದಕತ್ವದಲ್ಲಿ ಅ.ರಾ. ಮಿತ್ರ, ಕೆ.ಆರ್. ಗಣೇಶ್, ಎ.ವಿ. ಪ್ರಸನ್ನ, ವಿ. ಕೃಷ್ಣ ಅವರುಗಳ ಸಂಪಾದಕ ಸಮಿತಿಯು ಕನ್ನಡ ಸಾಹಿತ್ಯಲೋಕಕ್ಕೆ ಅಪೂರ್ವ ಕೊಡುಗೆಯನ್ನು ನೀಡಿದೆ. ಇದಕ್ಕಾಗಿ ಸಂಯೋಜಕ ಸಂಪಾದಕ ಜಿ.ಎನ್. ನರಸಿಂಹಮೂರ್ತಿ ಅವರಿಗೂ, ಕನ್ನಡ ಗಣಕ ಪರಿಷತ್ ಮತ್ತು ತುಮಕೂರು ವಿಶ್ವವಿದ್ಯಾನಿಲಯಕ್ಕೂ ಕೃತಜ್ಞತೆಗಳು ಸಲ್ಲುತ್ತವೆ. ಸರ್ಕಾರ ಇಂಥ ಯೋಜನೆಗಳಿಗೆ ಇನ್ನೂ ಹೆಚ್ಚೆಚ್ಚು ಸಹಕಾರವನ್ನು ಒದಗಿಸಲಿ ಎಂದು ಹಾರೈಸೋಣ. ಈ ಕೃತಿಗೆ ಸಾರ್ಥಕತೆ ಒದಗುವುದು ಸಹೃದಯರ ಸ್ಪಂದನೆಯಿಂದಲೇ ಎಂಬುದನ್ನೂ ಮರೆಯದಿರೋಣ.

('ಕರ್ಣಾಟಭಾರತಕಥಾಮಂಜರಿ'ಯು ಬೆಂಗಳೂರಿನ ರೇಸ್ ಕೋರ್ಸ್ ರಸ್ತೆಯಲ್ಲಿರುವ ಭಾರತೀಯ ವಿದ್ಯಾಭವನದಲ್ಲಿ ಇಂದು ಸಂಜೆ 4.30ಕ್ಕೆ ಲೋಕಾರ್ಪಣೆಯಾಗಲಿದೆ.)

ಯರೆಬೇವು 'ಬೋಧಿವೃಕ್ಷ'ವಾಗಿ ಬೆಳೆದ ಕಥೆ

ವಿಮರ್ಶೆ

ಆರ್.ತಾರಿಣಿ ಶುಭದಾಯಿನಿ

'ಯರೆಬೇವು' ಎನ್ನುವುದು ಎಸ್. ಜಿ.ಸಿದ್ಧರಾಮಯ್ಯನವರ ಆತ್ಮಕಥನ. ಅಪ್ಪಟ ದೇಸಿ ಸಮಾಜದಿಂದ ಬಂದ ಎಸ್‌ಜಿಎಸ್ ಅವರು ತಮ್ಮ ಆತ್ಮಕಥನಕ್ಕೆ ನೆಲಮೂಲ ರೂಢಿಪದವನ್ನೇ ಆಯ್ದುಕೊಂಡಿದ್ದಾರೆ. ಯರೆಬೇವು ಎನ್ನುವುದು ಹೆಬ್ಬೇವು; ಅದರ ಗಾತ್ರ ಸಾದಾ ಬೇವಿನದಕ್ಕಿಂತ ಹಿರಿದಾಗಿದ್ದು ಅದರ ಬೀಜ ದಪ್ಪನಾಗಿ ಒಳಗೆ ಇರುತ್ತದೆ. ಅಷ್ಟರಮಟ್ಟಿನ ದಡ್ಡತನವನ್ನು ಎತ್ತಿ ಹೇಳಲೆಂದು ಸ್ಥಳೀಕರು ಬಳಸುತ್ತಿದ್ದುದು ಯರೆಬೇವಿನ ಉಪಮೆಯನ್ನು. 'ದಡ್ಡ ದಡ್ಡ' ಎಂದು ಹೇಳಲ್ಪಟ್ಟ ಹುಡುಗನೊಬ್ಬ ತನ್ನ ಹಳ್ಳಿ, ಪರಿಸರ ದಾಟಿ ಶಿಕ್ಷಣದಿಂದ ವಿಕಸಿತನಾಗುವುದು, ಬದುಕು ಕಟ್ಟಿಕೊಡುವ ವೃತ್ತಿಯನ್ನು ಪಡೆದುಕೊಳ್ಳುವುದು ಎಲ್ಲವೂ ಒಂದು ಸಾಧನೆಯ ಗಾಥೆಯೇ ಎನ್ನಿಸಿ ಈ ಆತ್ಮಕತೆ ಮೂಡಿರಬೇಕು.

ಆತ್ಮಕಥನ ಎನ್ನುವುದು ಹೇಗಿರಬೇಕು? ಅದರ ಸ್ವರೂಪ ಏನು ಎನ್ನುವುದರ ಬಗ್ಗೆ ಹಲವಾರು ಜಿಜ್ಞಾಸೆಗಳಿವೆ. ಆತ್ಮದ ಕತೆಯೆನ್ನುವುದು ಒಂದರ್ಥದಲ್ಲಿ ವಾಸ್ತವ, ಕಾಲ್ಪನಿಕ ಎರಡೂ ಆಗಿರುತ್ತದೆ. ಜೀವನವೆನ್ನುವುದನ್ನು ಡೈರಿಯ ಪುಟಗಳನ್ನಿಟ್ಟುಕೊಂಡು ಬರೆದರೂ ಬರೆಯುವವರ ಮನೋಧೋರಣೆ ಕಾಲದೇಶಗಳ ಸಾಪೇಕ್ಷತೆಯನ್ನು ಅವಲಂಬಿಸಿ ಒಂದು ಫಿಕ್ಷನ್ ಆಗಿರುತ್ತದೆ. ಮೇಲಾಗಿ ಉತ್ತಮಪುರುಷ ನಿರೂಪಣೆಯ ಸಂಗತಿಗಳು ಎಂದಿಗೂ ಒಮ್ಮುಖದಲ್ಲಿ ತೀರ್ಮಾನವಾಗುವಂತವಲ್ಲ. ಒಂದು ನಿರೂಪಣೆಯನ್ನು ಛೇದಿಸುವ ಹಲವು ಅಡ್ಡರೇಖೆಗಳು ಅಲ್ಲಿ ಹಾದುಹೋಗಿರುತ್ತವೆ. ಈ ದೃಷ್ಟಿಯಿಂದ ಎಸ್‌ಜಿಎಸ್ ಅವರ ಆತ್ಮಕಥನವನ್ನು ನೋಡಿದರೆ ತನ್ನ ಧಾತುಶಕ್ತಿಯನ್ನು ಧೇನಿಸುವ ಒಂದು ಸಕಾರಾತ್ಮಕ ಧೋರಣೆಯ ಪಾರ್ಶ್ವಕಥನವಾಗಿ ಮೂಡಿದೆ ಎನ್ನಬಹುದು.

ಆತ್ಮಕಥನ ಎಂದು ಕರೆದಿದ್ದರೂ ತಮ್ಮ ಬದುಕಿನ ಕೆಲವು ಗತಿಗಳನ್ನು ಮಾತ್ರವೇ ಎಸ್‌ಜಿಎಸ್ ಇಲ್ಲಿ ನೆನೆದಿದ್ದಾರೆ. ಇದರಲ್ಲಿ ಮನೆ, ಹಳ್ಳಿ, ಕುಟುಂಬ, ಶಿಕ್ಷಣ, ವೃತ್ತಿಗಳಿಗೆ ಪ್ರಾಧಾನ್ಯ ಇದ್ದು ಅವರು ಸಾರ್ವಜನಿಕ ಜೀವನದಲ್ಲಿ ತೊಡಗಿಕೊಂಡ ಜೀವನದ ಕಥನ ಇಲ್ಲಿಲ್ಲ. ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಹತ್ತು ಹಲವು ಸಾಮಾಜಿಕ ಹೋರಾಟಗಳಲ್ಲಿ ತೊಡಗಿಸಿಕೊಂಡು, ಹಿಂದುಳಿದ ಜಾತಿ/ವರ್ಗಗಳ ವಕ್ತಾರನಾಗಿ ಗುರುತಿಸಿಕೊಂಡ ಸಿದ್ಧರಾಮಯ್ಯನವರ ವ್ಯಕ್ತಿತ್ವದ ಸಿಡಿಲು, ಮಿಂಚುಗಳೇನೂ ಇಲ್ಲದೆ ಇಲ್ಲಿ 'ಸಿಂಗುಸಿ' (ಲೇಖಕರ ಆಪ್ತರು ಅವರನ್ನು ಕರೆಯುವ ಹೆಸರು) ಮಾತ್ರ ಮುನ್ನೆಲೆಗೆ ಬಂದಿದ್ದಾರೆ.



ಪು: 624 ₹750

ಯರೆಬೇವು

ಲೇ: ಎಸ್.ಜಿ.ಸಿದ್ಧರಾಮಯ್ಯ
ಪ್ರ: ಬಹುರೂಪಿ
ಸಂ: 7019182729

ಇದು ಒಂದು ದೃಷ್ಟಿಯಿಂದ ಉದ್ದೇಶಪೂರ್ವಕವೇ ಎನ್ನಿಸುತ್ತದೆ. ಏಕೆಂದರೆ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಕಂಡುಂಡ ಅನುಭವಗಳನ್ನು ಅವರು ಈಗಾಗಲೇ ಪುಸ್ತಕಗಳನ್ನು ಬರೆದು ದಾಖಲಿಸಿದ್ದಾರೆ. ಕನ್ನಡ ಜಗತ್ತು ಬ್ಯೂರೋಕ್ರಸಿ ಹಾಗೂ ಹಿಪೊಕ್ರಸಿಗಳಿಗೆ ಮುಖಾಮುಖಿಯಾಗುವ ಕಥನವನ್ನು ಅಲ್ಲಿ ಬರೆದಿದ್ದಾರೆ. ಈ ಕೃತಿಯಲ್ಲಿ ಅವರ ಆ ಅನುಭವಗಳಿಗೆ ಆದ್ಯತೆ ಇಲ್ಲ. ತಮ್ಮ ಬದುಕಿನ ಗತಿಯನ್ನು ಮುಚ್ಚಿಬಿಚ್ಚಿ ಹೇಳುವುದಕ್ಕಿಂತ ಅಥವಾ ಇನ್ನೊಬ್ಬರ ಗುಟ್ಟು ರಟ್ಟು ಮಾಡುವ ಆನಂದಕ್ಕಿಂತ ಹೊರತಾಗಿ ನೇರವಾಗಿ ನಿರೂಪಣೆ ಮಾಡುವುದನ್ನೇ ಎಸ್‌ಜಿಎಸ್ ಪ್ರಜ್ಞಾಪೂರ್ವಕವಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಆ ದೃಷ್ಟಿಯಿಂದ ಇದು ಪೂರ್ಣಪ್ರಮಾಣದ ಆತ್ಮಕಥನವಲ್ಲ.

'ಬದುಕು ಮಾಡುವುದು' ಎಂದರೆ ನಿತ್ಯದ ಜೀವನವನ್ನು ಹೋರಾಟ ಮಾಡಿ ಅದನ್ನು ನಿಜಗೊಳಿಸಿಕೊಳ್ಳುವುದು. ಇದು 'ಅನುದಿನದ ಅಂತರಗಂಗೆ'. ಇದನ್ನು ದಾಟಿಕೊಳ್ಳುವುದನ್ನು ತಾನು ನಿರೂಪಿಸುತ್ತೇನೆ ಎನ್ನುವ ರೀತಿಯಲ್ಲಿ ಈ ಕೃತಿಯ ಓಘ ಇದೆ. ಇದೊಂದು ಬಗೆಯ plain speak ಎನ್ನಬಹುದು. ತಮ್ಮ ಬಾಲ್ಯದ ನೆನಪುಗಳು, ಹಳ್ಳಿಗಳು, ಕುಲ ಸಂಸ್ಕಾರಗಳು, ತಾವು ಅನ್ನಕ್ಕಾಗಿ ಮಾಡಿದ ಹೋರಾಟಗಳನ್ನು ಯಾರಾದರೊಬ್ಬ ಆಪ್ತಮಿತ್ರರ ಮುಂದೆ ಬಿಚ್ಚಿಡುವಂತೆಯೇ ಸರಳವಾಗಿ ಹೇಳಲಾಗಿದೆ. ಹಾಗೆ ಈ ಆತ್ಮಕತೆಯಲ್ಲಿ ತಮ್ಮ ನಂಬಿಕೆ, ಸಂಪ್ರದಾಯಗಳಿಗೆ ಅನುಗುಣವಾಗಿ ಬದುಕು ಸಾಗಿಸುವಂತಹ ಪಶುಪಾಲನ ಕುಲಕುಟುಂಬದಲ್ಲಿ ಹುಟ್ಟಿ ಶಿಕ್ಷಣದತ್ತ ಹೊರಳಿಕೊಂಡಿದ್ದು ಒಂದು ಮಜಲಾದರೆ, ಶಿಕ್ಷಣಕ್ಕೆ ತೆರೆದುಕೊಂಡು ಆ ಮೂಲಕ ಹಲವು ಬದುಕುಗಳನ್ನು ಕಂಡಿದ್ದು ಇನ್ನೊಂದು ಮಜಲು. ಹಳ್ಳಿಯ ಸಂಸ್ಕೃತಿಯಿಂದ ನಗರ ಸಂಸ್ಕೃತಿಗೆ ಮುಖಾಮುಖಿಯಾಗಿ ಅಸ್ತಿತ್ವವನ್ನು ಕಟ್ಟಿಕೊಂಡ ಕಥನ ಮಾತ್ರ ಇಲ್ಲಿದೆ. ಕನ್ನಡದ ಒಬ್ಬ ಕವಿಯಾಗಿ ಗುರುತಿಸಲ್ಪಟ್ಟ ಎಸ್‌ಜಿಎಸ್ ವ್ಯಕ್ತಿತ್ವಕ್ಕೆ ಅಷ್ಟಾಗಿ ಪ್ರಾಶಸ್ತ್ಯ ಸಿಕ್ಕಿಲ್ಲ. ಇದಕ್ಕೆ ಪ್ರಾಯಶಃ ಅವರು ತಮ್ಮನ್ನು ತಾವು ಸಿದ್ಧರಾಮಯ್ಯನೆಂಬ ಮನುಷ್ಯನ ಕತೆಯನ್ನು ಮಾತ್ರ ಹೇಳಬೇಕೆಂದಿರುವುದು ಕಾರಣವಿರಬಹುದು. ಇಲ್ಲಿ ಒತ್ತು ನೀಡಿರುವುದು ಅನ್ನದ ಹೋರಾಟ ಹಾಗೂ ಶಿಕ್ಷಣದ ಹೋರಾಟಗಳಿಗೆ.

ಭಾರತದಂತಹ ಜಾತಿಸಮಾಜದಲ್ಲಿ ಹುಟ್ಟಿದ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಜಾತಿಗಳಿಂದ ಹಲವಾರು ಸಾಂಸ್ಕೃತಿಕ ಸಂಗತಿಗಳನ್ನು ದತ್ತವಾಗಿ ಪಡೆದುಕೊಂಡಿರುತ್ತಾನೆ/ಳೆ. ಅದರ ಜೊತೆಗೆ ಆ ಜಾತಿಕುಲಗಳ 'ಟ್ಯಾಬೂ'ಗಳಿಂದಲೂ ನಿರ್ಬಂಧಿಸಲ್ಪಡುತ್ತಿರುತ್ತಾನೆ/ಳೆ. ಸಿದ್ಧರಾಮಯ್ಯನವರು ಕುರುಬರ ಕುಲದಲ್ಲಿ ಹುಟ್ಟಿರುವುದನ್ನು ನಿವೇದಿಸಿಕೊಳ್ಳುತ್ತಲೇ ಹಳ್ಳಿಗಳಲ್ಲಿ ದಟ್ಟವಾಗಿರುವ ಜಾತಿಯ ಸಂಗತಿಗಳನ್ನು ನೆನೆಯುತ್ತಾರೆ. ಇಲ್ಲಿ ಅವರು ತಮ್ಮ ಕುಲದಿಂದ ತೆರೆದುಕೊಂಡ ಒಂದು ಜಾನಪದ ಲೋಕ, ತಿಳಿವಳಿಕೆಯನ್ನು ನಿರಾಕರಿಸಿ ಹೋಗಬೇಕು ಎನ್ನುವ ಹುಸಿ ಇರಾದೆಯನ್ನು ಇಟ್ಟುಕೊಂಡಿಲ್ಲ. ತಾವು ಒಂದು ಜಾತಿಗೆ ಸೇರಿದ ಮನುಷ್ಯ ಎಂದು ಹೇಳಿಕೊಳ್ಳುತ್ತಲೇ ಅಲ್ಲಿಂದ ಒಂದು ಜಗತ್ತು ತೆರೆದುಕೊಂಡಿದ್ದನ್ನು ಮುಗ್ಧತೆಯ ಕಣ್ಣಿನಿಂದ ನೋಡಿರುವುದನ್ನು ಹೇಳಿದ್ದಾರೆ.

ಕುಟುಂಬದ ವಿವರಗಳನ್ನು ಹೇಳುವಾಗ ನಡುನಡುವೆ ಶರಣ ಚಳವಳಿಯ ಪ್ರಸ್ತಾಪವೂ ಬರುತ್ತದೆ. ತಮ್ಮ ಕುಲದವರು ಆಚರಿಸುತ್ತಿದ್ದ ಹಬ್ಬಗಳು, 'ವಾರಗಳು'; ಅವರು ತೆಗೆದುಕೊಳ್ಳುತ್ತಿದ್ದ ಗೊರವರ ದೀಕ್ಷೆ ಇತ್ಯಾದಿಗಳನ್ನು ಅವರು ವಿವರವಾಗಿ ಬರೆದಿದ್ದಾರೆ. ಅವರ ಅಮ್ಮನೇ ಗೊರವತಿ ಆಗಿ ದೀಕ್ಷೆ ತೆಗೆದುಕೊಂಡವರು ಎನ್ನುವುದನ್ನು ಸಹ ಇಲ್ಲಿ ಹೇಳಿದ್ದಾರೆ. ಹಾಗೆಂದು ತಮ್ಮ ಕುಲಾಚಾರಗಳನ್ನೇ ವೈಭವೀಕರಿಸಿಕೊಳ್ಳುವುದಿಲ್ಲ. ಶಿಕ್ಷಣಕ್ಕೆ ತೆರೆದುಕೊಂಡಂತೆ ಜಾತಿಯ ಭೇದಗಳು ಹಲವಾರು ಸಮುದಾಯಗಳಿಗೆ ಮಾಡಿದ ಗಾಯಗಳ ಬಗೆಗೂ ಅರಿವು ಹೆಚ್ಚಿ ಅದರ ವಿರುದ್ಧ ಹೋರಾಟಗಳಿಗೆ ಇಳಿಯುತ್ತಾರೆ.

ಶಿಕ್ಷಣದ ಮಹತ್ವ ಮನಗಂಡ ಲೇಖಕರು ಅದರ ಇಂಚಿಂಚೂ ವಿವರಗಳನ್ನು ಇಲ್ಲಿ ದಾಖಲಿಸಿದ್ದಾರೆ. ಮುಖ್ಯವಾಗಿ ಎಲ್ಲ ಗ್ರಾಮೀಣ ಹುಡುಗರಿಗೂ ಕಷ್ಟವಾಗುವ ಗಣಿತ ಮತ್ತು ಇಂಗ್ಲಿಷಿನ ಬೇಗೆಯೂ ಇಲ್ಲಿದೆ. ಎಸ್‌ಜಿಎಸ್ ಅವರ ತಲೆಮಾರಿನವರು ವಸಾಹತುಶಾಹಿ ಶಿಕ್ಷಣಕ್ಕೆ ತೆರೆದುಕೊಳ್ಳುತ್ತಿದ್ದ ಮೊದಲ ತಲೆಮಾರು. ಹಾಗಾಗಿ ಅವರ ಅನುಭವಗಳು ಸಂಘರ್ಷಾತ್ಮಕವೂ ಜ್ಞಾನಸ್ಫೋಟಕ್ಕೆ ಕಾರಣವೂ ಆಗಿ ಅವರನ್ನು ಬೆಳೆಯಿಸುತ್ತವೆ. ಅಂಬೇಡ್ಕರ್ ಹೇಳುವ ಶಿಕ್ಷಣದ ಮಂತ್ರವೇ ಎಸ್‌ಜಿಎಸ್ ಅವರ ಬಾಳಲ್ಲಿಯೂ ಮಂತ್ರವಾಗಿದ್ದರಿಂದ ಅವರು ಹಲ್ಲುಕಚ್ಚಿ ಕಷ್ಟವಾದರೂ ಶಿಕ್ಷಿತನಾಗುವ ಆಕಾಂಕ್ಷೆ ಇಟ್ಟುಕೊಳ್ಳುತ್ತಾರೆ. ಕನ್ನಡ ಎಂ.ಎ ಓದುವ ಅವಕಾಶ ಸಿಕ್ಕಾಗ ಅವರ ಓದು, ಅವರ ಬಳಗ ಎಲ್ಲವೂ ಬೆಳೆದು ವಿಶ್ಲೇಷಣಾತ್ಮಕವಾಗಿ ವಿಷಯಗಳನ್ನು ಅರ್ಥೈಸಿಕೊಳ್ಳುವ ಮಟ್ಟಿಗೆ ಅವರ ತಿಳಿವಳಿಕೆ ಬೆಳೆಯುತ್ತದೆ. ಈ ಅರಿವು ಅವರನ್ನು ಒಬ್ಬ ಒಳ್ಳೆಯ ಶಿಕ್ಷಕನಾಗಲು ಪ್ರೇರಣೆ ನೀಡಿರಬೇಕು. ತಮ್ಮ ವೃತ್ತಿ ಜೀವನದಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಬೋಧನೆಯನ್ನು ಮಾಡುತ್ತಾ ಮಾಡುತ್ತಾ ಅವರನ್ನು ಬೆಳೆಸಿ ತಾವೂ ಬೆಳೆದೆನೆನ್ನುವ ಸಾರ್ಥಕತೆಯೊಂದಿಗೆ ಜೀವನಗಾಥೆ ಮುಗಿಯುತ್ತದೆ.

ಸಹಪಾಠಿಗಳ ವೈಶಿಷ್ಟ್ಯ, ಬಂಧುಗಳ ಗುಣಸ್ವಭಾವ ಇತ್ಯಾದಿಗಳ ಸಣ್ಣ ಸಣ್ಣ ವಿವರಗಳೂ ಇಲ್ಲಿ ಮೈದುಂಬಿಕೊಳ್ಳುತ್ತವೆ. ಬಾಳಸಂಗಾತಿ ಬಗೆಗಿನ ಪ್ರೀತಿಯನ್ನು ವ್ಯಕ್ತಪಡಿಸುವಾಗ ತಮ್ಮ ತೊಡಗುವಿಕೆಗಳಲ್ಲಿ ಆ ಇನ್ನೊಂದು ಜೀವವನ್ನು ನಿರ್ಲಕ್ಷಿಸಿದೆನೇ ಎನ್ನುವ ಕೊರಗು ಕೃತಿಯಲ್ಲಿ ಕಾಣುತ್ತದೆ. ಈ ಕನ್‌ಫೆಶನ್ ಬಿಟ್ಟರೆ ಕೃತಿಯಲ್ಲಿ ಅವರು ಸಮಚಿತ್ತರು. ಬದುಕು ಕೊಡುವ ಅನುಭವವನ್ನೆಲ್ಲ ಸ್ವೀಕರಿಸುತ್ತೇನೆ ಎನ್ನುವ ಅವರ ಮನಃಸ್ಥಿತಿಯೇ ಕೃತಿಯನ್ನು ನಿರೂಪಿಸಿದೆ.

ಮೊದಲ ಓದು

ರಾಜಿರಹಿತ ವ್ಯಕ್ತಿತ್ವದ ಬೆಳಕಿಂಡಿ

ರಾಜಿಯಾಗದ ವ್ಯಕ್ತಿತ್ವವೊಂದರ ಬದುಕನ್ನು ತೆರೆದಿಟ್ಟಿದೆ ಈ ಕೃತಿ. ಸುಭಾಷರು ಎಲ್ಲರನ್ನೂ ಒಂದಾಗಿಸಿ ಹೋರಾಟ ಕಟ್ಟಿದ ಕಥೆಯನ್ನು, ಅವರ ಮೇರು ಬದುಕನ್ನು ಎಳೆ ಎಳೆಯಾಗಿ ಬಿಡಿಸಿಡಲಾಗಿದೆ. ಹಲವು ಒಳನೋಟಗಳನ್ನೂ ಇಲ್ಲಿನ ಲೇಖನಗಳು ಒಳಗೊಂಡಿವೆ.

ಹೋರಾಟ ಎಂದರೆ ನೇರ ಮುಖಾಮುಖಿ ಅಲ್ಲ. ಇಲ್ಲಿ ನಾಯಕನೆನಿಸಿದವನು ಹಲವು ನಿಂದೆ, ಆರೋಪ, ಹೀಯಾಳಿಕೆಗಳನ್ನು ಅನುಭವಿಸಲೇಬೇಕಾಗುತ್ತದೆ. ಸುಭಾಷರ ಬದುಕೂ ಇದಕ್ಕೆ ಹೊರತಲ್ಲ. ಅಷ್ಟು ಹೋರಾಟಗಳನ್ನು ಕಟ್ಟಿದರೂ ಕಾಂಗ್ರೆಸ್‌ನಿಂದ ಹೊರಬರಬೇಕಾದ ಸಂದರ್ಭದಲ್ಲಿ ಅವರು ಅನುಭವಿಸಿದ ತುಮುಲಗಳನ್ನೂ ಇಲ್ಲಿನ ಬರಹ ತೆರೆದಿಟ್ಟಿದೆ.

ಕರ್ನಾಟಕಕ್ಕೆ ಭೇಟಿ ನೀಡಿದ ಸಂದರ್ಭ, ಅಂದಿನ ಕಾಂಗ್ರೆಸ್‌ಗೆ ಸವಾಲೆಸೆಯುವ ರೀತಿಯಲ್ಲಿ ಸುಭಾಷರಿಗೆ ಬೆಂಬಲ ಸಿಕ್ಕಿದ ಘಟನೆಗಳನ್ನು ಕೃತಿಯಲ್ಲಿ ದಾಖಲಿಸಲಾಗಿದೆ.

ಸುಭಾಷ್ ಅವರ ಮಹಿಳಾ ಸಬಲೀಕರಣದ ಪ್ರಸಂಗಗಳನ್ನು ಉಲ್ಲೇಖಿಸಲಾಗಿದೆ. ರಾಣಿ ಝಾನ್ಸಿ ರೆಜಿಮೆಂಟ್ ಸ್ಥಾಪನೆಯ ಸಂದರ್ಭ ಮತ್ತು ನೇತಾಜಿಯ ಮಹಿಳಾಪರ ಮಾತುಗಳನ್ನು ಉಲ್ಲೇಖಿಸಲಾಗಿದೆ. ಕೃತಿಯ ಉದ್ದೇಶವೂ ಅದೇ ಆಗಿದೆ. ಪ್ರಸಕ್ತ ಸಂದರ್ಭದಲ್ಲಿ ಅವರ ವಿಚಾರಧಾರೆಗಳು ಹೆಚ್ಚು ಪ್ರಸ್ತುತ ಎಂದು ಕೃತಿ ಪ್ರತಿಪಾದಿಸುತ್ತದೆ. ಸುಭಾಷರ ವ್ಯಕ್ತಿತ್ವವನ್ನು ಕಟ್ಟಿಕೊಡುವ ಭರದಲ್ಲಿ ಗಾಂಧೀಜಿಯವರ ವ್ಯಕ್ತಿತ್ವವನ್ನು ಟೀಕಿಸುವ ಅಗತ್ಯವಿರಲಿಲ್ಲ ಎನ್ನುವ ಅನಿಸಿಕೆ ಈ ಪುಸ್ತಕ ಓದುವಾಗ ಮತ್ತೆ ಮತ್ತೆ ಕಾಡುತ್ತದೆ. ನೇತಾಜಿ ಅವರದು ಸ್ವತಃ ದೊಡ್ಡ ವ್ಯಕ್ತಿತ್ವ. ಗಾಂಧೀಜಿಯವರ ವ್ಯಕ್ತಿತ್ವವನ್ನು ಟೀಕಿಸಿ ಅವರನ್ನು ದೊಡ್ಡವರನ್ನಾಗಿ ಕಾಣಿಸುವ ಅಗತ್ಯವಿಲ್ಲ ಎಂಬ ಅಭಿಪ್ರಾಯ ಹರಳುಗಟ್ಟಿ ನಿಲ್ಲುತ್ತದೆ.



ಪು: 68 ₹20

ನೇತಾಜಿ ಸುಭಾಷ್‌ಚಂದ್ರ ಬೋಸ್

ಪ್ರ : ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ
ಸಂ: 080 – 23561443

ಸುಕ್ರಜ್ಜಿಯ ಜೀವನಕಥನದ ತುಣುಕು



ಪು: 140 ₹150

ಹಾಡಿನ ಕಣಜ ಸುಕ್ರಿ ಬೊಮ್ಮಗೌಡ

ಲೇ: ಅಕ್ಷತಾ ಕೃಷ್ಣಮೂರ್ತಿ
ಪ್ರ: ವಿಕಾಸನ, ವಿಜ್ಞಾತಂ ಭವನ
ಸಂ: 9481908555

ಈ ಕೃತಿ ಹಾಡಿನ ಕಣಜ ಎಂದೇ ಖ್ಯಾತಿ ಪಡೆದಿರುವ, ಸುಕ್ರಜ್ಜಿ ಎಂದೇ ಎಲ್ಲರೂ ಗುರುತಿಸುವ ಸುಕ್ರಿ ಬೊಮ್ಮಗೌಡ ಅವರ ಜೀವನ ಚರಿತ್ರೆ. ಆದಿಚುಂಚನಗಿರಿ ಮಹಾಸಂಸ್ಥಾನ ಮಠವು 'ಒಕ್ಕಲಿಗ ಸಾಧಕರು' ಎಂಬ ಶೀರ್ಷಿಕೆಯಡಿ 'ವಿಕಸನ' ಸಂಸ್ಥೆಯ ಮೂಲಕ ಆರಂಭಿಸಿದ ಗ್ರಂಥಮಾಲೆಯ ಭಾಗವಾಗಿ 'ಹಾಡಿನ ಕಣಜ ಸುಕ್ರಿ ಬೊಮ್ಮಗೌಡ' ಮೂಡಿಬಂದಿದೆ.

ಒಟ್ಟು ಮೂವತ್ತು ಅಧ್ಯಾಯಗಳಲ್ಲಿ ಸುಕ್ರಿ ಅವರ ಜೀವನವನ್ನು ಅಕ್ಷತಾ ಕೃಷ್ಣಮೂರ್ತಿ ಅವರು ಇಲ್ಲಿ ಕಟ್ಟಿಕೊಟ್ಟಿದ್ದಾರೆ. ಉತ್ತರ ಕನ್ನಡದ ಹಾಲಕ್ಕಿ ಒಕ್ಕಲಿಗ ಸಮುದಾಯದ ಹಿನ್ನೆಲೆಯ ಹಾಗೂ ಅವರ ಕುಂಬ್ರಿ ಬೇಸಾಯ ಪದ್ಧತಿಯ ವಿವರದೊಂದಿಗೆ ಆರಂಭವಾಗುವ ಕೃತಿ, ಸುಕ್ರಿ ಅವರ ಬಾಲ್ಯ ಜೀವನ, ಹೆಸರು ಇಟ್ಟ ಬಗೆ, ಕಲಿತ ಪುಗಡಿ ಕುಣಿತ, ವೈವಾಹಿಕ ಜೀವನ, ಸುಕ್ರಜ್ಜಿಗಿದ್ದ ಔಷಧಿ ಜ್ಞಾನ, ಸಾರಾಯಿ ವಿರುದ್ಧದ ಹೋರಾಟ, ಸಾಕ್ಷರತಾ ಆಂದೋಲನದ ಮಾಹಿತಿ ಎಲ್ಲವನ್ನೂ ಒಳಗೊಂಡಿದೆ.

ಸುಕ್ರಜ್ಜಿ ಹಾಡುವ 31 ಹಾಡುಗಳ ಸಂಗ್ರಹವೂ ಕೃತಿಯಲ್ಲಿದೆ. 'ಕೊನೆಯದಾಗಿ' ಎನ್ನುವ ಅಧ್ಯಾಯದಲ್ಲಿ ಮುಂದೆ ಆಗಬೇಕಾದ ಕಾರ್ಯಗಳ ಬಗ್ಗೆಯೂ ಲೇಖಕಿ ಇಲ್ಲಿ ಸೂಕ್ಷ್ಮವಾಗಿ ವಿವರಿಸಿದ್ದಾರೆ. ಬರವಣಿಗೆ ಚೊಕ್ಕವಾಗಿದೆ.

ವೈದ್ಯರ ಬದುಕಿನ ಕಥನ ರೂಪ

ಬೆಳವಾಡಿಯ ಹಳ್ಳಿಯ ಮುಗ್ಧನೊಬ್ಬ ಖ್ಯಾತ ವೈದ್ಯನಾಗಿ ಬೆಳೆದ ಸಾಧನೆಯನ್ನು ಕಥನ ರೂಪದಲ್ಲಿ ಕಟ್ಟಿಕೊಟ್ಟಿದೆ ಈ ಕೃತಿ. ಡಾ.ಬಿ.ಟಿ. ರುದ್ರೇಶ್ ಅವರ ಬದುಕನ್ನು ಹಂತ ಹಂತವಾಗಿ ನಿರೂಪಿಸಿದ್ದಾರೆ ಲೇಖಕರು.

ಲೇಖಕರೇ ಆರಂಭದಲ್ಲಿ, 'ಇದು ರುದ್ರೇಶ್ ವ್ಯಕ್ತಿಚಿತ್ರಣವೂ ಅಲ್ಲ, ಯೋಗ್ಯತಾ ನಿರ್ಣಯ ಅಥವಾ ಜೀವನ ಚರಿತ್ರೆಯೂ ಅಲ್ಲ. ಅವೆಲ್ಲವನ್ನೂ ಒಳಗೊಂಡ ಸಮಕಾಲೀನ ವೈದ್ಯಕೀಯ ವ್ಯವಸ್ಥೆಯ ಒಂದು ದಾಖಲೆ' ಎಂದಿದ್ದಾರೆ.

ರುದ್ರೇಶ್ ಅವರ ಬಗೆಗೆ ಕುತೂಹಲ ಇರುವವರಿಗೆ ಇದೊಂದು ಪುಟ್ಟ ಬೆಳಕಿನ ಕಿಂಡಿ ಅಷ್ಟೆ. ಕೃತಿಯಲ್ಲಿ ವಿವಿಧ ಕಾಲಘಟ್ಟಗಳನ್ನು ಅಧ್ಯಾಯದ ರೂಪದಲ್ಲಿ ಹೇಳಿದ್ದಾರೆ. ರುದ್ರೇಶ್ ಒಡನಾಡಿಗಳಿಂದ ಮಾಹಿತಿ ಸಂಗ್ರಹ, ಪೂರಕ ಸಾಹಿತ್ಯಗಳ ಅಧ್ಯಯನ ಇಲ್ಲಿದೆ. ಹಾಗಾಗಿ ಯಾವುದೇ ಅಧ್ಯಾಯದಿಂದಲೂ ಕೃತಿಯ ಓದು ಆರಂಭಿಸಬಹುದು.

ಉದಾಹರಣೆಗಳು, ಘಟನಾವಳಿಗಳು, ಚಿತ್ರಗಳಿಂದಾಗಿ ರುದ್ರೇಶ್ ಬದುಕಿನ ಕಥನ ಹೇಳಲು ಇಲ್ಲಿ ಗರಿಷ್ಠ ಪ್ರಯತ್ನ ನಡೆದಿದೆ. ವೈದ್ಯಕೀಯ ಕ್ಷೇತ್ರಕ್ಕೆ ಈ ಸಾಧಕ ನೀಡಿರುವ ಕೊಡುಗೆಗಳು ಪುಟ ಪುಟದಲ್ಲೂ ಇಣುಕುಹಾಕಿವೆ.



ಪು: 268 ₹500

ಸಾಧನೆಯೇ ಬದುಕು

ಲೇ: ಡಾ.ಬೆಳವಾಡಿ ಮಂಜುನಾಥ
ಪ್ರ: ಮಡಿಲು ಪ್ರಕಾಶನ, ಬೆಂಗಳೂರು
ಸಂ: 080 26797575

ಕಥೆ
ಪ್ರಕಾಶ ಗ.ಖಾಡೆ ಅವರ ಇಲ್ಲಿಂದ ಮೇಲೆ ಶಬ್ದವಿಲ್ಲ..
ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಬಿ.ಆರ್.ಲಕ್ಷ್ಮಣರಾವ್ ಅವರ ಹೀಗೂ ಒಮ್ಮೊಮ್ಮೆ
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಮೀರಾಲಂ

8ನೇ ಪುಟದಿಂದ...

ಇವುಗಳಲ್ಲಿ ಕೊನೆಯ ನಾಲ್ಕು ಜೋಡಿಗಳು ಮೀರಾಲಂ ಅವರಿಗೆ ಸಮಕಾಲೀನವಾಗಿದ್ದವು. ಅದರಲ್ಲೂ ಗುರುಪೀರಾ ಖಾದ್ರಿ-ಮೀರಾಲಂ ಇಬ್ಬರೂ ಬಾಗ್ದಾದಿನ ಕ್ರಾಂತಿಕಾರ ದಾರ್ಶನಿಕ ಮನ್ಸೂರನ 'ಅನಲ್‌ಹಖ್' ಧಾರೆಗೆ ಸೇರಿದವರು. ಸಾಧಕರು ಸಾಧನೆಯಲ್ಲಿ ಹುಡುಕುವ ದೈವಿಕ ಚೈತನ್ಯವು ಅವರೊಳಗೇ ಇದೆ, ಪ್ರೇಮದ ಮೂಲಕ ಅದನ್ನು ಸಾಕ್ಷಾತ್ಕರಿಸಿಕೊಳ್ಳಬಹುದು ಎಂದು ಪ್ರತಿಪಾದಿಸುವ ತತ್ವದವರು. ಈ ತತ್ವವು ಜಾತಿ, ಧರ್ಮ, ಭಾಷೆಯ ಉಪಾಧಿಗಳ ಆಚೆ ಸರ್ವ ಜೀವಿಗಳನ್ನೂ ದೈವಿಕಪ್ರೇಮದ ಪ್ರತಿರೂಪಗಳು ಎಂದು ಪರಿಭಾವಿಸುತ್ತದೆ. ನೂರು ಮೈಲಿ ಅಂತರದಲ್ಲಿ ಬದುಕಿದ್ದ ಇಬ್ಬರೂ ಸಂತರು ಪರಸ್ಪರ ಭೇಟಿ ಮಾಡಿರುವ ಸಾಧ್ಯತೆಯಿದೆ.

ಮೀರಾಲಂ ಅವರ ಭಜನ್‌ಗಳು, ಸೂಫಿ ಪ್ರೇಮತತ್ವದ ಪರಿಭಾಷೆಯಿಂದ ಕೂಡಿವೆ. ಹೆಚ್ಚಿನ ಭಜನ್‌ಗಳ ವಸ್ತು ಗುರುಮಹಿಮೆ.`ಗುರಘರ ಗಂಗಾ ಗುರುಘರ ಕಾಶಿ ಆಲಂಶಾ ಕಭಿ ಮಂದಿರ ಜಾಕರ್ ಹರದ್ವಾರೇ ವಹಿ ತಿಲಕ ಲಗಾಕರ್, ಗುರು ಹಮಾರ ರಂಗ ರಸೀಲ ಉಸಗುರುಕೆ ಹಮ ದಾಸಹುವೇ' ಎಂಬ ರಚನೆಯನ್ನು ಬಹುತೇಕ ಗಾಯಕರು ಹಾಡುವರು. ಸಂಸ್ಕೃತ ಶಬ್ದಗಳಿಂದ ಕೂಡಿದ ಈ ರಚನೆಗಳ ಮೇಲೆ ಕಬೀರನ ಹಾಗೂ ತುಳಸಿದಾಸರ ಪ್ರಭಾವವಿದ್ದಂತಿದೆ. ಪಂಜಾಬ್-ಸಿಂಧ್ ಪ್ರಾಂತ್ಯಗಳಲ್ಲಿ ಕಬೀರ ಜನಪ್ರಿಯನಾಗಿದ್ದುದೂ ಈ ಪ್ರಭಾವಕ್ಕೆ ಕಾರಣ. 'ಜೋಪೀರ ಶಾಜೀಲಾನಿ ಮಾಶುಕ್ ಬಿ ಹಖಾನಿ', 'ಸೂರತ್ ಮೂರತ್ ಜಲಥಲ ಪೂಜಾ, ತನಕ ಪೂಜಾ ಕಿಯಾನಹಿ' ಇವು ಮೀರಾಲಂ ಅವರ ಇತರ ಜನಪ್ರಿಯ ರಚನೆಗಳು. 'ಅಜಬ ಜಮಾನ ಕೂಡ ಘಸಾನ, ದೀನತ ದುನಿಯಾದಾರ್ ಹುವೇ' ಎಂಬ ಹಾಡು, ಬ್ರಿಟಿಷರ ವಿರುದ್ಧ ಬರೆದಿದ್ದೆಂದು ಗಾಯಕರು ಅಭಿಪ್ರಾಯಪಡುತ್ತಾರೆ.

ಮೀರಾಲಂ ದರ್ಗಾದಲ್ಲಿ ಮಗುವಿನೊಂದಿಗೆ ಪ್ರಾರ್ಥನೆಯ ನೋಟ

1978ರಲ್ಲಿ ಮೀರಾಲಂ ಅವರ ಮಗ ಸೈಯದ್ ಶಾ ಹುಸೇನಲಿ ಶಾ, ತಮ್ಮ ತಂದೆಯ ವಸ್ತುಗಳನ್ನು ಕೊಂಡೊಯ್ಯಲು ಹೊಸಪೇಟೆಗೆ ಬಂದಿದ್ದರಂತೆ. ಮೀರಾಲಂ ಅವರ ಸಂದೂಕದಲ್ಲಿ ತುಳಸಿರಾಮಾಯಣ, ಗೀತೆ, ಕುರಾನ್ ಮುಂತಾದ ಗ್ರಂಥಗಳು, ಶೇರ್ವಾನಿ, ಪಟಗ ಹಾಗೂ ಕೆಲವು ವಜ್ರಗಳು ಇದ್ದವಂತೆ. ಈ ಗ್ರಂಥಗಳು ಸಂತನ ಬಹುಧರ್ಮಗಳಲ್ಲಿದ್ದ ಪ್ರವೇಶವನ್ನು ಸೂಚಿಸುತ್ತವೆ ಮತ್ತು ಬಹುಧಾರ್ಮಿಕ ಶಿಷ್ಯತ್ವವನ್ನು ಸಮರ್ಥಿಸುತ್ತವೆ.

ಮೂಲತಃ ಆಶುಕವಿಯಾಗಿದ್ದ ಮೀರಾಲಂ ಅವರಿಗೆ 'ಶೀಘ್ರಕವಿ' 'ಪಂಡಿತ್' 'ಹಖೀಖತ್ ಕವಿ' ಇತ್ಯಾದಿ ಬಿರುದುಗಳಿದ್ದವು; ಸೂಫಿಪಂಥದಲ್ಲಿ ಶರಣ ಷಟ್‌ಸ್ಥಲ ಪರಿಕಲ್ಪನೆ ಹೋಲುವ ಶರೀಯತ್, ತರೀಖತ್, ಹಖೀಕತ್, ಮಾರಿಫತ್ ಎಂಬ ನಾಲ್ಕು ಅವಸ್ಥೆಗಳಿವೆ. ಇವುಗಳಲ್ಲಿ ಸಾಧಕರು ಪಡೆಯುವ ಮೂರನೆಯ ಹಂತವೇ ಹಖೀಖತ್. ಮೀರಾಲಂ ಲಹರಿಯಲ್ಲಿ ಹೇಳುತ್ತಿದ್ದುದನ್ನು ಶಿಷ್ಯರು ಬರೆದುಕೊಳ್ಳುತ್ತಿದ್ದರಂತೆ. ಈ ತನಕ ಸಂತನ 704 ರಚನೆಗಳು ಸಿಕ್ಕಿವೆ. ಇವು ಉರ್ದು ಹಾಗೂ ದೇವನಾಗರಿ ಲಿಪಿಯಲ್ಲಿವೆ. ಇವನ್ನು ಮೀರಾಲಂ ಹಾಗೂ ದಾತಾಪೀರರ ಶಿಷ್ಯರು ನಿಂತ ನಿಲುವಿನಲ್ಲೇ ವಾಚಿಸುವ ಮತ್ತು ವ್ಯಾಖ್ಯಾನಿಸುವ ಪರಿಣತಿ ಪಡೆದಿರುವರು. ಹೀಗಾಗಿ ಮೀರಾಲಂ-ದಾತಾಪೀರರ ಹೊಸಪೇಟೆ-ಅಕ್ಕಲಕೋಟೆಯ ಉರುಸುಗಳು, ಕಾವ್ಯಗೋಷ್ಠಿಗಳೂ ಅಧ್ಯಾತ್ಮ ಜಿಜ್ಞಾಸೆಯ ಸತ್ಸಂಗಗಳೂ ಆಗಿವೆ. ನಾವು 'ಕನ್ನಡ ತತ್ವಪದಗಳು' ಬದಲಿಗೆ 'ಕರ್ನಾಟಕ ತತ್ವಪದಗಳು' ಎಂಬ ಪರಿಕಲ್ಪನೆ ಬಳಸಬೇಕು. ಆಗ ಕರ್ನಾಟಕದಲ್ಲಿದ್ದ ಸಂತರು ರಚಿಸಿದ ಮರಾಠಿ, ತೆಲುಗು, ದಖನಿ, ತಮಿಳು ತತ್ವಪದಗಳ ಧಾರೆಗಳೂ ಸೇರಿಬಿಡುತ್ತವೆ.

ನಾನು ಅಕ್ಕಲಕೋಟೆಯ ಉರುಸಿಗೆ ಹೋದೆ. ಅಕ್ಕಲಕೋಟೆಯ ಮಹಬೂಬ್ ಬಳೂರಗಿ ಮೀರಾಲಂ ಪರಂಪರೆಯ ಶ್ರೇಷ್ಠ ಗಾಯಕರೆಂದು ಅಲ್ಲಿನವರು ಹೇಳಿದರು. ಮಹಬೂಬ್ ಬಳೂರಗಿ ತೀರಿಕೊಂಡಿದ್ದರು. ಅಬ್ದುಲ್ ಸತ್ತಾರ್, ದಾತಾ ಬಳೂರಗಿ, ಅಬ್ದುಲ್ ಘನಿ, ಅಬ್ದುಲ್ ಸತ್ತಾರ್ ಪಟೇಲ್, ಫಾರೂಕ್, ರಿಯಾಜ್, ಸೈಯದ್‌ಭಾಯಿ ಮುಂತಾದವರ ಹಾಡಿಕೆ ಕೇಳಿದೆ. ದಾತಾಪೀರ್ ದರ್ಗಾಕ್ಕೆ ಜಮೀನು ಕೊಟ್ಟಿರುವ ಸಾಹುಕಾರ್ ಸಿದ್ಧರಾಮಪ್ಪನವರ ಮನೆಗೆ ಹೋದೆ. ಕೋಟೆಯಂತಹ ದೊಡ್ಡ ಮನೆ. ಈಗಲೂ ಸಿದ್ಧರಾಮಪ್ಪನವರ ಮೊಮ್ಮಗ ಚನ್ನಬಸಪ್ಪ ಕಲಬುರ್ಗಿಯವರಿಗೆ ದಾತಾಪೀರ್ ಉರುಸಿನಲ್ಲಿ ಮನ್ನಣೆ ಸಲ್ಲುತ್ತ ಬಂದಿದೆ. ಚನ್ನಬಸಪ್ಪನವರು ತಮ್ಮ ಅಜ್ಜನವರೂ ದಾತಾಪೀರರೂ ಮನೆಯಲ್ಲಿ ಒಟ್ಟಿಗೆ ಕೂರುತ್ತಿದ್ದ ಕಟ್ಟೆಯನ್ನು ತೋರಿಸುತ್ತ ಅಭಿಮಾನದಿಂದ ನುಡಿದರು: 'ವಂಶಪರಂಪರಾ ನಮ್ಮ ಕಲಬುರ್ಗಿ ಮನೆತನವರಾ ದಾತಾಪೀರನಿಗೆ ಗಂಧ ಏರಿಸಬೇಕು.'

ಮೀರಾಲಂ ಅವರ ಸಂದೂಕದಲ್ಲಿ ತುಳಸಿರಾಮಾಯಣ, ಗೀತೆ, ಕುರಾನ್ ಮುಂತಾದ ಗ್ರಂಥಗಳು, ಶೇರ್ವಾನಿ, ಪಟಗ ಹಾಗೂ ಕೆಲವು ವಜ್ರಗಳು ಇದ್ದವಂತೆ.

ಕರ್ನಾಟಕದ ಧಾರ್ಮಿಕ, ರಾಜಕೀಯ, ಸಾಹಿತ್ಯಕ, ಚರಿತ್ರೆಗಳಲ್ಲಿ ದಾಖಲಾಗದ ಎಷ್ಟೊಂದು ಅನಾಮಿಕ ಸ್ಥಳೀಯ ಪರಂಪರೆಗಳು ಹೀಗೆ ಅಜ್ಞಾತವಾಗಿ ಬದುಕಿವೆಯೊ? ಇವು ನಮ್ಮ ಸುತ್ತ ಸಂಭವಿಸುತ್ತಿರುವ ಮತಮತ್ಸರದ ಕೋಲಾಹಲಗಳಾಚೆ, ಅನುಭಾವದ ನೆಲೆಯ ಮೇಲೆ ಜನರನ್ನು ಬೆಸೆಯುವ, ಕೂಡುಸಂಸ್ಕೃತಿ ಕಟ್ಟುವ ಕೆಲಸವನ್ನು ತಮ್ಮ ಪಾಡಿಗೆ ನಿಭಾಯಿಸುತ್ತಿವೆ. ಈ ಪರಂಪರೆಗಳಲ್ಲಿ ಕೂಡುಬದುಕಿನ ಭಾರತದ ಪರಿಕಲ್ಪನೆ (ಐಡಿಯಾ ಆಫ್ ಇಂಡಿಯಾ) ಕೂಡ, ಕಾವ್ಯ, ಸಂಗೀತ, ದರ್ಶನ ಮತ್ತು ಆಚರಣೆ ರೂಪದಲ್ಲಿ ಅಡಗಿದೆ.

ಮೈದಾನದಲ್ಲಿ ಹಾಕಿದ ಡೇರೆಗಳಡಿಯಲ್ಲಿ ವಿನಿಮಯ ವ್ಯಾಪಾರ

ಜೋನ್‌ಬೀಲ್ ಮೇಳ ದುಡ್ಡು ಬೇಕಿಲ್ಲ!

ಡಾ. ಕೆ.ಎಸ್.ಚೈತ್ರಾ

'ಇಲ್ಲಿ ನಡೆಯುವ ಮೇಳ ಬಹಳ ಪ್ರಸಿದ್ಧ' ಎಂದ ನಮ್ಮ ಜತೆಗಿದ್ದ ತರುಣ್. ಮೇಳ ಎಂದರೆ ಜಾತ್ರೆ; ನಮ್ಮಲ್ಲೇನು ಜಾತ್ರೆಗೆ ಬರವೇ ಎಂದುಕೊಂಡು ಅಷ್ಟು ಆಸಕ್ತಿ ತೋರಲಿಲ್ಲ. 'ಈ ಮೇಳಕ್ಕೆ ರಾಜರು ಬರುತ್ತಾರೆ; ದರ್ಬಾರ್ ಕೂಡಾ ನಡೆಯುತ್ತದೆ. ಅಷ್ಟೇ ಅಲ್ಲ, ಇಲ್ಲಿ ಖರೀದಿಗೆ ದುಡ್ಡು, ಕಾರ್ಡ್, ಚೆಕ್ ಯಾವುದೂ ಬೇಕಿಲ್ಲ' ಎಂದಾಗ ವಿಚಿತ್ರವೆನ್ನಿಸಿ, 'ಮತ್ತೆ ವ್ಯಾಪಾರ ಹೇಗೆ?' ಎಂದು ಪ್ರಶ್ನಿಸಿದೆ. ಇದು ಭಾರತದಲ್ಲಿ ಇಂದಿಗೂ ನಡೆಯುತ್ತಿರುವ ಬುಡಕಟ್ಟು ಜನಾಂಗದವರ ವಿನಿಮಯ ವ್ಯವಸ್ಥೆ (ಬಾರ್ಟರ್) ಜಾರಿಯಲ್ಲಿರುವ ಮೇಳ ಎಂಬ ವಿವರಣೆ ಸಿಕ್ಕಿತು.

> ಕ್ಯಾಶ್‌ಲೆಸ್ ವ್ಯವಹಾರದತ್ತ ಇಡೀ ಜಗತ್ತು ಹೊರಳುತ್ತಿರುವಾಗ ಈ ರೀತಿ ಕಾಸಿಲ್ಲದೆ ಪರಸ್ಪರ ಕೊಡುಕೊಳ್ಳುವಿಕೆಯ ಐದುನೂರು ವರ್ಷಗಳಷ್ಟು ಹಳೆಯದಾದ ವಿನಿಮಯ ಪದ್ಧತಿಯ ಈ ಮೇಳ ನಮಗೆ ಅಚ್ಚರಿ ಮೂಡಿಸುತ್ತದೆ.

ಜೋನ್‌ಬೀಲ್ ಮೇಳ

ಅಸ್ಸಾಮಿನ ರಾಜಧಾನಿ ದಿಸ್‌ಪುರದಿಂದ (ಗುವಾಹಟಿ) ಮೂವತ್ತೆರಡು ಕಿ.ಮೀ ದೂರದಲ್ಲಿರುವ ಮೋರಿಗಾಂವ್ ಜಿಲ್ಲೆಯ ದಯಾಂಗ್ ಬೆಲ್ಗುರಿ ಎಂಬ ಸ್ಥಳದಲ್ಲಿ ಪ್ರತಿವರ್ಷ ಚಳಿಗಾಲದಲ್ಲಿ ಈ ಮೇಳ ನಡೆಯುತ್ತದೆ. ಅರ್ಧಚಂದ್ರಾಕೃತಿಯ ಕೊಳದ ಪಕ್ಕದ ದೊಡ್ಡ ಮೈದಾನದಲ್ಲಿ ಈ ಮೇಳ ನಡೆಯುವುದರಿಂದ ಇದಕ್ಕೆ ಜೋನ್ (ಅರ್ಧಚಂದ್ರ) ಬೀಲ್ (ತೇವಭೂಮಿ) ಎಂದು ಹೆಸರು. ಇದನ್ನು ಜನವರಿ-ಫೆಬ್ರುವರಿಯಲ್ಲಿ ಆಚರಿಸಲಾಗುವ ಅಸ್ಸಾಮಿನ ಸುಗ್ಗಿ ಹಬ್ಬ ಮಾಘಬಿಹುವಿನ ವಾರಾಂತ್ಯದಲ್ಲಿ ಹಮ್ಮಿಕೊಳ್ಳಲಾಗುತ್ತದೆ. ಮೂರು ದಿನ ನಡೆಯುವ ಈ ಮೇಳದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನರು ಸೇರಿ ವ್ಯಾಪಾರ-ವಹಿವಾಟು ನಡೆಸುತ್ತಾರೆ.

ಮೇಘಾಲಯದಲ್ಲಿ ವಾಸಿಸುವ ಇತರ ಬುಡಕಟ್ಟು ಜನಾಂಗಗಳಾದ ಖಾಸಿ, ಕಾರ್ಬಿ, ಜೈಂಟಿಯಾಗಳ ಜನರೂ ಇದರಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಾರೆ. ಮೇಳಕ್ಕೆಂದೇ ವಿಶಾಲವಾದ ಮೈದಾನದಲ್ಲಿ ಟೆಂಟ್ ಕಟ್ಟಿ ತಾತ್ಕಾಲಿಕ ಬಿಡಾರಗಳನ್ನು ನಿರ್ಮಿಸಿ ವಸತಿ ಸೌಲಭ್ಯ ಕಲ್ಪಿಸಲಾಗುತ್ತದೆ. ವಾಹನ ವ್ಯವಸ್ಥೆ ಇಲ್ಲದಿದ್ದ ಕಾಲದಲ್ಲಿ ವಾರಗಟ್ಟಲೇ ನಡೆದು ಈ ಮೇಳಕ್ಕೆ ಜನ ಬರುತ್ತಿದ್ದರು. ಈಗ ಟೆಂಪೊಗಳಲ್ಲಿ ತಂಡತಂಡವಾಗಿ ಬರುತ್ತಾರೆ. ದೂರ, ಕಿರಿದಾದ ದಾರಿ, ರಸ್ತೆಗಳ ಅವ್ಯವಸ್ಥೆ ಮತ್ತು ವಾಹನ ದಟ್ಟಣೆ ಕಾರಣ ಗಂಟೆಗಟ್ಟಲೇ ಪಯಣಿಸಬೇಕಾದರೂ ಜನರಿಗೆ ವ್ಯಾಪಾರದ ಜತೆ ತಮ್ಮವರನ್ನು ಒಂದೆಡೆ ಭೇಟಿ ಮಾಡುವ ಸಂತಸ ಎದ್ದು ಕಾಣುತ್ತದೆ.

ರಾಜ ಕಾರಣ!

ಹದಿನೈದು ಅಥವಾ ಹದಿನೇಳನೇ ಶತಮಾನದಿಂದ ಈ ಮೇಳ ಜಾರಿಯಲ್ಲಿದೆ ಎನ್ನಲಾಗುತ್ತದೆ. ಅಂದಿನ ಅರಸರು ಇದನ್ನು ರಾಜಕೀಯ ಬೆಳವಣಿಗೆಗಳನ್ನು ಚರ್ಚಿಸಲು ಆಯೋಜಿಸುತ್ತಿದ್ದರು ಎನ್ನುವುದರ ಜತೆ ಅಸ್ಸಾಂ ಮತ್ತು ಸುತ್ತಲಿನ ಬುಡಕಟ್ಟು ಜನಾಂಗದವರ ಒಗ್ಗೂಡುವಿಕೆಯ ಉದ್ದೇಶವೂ ಇದರಲ್ಲಿತ್ತು ಎನ್ನಲಾಗುತ್ತದೆ. ಅಸ್ಸಾಮಿನಲ್ಲಿರುವ ತಿವಾ ಬುಡಕಟ್ಟು ಜನಾಂಗದವರು ಟಿಬೆಟ್-ಬರ್ಮಾ ಮೂಲದವರು. ಅವರಲ್ಲಿಯೇ ಬೆಟ್ಟದ ತಿವಾಗಳು ಮತ್ತು ಬಯಲಿನ ತಿವಾಗಳು ಎಂದು ವಾಸಸ್ಥಾನದ ಮೇಲೆ ಭಿನ್ನ ಗುಂಪುಗಳಿವೆ. ಇರುವ ಪ್ರದೇಶಕ್ಕೆ ಅನುಗುಣವಾಗಿ ಭಾಷೆ, ಪದ್ಧತಿ, ಬೆಳೆಯುವ ಬೆಳೆ ಎಲ್ಲದರಲ್ಲಿಯೂ ವ್ಯತ್ಯಾಸ. ಹೀಗಾಗಿ ಸಂಘರ್ಷಗಳು ಸಾಮಾನ್ಯವಾಗಿದ್ದವು. ಇದನ್ನು ತಡೆಯಲು ಪರಸ್ಪರರೊಂದಿಗೆ ಬೆರೆಯಲು, ಸಮಸ್ಯೆಗಳನ್ನು ಚರ್ಚಿಸಲು, ಬೆಳೆದ ವಸ್ತುಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಲು ಈ ಮೇಳ ಆರಂಭವಾಗಿದ್ದು ಅದು ಇಂದಿಗೂ ಮುಂದುವರಿದಿದೆ.

ಅಸ್ಸಾಮಿನ ಗಡಿಪ್ರದೇಶ ಮತ್ತು

ವಿನಿಮಯ

ಮೂರು ದಿನ ನಡೆಯುವ ಈ ಮೇಳದ ಮೊದಲು ಅಗ್ನಿಪೂಜೆ ಸಲ್ಲಿಸಿ ವಿಶ್ವಶಾಂತಿ-ಲೋಕಕಲ್ಯಾಣಕ್ಕಾಗಿ ಪ್ರಾರ್ಥನೆ ಸಲ್ಲಿಸಲಾಗುತ್ತದೆ. ಮೊದಲ ದಿನ ತಿವಾ

ತಿವಾ ಸಮುದಾಯದವರ ವಿನಿಮಯ ಪದ್ಧತಿಯ ಸಂತೆ ವ್ಯಾಪಾರ. ಒಣಮೀನು – ಅರಿಸಿನ ವಿನಿಮಯದ ನೋಟ

ಜನರೆಲ್ಲರೂ ಬಲೆ ಮತ್ತು ಬುಟ್ಟಿ ಹಿಡಿದು ಕೊಳದಲ್ಲಿ ಸಾಮೂಹಿಕವಾಗಿ ಮೀನು ಹಿಡಿಯುತ್ತಾರೆ. ಎರಡನೇ ದಿನ ಪರಸ್ಪರ ವಿನಿಮಯದ ಮೂಲಕ ವ್ಯಾಪಾರ ನಡೆಯುತ್ತದೆ. ಬಯಲು ಪ್ರದೇಶದ ಜನ ಅಕ್ಕಿ ಬೆಳೆಯುವುದು ಹೆಚ್ಚು. ಹೀಗಾಗಿ ಸ್ಥಳೀಯ ಅಕ್ಕಿ, ಅವಲಕ್ಕಿ, ಪಿತಾ (ಅಂಟಾದ ಅಕ್ಕಿ ಬಳಸಿ ತಯಾರಿಸುವ ನಮ್ಮ ಕಡುಬಿನಂಥ ಖಾದ್ಯ), ಕುಂಬಳಕಾಯಿ, ಒಣಗಿಸಿದ ಮೀನು, ಬಿದಿರಿನ ಬುಟ್ಟಿ ಇವುಗಳನ್ನು ತರುತ್ತಾರೆ.

ಬೆಟ್ಟದ ಜನರು ಮರಗಳನ್ನು ಕಡಿದು ಭೂಮಿ ಸುಟ್ಟು ವ್ಯವಸಾಯ ಮಾಡುವ ಝುಂ ವ್ಯವಸಾಯ ಪದ್ಧತಿ ಅನುಸರಿಸಿ ಬೆಳೆದ ಕಾಳು ಮೆಣಸು, ಶುಂಠಿ, ಗಿಡಮೂಲಿಕೆ, ಎಳೆಬಿದಿರು, ಅಪರೂಪದ ಹಣ್ಣು-ತರಕಾರಿ, ಅರಿಸಿನ, ಮೇಣ, ಸಂಬಾರ ಪದಾರ್ಥ ತರುತ್ತಾರೆ. ಸುಮಾರು ಮುನ್ನೂರಕ್ಕೂ ಹೆಚ್ಚು ಟೆಂಟ್‌ಗಳಲ್ಲಿ ಮತ್ತು ತೆರೆದ ಮೈದಾನದಲ್ಲಿ ವ್ಯಾಪಾರ ಭರ್ಜರಿಯಾಗಿ ನಡೆಯುತ್ತದೆ. ತೂಕಮಾಪನ ಯಾವುದೂ ಇಲ್ಲ. ಸಣ್ಣ ಪಾತ್ರೆಯಲ್ಲಿ ತುಂಬಿ ಅಥವಾ ಭಾಗಗಳಾಗಿ ಮಾಡಿ ಪರಸ್ಪರ ಒಪ್ಪಿಗೆಯಾಗುವ ತನಕ ಚೌಕಾಸಿ ನಡೆಯುತ್ತದೆ (ನಾಲ್ಕು ಪಿತಾಕ್ಕೆ ಐದು ಅರಿಸಿನದ ತುಂಡು, ಐದು ಮೀನಿಗೆ ಎರಡು ಸೋರೆಕಾಯಿ ಹೀಗೆ). ಕಳೆದ ವರ್ಷ ಕೋವಿಡ್ ಕಾರಣದಿಂದಾಗಿ ಅರಿಸಿನದ ಭರ್ಜರಿ ವ್ಯಾಪಾರ ನಡೆದಿತ್ತು! ಬೆಳಿಗ್ಗೆ ಐದು ಗಂಟೆಗೇ ಶುರುವಾಗುವ ವ್ಯಾಪಾರ ಮಧ್ಯಾಹ್ನದವರೆಗೆ ನಡೆಯುತ್ತದೆ. ಮೂರೂ ದಿನಗಳು ಸಂಜೆ ಹೊತ್ತಿನಲ್ಲಿ ಕೋಳಿಅಂಕ, ಹಾಡು-ಕುಣಿತ ಹೀಗೆ ಮನರಂಜನಾ ಕಾರ್ಯಕ್ರಮಗಳು ನಡೆಯುತ್ತವೆ. ರಾಜದರ್ಬಾರಿನ ನಂತರ ಮೇಳ ಕೊನೆಗೊಳ್ಳುತ್ತದೆ.

ರಾಜ ದರ್ಬಾರ್

ಮಧ್ಯಯುಗದಲ್ಲಿ ಅಸ್ಸಾಮಿನ ಈ ಪ್ರದೇಶ ಚಿಕ್ಕ ಚಿಕ್ಕ ಪ್ರಾಂತ್ಯಗಳಾಗಿ ವಿವಿಧ ಬುಡಕಟ್ಟು ದೊರೆಗಳ ಅಧೀನದಲ್ಲಿತ್ತು. ಈಗ ಅಧಿಕಾರ, ಆಸ್ತಿ ಯಾವುದೂ ಇಲ್ಲದಿದ್ದರೂ ಪ್ರತೀ ಬುಡಕಟ್ಟಿಗೂ ದೊರೆ ಇದ್ದು ಅವರಿಗೆ ಗೌರವ ನೀಡಲಾಗುತ್ತದೆ. ತಿವಾ ಬುಡಕಟ್ಟಿನ ಗೋಬಾ ದೊರೆ ಆರಂಭಿಸಿದ್ದ ಮೇಳವಿದು. ಈಗ ಪರಿಸ್ಥಿತಿ ಬದಲಾಗಿದೆ ನಿಜ; ಹಿಂದೆ ಆನೆಯೇರಿ ಈ ಮೇಳಕ್ಕೆ ಬರುತ್ತಿದ್ದ ತಿವಾ ದೊರೆ ಈಗ ಕಾರಿನಲ್ಲಿ ಬರುವಂತಾಗಿದೆ. ಆದರೂ ಆಚರಣೆಯನ್ನು ಉಳಿಸಿಕೊಳ್ಳಲಾಗಿದೆ.

ಈಗಿನ ಗೋಬಾ ರಾಜ ಮೂರನೇ ದಿನ ತನ್ನ ಅಧಿಕಾರಿಗಳೊಂದಿಗೆ ಇಲ್ಲಿಗೆ ಭೇಟಿ ನೀಡಿ ಪ್ರಜೆಗಳಿಂದ ಸಾಂಕೇತಿಕವಾಗಿ ಕರ ವಸೂಲಾತಿ ನಡೆಸುತ್ತಾನೆ. ತದನಂತರ ದರ್ಬಾರ್ ನಡೆದು ಜನರ ಸಮಸ್ಯೆಗಳಿಗೆ ಪರಿಹಾರ ಸೂಚಿಸಲಾಗುತ್ತದೆ. ತಿವಾ ದೊರೆ ನಡೆಸುವ ಮೇಳ ಇದಾದರೂ ಸುತ್ತಲಿನ ಹದಿನೆಂಟು ಬುಡಕಟ್ಟು ಜನಾಂಗದ ದೊರೆಗಳು ಇಲ್ಲಿಗೆ ಬಂದು ಸಮಾಲೋಚನೆ ನಡೆಸುತ್ತಾರೆ. ಅರಸೊತ್ತಿಗೆಯ ಕಾಲ ಇದಲ್ಲವಾದರೂ ತಂತಮ್ಮ ಬುಡಕಟ್ಟಿನ ದೊರೆಯ ಬಗ್ಗೆ ಜನರಿಗೆ ಈಗಲೂ ಅಭಿಮಾನ ಇರುವುದು ಸತ್ಯ. ಹೀಗಾಗಿಯೇ ರಾಜಕೀಯವಾಗಿಯೂ ಈ ದೊರೆಗಳನ್ನು ಒಲಿಸುವ ಪ್ರಯತ್ನ ಜಾರಿಯಲ್ಲಿದೆ!

ಮಹಿಳಾ ಪ್ರಾಬಲ್ಯ

ಮೇಳ ನಡೆಯುವಲ್ಲಿ ಸುಮ್ಮನೆ ಕಣ್ಣು ಹಾಯಿಸಿದರೆ ಕೊಡು-ಕೊಳ್ಳುವಿಕೆಯಲ್ಲಿ ಮಹಿಳೆಯರ ಸಂಖ್ಯೆಯೇ ಹೆಚ್ಚು. ಇದಕ್ಕೆ ಮುಖ್ಯ ಕಾರಣಗಳು ಮೂರು. ಒಂದು, ಈ ಮೇಳವನ್ನು ಬರೀ ವ್ಯವಹಾರವನ್ನಾಗಿ ಅಲ್ಲ, ಬದಲಿಗೆ ಒಂದು ಸಂಪ್ರದಾಯವನ್ನಾಗಿ ನಡೆಸಿಕೊಂಡು ಬರಲಾಗಿದೆ. ಸಂಪ್ರದಾಯ ಯಾರೇ ರೂಪಿಸಿರಲಿ ಅದನ್ನು ತಲೆತಲಾಂತರವಾಗಿ ಮಕ್ಕಳಿಗೆ ಕಲಿಸಿ ಪಾಲಿಸುವವರು ಮಹಿಳೆಯರು. ಹೀಗಾಗಿ ಇದನ್ನು ಮಹಿಳೆಯರು ನಿಷ್ಠೆಯಿಂದ ನಡೆಸಿಕೊಂಡು ಬರುತ್ತಿದ್ದಾರೆ. ಎರಡು, ಇಲ್ಲಿ ಮಾರುವ ಉತ್ಪನ್ನಗಳಲ್ಲಿ ಬಹುಪಾಲು ಮಹಿಳೆಯರ ಪರಿಶ್ರಮದ ಫಲ. ಹೆಚ್ಚಿದ್ದನ್ನು ಕೊಟ್ಟು, ಸಂಸಾರ ನಿರ್ವಹಣೆಗೆ ಬೇಕಾದ್ದನ್ನು ಪಡೆಯಲು ಈ ಮೇಳ ಅವರಿಗೆ ಒಳ್ಳೆಯ ಅವಕಾಶ ಒದಗಿಸುತ್ತದೆ. ಮೂರನೆಯದ್ದು ಜನರೊಂದಿಗೆ ಬೆರೆಯುವ ಅವಕಾಶ. ಸದಾ ಮನೆ-ಮಕ್ಕಳು-ಕೆಲಸ ಎಂದು ದುಡಿಯುತ್ತಾ, ಮನರಂಜನೆಯಿಂದ ವಂಚಿತರಾದ ಮಹಿಳೆಯರಿಗೆ ಮೂರು ದಿನಗಳ ಕಾಲ ಸಿಗುವ ಸ್ವಾತಂತ್ರ್ಯ ಅಮೂಲ್ಯವಾದದ್ದು. ಆದ್ದರಿಂದ ವ್ಯಾಪಾರವಷ್ಟೇ ಅಲ್ಲ, ಜನಪದ ನೃತ್ಯ, ಸಂಗೀತ ಎಲ್ಲದರಲ್ಲಿಯೂ ಸಂಭ್ರಮದಿಂದ ಮಹಿಳೆಯರು ಪಾಲ್ಗೊಳ್ಳುತ್ತಾರೆ. ಹೀಗಾಗಿ ಈ ಮೇಳ ಅವರ ಪಾಲಿಗೆ ಎಲ್ಲಾ ಅರ್ಥದಲ್ಲಿಯೂ ಹಬ್ಬವೇ!

ಈ ವರ್ಷ ಕೋವಿಡ್ ಕಾರಣ ಈ ಮೇಳವನ್ನು ಸಾಂಕೇತಿಕವಾಗಿ ಕೇವಲ ನೂರೈವತ್ತು ಜನ ಸೇರಿ ನಡೆಸಿದರು. ಕ್ಯಾಶ್‌ಲೆಸ್ ವ್ಯವಹಾರದತ್ತ ಇಡೀ ಜಗತ್ತು ಹೊರಳುತ್ತಿರುವಾಗ ಈ ರೀತಿ ಕಾಸಿಲ್ಲದೆ ಪರಸ್ಪರ ಕೊಡುಕೊಳ್ಳುವಿಕೆಯ ಐದುನೂರು ವರ್ಷಗಳಷ್ಟು ಹಳೆಯದಾದ ಈ ಮೇಳ ಅಚ್ಚರಿ ಮೂಡಿಸುತ್ತದೆ. ಜತೆಗೆ ಬುಡಕಟ್ಟು ಜನಾಂಗದವರು ಒಗ್ಗೂಡಿ, ತಮ್ಮ ವಿಶಿಷ್ಟ ಆಚರಣೆ-ಪದ್ಧತಿಗಳನ್ನು ಇತರರಿಗೆ ತಿಳಿಸುವ ಪ್ರಮುಖ ಸಂದರ್ಭವೂ ಆಗಿದೆ.

ಜೋನ್‌ಬೀಲ್ ಮೇಳದ ಬಳಿಯ ಕೊಳದಲ್ಲಿ ಮೀನು ಹಿಡಿಯುವ ಸಂಭ್ರಮ

ರಜ ಮಜ ಮಜಕೂರ

• ಎಂ.ಎಸ್.ಪೂಜಾರ

ಟಾಪ್ 20 ಲೆಕ್ಕ ಮಾಡು ಮೋಜು ನೋಡು ಗುಣ ವಿಶೇಷ ಗುಣಾಕಾರಗಳು

1. 26816111785 X 2071723
   ಸ್ವಾರಸ್ಯ: ಉತ್ತರದಲ್ಲಿ ಹದಿನೇಳು 5ಗಳು ಬರುತ್ತವೆ.
2. 715 X 46 = 32890
   ಸ್ವಾರಸ್ಯ: ಗುಣ್ಯ ಗುಣಕ ಹಾಗೂ ಗುಣಲಬ್ದದಲ್ಲಿ 0–9 ಹತ್ತು ಅಂಕಿಗಳಿವೆ
3. 2799468 X 441
   ಸ್ವಾರಸ್ಯ: ಉತ್ತರದಲ್ಲಿ ಏರಿಕೆ – ಇಳಿಕೆ ಕ್ರಮವಿದೆ
4. 34227 X 36070
   ಸ್ವಾರಸ್ಯ: ಉತ್ತರದಲ್ಲಿ ಹತ್ತೂ ಅಂಕಿಗಳು ಒಮ್ಮೆ ಮಾತ್ರ ಬಂದಿವೆ
5. 12345679 X 66
   ಸ್ವಾರಸ್ಯ: ಉತ್ತರದಲ್ಲಿ 814 ಸಂಖ್ಯೆ ಮೂರು ಬಾರಿ ಬಂದಿದೆ.
6. 651 X 156 372 X 273
   ಸ್ವಾರಸ್ಯ: ಎರಡೂ ಲೆಕ್ಕಗಳಿಗೆ ಉತ್ತರ ಒಂದೇ.
7. 11011011 X 91
   ಸ್ವಾರಸ್ಯ: ಉತ್ತರವನ್ನು ಎಡದಿಂದಲಾದರೂ ಓದಿ, ಬಲದಿಂದಲಾದರೂ ಓದಿ.
8. 5214 X 23
   ಸ್ವಾರಸ್ಯ: ಜೋಡಿ ಅಂಕಿಗಳ ಉತ್ತರವಿದೆ.
9. 769230769231 X 13
   ಸ್ವಾರಸ್ಯ: ಮರಳಿ 13 ಉತ್ತರದಲ್ಲಿ ಕಾಣಿಸಿಕೊಂಡು ನಡುವೆ ಬರೀ ಸೊನ್ನೆಗಳೇ ಬಂದಿವೆ.
10. 84648 X 84648
    ಸ್ವಾರಸ್ಯ: ಉತ್ತರದಲ್ಲಿ 0–9 ಹತ್ತೂ ಅಂಕಿಗಳು ಬಂದಿವೆ.
11. 834 X 57
    ಸ್ವಾರಸ್ಯ: ಗುಣ್ಯ ಗುಣಕ ಅಂಕಿಗಳೇ ಮತ್ತೆ ಉತ್ತರದಲ್ಲಿ ಬಂದಿವೆ.
12. 3292181070 X 3
    ಸ್ವಾರಸ್ಯ: ಉತ್ತರದಲ್ಲಿ ಇಳಿಕೆ ಕ್ರಮ ಗಮನಿಸಿ
13. 666667 X 37
    ಸ್ವಾರಸ್ಯ: ಉತ್ತರದ ಅಂಕಿಗಳ ಸೌಂದರ್ಯ ಗಮನಿಸಿ
14. 798644 X 798644
    ಸ್ವಾರಸ್ಯ: ಉತ್ತರದಲ್ಲಿ ಕನ್ನಡಿಯ ಪ್ರತಿಬಿಂಬದಂತೆ ಅಂಕಿಗಳು ಕ್ರಮವಾಗಿವೆ.
15. 3333 X 3334
    ಸ್ವಾರಸ್ಯ: ನಾಲ್ಕು 1 ಹಾಗೂ ನಾಲ್ಕು 2 ಬಂದಿವೆ
16. 5757430 X 7
    ಸ್ವಾರಸ್ಯ: 40 30 20 10 ಕ್ರಮವಾಗಿ ಬಂದಿವೆ
17. 918881203 X 7
    ಸ್ವಾರಸ್ಯ: ಬಿಡಿ ಸ್ಥಾನದಿಂದ ಎಡಕ್ಕೆ ಅಂಕಿಗಳು ದುಪ್ಪಟ್ಟು ಆಗಿವೆ
18. 359563 X 7
    ಸ್ವಾರಸ್ಯ: ಬಿಡಿಸ್ಥಾನದಿಂದ ಸಂಖ್ಯೆಗಳು ವರ್ಗ ಸಂಖ್ಯೆಗಳಾಗಿವೆ
19. 133059 X 9
    ಸ್ವಾರಸ್ಯ: ಬಿಡಿಸ್ಥಾನದಿಂದ ಬೆಸ ಸಂಖ್ಯೆ ಸರಣಿ ಬಂದಿದೆ
20. 47603 X 7
    ಸ್ವಾರಸ್ಯ: ಬಿಡಿ ಸ್ಥಾನದಿಂದ 1 ಒಂದು ಬಾರಿ 2 ಎರಡು ಬಾರಿ ಬಂದಿವೆ.

ಸೂಚನೆ: ಇವುಗಳ ಸ್ವಾರಸ್ಯ ತಿಳಿಯಬೇಕಾದರೆ ಎಲ್ಲ ಲೆಕ್ಕಗಳನ್ನು ಮಾಡಿ ಆನಂದಿಸಿ.

ಡಿಸ್ಮ ಚಿತ್ರಕಲೆ ಕಥೆ ಗೀಜಗನ ಗೂಡು

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಇದು ಗೀಜಗ ಹಕ್ಕಿ. ನೇಯ್ಗೆ ಹಕ್ಕಿ ಎಂದೂ ಕರೆಯುತ್ತಾರೆ. ಇದು ಗೂಡುಕಟ್ಟುವ ವೈಖರಿಗೆ ಹೆಸರಾಗಿದೆ. ಸಾಮಾನ್ಯವಾಗಿ ಹುಲ್ಲುಗಾವಲು, ಕೃಷಿ, ಜಲ ಮೂಲ ಪ್ರದೇಶಗಳನ್ನು ನೋಡಿಕೊಂಡು ಅಪಾಯರಹಿತ ಜಾಗದಲ್ಲಿ ಗೂಡು ಕಟ್ಟುತ್ತದೆ

ಬತ್ತದ ಹುಲ್ಲಿನಿಂದ ಗೀಜಗ ಗೂಡು ಕಟ್ಟುತ್ತದೆ. ಅದರಲ್ಲಿ ತೂಗುಹಾಕುವ, ಮೊಟ್ಟೆಯಿಡುವ ಜಾಗ ಮತ್ತು ಉದ್ದವಾದ ಪ್ರವೇಶದ್ವಾರ ಎಂಬ ಮೂರು ಭಾಗಗಳಿವೆ. ಗೂಡು ನಿರ್ಮಾಣ ಕೆಲಸ ಗಂಡು ಹಕ್ಕಿಯದ್ದು

ಗೀಜಗದ ಗೂಡು ಹೂಜಿಯಂತೆ ಇಲ್ಲವೆ ಬಟ್ಟಿ ಇಳಿಸುವ ಪಾತ್ರೆಯಂತೆ ಇರುತ್ತದೆ. ನದಿ, ಕೆರೆ ನೀರಿನ ಮೇಲೆ ಬಾಗಿರುವ ಮರದ ರೆಂಬೆಗಳ, ಈಚಲುಗರಿ ತುದಿಯಲ್ಲಿ ಇಲ್ಲವೆ ನೀರಿನಲ್ಲಿ ಬೆಳೆಯುವ ಜೊಂಡಿನ ಮಧ್ಯೆ ಗೂಡನ್ನು ನಿರ್ಮಿಸುತ್ತದೆ

ಇಲ್ಲಿ ಗೂಡಿನೊಳಗೆ ಮೊಟ್ಟೆ ಇಟ್ಟಿರುವ ವಿಶಾಲ ಭಾಗ ಕಾಣಬಹುದು. ಗಂಡುಹಕ್ಕಿ ಗೂಡನ್ನು ಅರ್ಧ ನಿರ್ಮಿಸಿ ಹೆಣ್ಣಿಗೆ ತೋರಿಸುತ್ತದೆ. ಅದು ಒಪ್ಪಿದರೆ, ಗಂಡು ಮುಂದುವರಿದು ಗೂಡು ನಿರ್ಮಾಣ ಪೂರ್ಣಗೊಳಿಸುತ್ತದೆ

ಗೂಡು ಹೆಣ್ಣು ಹಕ್ಕಿಗೆ ಇಷ್ಟವಾಗದಿದ್ದಲ್ಲಿ ಗಂಡು ಆ ಗೂಡನ್ನು ಅಷ್ಟಕ್ಕೇ ಬಿಟ್ಟು ಮತ್ತೊಂದು ಗೂಡು ಕಟ್ಟಿ ಹೆಣ್ಣಿಗೆ ತೋರಿಸುತ್ತದೆ. ಹೀಗಾಗಿ ಅರೆನಿರ್ಮಿತ ಅನೇಕ ಗೂಡುಗಳು ನೇಯ್ಗೆ ಹಕ್ಕಿ ಗೂಡು ಮಾಡುವ ಸ್ಥಳಗಳಲ್ಲಿ ಕಂಡುಬರುತ್ತವೆ

ನಿಸರ್ಗ ಸಹಜ ಕೌಶಲ, ಕೌತುಕವನ್ನು ಜಗತ್ತಿಗೆ ತೋರ್ಪಡಿಸಿದೆ ಗೀಜಗನ ಗೂಡು. ಇದು ಪ್ರಕೃತಿಯ ಅದ್ಭುತ ಕಲಾವಂತಿಕೆಯೂ ಹೌದು. ಕಟ್ಟುವುದು ಅದೆಷ್ಟು ಕಷ್ಟ ಎನ್ನುವ ಪಾಠವೂ ಇಲ್ಲಿದೆ. ಗೀಜಗನ ಗೂಡು ಕಂಡಲ್ಲಿ ಹಾನಿಗೊಳಿಸದಿರಿ

ಪುಟಾಣಿ ಪದ್ಯ

ಬೇಸಿಗೆ ಬಂದಿತು ಬೇಸರ ತಂದಿತು
ಸೆಕೆಯೋ ಸೆಕೆ ಎಲ್ಲರಿಗೆ
ಶಾಲೆಗೆ ರಜ ಆಟದಿ ಮಜ
ಹಿಗ್ಗೋ ಹಿಗ್ಗು ಬಾಲರಿಗೆ

ಅಜ್ಜಿಯ ಮನೆಯಲಿ ಮಜ್ಜಿಗೆ
ಕುಡಿಯುವ
ಆಸೆಯು ಹೆಚ್ಚಿತು ಕೆಲವರಿಗೆ
ಕ್ರಿಕೆಟ್, ಕಬಡ್ಡಿ, ಚಿಣಿಪಿಣಿ ಆಟ
ಬಲುಖುಷಿ ನೋಡು ಹಲವರಿಗೆ

ಬಿಸಿಲಿನ ಬೇಗೆಗೆ ತಂಪಿನ ಆಸರೆ
ಅಜ್ಜಗೆ ಬೇವಿನ ಮರವು
ಅಜ್ಜನ ಕೈಯಲಿ ಹಿಡಿದಿಹ ಪತ್ರಿಕೆ
ಆಗಿದೆ ಅದುವೇ ಚಾಮರವು

ಹಣ್ಣು ಹಂಪಲ ಅಪ್ಪಗೆ ಬೇಕು
ತಪ್ಪದೆ ತರುವನು ಪೇಟೆಯಲಿ
ಅಜ್ಜಿಗೆ ಬೇಕು ಮಜ್ಜಿಗೆ ನುಚ್ಚು
ತನ್ನಯ ನಿತ್ಯದ ಊಟದಲಿ

ಅಣ್ಣಗೆ ಈಜಲು ತೋಟದ ಬಾವಿಯು
ತಣ್ಣನೆ ಅನುಭವ ನೀಡುವುದು
ಸಕ್ಕರೆ ಬೆರೆಸಿ ಲಿಂಬೆಯ ರಸಕೆ
ಅಕ್ಕನು ಪಾನಕ ಮಾಡುವಳು

ಬೇಸಿಕೆ ಸೆಕೆಯ ನೀಗಲು ಮಾನವ
ಹುಡುಕಿದನೊಂದು ಪ್ಯಾನು
ಗರಗರ ತಿರುಗುತ ಗಾಳಿಯ
ಉಗುಳುವ
ಅದುವೇ ಅಲ್ಲವೆ ಫ್ಯಾನು?

ಒಗಟು – ಗಾದೆ ನೆನಪಿಸಲು ಇವುಗಳಿಗೆ ಉತ್ತರಿಸಿ

A ಒಗಟುಗಳು

1 ಹೊಟ್ಟೆಗೆ ಕೈ ಹಾಕಿದರೆ ಬಾಯಿ ಬಿಡುತ್ತಾನೆ.
ಉತ್ತರ ________ (ಸುಳಿವು ಒಂದಕ್ಷರ 'ಬೀ')

2 ಹತ್ತುವಾಗ ಕೆಂಪು ಆರುವಾಗ ಕಪ್ಪು
ಉತ್ತರ ________ (ಸುಳಿವು ಒಂದಕ್ಷರ ದೀ–)

3 ನೀಲಕಾವಲಿ ಮೇಲೊಂದು ಬೆಳ್ಳಿ ರೊಟ್ಟಿ
ಉತ್ತರ ________ (ಸುಳಿವು ಅಕ್ಷರ ಚಂ –)

4 ಬಂಗಾರದ ಸರಳು ತಲೆ ಮೇಲೆ ಹರಳು ಬಾಯಲ್ಲಿ ಬೆರಳು
ಉತ್ತರ ________ (ಸುಳಿವು ಅಕ್ಷರ –ಉಂ–)

5 ಅಜ್ಜಿಗೆ ಮೈಯೆಲ್ಲಾ ಕಜ್ಜಿ
ಉತ್ತರ ________ (ಸುಳಿವು ಅಕ್ಷರ ಹಾ–)

B ಸುಳಿವು ನೋಡಿ ಗಾದೆ ಪೂರ್ಣಗೊಳಿಸಿ

1 ಯಾವುದರ ಮೇಲೆ ಬ್ರಹ್ಮಾಸ್ತ್ರ ಬಿಟ್ಟಂತೆ?
2 ಯಾವಾಗ ಕಂಡ ಬಾವಿಯಲ್ಲಿ ಹಗಲು ಬಿದ್ದಂತೆ?
3 ಎಲ್ಲಿಗೆ ಹೋದರೂ ಶನೀಶ್ವರನ ಕಾಟ ತಪ್ಪಲಿಲ್ಲ?
4 ಕುಳಿತು ಉಂಡರೆ ಏನು ಸಾಲುವುದಿಲ್ಲ?
5 ಯಾವುದು ಹಳ್ಳಕ್ಕೆ ಬಿದ್ದರೆ ಆಳಿಗೊಂದು ಕಲ್ಲು?

ಸರಿ ಉತ್ತರಗಳು ಮುಂದಿನ ವಾರ
ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ
majakoora@prajavani.co.in

ಮುಂಬೈ ಧಾರಣೆ

ಶೇಂಗಾ

7-5-2022

ಜಾವಾ 70/80(ಹೊಸ)	10300-10350
ಜಾವಾ 80/90(ಹೊಸ)	9600-9650
ದಪ್ಪ ಮಧ್ಯಪ್ರದೇಶ(ಹೊಸ)	11000-11050
ದಪ್ಪ ಗುಜರಾತ್(ಹೊಸ)	10050-10100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1640 (1640)
ಒಂದು ವಾರದ ಡೆಲಿವರಿ	1635 (1635)
ಸೋಯಾ ಕಚ್ಚಾ	1550 (1550)
ಪಾಮ್ ವಾರದ ಡೆಲಿವರಿ	1553 (1546)
ಸೂರ್ಯಕಾಂತಿ ಎಣ್ಣೆ ಕಚ್ಚಾ	1800 (1800)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,450 (51,450), ಬೆಳ್ಳಿ ಕೆ.ಜಿ
62,400 (62,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ
₹15500-18000
2ನೇ ದರ್ಜೆ
₹10000-15000

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹370
12 ಮೊಟ್ಟೆಗೆ ₹54
ಮೈಸೂರು
100 ಮೊಟ್ಟೆಗೆ ₹370

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1630 (1630)
ಸೋಯಾ (ರಿಫೈಂಡ್)	₹1570 (1565)
ಸೂರ್ಯಕಾಂತಿ (ರಿಫೈಂಡ್)	₹1870 (1870)
ಪಾಮೋಲಿನ್	₹1555 (1548)

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)
₹200-675
ದ್ವಿತಳಿ (ಬಿ.ವಿ)
₹250-680

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4 ₹169
ಆರ್‌ಎಸ್‌ಎಸ್-5 ₹163
ಗುಡ್ ಲಾಟ್ ₹159

ಕಚ್ಚಾ ತೈಲ: ಬ್ಯಾರಲ್‌ಗೆ 9 ಡಾಲರ್ ಹೆಚ್ಚಳ

ಬೆಂಗಳೂರು: ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಪೂರೈಕೆ ಸಮಸ್ಯೆ ಎದುರಾಗಿದೆ. ಇದರಿಂದಾಗಿ ತೈಲ ದರವು ನಿರಂತರವಾಗಿ ಹೆಚ್ಚಾಗುತ್ತಲೇ ಇದೆ.

ಮೇ 2 ರಿಂದ 6ರವರೆಗಿನ ಅವಧಿಯಲ್ಲಿ ಕಚ್ಚಾ ತೈಲ ದರವು ಪ್ರತಿ ಬ್ಯಾರಲ್‌ಗೆ 9 ಡಾಲರ್‌ಗಳಷ್ಟು ಹೆಚ್ಚಾಗಿದ್ದು, 113.3 ಡಾಲರ್‌ಗೆ ಏರಿಕೆ ಆಗಿದೆ.

ರಷ್ಯಾ–ಉಕ್ರೇನ್ ಸಂಘರ್ಷದಿಂದಾಗಿ ತೈಲ ಪೂರೈಕೆ ಸಮಸ್ಯೆ ಉಂಟಾಗಿರುವುದು ಹಾಗೂ ರಷ್ಯಾದ ಕಚ್ಚಾ ತೈಲದ ಮೇಲೆ ನಿಷೇಧ ಹೇರಲು ಐರೋಪ್ಯ ಒಕ್ಕೂಟ ಮುಂದಾಗಿರುವುದು ಜಾಗತಿಕ ಮಾರುಕಟ್ಟೆಯಲ್ಲಿ ತೈಲ ದರ ಹೆಚ್ಚಳ ಆಗುವಂತೆ ಮಾಡಿವೆ.

ವಿದೇಶಿ ವಿನಿಮಯ ಸಂಗ್ರಹ ಇಳಿಕೆ

ಬೆಂಗಳೂರು: ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ಏಪ್ರಿಲ್ 29ಕ್ಕೆ ಕೊನೆಗೊಂಡ ವಾರದಲ್ಲಿ 600 ಬಿಲಿಯನ್ ಡಾಲರ್‌ಗಿಂತ ಕೆಳಕ್ಕೆ ಇಳಿಕೆ ಕಂಡಿದೆ.

ಆರ್‌ಬಿಐ ಜಾಲತಾಣದಲ್ಲಿ ಇರುವ ಮಾಹಿತಿಯ ಪ್ರಕಾರ, ಏಪ್ರಿಲ್ 29ಕ್ಕೆ ಕೊನೆಗೊಂಡ ವಾರದಲ್ಲಿ ₹ 20,713 ಕೋಟಿ ಇಳಿಕೆ ಕಂಡು ₹ 45.68 ಲಕ್ಷ ಕೋಟಿಗೆ (597 ಬಿಲಿಯನ್ ಡಾಲರ್) ತಲುಪಿದೆ.

ವಿದೇಶಿ ವಿನಿಮಯ ಮೀಸಲು ಸಂಗ್ರಹ ಇಳಿಕೆ ಕಾಣಲು ರಷ್ಯಾ–ಉಕ್ರೇನ್ ಸಂಘರ್ಷ ಪ್ರಮುಖ ಕಾರಣವಾಗಿದೆ.

ಷೇರುಪೇಟೆ ಹೂಡಿಕೆದಾರರಿಗೆ ₹ 11.8 ಲಕ್ಷ ಕೋಟಿ ನಷ್ಟ

ಪ್ರಜಾವಾಣಿ ವಾರ್ತೆ

ವಿದೇಶಿ ಸಾಂಸ್ಥಿಕ ಬಂಡವಾಳ ಹೊರಹರಿವು (ಕೋಟಿಗಳಲ್ಲಿ)

ಬೆಂಗಳೂರು: ಮುಂಬೈ ಷೇರುಪೇಟೆಯ ವಾರದ ವಹಿವಾಟು ಕರಡಿ ಕುಣಿತಕ್ಕೆ ಒಳಗಾಗಿ ಶೇ 3.89ರಷ್ಟು ಕುಸಿತ ಕಂಡಿತು. ಇದರಿಂದಾಗಿ ಹೂಡಿಕೆದಾರರ ಸಂಪತ್ತು ಮೌಲ್ಯ ₹ 11.8 ಲಕ್ಷ ಕೋಟಿಗಳಷ್ಟು ಕರಗಿದೆ. ಷೇರುಪೇಟೆಯ ಒಟ್ಟಾರೆ ಮಾರುಕಟ್ಟೆ ಬಂಡವಾಳ ಮೌಲ್ಯ ₹ 255.17 ಲಕ್ಷ ಕೋಟಿಗೆ ಇಳಿಕೆ ಆಗಿದೆ.

ರಷ್ಯಾ–ಉಕ್ರೇನ್ ಬಿಕ್ಕಟ್ಟು, ಹಣದುಬ್ಬರ, ವಿದೇಶಿ ಬಂಡವಾಳ ಹೊರಹರಿವು, ವಿವಿಧ ಕೇಂದ್ರೀಯ ಬ್ಯಾಂಕ್‌ಗಳಿಂದ ಬಡ್ಡಿದರ ಏರಿಕೆ, ರೂಪಾಯಿ ಮೌಲ್ಯ ಇಳಿಕೆ ಹಾಗೂ ಕಚ್ಚಾ ತೈಲ ದರ ಏರಿಕೆಯ ಕಾರಣಗಳಿಂದಾಗಿ ದೇಶಿ ಷೇರುಪೇಟೆಗಳಲ್ಲಿ ನಕಾರಾತ್ಮಕ ವಹಿವಾಟು ನಡೆಯಿತು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

‘ಏಪ್ರಿಲ್ ತಿಂಗಳಿನಲ್ಲಿ ಜಿಎಸ್‌ಟಿ ಸಂಗ್ರಹ ಸಾರ್ವಕಾಲಿಕ ದಾಖಲೆ ಮಟ್ಟಕ್ಕೆ ತಲುಪಿದೆ. ಇದರ ಜೊತೆಗೆ ತಯಾರಿಕಾ ವಲಯದ ಬೆಳವಣಿಗೆ ಮತ್ತು ವಾಹನ ಮಾರಾಟದ ಅಂಕಿ–ಅಂಶಗಳು ದೇಶದ ಆರ್ಥಿಕತೆಯು ಚೇತರಿಕೆ ಕಂಡುಕೊಳ್ಳುತ್ತಿದೆ ಎನ್ನುವುದನ್ನು ಸೂಚಿಸುತ್ತಿವೆ’ ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

‘ಮುಂಬರುವ ದಿನಗಳಲ್ಲಿ, ಜಾಗತಿಕ ಮಟ್ಟದಲ್ಲಿ ಹಣದುಬ್ಬರದ ಅಂಕಿ–ಅಂಶವು ಷೇರುಪೇಟೆಯ ಮೇಲೆ ಹೆಚ್ಚು ಪರಿಣಾಮ ಉಂಟುಮಾಡಲಿದೆ. ಸದ್ಯದ ಪರಿಸ್ಥಿತಿಯಲ್ಲಿ, ಹಣದುಬ್ಬರದ ಪರಿಣಾಮಕ್ಕೆ ಒಳಗಾಗದೇ ಇರುವಂತಹ ಬ್ಯಾಂಕಿಂಗ್, ಐ.ಟಿ., ಔಷಧ ವಲಯಗಳ ಕಡೆಗೆ ಗಮನ ಹರಿಸುವುದು ಹೆಚ್ಚು ಸೂಕ್ತ ಎಂದು ಅವರು ಸಲಹೆ ನೀಡಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	500
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54000
ಚಿತ್ರದುರ್ಗ	
ಆಪಿ	49319-49729
ಬೆಟ್ಟೆ	38649-39099
ಕೆಂಪುಗೋಟು	32010-32479
ರಾಶಿ	48839-49269
ಪುತ್ತೂರು	
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	24899-32699
ಕೋಕ	23891-32909
ಹೊಸಚಾಲಿ	33989-39322
ಕೆಂಪುಗೋಟು	24699-26699
ರಾಶಿ	45899-48999
ತಟ್ಟಿಬೆಟ್ಟೆ	38099-44699
ಶಿರಸಿ	
ಬೆಟ್ಟೆ	31101-44699
ಬಿಳಿಗೋಟು	23199-32299
ಚಾಲಿ	29119-40772
ರಾಶಿ	35520-50709
ಕೊಬ್ಬರಿ ಧಾರಣೆ	
ಕನಿಷ್ಠ	15000
ಗರಿಷ್ಠ	16100
ಮಾದರಿ	15600
ಒಟ್ಟು ಆವಕ (ಕ್ವಿಂಟಲ್)	1378

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15900	15800	15800	210.45 ಸೆಂಟ್ಸ್
ಎಸಿ	8900	8500	8500	
ಆರ್‌ಪಿ	9500	9700	9900	ಲಂಡನ್
ಆರ್‌ಸಿ	4500	4150	4375	2083ಡಾಲರ್ಸ್

ಶ್ರದ್ಧಾಂಜಲಿ

22-05-1996 : 06-05-2022

ಶ್ರೀ ಎ.ಎಸ್. ಹರ್ಷವರ್ಧನ್, ವಕೀಲರು
(ಶ್ರೀ ಎ.ಎಂ. ಸುರೇಶ್‌ರೆಡ್ಡಿಯವರ ಪುತ್ರ)

ಇವರು ದಿನಾಂಕ : 06–05–2022ರಂದು ರಾತ್ರಿ 11–40 ಕ್ಕೆ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರ ಅಂತ್ಯ ಸಂಸ್ಕಾರವು ದಿನಾಂಕ : 08–05–2022ರಂದು ಬೆಳಿಗ್ಗೆ 9–00 ಗಂಟೆಗೆ ಅಗರ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಲಿದೆ.

ಇಂತಿ ದುಃಖತಪ್ತರು : ಶ್ರೀ ಎ.ಎಂ. ಸುರೇಶ್‌ರೆಡ್ಡಿ ಮತ್ತು ಕುಟುಂಬವರ್ಗದವರು
ನಂ. 189, 19ನೇ ಕ್ರಾಸ್, 27ನೇ ಮುಖ್ಯರಸ್ತೆ, 2ನೇ ಸೆಕ್ಟರ್,
ಹೆಚ್.ಎಸ್.ಆರ್. ಲೇಔಟ್, ಬೆಂಗಳೂರು–560102

1ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಶಿವಲಿಂಗಯ್ಯನವರು
ನಿಧನ: 9-5-2021
ನಿವೃತ್ತ ಸೂಪೆರಿಂಟೆಂಡೆಂಟ್ R.T.O

ನಿಮ್ಮೊಂದಿಗೆ ಕಳೆದ ಕ್ಷಣಗಳು ಅವಿಸ್ಮರಣೀಯ. ನೀವು ದೈಹಿಕವಾಗಿ ನಮ್ಮೊಂದಿಗಿಲ್ಲ ಆದರೆ ಬಾಹ್ಯವಾಗಿ ನಮ್ಮೊಂದಿಗೆ ಸದಾ ಇರುವಿರಿ.

ಶ್ರದ್ಧಾಂಜಲಿ ಕೋರುವ ದುಃಖತಪ್ತ:
ಕುಟುಂಬದವರು

LOOKING TO BUILD, BUY OR SELL A PROPERTY
Please refer Classifieds on Sunday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000- 21000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

ಕವಿ ಲಾಜಿಸ್ಟಿಕ್ಸ್ ಬೆಂಗಳೂರು ಹೈದರಾಬಾದ್ ಮಾರ್ಗದಲ್ಲಿ ಚಲಾಯಿಸಲು ಡ್ರೈವರ್ಸ್ ಬೇಕಾಗಿದ್ದಾರೆ, ಹೆವಿ ಡ್ರೈವಿಂಗ್ ಲೈಸೆನ್ಸ್ ನೊಂದಿಗೆ ನಂ.4/1, 2ನೇ ಮುಖ್ಯ ರಸ್ತೆ, ಶ್ರೀರಾಂಪುರಂ, ಬೆಂಗಳೂರು: 9738421001, 9886683188

General

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಬಳಿ ಇರುವ ಹಾಸ್ಪೆಟ್ಲಾಗಿಸೌತ್ ಇಂಡಿಯನ್ ವೆಜ್ / ನಾನ್ ವೆಜ್ ಕುಕ್‌ಗಳುತಕ್ಷಣ ಬೇಕಾಗಿದ್ದಾರೆ. ಆಕರ್ಷಕ ಸಂಬಳ.ಸಂಪರ್ಕಿಸಿ: 9845618105, 9900098105ಇ-ಮೇಲ್: thomas.george575@gmail.com

ತಕ್ಷಣ ಮಹಿಳಾ ಟೆಲಿಕಾಲರ್ ಬೇಕಾಗಿದ್ದಾರೆ, ವಿದ್ಯಾರ್ಹತೆ: 7th,10th,PUC or any Degree. Pass/Fail, ಊಟ ವಸತಿಯೊಂದಿಗೆ ಸಂಬಳ: 10,000ರಿಂದ 22,500ವರೆಗೆ ನೀಡಲಾಗುತ್ತದೆ. Mob: 9743424120, 7483426035

Hotel

ಚಿಕ್ಕೂಸ್ ಬಿರಿಯಾನಿ ಕಾರ್ನರ್ ಬೆಂಗಳೂರು
ಬೇಕಾಗಿದ್ದಾರೆ
ಚಿಕ್ಕೂಸ್ ಬಿರಿಯಾನಿ ಕಾರ್ನರ್ ಹೋಟೆಲ್‌ಗೆ ನಾನ್‌ವೆಜ್ ಅಡುಗೆ ಮಾಡಲು ಭಟ್ಟರು ಬೇಕಾಗಿದ್ದಾರೆ. ಉಚಿತ ಊಟ ವಸತಿ ಸೌಲಭ್ಯ ಮತ್ತು ಆಕರ್ಷಕ ಸಂಬಳ (20 ರಿಂದ 30 ಸಾವಿರ)
Nonveg Cook Needed
Contact: 9945000234

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲುಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

Wanted

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ot 17800/-68000/- 9538811223 9538811104

WANTED
Wanted Principal for a Nursing College in Hyderabad city, family accommodation available. M.Sc (Nursing) with 15 yrs. Experience, Female Candidate Preferred. Phone : 9246213046 email:prasannalaxmib7@gmail.com

ಸುವರ್ಣಾವಕಾಶ! ಹೊಸ ಚಲನಚಿತ್ರಕ್ಕೆ ನಾಯಕ, ನಾಯಕಿ ಪಾತ್ರಕ್ಕೆ ಕಲಾವಿದರು ಬೇಕಾಗಿದ್ದಾರೆ. ವಯಸ್ಸು 21 ರಿಂದ 26. ನೇರ ಅವಕಾಶ ತಕ್ಷಣವೇ ಸಂಪರ್ಕಿಸಿ 9731648090, 6361905091

ಎಲೆಕ್ಟ್ರಿಷಿಯನ್ಸ್ ಹೆಲ್ಪರ್ಸ್ ಚಾಲಕರು 407/909 ಬೊಲೆರೊಪಿಕ್ (ಎಸಿ ಸಹಿತ) ಮೈಕ್ ಸೆಟ್,ಸೀರಿಯಲ್ ಸೆಟ್ ಜೆನರೇಟರ್ ಆಪರೇಟರ್ಸ್ ತಕ್ಷಣ ಬೇಕಾಗಿದ್ದಾರೆ.ಅನುಭವಸ್ಥರಿಗೆ ಮೊದಲ ಆದ್ಯತೆ.ಸಂಪರ್ಕಿಸಿ: 9743412669

ಬೇಕಾಗಿದ್ದಾರೆ. ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ಸಂಪರ್ಕಿಸಿ: 7019132200, 080-25300714

ಬೇಕಾಗಿದ್ದಾರೆ: ಅಟೆಂಡರ್, ಸೆಕ್ಯೂರಿಟೀ ಗಾರ್ಡ್‌ಗಳು, ಆಯಾಗಳು, ಸಂಪರ್ಕಿಸಿ: ಕ್ಯಾಮ್ಲಿನ್ ಆಂಗ್ಲ ಶಾಲೆ, 6ನೇ 'ಸಿ' ಮೇನ್, 4ನೇ ಕ್ರಾಸ್, ಹಂಪಿನಗರ ಬೆಂಗಳೂರು.

ಹೆಸರಘಟ್ಟ ಮುಖ್ಯ ರಸ್ತೆ ಬಾಗಲಗುಂಟೆಯಲ್ಲಿರುವ ಶ್ರೀ ಹರಿ ಪಿಜಿ ಗೆ ಹೌಸ್ ಕೀಪಿಂಗ್ ಕೆಲಸ ಮಾಡುವ ಪುರುಷ ಕೆಲಸದವರು ಬೇಕಾಗಿದ್ದಾರೆ. Contact: 8296983936

Multiple Vacancy

WANTED
• BILLING/CASHIER
• DATA ENTRY
• COUNTER SALES
(Salary + Food & Accommodation)
For Leading HYPERMARKET GROUP BANGALORE
Send resume to : hrthebigmarket@gmail.com or Whatsapp: 9448983000

ಪ್ರಜಾವಾಣಿ
EFFECTIVE FROM May 1, 2022
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	70	100	80	135

CD Per Sqcm	Single Col	Double Col	Multi Col
	480	450	475

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
condition apply*
dhclassifieds@deccanherald.co.in www.dhclassifieds.com

ರಿಯಲ್ ಎಸ್ಟೇಟ್ ಸೆಲ್ಲಿಂಗ್

Rajarajeshwari Nagar

ನಗರದ ಬಾಗದಲ್ಲಿರುವ ರಾಜರಾಜೇಶ್ವರಿ ನಗರದ ಗಿರಿದಾಮ ಬಡಾವಣೆ ಗಟ್ಟಿಗೆರೆಯಲ್ಲಿ ನೂತನವಾಗಿ ನಿರ್ಮಾಣ ಮಾಡಿರುವ 2 ಬಿ.ಹೆಚ್. ಕೆ ಪ್ಲಾಟ್ ಗಳು ಮಾರಾಟಕ್ಕಿವೆ.ಅನುಕೂಲಕರ ವ್ಯವಸ್ಥೆಯೊಂದಿಗೆ ತಕ್ಷಣಕ್ಕೆ ಗೃಹ ಪ್ರವೇಶಕ್ಕೆ ಯೋಗ್ಯವಾಗಿದೆ.ಸಂಪರ್ಕಿಸಿ: 9743412669

Farm House/ Land/ Resorts

Out-Station

POULTRY FOR SALE IN DAVANGERE: 60000 layers poultry with all facilities, full automation and areca plantations in beautiful location for Sale. Ph:- 8660574131

Sites

Out-Station

23X40, N.A. Layout Plot 15Lacs (Neg) Peeran Colony, Opp LIC Building Road Narayanpur X Road, Near Bus Stand Basvakalyan 9393847551/6300149730

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ವೈವಾಹಿಕ

Brides Wanted

Brahmin

BRAHMIN FAMILY is looking for a suitable match for their 43 year old B.E/ Data Scientist Son for re-marraige.Marital Status no Bar (080-69144008)

NEVER married Brahmin Doctor Cardiologist 50 yrs 5'4 Hyderabad seeks unmarried Brahmin bride 39- 45 yrs 7013810359.

Kannada

GAWDA FAMILY invites an alliance for the marriage of their 35 year old son, working as a Central Govt. Employee in a Prominent Designation, Father Retired Finance Professional, Mother High School Vice Principal(080-69103046)

Grooms Wanted

Kannada

WE INVITE an educated, cultured alliance for our 29 year old Mudaliyar daughter, MCA/Working as a Business Analyst, Father Advocate, Mother Consultant (080-69144008)

LINGAYATH FAMILY is looking for a suitable match for marriage of their beautiful, cultured 28 year old daughter M. Tech/ Software Professional (080-69103046)

ವ್ಯಾಪಾರ

Business Offers

Business For Sale

PETROL BUNK including Land, 18000 Sq. Ft. for sale at Mysuru. Contact: 9901460603, 7795792928, 9880903369, 8867901675

ಸೌಂದರ್ಯ-ಆರೋಗ್ಯ

GYMS / Fitness Centres

SHAPE YOUR Body. OnlineWeight Loss Program(10,21,30) Days Contact: 9748115383

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರವಾಸ

Travel

03.06.2022 6ದಿನಗಳ ದಕ್ಷಿಣಕನ್ನಡ ಪ್ರವಾಸ 27 ಕ್ಷೇತ್ರಗಳು: ಸಾಗರ ಸಿಗಂದೂರು ಇಕ್ಕೇರಿ, ಶ್ರೀಧರಆಶ್ರಮ ಕೆಳದಿ,ಬನವಾಸಿ,ಶಿರಸಿ ಮಾರಿಕಾಂಬ ಸಹಸ್ರಲಿಂಗ ಯಾಣ,ಗೋಕರ್ಣ ಮುರುಡೇಶ್ವರ ಕೊಲ್ಲೂರು ಆನೆಗುಡ್ಡ,ಮಲ್ಪೆ ಉಡುಪಿಕೃಷ್ಣ ಅಂಬಲಪಾಡಿ ಪೆರಡೂರು,ಕಟೀಲು ಮಂಗಳಾದೇವಿ ಕದ್ರಿ ಮಂಜುನಾಥ ಗೋಕರ್ಣನಾಥೇಶ್ವರ ಕುಕ್ಕೆಸುಬ್ರಮಣ್ಯ ಧರ್ಮಸ್ಥಳ ಶೃಂಗೇರಿ ಬಾಳೆಹೊನ್ನುರು ಕಳಸಾ,ಹೊರನಾಡು ಶ್ರೀಮಲ್ಲಿಕಾರ್ಜುನ ಟ್ರಾವಲ್ಸ್ ಬೆಂಗಳೂರು.40. 9880847001 9342848791

ವಿಮಾನದಲ್ಲಿ 14.06.2022 7ದಿನಗಳು ಕಾಶಿ, ಆಯೋಧ್ಯ, ನೈಮಿಷ್ಯಾರಣ್ಯ,. 18.05.2022 5ದಿನಗಳು ರಾಮೇಶ್ವರಂ, ಕನ್ಯಾಕುಮಾರಿ. ಆರ್.ಗಾಂಧಿ ಟೂರ್ಸ್ (ರಿ) 9902433500/ 9945445809

ಸಮಾಜಸೇವೆ

Old Age Home

ಉದ್ಯೋಗಾವಕಾಶ ತಕ್ಷಣ ಬೇಕಾಗಿದ್ದಾರೆ.ಹೋಂ ನರ್ಸ್ ಕೆಲಸ ವಯಸ್ಸಾದವರನ್ನು,ವೃದ್ಧರನ್ನು ನೋಡಿಕೊಳ್ಳಲು ಯುವತಿಯರು, ಮಹಿಳೆಯರು,ಯುವಕರು ತಕ್ಷಣ ಬೇಕಾಗಿದ್ದಾರೆ.ಊಟ, ವಸತಿ ಉಚಿತ ಸಂಬಳ 13,000-16,000/- ಸಂ. 8123699421, 8880954221

ವೈಯಕ್ತಿಕ

Change of Name

ನಾನು, ಶ್ವೇಟ ಕುಮಾರಿ D/o ಶ್ಯಾಮ್ ಜೀತ್ ದ್ವಿವೇದಿ W/o ರಾಹುಲ್ ಕುಮಾರ್ ಪಾಂಡೆ, R/o: C/O ರಾಹುಲ್ ಕುಮಾರ್ ಪಾಂಡೆ, ಫ್ಲಾಟ್305, ಮೂರನೇಮಹಡಿ, ಪೃಥ್ವಿ ಅಪಾರ್ಟ್‌ಮೆಂಟ್, 13ನೇ ಕ್ರಾಸ್, ಕಾವೇರಿಲೇಔಟ್ GM ಪಾಳ್ಯರಸ್ತೆ, ಹೊಸ ತಿಪ್ಪಸಂದ್ರ ಪೋಸ್ಟ್, ಬೆಂಗಳೂರು- 560075, ಎಲ್ಲಾ ಉದ್ದೇಶಗಳಿಗಾಗಿ ನನ್ನ ಹೆಸರನ್ನು ಶ್ವೇಟ ಕುಮಾರಿಯಿಂದ ಶ್ವೇತಾ ಪಾಂಡೆ ಎಂದು ಬದಲಾಯಿಸಿದೆ.

WEEKEND CORNER ಕ್ಲಾಸಿಫೈಡ್ಸ್

ಯೋಗ ಹುಟ್ಟಿನಲ್ಲೇ ಬರುವುದು ಭಾಗ–1

ರಾಮಸ್ವಾಮಿ

ಅದೃಷ್ಟವೇ ಬೇರೆ, ಯೋಗವೇ ಬೇರೆ, ಮಕ್ಕಳ ತಂದೆತಾಯಂದಿರು ತಮ್ಮ ಜೀವನದಲ್ಲಿ ಧರ್ಮ, ನ್ಯಾಯ ಇತ್ಯಾಧಿ ಒಳ್ಳೆಯ ಕೆಲಸ ಮಾಡಿದ್ದರೆ ತಮ್ಮ ತಮ್ಮ ಮಕ್ಕಳು ನಿಜಕ್ಕೂ ಒಳ್ಳೇಯೋಗದಲ್ಲಿ ಜನಿಸುತ್ತಾರಾರೆ. ಯೋಗಕ್ಕೆ ಜಾತಿ, ಮತ ಭೇದವಿಲ್ಲ. ಬಡವ ಶ್ರೀಮಂತನೆಂಬ ಅಂತರವಿಲ್ಲ. ಒಳ್ಳೆ ಜನ್ಮ ನಕ್ಷತ್ರ ಅಥವಾ ರಾಶಿಯ ಕಾರಣವೂ ಇಲ್ಲ. ವಾಲ್ಮೀಕಿ ವ್ಯಾಸರು, ಕನಕದಾಸರು, ಶ್ರೀ ಕೃಷ್ಣ, ಶ್ರೀರಾಮ ಇವರಾರು ಬ್ರಾಹ್ಮಣರಲ್ಲ. ಆದರೇ ಅವರೆಲ್ಲ ಒಳ್ಳೇ ಯೋಗ ಪುರುಷರು. ಜಾತಕದಲ್ಲಿ ನಕ್ಷತ್ರ ಪ್ರಕಾರ 27 ಯೋಗಗಳಿವೆ. ಅದರಲ್ಲಿ 7 ಯೋಗಗಳು ನಿಷ್ಪ್ರಯೋಜಕ ಯೋಗ 1 ಅತಿಗಂಡ–ಯೋಗ 2 ಶುಲಯೋಗ 3 ಗಂಡಯೋಗ 4. ವ್ಯಾಘಾತ 5 ವ್ಯತಿಘಾತ ಯೋಗ 6 ಫರಿಘಯೋಗ 7 ವೈದ್ಯತಿಯೋಗದಲ್ಲಿ ಮಕ್ಕಳು ಜನಿಸಿದರೆ ಏನಾದರೂ ತೊಂದರೆ ಖಂಡಿತ. ಇದಕ್ಕೆ ಜನ್ಮ ಕೊಟ್ಟ ತಂದೆ–ತಾಯಿಯೇ ಕಾರಣ ತಂದೆಯಿಂದಾದರೆ ಮಗನಿಗೂ ತಾಯಿಯ ಪಾಪದಿಂದಾದರೆ ಮಗಳಿಗೂ ಕೆಟ್ಟ ಯೋಗ ಪ್ರಾಪ್ತವಾಗಬಹುದು. ಉದಾ:– ಒಬ್ಬ ತಾಯಿ ವೃಷಭ ಲಗ್ನ, ಅಶ್ವಿನಿ ನಕ್ಷತ್ರ 1ನೇ ಪಾದವಾಗಿದ್ದು ಮೇಷ ರಾಶಿಯಲ್ಲಿ ಜನಿಸಿ ಆಕೆಯ ಯೋಗ ವ್ಯಾಘಾತಯೋಗವಾಗಿತ್ತು ಆಕೆಯ ತಾಯಿಯಿಂದಲೆ ಶಾಪಪಡೆದಿದ್ದಳು. ಮುಂದೆ ಆಕೆ ದೊಡ್ಡವಳಾಗಿ ವಿವಾಹವಾದ ನಾಲ್ಕೇವರ್ಷ ಒಂದು ಗಂಡು, ಒಂದು ಹೆಣ್ಣು ಮಗುವಿಗೆ ಜನ್ಮಕೊಟ್ಟು ವಿಧವೆಯಾದಳು. 16–17 ವರ್ಷದ ಮಕ್ಕಳಿದ್ದರೂ ತನ್ನ ನಡತೆ, ಸ್ವಭಾವ ಬಿಟ್ಟಿಲ್ಲ, ಈಕೆ ಡಾಂಬಿಕಳು ಉಪಕಾರ ಕೇಡಿ, ಪರರನ್ನು ನಿಂದಿಸುವಳು. ಆನೇಕರಿಗೆ ಅನ್ಯಾಯ ಮಾಡಿದ್ದಾಳೆ, ಈಕೆಯ ಹೊಟ್ಟೆಯಲ್ಲಿ ಜನಿಸಿದ ಎರಡೂ ಮಕ್ಕಳಿಗೆ “ಸರ್ಪ”ದೋಷವಿದೆ, ಆದರೂ ಕೂಡಾ ಅವಿದ್ಯಾವಂತರೂ ಇವರೂ ಜನಿಸಿದ ಯೋಗವು ವ್ಯಾಘಾತ. ಇದು ಒಂದು ಕೆಟ್ಟಯೋಗ ಮಕ್ಕಳು ಒಳ್ಳೇ ಯೋಗದಲ್ಲಿ ಜನಿಸಬೇಕಾದೆ ತಂದೆ–ತಾಯಿ, ತಾತಾ–ಅಜ್ಜಿಯ ಒಳ್ಳೇ ಸಂಸ್ಕಾರವಂತರಾಗಿ ದೈವ ಜ್ಞಾನ ತಿಳಿಯಬೇಕು. ವಿನಾಕಾರಣ ನಾವೇನು ಪಾಪ ಮಾಡಿಲ್ಲ ನಮಗ್ಯಾಕೆ ಇಂಥಾ ಮಕ್ಕಳು ಎಂದು ಸುಮ್ಮನೆ ನೊಂದುಕೊಂಡರೆ ಸಾಲದು. ಒಮ್ಮೆ ಭೇಟಿ ಕೊಟ್ಟು ವಿವರ ತಿಳಿಯಿರಿ.

ಸಂಪರ್ಕಿಸಿ: ರಾಮಸ್ವಾಮಿ, ಜ್ಯೋತಿಷ್ಯಾಲಯರು #1176/1, 36ನೇ ಮುಖ್ಯರಸ್ತೆ, ಪೂರ್ಣಪ್ರಜ್ಞನಗರ (ಬಡಾವಣೆ) ಉತ್ತರಹಳ್ಳಿ, ಬೆಂಗಳೂರು – 560 061
ಮೊ: 9448243757, 9481643757

ಆತ್ಮ ಮತ್ತು ಮನುಷ್ಯನ ದೇಹ ಭಾಗ–2

ರಾಮಸ್ವಾಮಿ

ಭಕ್ತಿ ಎಂದರೆ ತಂದೆ–ತಾಯಿ, ಹಿರಿಯರನ್ನು, ಗುರುಗಳನ್ನು ಆಚಾರ್ಯರನ್ನು ಭವಿಷ್ಯ ತಿಳಿಸುವ ಜ್ಯೋತಿಷ್ಯರಿಗೆ ನಮ್ರತೆ ತಿಳಿಸುವುದೇ ಜೀವನದ ಗುರಿ ಮನಸ್ಸಿನಲ್ಲಿ ಮಾಡುವ ಉತ್ತಮ ವಿಚಾರವೇ ಸಂಕಲ್ಪ ಇಲ್ಲಿ ಗಮನಿಸಬೇಕಾದ ದುಷ್ಟ ವಿಚಾರಗಳಲ್ಲ. ವಿಕಲ್ಪ ಎಂದರೆ ಕೆಟ್ಟ ವಿಚಾರ, ಆತ್ಮ ಇಲ್ಲದ ದೇಹ ಯಾವುದೂ ಇಲ್ಲ. ಆತ್ಮವಿಲ್ಲದಿದ್ದರ ದೇಹಕ್ಕೇನು ಕೆಲಸ ದೇಹ ಪರಮಾತ್ಮನಿಂದ ಆರ್ಶೀವದಿಸಲ್ಪಟ್ಟದ್ದು. ಉಸಿರು ನಿಂತ ತಕ್ಷಣ ಆತ್ಮ ಐದು ಸೆಕೆಂಡ್ ಕೂಡಾ ನಿಲ್ಲದೆ ದೇಹದಿಂದ ಬೇರ್ಪಡುತ್ತದೆ. ಆತ್ಮಕ್ಕೆ ಚೆನ್ನಾಗಿ ಗೊತ್ತು ನಾನು ದೇಹದಲ್ಲೆ ಇದ್ದರೆ ನನ್ನನ್ನು ಸುಟ್ಟು ಹಾಕುತ್ತಾರೆಂದು. ಅದಕ್ಕೆ ಹೇಳುವುದು ಹುಟ್ಟಿದ ಜೀವಕ್ಕೆ (ಜನನವಾದಾಗ) ಇರುವ ಸಂತೋಷ, ಸಡಗರ, ಆನಂದ, ಸತ್ತದೇಹಕ್ಕೆ ಇರುವುದಿಲ್ಲ ಎಲ್ಲವೂ ವಿರುದ್ದವಾಗಿ ಮೌನ, ವ್ಯಸನ, ದುಃಖ ಇತ್ಯಾದಿ ಪ್ರಾಪ್ತವಾಗುತ್ತದೆ ಮರಣದ ವಿಚಾರ ನಮಗೆ ತಿಳಿಯದು, ಆದರೆ ಪ್ರತಿ ಮಾನವ ತನ್ನ ಜೀವನದ ವಿಚಾರವನ್ನು ಜ್ಯೋತಿಷ್ಯರಿಂದ ಸ್ಪಷ್ಟವಾಗಿ ತಿಳಿಯುವುದರಿಂದ ಆಯಾ ಜಾತಕರಿಗೆ ಹೆಚ್ಚು ಹೆಚ್ಚು ಲಾಭವಾಗುತ್ತದೆ. ಅವರವರ ತಂದೆ ತಾಯಿಗೆ ತಿಳಿದೋ ತಿಳಿಯದೋ ಹುಟ್ಟುವ ಮಕ್ಕಳಲ್ಲಿ ಒಳ್ಳೆಯ ಅಥವಾ ಕೆಟ್ಟಯೋಗವಿರಬಹುದು. ಇದ್ಯಾವುದನ್ನು ತಿಳಿಯದ ತಂದೆ ತಾಯಿ, ಮಕ್ಕಳು 10–15 ವರ್ಷದಲ್ಲಿ ಅವರ ವರ್ತನೆ ದುಷ್ಟ ಬುದ್ಧಿ, ಕೋಪ ಇತ್ಯಾದಿ ಗುಣಗಳಿದ್ದರೆ ಮುಂದೊಂದು ದಿನ ಅವನು ಧುರ್ಯೋಧನನಾಗುತ್ತಾನೆ ವಿನಃ ಧರ್ಮರಾಯನಾಗಲ್ಲ ಆತನ ಜನ್ಮ ಲಗ್ನ ಯಾವುದೇ ಆಗಲಿ, ಉದಾ: ಬಾಲಕ/ಬಾಲಕಿ ಕುಂಭಲಗ್ನದಲ್ಲಿ ಜನಿಸಿದ್ದು ಅದರ ಹಿಂದಿನ ರಾಶಿ ಮಕರದಲ್ಲಿ ಸೂರ್ಯ ಅಥವಾ ಚಂದ್ರನಿದ್ದರೆ, ಕಂಡಿತವಾಗಿ ತಂದೆ ಅಥವಾ ತಾಯಿಗೆ ಕೇಡಾಗುತ್ತದೆ ಅಥವಾ ರೋಗಗ್ರಸ್ಥನಾಗುತ್ತಾನೆ. ಇನ್ನೊಂದು ವಿಚಾರ ಜನ್ಮ ಕುಂಡಲಿಯಲ್ಲಿ ರಾಹೂ–ಕೇತುಗಳ ಮಧ್ಯೆ ಎಲ್ಲಾ ಏಳು ಗ್ರಹ ಬಂದರೆ ಜಾತಕರಿಗೆ ರಾಹೂ ಕಾಳ ಸರ್ಪ ಅಥವಾ ಕೇತುಗ್ರಸ್ತ ಕಾಳ ಸರ್ಪ ದೋಷ ಉಂಟಾಗಿ ಜಾತಕರು ಜೀವನದುದ್ದಕ್ಕೂ ಕಷ್ಟ, ನಷ್ಟ, ದುಃಖ ಅನುಭವಿಸಬೇಕಾಗುತ್ತದೆ, ಇವೆಲ್ಲವನ್ನು ನಾವು ಮುಂಚೆಯೇ ನಿಮಗೆ ತಿಳಿಸಿ ಪರಿಹಾರವನ್ನು ಮಾಡಿಕೊಡುತ್ತೇವೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9448243757.

ಸಂಪರ್ಕಿಸಿ: ರಾಮಸ್ವಾಮಿ, ಜ್ಯೋತಿಷ್ಯಾಲಯರು #1176/1, 36ನೇ ಮುಖ್ಯರಸ್ತೆ, ಪೂರ್ಣಪ್ರಜ್ಞನಗರ (ಬಡಾವಣೆ) ಉತ್ತರಹಳ್ಳಿ, ಬೆಂಗಳೂರು – 560 061
ಮೊ: 9448243757, 9481643757

LAURUS ACADEMY
LEARNERS TO LEADERS
A PIONEER IN NEET, JEE, K-CET, KVPY COACHING
ZENITH +
K-CET - CRASH COURSE PCMB/PCM/PCB
11th May 2022 to 17th June 2022
NEET & JEE - CRASH COURSE
20th May 2022 to 20th June 2022

- Record of transforming 2000+ student's careers as doctors & engineers in just 6 years
- COMMON MAN'S TRUSTED CHOICE
- SUCCESS IS OUR MISSION
- GREAT OPPORTUNITY TO REALIZE YOUR DREAMS
- Best well experienced senior faculty team
- Personal monitoring & guidance through the course
- High quality study material
- SEPARATE HYGIENIC HOSTELS FOR BOYS & GIRLS
- Instant doubt clearing sessions with lot of practice tests
- Coaching & foundation for NEET, JEE, K-CET, KVPY

Smart choice for your Goal
Admissions are open LIMITED SEATS
33/1, Ground Floor, Bangalore Institutions, Byrathi Extension, Hennur Bagalur Main Road, Kothanur Post, Bangalore - 560077
+91 8618761644 / 9110804960 / 6363835520

ಸ್ಪರ್ಧಾಮಿತ್ರ ACADEMY
IAS / KAS Prelims & Mains Exam
From May 9th Art & Culture Class
By: Srinivasa Rao (Hyderabad Faculty)
LIMITED SEATS ONLY
ADMISSION OPEN
Near Attigupppe Metro Station, opp. Maruti Medicals (338 Pillar) Vijayanagar, Bengaluru - 40.
9535111166 / 9535111199

ಪ್ರವಾಸ
24.5.2022 ರಿಂದ 6 ದಿನಗಳು, ರಾಮೇಶ್ವರ– ಕನ್ಯಾಕುಮಾರಿ ಅಲಿಪ್ಪಿ ಬೋಟಿಂಗ್, ತ್ರಿವೇಂದ್ರಂ, ಕೋವಲಂ ಬೀಚ್, ಗುರುವಾಯೂರು.
26.5.2022 ರಿಂದ 4 ದಿನಗಳು ಧರ್ಮಸ್ಥಳ, ಮುರುಡೇಶ್ವರ, ಹೊರನಾಡು, ಕೊಲ್ಲೂರು, ಸಿಗಂದೂರು, ಕುಕ್ಕೆಸುಬ್ರಮಣ್ಯ.
27.5.2022 ರಿಂದ 3 ದಿನಗಳು ಊಟಿ, ಇಶಾ ಫೌಂಡೇಶನ್, ಕುಡುಮುಡಿ, ಪಳನಿ, ಮರದಮಲೈ. 8.6.2022 ರಿಂದ 10 ದಿನ ವೈಷ್ಣವಿದೇವಿ, ಕುಲುಮನಾಲಿ, ದೆಹಲಿ, ಸಿಮ್ಲಾ, ವಾಘಬಾರ್ಡರ್, ಅಮೃತಸರ್.
8.7.2022 ರಿಂದ 12 ದಿನ ಛಾರದಾಮ ಪ್ರವಾಸ. ಕೇದಾರನಾಥ, ಗಂಗೋತ್ರಿ, ಬದರಿನಾಥ್, ಯಮುನೋತ್ರಿ, ಹರಿದ್ವಾರ, ದೆಹಲಿ.
ಶ್ರೀಗುರುರಾಜ ಟ್ರಾವಲ್ಸ್ ಕೋಲಾರ
9900124333, 9611082432, 9611082432

ಭವಿಷ್ಯ

Astrology

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

★||ವಶೀಕರಣ ಸ್ಪೆಷಲಿಸ್ಟ್||★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ, ಮಾತನಾಡುವ ಮೂಲಕ, ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9900511008"

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ಪ್ರವಾಸ

Pilgrimage Tours

ಶ್ರೀಸಾಯಿ ಟೂರ್ಸ್& ಟ್ರಾವೆಲ್ಸ್. ಚಾರ್ಧಾಮ್ ಯಾತ್ರಾ1206222. ಬದ್ರಿನಾಥ್, ಯಮುನೋತ್ರಿ, ಗಂಗೋತ್ರಿ, ಕೇದಾರನಾಥ, ಇತ್ಯಾದಿ. ಅಮರನಾಥ ಯಾತ್ರೆ. ಶಿವು: 9591769385

ಬೇಸ್ಟೊ ಅರ್ಧಶತಕ ವ್ಯರ್ಥ; ಬಟ್ಲರ್, ಶಿಮ್ರೊನ್ ಉತ್ತಮ ಬ್ಯಾಟಿಂಗ್: ಪಂಜಾಬ್ ಕಿಂಗ್ಸ್‌ಗೆ ಸೋಲು

ರಾಯಲ್ಸ್‌ಗೆ ಜಯದ 'ಯಶಸ್ಸು'



ಅರ್ಧಶತಕ ಗಳಿಸಿದ ಯಶಸ್ವಿ ಜೈಸ್ವಾಲ್ ಸಂಭ್ರಮ –ಪಿಟಿಐ ಚಿತ್ರ

ಮುಂಬೈ (ಪಿಟಿಐ): ಸವಾಲಿನ ಗುರಿ ಬೆನ್ನತ್ತಿದ ರಾಜಸ್ಥಾನ ರಾಯಲ್ಸ್ ತಂಡ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಭರ್ಜರಿ ಜಯ ಸಾಧಿಸಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಶನಿವಾರ ಸಂಜೆ ನಡೆದ ಪಂದ್ಯದಲ್ಲಿ ಸಂಜು ಸ್ಯಾಮ್ಸನ್ ನಾಯಕತ್ವದ ರಾಜಸ್ಥಾನ ತಂಡ ಮಯಂಕ್ ಅಗರವಾಲ್ ನೇತೃತ್ವದ ಪಂಜಾಬ್ ಕಿಂಗ್ಸ್ ಎದುರು ಆರು ವಿಕೆಟ್‌ಗಳಿಂದ ಜಯ ಗಳಿಸಿತು. ಮೂರು ವಿಕೆಟ್ ಉರುಳಿಸಿದ ಸ್ಪಿನ್ನರ್ ಯಜುವೇಂದ್ರ ಚಾಹಲ್ ಮತ್ತು ಅಮೋಘ ಬ್ಯಾಟಿಂಗ್ ಮಾಡಿದ ಯಶಸ್ವಿ ಜೈಸ್ವಾಲ್ ಜಯದ ರೂವಾರಿಗಳಾದರು.

ಜಾನಿ ಬೇಸ್ಟೊ ಅವರ ಅರ್ಧಶತಕ ಮತ್ತು ಜಿತೇಶ್ ಶರ್ಮಾ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಪಂಜಾಬ್ 5ಕ್ಕೆ 189 ರನ್ ಗಳಿಸಿತ್ತು. ಗುರಿ ಬೆನ್ನತ್ತಿದ ರಾಜಸ್ಥಾನ ಇನ್ನೂ 2 ಎಸೆತ ಉಳಿದಿರುವಾಗ ದಡ ಸೇರಿತು. ಯಶಸ್ವಿ ಜೀವನಶ್ರೇಷ್ಠ ಮೊತ್ತ ಗಳಿಸಿದರು. ಈ ಆವೃತ್ತಿಯಲ್ಲಿ ರಾಜಸ್ಥಾನ ಗುರಿ ಬೆನ್ನತ್ತಿ ಗೆದ್ದ ಮೊದಲ ಪಂದ್ಯ ಇದು.

ಕರುಣ್ ನಾಯರ್ ಬದಲಿಗೆ ತಂಡದಲ್ಲಿ ಸ್ಥಾನ ಪಡೆದುಕೊಂಡ ಯಶಸ್ವಿ ಜೈಸ್ವಾಲ್ ಮೊದಲ ವಿಕೆಟ್‌ಗೆ ಜೋಸ್ ಬಟ್ಲರ್ ಜೊತೆ 46 ರನ್ ಸೇರಿಸಿದರು. ಈ ಆವೃತ್ತಿಯಲ್ಲಿ ಮೂರು ಶತಕಗಳನ್ನು ಗಳಿಸಿರುವ ಜೋಸ್ ಬಟ್ಲರ್ ಆರಂಭದಲ್ಲೇ ಬೌಂಡರಿಗಳ ಮೂಲಕ ಮಿಂಚಿದರು. ಆದರೆ 4ನೇ ಓವರ್‌ನ ಕೊನೆಯ ಎಸೆತವನ್ನು ಸ್ಕೂಪ್ ಮಾಡಲು ಪ್ರಯತ್ನಿಸಿ ಶಾರ್ಟ್ ಥರ್ಡ್‌ಮ್ಯಾನ್‌ನಲ್ಲಿದ್ದ ರಬಾಡಗೆ ಕ್ಯಾಚ್ ನೀಡಿದರು.

ನಂತರ ಸಂಜು ಸ್ಯಾಮ್ಸನ್ ಮತ್ತು ದೇವದತ್ತ ಪಡಿಕ್ಕಲ್ ಜೊತೆಗೂಡಿ ಯಶಸ್ವಿ ಜೈಸ್ವಾಲ್ ಉತ್ತಮ ಬ್ಯಾಟಿಂಗ್ ಪ್ರದರ್ಶಿಸಿದರು. ರಿವರ್ಸ್ ಸ್ವೀಪ್, ಸ್ಕೂಪ್ ಮತ್ತು ಡ್ರೈವ್‌ಗಳ ಮೂಲಕ ಪ್ರೇಕ್ಷಕರನ್ನು ರಂಜಿಸಿದರು. ಕೊನೆಯ ಓವರ್‌ಗಳಲ್ಲಿ ಶಿಮ್ರೊನ್ ಹೆಟ್ಮೆಯರ್ ಭರವಸೆಯಿಂದ ಆಡಿ ಜಯ ತಂದುಕೊಟ್ಟರು. ಸೋಲಿನೊಂದಿಗೆ ಪಂಜಾಬ್ ತಂಡದ ಪ್ಲೇ ಆಫ್ ಹಾದಿ ಕಠಿಣವಾಗಿದೆ.

ಬೇಸ್ಟೊ, ಜಿತೇಶ್ ಸೊಬಗಿನ ಆಟ: ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್ ಪರವಾಗಿ ಆರಂಭಿಕ ಬ್ಯಾಟರ್ ಜಾನಿ ಬೇಸ್ಟೊ ಮತ್ತು ಐದನೇ ಕ್ರಮಾಂಕದ ಜಿತೇಶ್ ಶರ್ಮಾ ಉತ್ತಮ ಆಟವಾಡಿದರು. 15ನೇ ಓವರ್‌ನಲ್ಲಿ ಮಯಂಕ್ ಅಗರವಾಲ್ ಮತ್ತು ಜಾನಿ ಬೇಸ್ಟೊ ವಿಕೆಟ್ ಉರುಳಿಸಿದ ಯಜುವೇಂದ್ರ ಚಾಹಲ್ ತಂಡದ ರನ್ ಗಳಿಕೆಗೆ ತಡೆ ಹಾಕಿದರು. ಭಾನುಕ ರಾಜಪಕ್ಸೆ ಕೂಡ ಚಾಹಲ್‌ಗೆ ವಿಕೆಟ್ ಒಪ್ಪಿಸಿದರು.

ಮುಂಬೈ ಹೊರಕ್ಕೆ: ಪಂಜಾಬ್ ವಿರುದ್ಧ ರಾಜಸ್ಥಾನದ ಗೆಲುವಿನೊಂದಿಗೆ ಮುಂಬೈ ತಂಡವು ಟೂರ್ನಿಯ ಪ್ಲೇ ಆಫ್ ರೇಸ್‌ನಿಂದ ಹೊರಬಿತ್ತು.

ಮುಂಬೈ 10 ಪಂದ್ಯಗಳ ಪೈಕಿ ಎಂಟರಲ್ಲಿ ಸೋಲು ಕಂಡಿತ್ತು.

ಸ್ಕೋರ್ ಕಾರ್ಡ್

ಪಂಜಾಬ್ ಕಿಂಗ್ಸ್ 5ಕ್ಕೆ 189 (20 ಓವರ್)

ಬೇಸ್ಟೊ ಎಲ್‌ಬಿಡಬ್ಲ್ಯು ಬಿ ಯಜುವೇಂದ್ರ 56 (40 ಎ, 4x8, 4x1), ಶಿಖರ್ ಸಿ ಬಟ್ಲರ್ ಬಿ ಅಶ್ವಿನ್ 12 (16 ಎ, 4x2), ಭಾನುಕ ಬಿ ಯಜುವೇಂದ್ರ 27 (18, 4x2, 6x2), ಮಯಂಕ್ ಸಿ ಬಟ್ಲರ್ ಬಿ ಯಜುವೇಂದ್ರ 15 (13 ಎ, 4x2), ಜಿತೇಶ್ ಔಟಾಗದೆ 38 (18 ಎ, 4x4, 6x2), ಲಿಯಾಮ್ ಬಿ ಪ್ರಸಿದ್ಧ 22 (14 ಎ, 4x1, 6x2), ರಿಷಿ ಔಟಾಗದೆ 5 (2 ಎ, 4x1)

ಇತರೆ (ಲೆಗ್‌ಬೈ 3, ನೋಬಾಲ್ 1, ವೈಡ್ 10) 14

ವಿಕೆಟ್ ಪತನ: 1-47 (ಶಿಖರ್ ಧವನ್, 5.1), 2-89 (ಭಾನುಕ ರಾಜಪಕ್ಸ, 10.2), 3-118 (ಮಯಂಕ್ ಅಗರವಾಲ್, 14.2), 4-119 (ಜಾನಿ ಬೇಸ್ಟೊ, 14.4), 5-169 (ಲಿಯಾಮ್ ಲಿವಿಂಗ್‌ಸ್ಟೋನ್, 18.5)

ಬೌಲಿಂಗ್: ಟ್ರೆಂಟ್ ಬೌಲ್ಟ್ 4–1–36–0, ಪ್ರಸಿದ್ಧ ಕೃಷ್ಣ 4–0–48–1, ಕುಲದೀಪ್ ಸೇನ್ 4–0–42–0, ರವಿಚಂದ್ರನ್ ಅಶ್ವಿನ್ 4–0–32–1, ಯಜುವೇಂದ್ರ ಚಾಹಲ್ 4–0–28–3

ರಾಜಸ್ಥಾನ ರಾಯಲ್ಸ್ 4ಕ್ಕೆ 190 (19.4 ಓವರ್)

ಯಶಸ್ವಿ ಸಿ ಲಿವಿಂಗ್‌ಸ್ಟೋನ್ ಬಿ ಅರ್ಷದೀಪ್ 68 (41 ಎ, 4x9, 6x2), ಬಟ್ಲರ್ ಸಿ ರಾಜಪಕ್ಸ ಬಿ ರಬಾಡ 30 (16 ಎ, 4x5, 6x1), ಸಂಜು ಸಿ ಶಿಖರ್ ಬಿ ರಿಷಿ 23 (12 ಎ, 4x4), ದೇವದತ್ತ ಸಿ ಅಗರವಾಲ್ ಬಿ ಅರ್ಷದೀಪ್ 31 (32 ಎ, 4x3), ಶಿಮ್ರೊನ್ ಔಟಾಗದೆ 31 (16 ಎ, 4x3, 4x2), ರಿಯಾನ್ ಔಟಾಗದೆ 0 (1 ಎ)

ಇತರೆ (ವೈಡ್ 7) 7

ವಿಕೆಟ್ ಪತನ: 1-46 (ಬಟ್ಲರ್, 3.6), 2-85 (ಸಂಜು, 8.1), 3-141 (ಯಶಸ್ವಿ, 14.2), 4-182 (ದೇವದತ್ತ, 18.5)

ಬೌಲಿಂಗ್: ಸಂದೀಪ್ ಶರ್ಮಾ 4–0–41–0, ಕಗಿಸೊ ರಬಾಡ 4–0–50–1, ಅರ್ಷದೀಪ್ ಸಿಂಗ್ 4–0–29–2, ರಿಷಿ ಧವನ್ 3–0–25–1, ರಾಹುಲ್ ಚಾಹರ್ 3.4–0–39–0, ಲಿಯಾಮ್ ಲಿವಿಂಗ್‌ಸ್ಟೋನ್ 1–0–6–0

ಫಲಿತಾಂಶ: ರಾಜಸ್ಥಾನ ರಾಯಲ್ಸ್‌ಗೆ 6 ವಿಕೆಟ್‌ಗಳ ಜಯ

ಆರ್‌ಸಿಬಿಗೆ ಇಂದು ಹಸಿರುಡುಗೆ

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಭಾನುವಾರ ಸನ್‌ರೈಸರ್ಸ್ ಹೈದರಾಬಾದ್ ತಂಡದ ಎದುರು ಆಡಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಹಸಿರು ಉಡುಗೆ ತೊಟ್ಟು ಕಣಕ್ಕೆ ಇಳಿಯಲಿದೆ.

ಹಸಿರು ಉಳಿಸುವುದಕ್ಕಾಗಿ ಆರ್‌ಸಿಬಿ ಫ್ರಾಂಚೈಸ್ ಹಮ್ಮಿಕೊಂಡಿರುವ 'ಗೋ ಗ್ರೀನ್' ಅಭಿಯಾನದ ಅಂಗವಾಗಿ 2011ರಿಂದ ಆರ್‌ಸಿಬಿ ಪ್ರತಿ ಆವೃತ್ತಿಯ ಒಂದು ಪಂದ್ಯದಲ್ಲಿ ಹಸಿರು ಜೆರ್ಸಿ ತೊಡುತ್ತಿದೆ.

ಇಂದಿನ ಪಂದ್ಯಗಳು

ರಾಯಲ್ ಚಾಲೆಂಜರ್ಸ್ ಬೆಂಗಳೂರು–ಸನ್‌ರೈಸರ್ಸ್ ಹೈದರಾಬಾದ್	
ಆರಂಭ	ಸಂಜೆ 3.30
ಸ್ಥಳ	ವಾಂಖೆಡೆ ಕ್ರೀಡಾಂಗಣ, ಮುಂಬೈ
ಚೆನ್ನೈ ಸೂಪರ್ ಕಿಂಗ್ಸ್–ಡೆಲ್ಲಿ ಕ್ಯಾಪಿಟಲ್ಸ್	
ಆರಂಭ	ರಾತ್ರಿ 7.30
ಸ್ಥಳ	ಡಿ.ವೈ.ಪಾಟೀಲ್ ಕ್ರೀಡಾಂಗಣ, ಮುಂಬೈ
ನೇರ ಪ್ರಸಾರ	ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಲಖನೌ	11	8	3	0	0	16	0.703
ಗುಜರಾತ್	11	8	3	0	0	16	0.120
ರಾಜಸ್ಥಾನ	11	7	4	0	0	14	0.326
ಬೆಂಗಳೂರು	11	6	5	0	0	12	-0.444
ಡೆಲ್ಲಿ	10	5	5	0	0	10	0.641
ಹೈದರಾಬಾದ್	10	5	5	0	0	10	0.325
ಪಂಜಾಬ್	11	5	6	0	0	10	-0.231
ಕೋಲ್ಕತ್ತ	11	4	7	0	0	8	-0.304
ಚೆನ್ನೈ	10	3	7	0	0	6	-0.431
ಮುಂಬೈ	10	2	8	0	0	4	-0.725

*ಶನಿವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	22
ಕುಲದೀಪ್	ಡೆಲ್ಲಿ	18
ರಬಾಡ	ಪಂಜಾಬ್	18

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	618
ರಾಹುಲ್	ಲಖನೌ	451
ಶಿಖರ್	ಪಂಜಾಬ್	381

ಪ್ಲೇ ಆಫ್ ಸನಿಹ ಲಖನೌ ತಂಡ

ಆವೇಶ್ ಖಾನ್

ಪುಣೆ (ಪಿಟಿಐ): ಆವೇಶ್ ಖಾನ್ ಹಾಗೂ ಜೇಸನ್ ಹೋಲ್ಡರ್ ಅವರ ಪರಿಣಾಮಕಾರಿ ಬೌಲಿಂಗ್ ಕ್ವಿಂಟನ್ ಡಿಕಾಕ್ ಮತ್ತು ದೀಪಕ್ ಹೂಡಾ ಅವರ ಉತ್ತಮ ಬ್ಯಾಟಿಂಗ್ ಬಲದಿಂದ ಲಖನೌ ಸೂಪರ್ ಜೈಂಟ್ಸ್ ತಂಡವು ಭರ್ಜರಿ ಜಯ ಗಳಿಸಿತು.

ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆಯ ಅಂಗಣದಲ್ಲಿ ಶನಿವಾರ ನಡೆದ ಕೋಲ್ಕತ್ತ ನೈಟ್ ರೈಡರ್ಸ್ ಎದುರಿನ ಪಂದ್ಯದಲ್ಲಿ ತಂಡ 75 ರನ್‌ಗಳಿಂದ ಗೆದ್ದಿತು. ಇದರೊಂದಿಗೆ ಪ್ಲೇ ಆಫ್ ಸ್ಥಾನ ಬಹುತೇಕ ಖಚಿತಪಡಿಸಿದೆ. ಆವೇಶ್ ಮತ್ತು ಹೋಲ್ಡರ್ ತಲಾ ಮೂರು ವಿಕೆಟ್ ಉರುಳಿಸಿದರು. ಡಿಕಾಕ್ (50) ಮತ್ತು ಹೂಡಾ (41) ಮಿಂಚಿದರು.

ಸಂಕ್ಷಿಪ್ತ ಸ್ಕೋರು: ಲಖನೌ ಸೂಪರ್ ಜೈಂಟ್ಸ್: 20 ಓವರ್‌ಗಳಲ್ಲಿ 7ಕ್ಕೆ 176 (ಕ್ವಿಂಟನ್ ಡಿಕಾಕ್ 50, ದೀಪಕ್ ಹೂಡಾ 41, ಕೃಣಾಲ್ ಪಾಂಡ್ಯ 25, ಮಾರ್ಕಸ್ ಸ್ಟೊಯಿನಿಸ್ 28; ಟಿಮ್ ಸೌಥಿ 28ಕ್ಕೆ1, ಶಿವಂ ಮಾವಿ 50ಕ್ಕೆ1, ಸುನಿಲ್ ನಾರಾಯಣ್ 20ಕ್ಕೆ1, ಆ್ಯಂಡ್ರೆ ರಸೆಲ್ 22ಕ್ಕೆ2.). ಕೋಲ್ಕತ್ತ ನೈಟ್ ರೈಡರ್ಸ್: 14.3 ಓವರ್‌ಗಳಲ್ಲಿ 101 (ಆ್ಯರನ್ ಫಿಂಚ್ 14, ಆ್ಯಂಡ್ರೆ ರಸೆಲ್ 45, ಸುನಿಲ್ ನಾರಾಯಣ್ 22; ಆವೇಶ್ ಖಾನ್ 19ಕ್ಕೆ 3, ಜೇಸನ್ ಹೋಲ್ಡರ್ 31ಕ್ಕೆ 3). ಫಲಿತಾಂಶ: ಲಖನೌಗೆ 75 ರನ್‌ಗಳ ಗೆಲುವು.

ಟೆನಿಸ್: ಅಲ್ಕರಾಸ್‌ಗೆ ಮಣಿದ ಜೊಕೊವಿಚ್

ಮ್ಯಾಡ್ರಿಡ್ (ಎಎಫ್‌ಪಿ): ಸ್ಪೇನ್‌ನ ಕಾರ್ಲೊಸ್ ಅಲ್ಕರಾಸ್, ಸರ್ಬಿಯಾದ ನೊವಾಕ್ ಜೊಕೊವಿಚ್ ಅವರಿಗೆ ಸೋಲುಣಿಸಿ ಮ್ಯಾಡ್ರಿಡ್ ಓಪನ್ ಟೆನಿಸ್ ಟೂರ್ನಿಯ ಫೈನಲ್ ತಲುಪಿದ್ದಾರೆ.

ಶನಿವಾರ ನಡೆದ ರೋಚಕ ಸೆಮಿಫೈನಲ್ ಪಂದ್ಯದಲ್ಲಿ ಅಲ್ಕರಾಸ್ ಅವರಿಗೆ 6-7 (5/7), 7-5, 7-6 (7/5)ರಿಂದ ಜಯ ಒಲಿಯಿತು. ಇದರೊಂದಿಗೆ ಒಂದೇ ಟೂರ್ನಿಯಲ್ಲಿ ರಫೆಲ್ ನಡಾಲ್ ಮತ್ತು ಜೊಕೊವಿಚ್ ಅವರನ್ನು ಮಣಿಸಿದ ಮೊದಲ ಆಟಗಾರ ಎಂಬ ಶ್ರೇಯ ಅಲ್ಕರಾಸ್ ಅವರದಾಯಿತು.

ಡೆಫ್‌ಲಿಂಪಿಕ್ಸ್: ಅಭಿನವ್‌ಗೆ ಚಿನ್ನ

ಅಭಿನವ್

ನವದೆಹಲಿ (ಪಿಟಿಐ): ಅಭಿನವ್ ದೇಸ್ವಾಲ್ ಡೆಫ್‌ಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಎರಡನೇ ಚಿನ್ನದ ಪದಕ ಗೆದ್ದುಕೊಟ್ಟಿದ್ದಾರೆ. ಬ್ರೆಜಿಲ್‌ನ ಕಾಕ್ಸಿಯಾಸ್ ಡು ಸುಲ್‌ನಲ್ಲಿ ನಡೆಯುತ್ತಿರುವ ಕೂಟದ 10 ಮೀಟರ್ಸ್ ಏರ್ ಪಿಸ್ತೂಲ್ ವಿಭಾಗದಲ್ಲಿ ಅವರಿಗೆ ಪದಕ ಒಲಿಯಿತು.

15 ವರ್ಷದ ಅಭಿನವ್ ಮತ್ತು ಬೆಳ್ಳಿ ಗೆದ್ದ ಉಕ್ರೇನ್‌ನ ಒಲೆಕ್ಸಿ ಲೇಜ್‌ಬ್ನಿಕ್ ಫೈನಲ್‌ನಲ್ಲಿ (ತಲಾ 234.2) ಸಮಾನ ಪಾಯಿಂಟ್ಸ್ ಗಳಿಸಿದ್ದರು. ಆದರೆ ಶೂಟ್ ಆಫ್‌ನಲ್ಲಿ ಭಾರತದ ಶೂಟರ್ 10.3 ಪಾಯಿಂಟ್ಸ್ ದಾಖಲಿಸಿ ಚಿನ್ನ ತಮ್ಮದಾಗಿಸಿಕೊಂಡರು. ಒಲೆಕ್ಸಿ 9.7 ಪಾಯಿಂಟ್ಸ್ ಗಳಿಸಿದರು. ಚೀನಾ ತೈಪೆಯ ಸು ಮಿಂಗ್ ಜು ಕಂಚು ಜಯಿಸಿದರು.

ಥಾಮಸ್, ಊಬರ್ ಕಪ್ ಬ್ಯಾಡ್ಮಿಂಟನ್

ಚಿನ್ನದ ನಿರೀಕ್ಷೆಯಲ್ಲಿ ಭಾರತ

ಬ್ಯಾಂಕಾಕ್ (ಪಿಟಿಐ): ಥಾಮಸ್ ಮತ್ತು ಊಬರ್ ಕಪ್ ಬ್ಯಾಡ್ಮಿಂಟನ್ ಫೈನಲ್ ಟೂರ್ನಿಯಲ್ಲಿ ಭಾರತ ಪುರುಷರ ಮತ್ತು ಮಹಿಳಾ ತಂಡಗಳು ಮೊದಲ ಬಾರಿ ಚಿನ್ನದ ಪದಕ ಜಯಿಸುವ ಛಲದಲ್ಲಿವೆ.

ಭಾನುವಾರದಿಂದ ಇಲ್ಲಿ ನಡೆಯಲಿರುವ ಟೂರ್ನಿಯಲ್ಲಿ ಭಾರತ ತಂಡಗಳಿಗೆ ಲಕ್ಷ್ಯ ಸೇನ್ ಮತ್ತು ಪಿ.ವಿ. ಸಿಂಧು ನೇತೃತ್ವ ವಹಿಸಲಿದ್ದಾರೆ.

ಥಾಮಸ್ ಕಪ್ ಟೂರ್ನಿಯಲ್ಲಿ ಪುರುಷರ ತಂಡವು ಒಮ್ಮೆಯೂ ಪದಕ ಜಯಿಸಿಲ್ಲ. ಕನಿಷ್ಠ ಸೆಮಿಫೈನಲ್ ಕೂಡ ತಲುಪಿಲ್ಲ. ಆದರೆ ಮಹಿಳಾ ತಂಡವು ಊಬರ್ ಕಪ್ ಟೂರ್ನಿಯಲ್ಲಿ ಸತತ ಎರಡು ಬಾರಿ (2014 ಮತ್ತು 2016ರ ಆವೃತ್ತಿ) ಕಂಚಿನ ಪದಕದ ಸಾಧನೆ ಮಾಡಿದೆ.

ಕಳೆದ ವರ್ಷ ಉಭಯ ತಂಡಗಳು ಕ್ವಾರ್ಟರ್‌ಫೈನಲ್‌ನಲ್ಲೇ ಅಭಿಯಾನ ಕೊನೆಗೊಳಿಸಿದ್ದವು.

ಈ ಬಾರಿ ಪುರುಷರ ಸಿ ಗುಂಪಿನಲ್ಲಿ ಸ್ಥಾನ ಪಡೆದಿದೆ.

ಡಿ ಗುಂಪಿನಲ್ಲಿ ಮಹಿಳಾ ತಂಡವಿದೆ.

ಭಾರತ ತಂಡಗಳು: ಪುರುಷರು: ಸಿಂಗಲ್ಸ್: ಲಕ್ಷ್ಯ ಸೇನ್, ಕಿದಂಬಿ ಶ್ರೀಕಾಂತ್, ಎಚ್.ಎಸ್. ಪ್ರಣಯ್, ಪ್ರಿಯಾಂಶು ರಾಜಾವತ್. ಡಬಲ್ಸ್: ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ, ಚಿರಾಗ್ ಶೆಟ್ಟಿ, ಎಂ.ಆರ್. ಅರ್ಜುನ್, ಧ್ರುವ ಕಪಿಲ, ಕೃಷ್ಣಪ್ರಸಾದ್ ಗರಗ, ವಿಷ್ಣುವರ್ಧನ್ ಗೌಡ್ ಪಂಜಾಲ.

ಮಹಿಳೆಯರು: ಸಿಂಗಲ್ಸ್: ಪಿ.ವಿ.ಸಿಂಧು, ಆಕರ್ಷಿ ಕಶ್ಯಪ್, ಅಸ್ಮಿತಾ ಚಲಿಹಾ, ಉನ್ನತಿ ಹೂಡಾ. ಡಬಲ್ಸ್: ಗಾಯತ್ರಿ ಗೋಪಿಚಂದ್, ತ್ರೀಶಾ ಜೋಲಿ, ಸಿಮ್ರನ್ ಸಿಂಘಿ, ರಿತಿಕಾ ಥಾಕರ್, ತನಿಶಾ ಕ್ರಾಸ್ಟೊ, ಶೃತಿ ಮಿಶ್ರಾ.

ಹಾಕಿ: ನೈರುತ್ಯ ರೈಲ್ವೆಗೆ ಭರ್ಜರಿ ಜಯ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ನೈರುತ್ಯ ರೈಲ್ವೆ ತಂಡ ಯಂಗ್ ಸ್ಟಾರ್ ಸ್ಪೋರ್ಟ್ಸ್ ಕ್ಲಬ್ ಆಶ್ರಯದಲ್ಲಿ ಇಲ್ಲಿ ನಡೆಯುತ್ತಿರುವ ಅಂತರರಾಜ್ಯ ಆಹ್ವಾನಿತ ಹಾಕಿ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು. ಸೆಟ್ಲ್‌ಮೆಂಟ್ ಹಾಕಿ ಅಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಕೊಲ್ಹಾಪುರದ ಶಾಹು ಮಹಾರಾಜ್ ಎದುರು ರೈಲ್ವೆ 5–1ರಲ್ಲಿ ಜಯ ಗಳಿಸಿತು.

ರೈಲ್ವೆ ಪರವಾಗಿ ಶ್ರೀಧರ ಹ್ಯಾಟ್ರಿಕ್ ಗೋಲಿನೊಂದಿಗೆ ಮಿಂಚಿದರು. 13, 22 ಹಾಗೂ 55ನೇ ನಿಮಿಷಗಳಲ್ಲಿ ಅವರು ಚೆಂಡನ್ನು ಗುರಿ ಮುಟ್ಟಿಸಿದರು. ಸಮಂತ 47ನೇ ನಿಮಿಷದಲ್ಲಿ ಮತ್ತು ಲಿಖಿತ್ 58ನೇ ನಿಮಿಷದಲ್ಲಿ ಗೋಲು ಗಳಿಸಿದರು. ಎದುರಾಳಿ ತಂಡಕ್ಕಾಗಿ ಪಾರಸ್ 35ನೇ ನಿಮಿಷದಲ್ಲಿ ಯಶಸ್ಸು ಕಂಡರು.

ಗದಗ ಹನುಮಾನ್ ಬ್ಲೆಸಿಂಗ್ 2–1ರಲ್ಲಿ ಕೊಲ್ಹಾಪುರದ ಎಂ.ಕೆ.ಎಂ ತಂಡವನ್ನು ಮಣಿಸಿತು. 12ನೇ ನಿಮಿಷದಲ್ಲಿ ಸಮೀರ್ ಭೋಸ್ಲೆ ಗಳಿಸಿದ ಗೋಲಿನೊಂದಿಗೆ ಕೊಲ್ಹಾಪುರ ತಂಡ ಮುನ್ನಡೆ ಸಾಧಿಸಿತು. ಕೊನೆಯ ಕ್ವಾರ್ಟರ್‌ನಲ್ಲಿ ಹರೀಶ್ ಮುತಗಾರ ಮಿಂಚಿದರು. 55 ಹಾಗೂ 59ನೇ ನಿಮಿಷಗಳಲ್ಲಿ ಗೋಲು ಗಳಿಸಿ ಅವರು ಜಯ ತಂದುಕೊಟ್ಟರು.

ಬೆಂಗಳೂರಿನ ಡಿವೈಇಎಸ್ ಕೊಲ್ಹಾಪುರ ಪೊಲೀಸ್ ತಂಡಕ್ಕೆ 1–4ರಲ್ಲಿ ಮಣಿಯಿತು.

ವಿನೋದ್ (28, 51ನೇ ನಿಮಿಷ) ಸತ್ಯಜಿತ್ (38, 59ನೇ ನಿ) ಕೊಲ್ಹಾಪುರ ಪರವಾಗಿ ಮಿಂಚಿದರು. ಡಿವೈಇಎಸ್‌ಗಾಗಿ ಪ್ರಣಾಮ್ ಗೌಡ (28ನೇ ನಿ) ಗೋಲು ಗಳಿಸಿದರು.

ಆತಿಥೇಯ ಯಂಗ್‌ಸ್ಟಾರ್ ಸ್ಪೋರ್ಟ್ಸ್ ಕ್ಲಬ್ ಕೊಲ್ಹಾಪುರದ ದೇವಗಿರಿ ಫೈಟರ್ಸ್ ತಂಡದ ವಿರುದ್ಧ 2-1ರಲ್ಲಿ ಸೋತಿತು. 7ನೇ ನಿಮಿಷದಲ್ಲಿ ಆತಿಥೇಯರಿಗಾಗಿ ವಿನಾಯಕ ಬಿಜವಾಡ ಗೋಲು ಗಳಿಸಿದರು. ಆದರೆ ಮಯೂರ್ (7ನೇ ನಿ) ಮತ್ತು ಅಭಿಷೇಕ್ (36ನೇ ನಿ) ಗಳಿಸಿದ ಗೋಲುಗಳಿಂದ ದೇವಗಿರಿ ತಂಡ ಜಯ ಗಳಿಸಿತು.

ಕೊಲ್ಹಾಪುರದ ದೇವಗಿರಿ ತಂಡದ ಆಟಗಾರನ ಮುನ್ನಡೆಯನ್ನು ತಡೆಯಲು ಯತ್ನಿಸಿದ ಯಂಗ್ ಸ್ಟಾರ್ ಸ್ಪೋರ್ಟ್ಸ್ ಕ್ಲಬ್‌ನ ರೋಷನ್ (ಮುಂದೆ ಇರುವವರು) ಮತ್ತು ರಾಕೇಶ್

ವಾಲಿಬಾಲ್: ಕೇರಳ ಪೊಲೀಸ್‌ಗೆ ಜಯ

ಸುಳ್ಯ: ಕೇರಳ ಪೊಲೀಸ್ ತಂಡ ಇಲ್ಲಿನ ಚೆನ್ನಕೇಶವ ದೇವಸ್ಥಾನದ ಆವರಣದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ವಾಲಿಬಾಲ್ ಟೂರ್ನಿಯ ಮಹಿಳಾ ವಿಭಾಗದ ಪಂದ್ಯದಲ್ಲಿ ಎಸ್‌ಆರ್‌ಎಂ ಯುನಿವರ್ಸಿಟಿ ಚೆನ್ನೈ ತಂಡದ ವಿರುದ್ಧ ಜಯಗಳಿಸಿತು.

ಶನಿವಾರ ರಾತ್ರಿ ನಡೆದ ಪಂದ್ಯ ದಲ್ಲಿ ಆಕ್ರಮಣಕಾರಿ ಆಟವಾಡಿದ ಕೇರಳ ಪೊಲೀಸ್ ತಂಡ 3–0ರಿಂದ ಗೆದ್ದಿತು. ಶುಕ್ರವಾರ ರಾತ್ರಿ ನಡೆದ ಪಂದ್ಯದಲ್ಲಿ ಎಸ್‌ಆರ್‌ಎಂ ಯುನಿವರ್ಸಿಟಿ ಚೆನ್ನೈ ತಂಡವು ಐಸಿಎಫ್ ಚೆನ್ನೈ ತಂಡವನ್ನು 3–2 ಅಂತರದಲ್ಲಿ ಮಣಿಸಿತ್ತು.

ಹಾಕಿ: 10ಕ್ಕೆ ಟ್ರಯಲ್ಸ್

ಬೆಂಗಳೂರು: ರಾಷ್ಟ್ರೀಯ ಜೂನಿಯರ್ ಹಾಕಿ ಚಾಂಪಿಯನ್‌ಷಿಪ್‌ಗೆ ಕರ್ನಾಟಕ ತಂಡದ ಆಯ್ಕೆಯಾಗಿ ಮಂಗಳವಾರ ಟ್ರಯಲ್ಸ್ ನಡೆಯಲಿದೆ.

ಇಲ್ಲಿಯ ಶಾಂತಿನಗರದಲ್ಲಿರುವ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಹಾಕಿ ಅರೆನಾದಲ್ಲಿ ಆಯ್ಕೆ ಟ್ರಯಲ್ಸ್ ನಡೆಯಲಿದೆ. ರಾಷ್ಟ್ರೀಯ ಚಾಂಪಿಯನ್‌ಷಿಪ್ ತಮಿಳುನಾಡಿನ ಕೋವಿಲಪತ್ತಿಯಲ್ಲಿ ಇದೇ 17ರಿಂದ 28ರವರೆಗೆ ನಿಗದಿಯಾಗಿದೆ.

5,000 ಮೀ ಓಟ: ಅವಿನಾಶ್ ದಾಖಲೆ

ಅವಿನಾಶ್ ಸಬ್ಳೆ

ನವದೆಹಲಿ (ಪಿಟಿಐ): ಭಾರತದ ಅವಿನಾಶ್ ಸಬ್ಳೆ ಅವರು 5,000 ಮೀಟರ್ಸ್ ಓಟದಲ್ಲಿ ನೂತನ ರಾಷ್ಟ್ರೀಯ ದಾಖಲೆ ಬರೆದಿದ್ದಾರೆ.

ಕ್ಯಾಲಿಫೋರ್ನಿಯಾದ ಸ್ಯಾನ್ ಯುವಾನ ಕ್ಯಾಪಿಸ್ತ್ರಾನೊದಲ್ಲಿ ನಡೆಯುತ್ತಿರುವ ಸೌಂಡ್ ರನ್ನಿಂಗ್ ಟ್ರ್ಯಾಕ್ ಮೀಟ್‌ನಲ್ಲಿ 13 ನಿಮಿಷ 25.65 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ ಸಬ್ಳೆ 30 ವರ್ಷಗಳ ದಾಖಲೆಯನ್ನು ಹಿಂದಿಕ್ಕಿದರು.

ಟೋಕಿಯೊ ಒಲಿಂಪಿಕ್ಸ್‌ನ 3000 ಮೀಟರ್ಸ್ ಓಟದಲ್ಲಿ ರಾಷ್ಟ್ರೀಯ ದಾಖಲೆ ಬರೆದಿದ್ದ ಅವರು ಇಲ್ಲಿ 5000 ಮೀಟರ್ಸ್ ಓಟದಲ್ಲಿ 12ನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡರು. ನಾರ್ವೆಯ ಜೇಕಬ್ ಇಂಗ್‌ಬ್ರಿಟ್ಸೆನ್ 13 ನಿಮಿಷ 02.03 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಚಿನ್ನ ಗಳಿಸಿದರು.

ಮಹಾರಾಷ್ಟ್ರದ ಬೀಡ್ ಜಿಲ್ಲೆಯ ಮಾಂಡ್ವ ಗ್ರಾಮದವರಾದ 27 ವರ್ಷದ ಅವಿನಾಶ್ ಸೇನೆಯಲ್ಲಿದ್ದಾರೆ. ಅವರು 30 ವರ್ಷಗಳ ಹಿಂದೆ ಬಹದ್ದೂರ್ ಪ್ರಸಾದ್ ಮಾಡಿದ ದಾಖಲೆಯನ್ನು ಮುರಿದರು. 1992ರ ಬರ್ಮಿಂಗ್‌ಹ್ಯಾಂನಲ್ಲಿ ನಡೆದ ಕ್ರೀಡಾಕೂಟದಲ್ಲಿ ಬಹದ್ದೂರ್ 13 ನಿಮಿಷ 29.70 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ್ದರು.

ಭಾರತ ಅಥ್ಲೆಟಿಕ್ಸ್‌ನಲ್ಲಿ ಎರಡನೇ ಅತಿ ಹಳೆಯ ದಾಖಲೆ ಮುರಿದ ಸಾಧನೆಯೂ ಅವಿನಾಶ್ ಅವರದಾಯಿತು. ಶಿವನಾಥ್ ಸಿಂಗ್ ಅವರು 44 ವರ್ಷಗಳ ಹಿಂದೆ ಮ್ಯಾರಥಾನ್‌ನಲ್ಲಿ (2:12:00)ಮಾಡಿದ್ದ ದಾಖಲೆ ದೇಶದ ಅತಿ ಹಳೆಯ ದಾಖಲೆಯಾಗಿದೆ.

ಶೆಲ್ಲಿ ದಾಖಲೆ (ಎಎಫ್‌ಪಿ ವರದಿ): ಜಮೈಕಾದ ವೇಗದ ಓಟಗಾರ್ತಿ ಶೆಲ್ಲಿ ಆ್ಯನ್ ಫ್ರೆಸರ್ ಪ್ರೈಸ್ ಮಹಿಳೆಯರ 100 ಮೀಟರ್ಸ್ ಓಟದಲ್ಲಿ ಈ ವರ್ಷದ ದಾಖಲೆ ಬರೆದಿದ್ದಾರೆ. ಶನಿವಾರ ನೈರೋಬಿ ಕೂಟದಲ್ಲಿ ಅವರು 10.67 ಸೆಕೆಂಡುಗಳಲ್ಲಿ ಗುರಿ ತಲುಪಿದರು.

2021ರ ಆಗಸ್ಟ್‌ನಲ್ಲಿ ಲಾಸನ್‌ನಲ್ಲಿ ಅವರು 10.60 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ವೈಯಕ್ತಿಕ ಶ್ರೇಷ್ಠ ಸಾಧನೆ ಮಾಡಿದ್ದರು.

ಚೆಸ್: ಯಶಸ್ವಿ, ದಾರಿಯಾಗೆ ಪ್ರಶಸ್ತಿ

ಯಶಸ್ವಿ

ದಾರಿಯಾ

ಬೆಂಗಳೂರು: ಅಮೆರಿಕದ ಸೆಲೆಸ್ಟಿಯಲ್ ಮೈಂಡ್ಸ್ ಚೆಸ್ ಸಂಸ್ಥೆಯು ಅಂಗವಿಕಲ ಚೆಸ್ ಪಟುಗಳಿಗೆ ನೀಡುವ ಪ್ರತಿಭಾ ಪ್ರಶಸ್ತಿ ಮತ್ತು ಪುರಸ್ಕಾರಕ್ಕೆ ಬಂಟ್ವಾಳದ ಯಶಸ್ವಿ ಕುದ್‌ಮಾನು ಮತ್ತು ಕಿರ್ಗಿಸ್ತಾನದ ದಾರಿಯಾ ಕುಡೈನಜರೊವ್ ಭಾಜನರಾಗಿದ್ದಾರೆ.

ಯಶಸ್ವಿ ಅವರು 2017, 2018 ಮತ್ತು 2019ರಲ್ಲಿ ಕಿವುಡ ಮತ್ತು ಮೂಗರ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಚಾಂಪಿಯನ್ ಆಗಿದ್ದರು.

ಪ್ರಶಸ್ತಿ ₹ 20 ಸಾವಿರ ನಗದು ಒಳಗೊಂಡಿದೆ. ವಿಜೇತರಿಗೆ ಸಂಸ್ಥೆಯಿಂದ ಉಚಿತ ಚೆಸ್ ತರಬೇತಿ ನೀಡಲಾಗುತ್ತದೆ.

ಅಮೆರಿಕದಲ್ಲಿ ಸೆಲೆಸ್ಟಿಯಲ್ ಮೈಂಡ್ಸ್ ಸಂಸ್ಥೆಯನ್ನು ಕರ್ನಾಟಕದ ಮಾಜಿ ಚೆಸ್ ಚಾಂಪಿಯನ್ ಕಾವ್ಯಶ್ರೀ ಮಲ್ಲಣ್ಣ ಅವರು ಮುನ್ನಡೆಸುತ್ತಿದ್ದಾರೆ.

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಉದಕಮಂಡಲ ರೇಸ್

ರೊಮಾಲ್ಡೊ ಗೆಲ್ಲುವ ನಿರೀಕ್ಷೆ

ನೀಲ್‌ಗಿರೀಸ್ ಪೊಲೀಸ್ ಕಪ್ ಮೊದಲನೇ ಡಿವಿಷನ್ ಭಾನುವಾರದ ಉದಕಮಂಡಲ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ರೊಮಾಲ್ಡೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಬೆಳಿಗ್ಗೆ 11ಕ್ಕೆ ಆರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಐಸಿ ರಿವರ್ 6, ಪ್ರೈಸ್‌ಲೆಸ್ ಟ್ರೆಷರ್ 2, ಲೇಡಿ ಜೇನ್ 8
2ನೇ ರೇಸ್: ಶೆಯ್ಖ್ ಆರ್ ಸ್ಟಾರ್ 8, ರೂಬರ್ಟ್ 4, ಮ್ಯಾಜಿಕಲ್ ವೇವ್ 6
3ನೇ ರೇಸ್: ರೊಮಾಲ್ಡೊ 3, ಬೊಲ್ಟಾನಿಕ್ 4, ವುಡ್ ಆರ್ಟ್ 10
4ನೇ ರೇಸ್: ಗ್ಯಾಂಗ್‌ಸ್ಟರ್ 3, ಏರ್ ಮಾರ್ಷಲ್ 1, ಮೊರೆಸ್ಕೊ 2
5ನೇ ರೇಸ್: ಗ್ರಾಂಡಿಯೊಸ್ 6, ರೇಸ್ ಆಫ್ ಸನ್ 2, ನೈಟ್ ಇನ್ ಆರ್ಮರ್ 1
6ನೇ ರೇಸ್: ಗ್ರೇ ಟ್ವಿಲೈಟ್ 1, ಹೆನ್ರಿಯೆಟ್ಟಾ 2, ಸ್ಟಾರ್ ಫ್ಲಿಂಗ್ 5

ಉತ್ತಮ ಬೆಟ್: ಗ್ರ್ಯಾಂಡಿಯೊಸ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ವಿಶ್ವಸಂಸ್ಥೆಯ ಭದ್ರತಾ ಮಂಡಳಿ ನಿರ್ಣಯಕ್ಕೆ ಸರ್ವಾನುಮತದ ಅಂಗೀಕಾರ

'ಉಕ್ರೇನ್: ಶಾಂತಿಯುತ ಪರಿಹಾರ'

ವಿಶ್ವಸಂಸ್ಥೆ (ಪಿಟಿಐ): 'ರಷ್ಯಾ ಮತ್ತು ಉಕ್ರೇನ್ ಬಿಕ್ಕಟ್ಟಿಗೆ ಶಾಂತಿಯುತ ಪರಿಹಾರ ಕಂಡುಕೊಳ್ಳಬೇಕು' ಎಂಬ ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಅವರ ನಿಲುವನ್ನು ಭದ್ರತಾ ಮಂಡಳಿಯು ಸರ್ವಾನುಮತದಿಂದ ಅಂಗೀಕರಿಸಿದೆ. ಗುಟೆರೆಸ್ ಅವರ ಪ್ರಯತ್ನಗಳಿಗೆ ಮಂಡಳಿಯು ಪ್ರಬಲವಾದ ಬೆಂಬಲವನ್ನೂ ವ್ಯಕ್ತಪಡಿಸಿದೆ.

ರಷ್ಯಾ ಫೆ.24ರಂದು ಉಕ್ರೇನ್ ಮೇಲೆ ಆರಂಭಿಸಿದ ಸೇನಾ ಕಾರ್ಯಾಚರಣೆಯ ನಂತರ ಇದೇ ಮೊದಲ ಬಾರಿಗೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಉಕ್ರೇನ್ ಬಿಕ್ಕಟ್ಟು ಶಮನಕ್ಕೆ ಸರ್ವಾನುಮತದ ಹೇಳಿಕೆ ಬಂದಿದ್ದು, 'ಶಾಂತಿ ಮತ್ತು ಭದ್ರತೆಯ ಸ್ಥಾಪನೆ' ಬಗ್ಗೆ ತೀವ್ರ ಕಳಕಳಿ ವ್ಯಕ್ತವಾಗಿದೆ.

15 ರಾಷ್ಟ್ರಗಳ ಕೌನ್ಸಿಲ್‌ನ ಪ್ರಸಕ್ತ ತಿಂಗಳಿನ ಸಭೆ ಅಮೆರಿಕದ ಅಧ್ಯಕ್ಷತೆಯಲ್ಲಿ ನಡೆಯಿತು. ಉಕ್ರೇನ್ ಕುರಿತ ಅಧ್ಯಕ್ಷೀಯ ಸಂಕ್ಷಿಪ್ತ ಹೇಳಿಕೆಯನ್ನು ಶುಕ್ರವಾರ ಸರ್ವಾನುಮತದಿಂದ ಅಂಗೀಕರಿಸಲಾಯಿತು. ಶಾಂತಿಯುತ ಪರಿಹಾರದ ಪ್ರಯತ್ನಗಳು ಯಾವ ರೀತಿ ಅಳವಡಿಕೆಯಾಗುತ್ತಿದೆ ಎಂಬ ಮಾಹಿತಿಯನ್ನು ಸಕಾಲಕ್ಕೆ ನೀಡುವಂತೆಯೂ ಗುಟೆರೆಸ್ ಅವರಿಗೆ ಭದ್ರತಾ ಮಂಡಳಿ ಮನವಿ ಮಾಡಿತು. ಅಧ್ಯಕ್ಷೀಯ ಹೇಳಿಕೆಯಲ್ಲಿ ಉಕ್ರೇನ್‌ನಲ್ಲಿನ ಆಕ್ರಮಣವನ್ನು 'ಯುದ್ಧ' ಅಥವಾ 'ಸಂಘರ್ಷ' ಎಂದು ಉಲ್ಲೇಖಿಸಿಲ್ಲ. ಎಲ್ಲ ಸದಸ್ಯ ರಾಷ್ಟ್ರಗಳು ವಿಶ್ವಸಂಸ್ಥೆಯ ಚಾರ್ಟರ್ ಅಡಿಯಲ್ಲಿ, ತಮ್ಮ ಅಂತರರಾಷ್ಟ್ರೀಯ ವಿವಾದಗಳನ್ನು ಶಾಂತಿಯುತವಾಗಿ ಪರಿಹರಿಸಿಕೊಳ್ಳಲು ಒಪ್ಪಿರುವ ಬಾಧ್ಯತೆಯನ್ನು ಮಾತ್ರ ನೆನಪಿಸಲಾಗಿದೆ.

ಮಾಸ್ಕೊ ಮತ್ತು ಕೀವ್‌ಗೆ ಇತ್ತೀಚೆಗೆ ಭೇಟಿ ನೀಡಿದ್ದ ಗುಟೆರೆಸ್, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಮತ್ತು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರೊಂದಿಗೆ ಚರ್ಚೆ ನಡೆಸಿ, ಮಾನವೀಯ ಸಮಸ್ಯೆ ಉದ್ಭವಿಸಿರುವ ಸ್ಥಳಗಳಿಂದ ನಾಗರಿಕರನ್ನು ಸ್ಥಳಾಂತರಿಸಲು ಅನುವು ಮಾಡಿಕೊಡುವಂತೆ ಉಭಯ ನಾಯಕರ ಮನವೊಲಿಸಿದ್ದರು. ಇದರ ಪರಿಣಾಮ ಉಕ್ರೇನಿನ ಬಂದರು ನಗರ ಮರಿಯುಪೋಲ್ ಮತ್ತು ಅಜೋವ್‌ಸ್ಟಾಲ್ ಉಕ್ಕಿನ ಸ್ಥಾವರದ ಬಂಕರ್‌ಗಳಲ್ಲಿ ಸಿಲುಕಿದ್ದ ನಾಗರಿಕರನ್ನು ಮಾನವೀಯ ಕಾರಿಡಾರ್‌ಗಳ ಮೂಲಕ ಸ್ಥಳಾಂತರಿಸಲಾಗುತ್ತಿದೆ.

ಸ್ನೇಕ್ ಐಲ್ಯಾಂಡ್ ಮೇಲೆ ಡ್ರೋನ್ ದಾಳಿ

ಕೀವ್: ಕಪ್ಪು ಸಮುದ್ರದ ಸ್ನೇಕ್ ದ್ವೀಪದ ಬಳಿ ರಷ್ಯಾದ ಲ್ಯಾಂಡಿಂಗ್ ಕ್ರಾಫ್ಟ್ ಮತ್ತು ಟೋರ್ ಕ್ಷಿಪಣಿ ವ್ಯವಸ್ಥೆ ಮೇಲೆ ಬೈರಕ್ತರ್-2 ಡ್ರೋನ್ ದಾಳಿ ನಡೆಸಿ, ನಾಶಪಡಿಸಲಾಗಿದೆ ಎಂದು ಉಕ್ರೇನ್ ಸೇನೆ ಶನಿವಾರ ಹೇಳಿದೆ.

ರಕ್ಷಣಾ ಸಚಿವಾಲಯದ ಮಾಹಿತಿ ಉಲ್ಲೇಖಿಸಿ ಉಕ್ರೇನ್ ಸರ್ಕಾರಿ ಸುದ್ದಿ ಸಂಸ್ಥೆ 'ದಿ ಕೀವ್ ಇಂಡಿಪೆಂಡೆಂಟ್' ಟ್ವೀಟ್ ಮಾಡಿದೆ.

ಮೇ 9ರ ವಿಜಯ ದಿನದ ಪ್ರಯುಕ್ತ ರಷ್ಯಾ, ಆಕ್ರಮಿತ ಮರಿಯುಪೋಲ್‌ನಲ್ಲಿ ಉದ್ದೇಶಿಸಿರುವ ಸೇನಾ ಪರೇಡ್‌ಗೆ ರಕ್ಷಣೆ ನೀಡಲು ರಷ್ಯಾದ ಅಧಿಕಾರಿಗಳು ಯುದ್ಧ ಸ್ಥಾನಗಳನ್ನು ತೊರೆಯಬಹುದು ಎಂದು ಉಕ್ರೇನ್‌ನ ಗುಪ್ತಚರ ವರದಿ ಹೇಳಿದೆ. ರಷ್ಯಾದ 71ನೇ ಎಂಆರ್ ರೆಜಿಮೆಂಟ್‌ನ ಯೋಧರನ್ನು ಮರಿಯುಪೋಲ್‌ನಲ್ಲಿನ ರಷ್ಯನ್ನರ ರಕ್ಷಣೆಗೆ ನಿಯೋಜಿಸಿದೆ ಎಂದು ವರದಿ ಹೇಳಿದೆ.

ರಷ್ಯಾದಿಂದ ಕ್ಷಿಪಣಿ ದಾಳಿ: ರಷ್ಯಾ ಪಡೆಗಳು ಮರಿಯುಪೋಲ್, ಅಜೋವ್‌ಸ್ಟಾಲ್ ಉಕ್ಕಿನ ಸ್ಥಾವರದ ಮೇಲೆ ದಾಳಿ ಮುಂದುವರಿಸಿದ್ದು, ಸುಮಿ ಪ್ರಾಂತ್ಯದ ಖೋತಿನ್, ಮಿರೊಪಿಲ್ಲಿಯಾ, ಡೊನೆಟ್ಸ್ಕ್ ಪ್ರಾಂತ್ಯದ ಕೋಸ್ಟಿಯಾಂಟಿನಿವ್ಕಾದ ಮೇಲೆ ಕ್ಷಿಪಣಿ ದಾಳಿ ನಡೆಸಿವೆ.

ಕೋಸ್ಟಿಯಾಂಟಿನಿವ್ಕಾದಲ್ಲಿ ಇಬ್ಬರು ಹತರಾಗಿದ್ದು, 9 ಜನ ಗಾಯಗೊಂಡಿದ್ದಾರೆ. ಒಡೆಸಾ ಪ್ರಾಂತ್ಯದ ಮೇಲೂ 4 ಕ್ಷಿಪಣಿಗಳ ದಾಳಿ ಆಗಿದೆ. ಅಮೆರಿಕವು ರಷ್ಯಾ ವಿರುದ್ಧ ನೇರ ಭಾಗಿಯಾಗಿದೆ ಎಂದು ರಷ್ಯಾದ ಡುಮಾ (ಸಂಸತ್ ಕೆಳಮನೆ) ಸ್ಪೀಕರ್ ವ್ಯಾಚೆಸ್ಲಾವ್ ವೊಲೊಡಿನ್ ಆರೋಪಿಸಿದ್ದಾರೆ.

ರಷ್ಯಾ ವಿರುದ್ಧ ಸೇನಾ ಸಮರಕ್ಕೆ ಉಕ್ರೇನ್‌ಗೆ ಅಮೆರಿಕವು ಗುಪ್ತಚರ ಮಾಹಿತಿ, ಶಸ್ತ್ರಾಸ್ತ್ರ ಸೇರಿ ಎಲ್ಲ ರೀತಿಯ ಸಹಕಾರ ನೀಡಿ, ನೇರ ಭಾಗಿಯಾಗಿದೆ ಎಂದು ಅವರು ಆರೋಪಿಸಿದ್ದಾರೆ.

ಉಕ್ರೇನ್ ಸಂಘರ್ಷ: ಮೀನಾಕ್ಷಿ ಲೇಖಿ ಚರ್ಚೆ

ವಿಶ್ವಸಂಸ್ಥೆ/ ನ್ಯೂಯಾರ್ಕ್ (ಪಿಟಿಐ): ಉಕ್ರೇನ್ ಸಂಘರ್ಷ ಜಾಗತಿಕ ಸರಕು, ಆಹಾರ, ಹಣಕಾಸು ಮತ್ತು ಇಂಧನ ಮಾರುಕಟ್ಟೆಗಳ ಮೇಲೆ ಉಂಟು ಮಾಡಿರುವ ಪರಿಣಾಮಗಳು ಮತ್ತು ಅಫ್ಗಾನಿಸ್ತಾನದ ಪರಿಸ್ಥಿತಿ ಬಗ್ಗೆಯೂ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ 76ನೇ ಅಧಿವೇಶನದ ಅಧ್ಯಕ್ಷ ಅಬ್ದುಲ್ಲಾ ಶಾಹಿದ್ ಅವರೊಂದಿಗೆ ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವೆ ಮೀನಾಕ್ಷಿ ಲೇಖಿ ಶುಕ್ರವಾರ ಚರ್ಚಿಸಿದರು.

ಆಂಧ್ರ, ಒಡಿಶಾ: ಚಂಡಮಾರುತ ಭೀತಿ

ನವದೆಹಲಿ (ಪಿಟಿಐ): ಪೂರ್ವ ಮಧ್ಯ ಬಂಗಾಳ ಕೊಲ್ಲಿಯಲ್ಲಿ ಉಂಟಾಗಿರುವ ವಾಯುಭಾರ ಕುಸಿತದಿಂದ ಭಾನುವಾರ ಸಂಜೆ ಚಂಡಮಾರುತ ಉಂಟಾಗಲಿದೆ. ಇದು ಗಂಟೆಗೆ 75 ಕಿ.ಮೀ. ವೇಗದಲ್ಲಿ ಆಂಧ್ರ ಪ್ರದೇಶ ಮತ್ತು ಒಡಿಶಾ ಕರಾವಳಿಗೆ ಅಪ್ಪಳಿಸಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಹೇಳಿದೆ. ಈ ಚಂಡಮಾರುತಕ್ಕೆ 'ಅಸನಿ' ಎಂಬ ಹೆಸರಿಡಲಾಗಿದೆ. ಸಿಂಹಳಿ ಭಾಷೆಯಲ್ಲಿ ಇದರ ಅರ್ಥ ಕ್ರೋಧ. ಇದು ತೀವ್ರ ಸ್ವರೂಪದಲ್ಲಿರಲ್ಲಿದ್ದು, ಋತುಮಾನದ ಮೊದಲ ಚಂಡಮಾರುತವಾಗಿದೆ.

ಇದು ಮೇ 10ರವರೆಗೆ ಈಶಾನ್ಯ ಭಾಗಕ್ಕೆ ಮುಂದುವರಿದು ಆಂಧ್ರಪ್ರದೇಶ ಮತ್ತು ಒಡಿಶಾ ಕರಾವಳಿಗಳಿಗೆ ಅಪ್ಪಳಿಸಲಿದೆ ಎಂದು ಐಎಂಡಿ ಪ್ರಕಟಣೆ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಚೀನಾ ಆಕ್ರಮಣ ನಡೆಸಿದರೆ ಜಗತ್ತು ಜತೆಗಿರಲಿದೆ: ತೈವಾನ್

ತೈಪೆ (ರಾಯಿಟರ್ಸ್): 'ಚೀನಾ ನಮ್ಮ ದ್ವೀಪ ರಾಷ್ಟ್ರದ ಮೇಲೆ ಆಕ್ರಮಣ ನಡೆಸಿದರೆ, ಉಕ್ರೇನ್ ಮೇಲಿನ ಆಕ್ರಮಣಕ್ಕಾಗಿ ರಷ್ಯಾದ ಮೇಲೆ ವಿಶ್ವದ ಹಲವು ರಾಷ್ಟ್ರಗಳು ನಿರ್ಬಂಧ ಹೇರಿರುವಂತೆಯೇ ಚೀನಾದ ಮೇಲೂ ಹೇರಲಿವೆ' ಎಂದು ತೈವಾನ್ ವಿದೇಶಾಂಗ ಸಚಿವ ಜೋಸೆಫ್ ವು ಶನಿವಾರ ಹೇಳಿದ್ದಾರೆ.

ರಷ್ಯಾ ವಿರುದ್ಧ ಪಾಶ್ಚಾತ್ಯ ರಾಷ್ಟ್ರಗಳು ಹೇರಿರುವ ನಿರ್ಬಂಧವನ್ನು ತೈವಾನ್ ಕೂಡ ಬೆಂಬಲಿಸಿದೆ. ರಷ್ಯಾದ ಮಿತ್ರ ರಾಷ್ಟ್ರ ಬೆಲರೂಸ್ ಜೊತೆಗಿನ ವಾಣಿಜ್ಯ ವ್ಯವಹಾರವನ್ನೂ ಗಣನೀಯ ಪ್ರಮಾಣದಲ್ಲಿ ಕಡಿತಗೊಳಿಸಿದೆ.

ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಜೋಸೆಫ್ ವು, 'ರಷ್ಯಾದ ಆಕ್ರಮಣ ಮತ್ತು ಅದರ ಮಿತ್ರ ರಾಷ್ಟ್ರ ಬೆಲರೂಸ್ ನಡೆಯನ್ನು ಖಂಡಿಸುವ ದೇಶಗಳೊಂದಿಗೆ ನಿಲ್ಲುವುದು ಬಹಳ ಮುಖ್ಯ. ಹೀಗಾಗಿ ತೈವಾನ್ ವಿಶ್ವ ಸಮುದಾಯದ ಜತೆ ಇದ್ದು, ಈ ಎರಡೂ ರಾಷ್ಟ್ರಗಳ ಮೇಲೆ ನಿರ್ಬಂಧಗಳನ್ನು ಹೇರಿದೆ' ಎಂದು ಹೇಳಿದರು.

ಅಗ್ನಿ ಅವಘಡ: 25 ಮಂದಿ ಸಾವು

ಹವಾನಾ (ಕ್ಯೂಬಾ) (ಎಪಿ): ಕ್ಯೂಬಾ ರಾಜಧಾನಿ ಹವಾನಾದ ಹೃದಯ ಭಾಗದಲ್ಲಿರುವ ಐಷಾರಾಮಿ ಹೋಟೆಲ್ ಒಂದರಲ್ಲಿ ಶುಕ್ರವಾರ ನೈಸರ್ಗಿಕ ಅನಿಲ ಸೋರಿಕೆಯಿಂದ ಉಂಟಾದ ಸ್ಫೋಟದ ಪರಿಣಾಮ ಮಗು ಸೇರಿದಂತೆ ಕನಿಷ್ಠ 25 ಜನರು ದಾರುಣವಾಗಿ ಸತ್ತಿದ್ದಾರೆ.

ಸಾರಟೋಗ ಹೋಟೆಲ್‌ನಲ್ಲಿ ಈ ಅಗ್ನಿ ಅವಘಡ ಸಂಭವಿಸಿದ್ದು, ಹಲವರು ಗಾಯಗೊಂಡಿದ್ದಾರೆ. ದುರಂತ ನಡೆದ ಸ್ಥಳದಲ್ಲಿ ಇನ್ನೂ ಹಲವರು ಸಿಲುಕಿರುವ ಶಂಕೆ ಇದ್ದು, ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ.

'ಹೋಟೆಲ್‌ನ ನಂ.96 ಕೊಠಡಿ ನವೀಕರಣ ಹಂತದಲ್ಲಿತ್ತು. ಅಲ್ಲಿ ಪ್ರವಾಸಿಗರಿರಲಿಲ್ಲ. ದೊಡ್ಡ ಅನಾಹುತವೊಂದು ತಪ್ಪಿದೆ' ಎಂದು ಹವಾನ ಗವರ್ನರ್ ಹೇಳಿದ್ದಾರೆ.

ಸಾರ್ವಜನಿಕ ಸ್ಥಳಗಳಲ್ಲಿ ಬುರ್ಖಾ ಕಡ್ಡಾಯ: ತಾಲಿಬಾನ್

ಕಾಬೂಲ್ (ಎಪಿ): ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಸರ್ಕಾರ ಮಹಿಳೆಯರ ಮೇಲೆ ಮತ್ತಷ್ಟು ಕಠಿಣ ನಿರ್ಬಂಧಗಳನ್ನು ವಿಧಿಸಿದೆ. ಇನ್ಮುಂದೆ ಮಹಿಳೆಯರು ಸಾರ್ವಜನಿಕ ಸ್ಥಳಗಳಲ್ಲಿ ದೇಹವನ್ನು ಸಂಪೂರ್ಣವಾಗಿ ಮುಚ್ಚುವ ಬುರ್ಖಾ ಧರಿಸುವುದು ಕಡ್ಡಾಯ ಎಂದು ಶನಿವಾರ ಆದೇಶಿಸಿದೆ.

ಅಫ್ಗಾನಿಸ್ತಾನ ಸರ್ವೋಚ್ಚ ನಾಯಕ ಮತ್ತು ತಾಲಿಬಾನ್ ಮುಖ್ಯಸ್ಥ ಹುಬತುಲ್ಲಾ ಅಖುಂದ್‌ಜಾದ ಮಹಿಳೆಯರಿಗೆ ವಸ್ತ್ರಸಂಹಿತೆ ಜಾರಿ ಮಾಡಿದ್ದಾರೆ. 'ಮಹಿಳೆಯರು ಮುಖ ಮತ್ತು ಇಡೀ ದೇಹವನ್ನು ಮುಚ್ಚುವ ನೀಲಿ ಬಣ್ಣದ ಸಾಂಪ್ರದಾಯಿಕ ಅಫ್ಗನ್ ಬುರ್ಖಾ ಧರಿಸಬೇಕು' ಎಂದು ಆಜ್ಞೆ ಮಾಡಿದ್ದಾರೆ.

ರಾಜೀನಾಮೆ ಒತ್ತಡದಲ್ಲಿ ರಾಜಪಕ್ಸ

ಕೊಲಂಬೊ (ಪಿಟಿಐ): ಶ್ರೀಲಂಕಾದ ಪ್ರಧಾನಿ ಮಹಿಂದಾ ರಾಜಪಕ್ಸ ಅವರು ತಮ್ಮ ಕಿರಿಯ ಸಹೋದರ ಮತ್ತು ಅಧ್ಯಕ್ಷ ಗೊಟಬಯ ರಾಜಪಕ್ಸ ಅವರು ತುರ್ತು ಪರಿಸ್ಥಿತಿ ಹೇರುವ ಮುನ್ನ ನಡೆದ ಕ್ಯಾಬಿನೆಟ್ ವಿಶೇಷ ಸಭೆಯಲ್ಲೂ ರಾಜೀನಾಮೆ ನೀಡಬೇಕಾದ ಒತ್ತಡಕ್ಕೆ ಸಿಲುಕಿದ್ದಾರೆ.

ದೇಶದಲ್ಲಿ ಜನಜೀವನ ಸಂಕಷ್ಟಕ್ಕೆ ತಳ್ಳಿರುವ ಆರ್ಥಿಕ ಕುಸಿತ ನಿಭಾಯಿಸಲು ವಿಫಲವಾಗಿರುವ ಸರ್ಕಾರದ ವಿರುದ್ಧ ಜನರು ಪ್ರತಿಭಟನೆಗೆ ಇಳಿದಿದ್ದು, ಗುರುವಾರ ರಾತ್ರಿಯಿಂದಲೇ ವಿದ್ಯಾರ್ಥಿ ಗಳು ಸಂಸತ್ತಿಗೆ ಮುತ್ತಿಗೆ ಹಾಕಿದ್ದರು. ಇದರಿಂದಾಗಿ ಶುಕ್ರವಾರ ಸಚಿವ ಸಂಪುಟದ ವಿಶೇಷ ಸಭೆ ನಡೆಸಲಾಯಿತು. ಅಧ್ಯಕ್ಷ ಗೊಟಬಯ ರಾಜಪಕ್ಸೆ ಶುಕ್ರವಾರ ಮಧ್ಯರಾತ್ರಿಯಿಂದಲೇ ಜಾರಿಗೆ ಬರುವಂತೆ ತುರ್ತು ಪರಿಸ್ಥಿತಿ ಘೋಷಿಸಿದರು. ಶಾಂತಿಯುತ ಪ್ರತಿಭಟನೆಗಳನ್ನು ಹತ್ತಿಕ್ಕಲು ಭದ್ರತಾ ಪಡೆಗಳಿಗೆ ಅಧಿಕಾರ ನೀಡುವ ಉದ್ದೇಶದಿಂದ ಕೇವಲ ಒಂದು ತಿಂಗಳ ಅವಧಿಯಲ್ಲಿ ಎರಡನೇ ಬಾರಿಗೆ ತುರ್ತು ಪರಿಸ್ಥಿತಿ ಹೇರಿದ ಗೊಟಬಯ ರಾಜಪಕ್ಸ ಅವರನ್ನು ವಿರೋಧ ಪಕ್ಷಗಳು ಮತ್ತು ವಿದೇಶಿ ರಾಯಭಾರಿಗಳು ಕಟುವಾಗಿ ಟೀಕಿಸಿದ್ದಾರೆ.

72ರ ಹರೆಯದ ಅಧ್ಯಕ್ಷ ಗೊಟಬಯ ರಾಜಪಕ್ಸ ಅವರು ರಾಜೀನಾಮೆ ನೀಡಬೇಕೆಂದು ಸಾರ್ವಜನಿಕವಾಗಿ ಆಗ್ರಹ ಹೆಚ್ಚುತ್ತಿದೆ. 'ರಾಜಪಕ್ಸ ಅವರು ಉತ್ತರಾಧಿಕಾರಿಯಾಗುವವರು ಸದ್ಯದ ಆರ್ಥಿಕ ಬಿಕ್ಕಟ್ಟು ಪರಿಹರಿಸಿದರೆ ತಕ್ಷಣವೇ ರಾಜೀನಾಮೆ ಕೊಡುವೆ ಎಂದು ಸಂಪುಟ ಸಭೆಯಲ್ಲಿ ಹೇಳಿದ್ದರೂ, ಖಚಿತ ನಿರ್ಧಾರ ಪ್ರಕಟಿಸಲಿಲ್ಲ' ಎಂದು ಸಚಿವಾಲಯದ ಮೂಲಗಳು ತಿಳಿಸಿವೆ. 'ಸಭೆಯಲ್ಲಿ ಕೆಲವರು ಪ್ರಧಾನಿ ರಾಜೀನಾಮೆಗೆ ಸಲಹೆ ನೀಡಿದರೆ, ಪ್ರಧಾನಿಯ ರಾಜೀನಾಮೆಯೊಂದಿಗೆ ರಾಜಕೀಯ ಬಿಕ್ಕಟ್ಟು ಕೊನೆಗೊಳಿಸಿ, ಸರ್ವ ಪಕ್ಷಗಳ ಸಹಕಾರದ ಮಧ್ಯಂತರ ಸರ್ಕಾರ ಸ್ಥಾಪಿಸಲು ಗೊಟಬಯ ಬಯಸಿದ್ದರು' ಎಂದು ಮೂಲಗಳು ತಿಳಿಸಿವೆ. ಒತ್ತಡಗಳ ನಡುವೆಯೂ, ಅಧ್ಯಕ್ಷ ಗೊಟಬಯ ಮತ್ತು ಪ್ರಧಾನಿ ಮಹಿಂದಾ ರಾಜೀನಾಮೆಗೆ ನಿರಾಕರಿಸಿದ್ದಾರೆ.

ಎಲ್ಲ ಶೈಕ್ಷಣಿಕ ಸಂಸ್ಥೆಗಳಿಗೆ ಸೂಕ್ತ ಮಾಧ್ಯಮ
ಪ್ರಜಾವಾಣಿ ಶಿಕ್ಷಣ

ಜಾಹೀರಾತುಗಳಿಗೆ ಸಂಪರ್ಕಿಸಿ:
ದಿನೇಶ್‌ನಾಯಕ್ – 9986006598
email id: dineshnayak@deccanherald.co.in